3)ಗುಂಡುರಾವ್  4)ವೀರಪ್ಪಮೊಯ್ಲಿ

6) 1993ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಜಾರಿಗೆ ಬಂದಾಗ ಇದ್ದ ಪಂಚಾಯತ್ ರಾಜ್ ಸಚಿವರು?

1) ನಜೀರ್ ಸಾಬ್  2) ಎಚ್.ಕೆ. ಪಾಟೀಲ್

3) ಎಂ.ವೈ. ಘೋರ್ಪಡೆ  4) ಭೈರೇಗೌಡ

7) ಭಾರತದಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿಯನ್ನು ದೇಶದಲ್ಲಿ ಮೊದಲ ಬಾರಿಗೆ ಅಳವಡಿಸಿಕೊಂಡು ಚುನಾವಣೆ ನಡೆಸಿದ ರಾಜ್ಯ ಯಾವುದು?

1) ಕೇರಳ  2) ಕರ್ನಾಟಕ

3) ಆಂಧ್ರಪ್ರದೇಶ  4) ಪ. ಬಂಗಾಳ

8) ಕರ್ನಾಟಕದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪಂ. ಹಂತಗಳು

1) 1ಹಂತ  2) 3ಹಂತ  3) 2 ಹಂತ  4) 4 ಹಂತ

9) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿರುವ ಒಟ್ಟು ಅಧ್ಯಾಯಗಳ ಸಂಖ್ಯೆ

1)18  2)19  3)20  4)23

10) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿರುವ ಪ್ರಕರಣಗಳ ಸಂಖ್ಯೆ

1) 322  2) 321  3) 345  4) 320

11) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿರುವ ಅನುಸೂಚಿಗಳ ಸಂಖ್ಯೆ

1) 5  2) 4  3) 7  4) 6

12) ಕರ್ನಾಟಕ ಪಂ. ರಾಜ್ ಅಧಿನಿಯಮ 1993ಯನ್ನು ಒಟ್ಟು ಮೊದಲ ಬಾರಿಗೆ ತಿದ್ದು ಪಡಿ ಮಾಡಿದ ವರ್ಷ

1) 1996  2) 1997  3) 1995  4) 1998

13) ಕರ್ನಾಟಕ ಪಂಚಾಯತ್ ಅಧಿನಿಯಮ 1993ರ ಮಸೂದೆಯನ್ನು ಈ ಕೆಳಗಿನ ಯಾವ ಸಂವಿಧಾನಾತ್ಮಕ ಸಂಸ್ಥೆಯಿಂದ ಅಂಗೀಕಾರ ಪಡೆಯಲಾಯಿತು?

1) ರಾಜ್ಯ ವಿಧಾನ ಮಂಡಲ  2) ಸಂಸತ್ತು

3) ಹೈಕೋರ್ಟ್  4) ಸುಪ್ರೀಂಕೋರ್ಟ್

14) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣಗಳು ಏನನ್ನು ತಿಳಿಸುತ್ತದೆ?

1) ರಾಜ್ಯ ವಿಧಾನ ಮಂಡಲದ ಬಗ್ಗೆ ಮಾಹಿತಿ

2) ಗ್ರಾಮ ಪಂ. ಬಗ್ಗೆ ಮಾತ್ರ ಮಾಹಿತಿ ಒದಗಿಸುತ್ತದೆ

3) ತಾಲ್ಲೂಕು ಪಂ. & ಗ್ರಾಮ ಪಂಚಾಯತಿ ಬಗ್ಗೆ

4) 3 ಹಂತದ ಪಂ. ಬಗ್ಗೆ ಮಾಹಿತಿ ಒದಗಿಸುತ್ತದೆ

15) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ - 1993 ರಾಜ್ಯದಲ್ಲಿ ಜಾರಿಗೆ ಬಂದಾಗ ಕರ್ನಾಟಕದಲ್ಲಿದ್ದ ಅಂದಿನ ರಾಜ್ಯಪಾಲರು?

1)ಖುರ್ಷಿದ್ ಆಲಂಖಾನ್ 2) ಟಿ.ಎನ್. ಚತುರ್ವೇದಿ

3) ವಿ.ಎಸ್. ರಮಾದೇವಿ  4) ಟಿ.ಎಸ್. ಠಾಕೂರ್

ಉತ್ತರಗಳು:- 1)1  2) 3  3) 1  4) 3  5) 4  6) 3  7)2  8)2  9) 1  10) 2  11) 2  12) 3  13) 1  14)4  15)1



Scanned by CamScanner

# ಎಸ್.ಜಿ. ನಂಜಯ್ಯ ಮಠ ಸಮಿತಿ ಶಿಫಾರಸ್ಸುಗಳು

1) ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಶಿಫಾರಸ್ಸು ನೀಡಲು ನೇಮಕ ಮಾಡಿದ ಸಮಿತಿ?

1) ಮಾಜಿ ಶಾಸಕ ಎಸ್.ಜಿ. ನಂಜಯ್ಯ ಮಠ ಸಮಿತಿ
2) ಮಾಜಿ ಸಭಾಪತಿ ರಮೇಶ್ ಕುಮಾರ್ ಸಮಿತಿ
3) ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಸಮಿತಿ
4) ಮಾಜಿ ಶಾಸಕ ಸುರೇಶ್ ಕುಮಾರ್ ಸಮಿತಿ

2) ಗ್ರಾಮ ಪಂಚಾಯಿತಿ ಪುನರ್ ವಿಂಗಡಣಾ ಮತ್ತು ಸರಹದ್ದು ನಿರ್ಧರಣಾ ಸಮಿತಿಯು ಯಾವ ಜನಗಣತಿಯನ್ನು ಆಧರಿಸಿ ಗ್ರಾಮ ಪಂಚಾಯಿತಿಗಳ ರಚನೆಗೆ ಶಿಫಾರಸ್ಸು ಮಾಡಿದೆ?

1) 2001 2) 2011 3) 2021 4) 1991

3) ಮಾಜಿ ಶಾಸಕ ಎಸ್.ಜಿ. ನಂಜಯ್ಯ ಮಠ ಸಮಿತಿಯಲ್ಲಿ ಇದ್ದ ಸದಸ್ಯರ ಸಂಖ್ಯೆ ಎಷ್ಟು?

1)16 ಮಂದಿ2)6 ಮಂದಿ3) 12 ಮಂದಿ4) 8 ಮಂದಿ

4) ಎಸ್.ಜಿ. ನಂಜಯ್ಯ ಮಠ ಸಮಿತಿಯನ್ನು ರಾಜ್ಯ ಸರ್ಕಾರವು ನೇಮಕ ಮಾಡಿದ ದಿನಾಂಕ?

1) 2014 ಏಪ್ರಿಲ್ 1 2) 2015 ಏಪ್ರಿಲ್ 1
3) 2014 ಮಾರ್ಚ್1 4) 2015 ಮಾರ್ಚ್1

5) ಎಸ್.ಜಿ. ನಂಜಯ್ಯ ಮಠ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ?

1) 2014 ಅಕ್ಟೋಬರ್ 28 2) 2015 ಮಾರ್ಚ್ 31
3) 2014 ಏಪ್ರಿಲ್ 1 4) 2015 ಅಕ್ಟೋಬರ್ 2

6) ಎಸ್.ಜಿ. ನಂಜಯ್ಯಮಠ ಸಮಿತಿಯು ಎಷ್ಟು ಹೊಸ ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಲು ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿತು?

1) 480 2) 439 3) 450 4) 430

7) 1991 ರ ಜನಗಣತಿಯನ್ನು ಆಧರಿಸಿ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಪಂಚಾಯಿತಿಗಳ ಸಂಖ್ಯೆ ಎಷ್ಟು?

1) 5630 2) 5700 3) 5629 4) 5850

8) ಎಸ್.ಜಿ. ನಂಜಯ್ಯ ಮಠ ಸಮಿತಿ ಶಿಫಾರಸ್ಸಿನಂತೆ ಅಸ್ತಿತ್ವದಲ್ಲಿದ್ದ ಪಂ. ಯೊಂದಿಗೆ 439 ಹೊಸ ಪಂಚಾಯಿತಿಗಳನ್ನು ಸೇರಿಸಿದರೆ ಒಟ್ಟು ಎಷ್ಟು ಗ್ರಾಮ ಪಂಚಾಯಿತಿಗಳನ್ನು ರಚಿಸಬೇಕೆಂದು ಶಿಫಾರಸ್ಸು ನೀಡಿತ್ತು?

1) 6068 2) 6018 3) 6040 4) 6035

9) ಎಸ್.ಜಿ. ನಂಜಯ್ಯ ಮಠ ಸಮಿತಿಯು ಜನಸಂಖ್ಯೆ ಕಡಿಮೆ ಇರುವ ಉ.ಕನ್ನಡ, ದ.ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು & ಕೊಡಗು ಜಿಲ್ಲೆಗಳಲ್ಲಿ ಗ್ರಾಮ ಪಂ. ಯ ಜನಸಂಖ್ಯೆಯನ್ನು ಈ ಕೆಳಗಿನ ಸಂಖ್ಯೆಗೆ ನಿಗದಿಪಡಿಸುವಂತೆ ಶಿಫಾರಸ್ಸು ಮಾಡಿತು?

1) 5,000 – 7,0000 2) 7,000 – 8,000
3) 3,000 – 4,000 4) 2,000 – 3,000

10) ಎಸ್.ಜಿ. ನಂಜಯ್ಯಮಠ ಸಮಿತಿಯು ತನ್ನ ಶಿಫಾರಸ್ಸಿನಲ್ಲಿ ಗ್ರಾಮ ಪಂ.ಗಳನ್ನು ಹೆಚ್ಚಿಸಲು ಈ ಕೆಳಗಿನ ಯಾವ ಮಾನದಂಡವನ್ನು ಬಳಕೆ ಮಾಡಿದೆ?

1) ಜನಸಂಖ್ಯೆ 2) ಭೌಗೋಳಿಕ ಲಕ್ಷಣ
3) ಅರಣ್ಯ ಕ್ಷೇತ್ರ 4) ವರಮಾನ

**ಸಂಕೇತಗಳು:-**

1)1 & 3 2)1 & 2 3)2 & 3 4) ಮೇಲಿನ ಎಲ್ಲವೂ

11) ಅಧಿಕ ಜನಸಾಂದ್ರತೆ ಇರುವ ಪ್ರದೇಶದಲ್ಲಿ ಯಾವ ಜನಸಂಖ್ಯೆಗೆ ಒಂದರಂತೆ ಗ್ರಾಮ ಪಂಚಾಯಿತಿಗಳನ್ನು ಪುನರ್ ವಿಂಗಡಣೆ ಮಾಡಲು ಶಿಫಾರಸ್ಸು ಮಾಡಿದೆ?

1) 2,000 – 3,000 2) 5,000 – 7,000
3) 7,000 – 8,000 4) 4,000 – 6,000

12) ಎಸ್.ಜಿ. ನಂಜಯ್ಯ ಮಠ ಸಮಿತಿ ಶಿಫಾರಸ್ಸಿನಲ್ಲಿ ಶೇ 50 ರಷ್ಟು ಕೃಷಿಯೇತರ ಆದಾಯ ಹೊಂದಿರುವ, 10,000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಎಷ್ಟು ಗ್ರಾಮ ಪಂ. ಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲು ಶಿಫಾರಸ್ಸು ಮಾಡಲಾಗಿದೆ?

1) 100 2) 75 3) 50 4) 60

13) ಎಸ್.ಜಿ. ನಂಜಯ್ಯ ಮಠ ಸಮಿತಿ ಶಿಫಾರಸ್ಸಿನ ಅನ್ವಯ 439 ಹೊಸ ಪಂ.ಗಳನ್ನು ಸ್ಥಾಪಿಸಲು ರಾಜ್ಯ ಸಚಿವ ಸಂಪುಟವು ಅನುಮೋದನೆ ನೀಡಿದ ದಿನಾಂಕ?

1) 2015 ಜನವರಿ 9 2) 2014 ಅಕ್ಟೋಬರ್ 9
3) 2014 ಡಿಸೆಂಬರ್ 6 4) 2013 ಡಿಸೆಂಬರ್ 20

14) ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣೆ ಮತ್ತು ಸರಹದ್ದು ಸಮಿತಿಯನ್ನು ಈ ಕೆಳಗಿನ ಯಾವ ಹಿನ್ನಲೆಯಲ್ಲಿ ರಚಿಸಲಾಗುತ್ತದೆ?

1) ಭೌಗೋಳಿಕ ಲಕ್ಷಣ 2) ಜನಗಣತಿ
3) ಸಾಮಾಜಿಕ & ಆರ್ಥಿಕ ಗಣತಿ 4) ಆಯವ್ಯಯ

**ಉತ್ತರಗಳು:-** 1) 1 2) 2 3) 4 4) 3 5) 1 6) 2 7) 3 8) 1 9) 3 10) 2 11) 2 12) 3 13) 1 14) 2



Scanned by CamScanner

# ಕರ್ನಾಟಕ ಪಂಚಾಯತ್ ರಾಜ್ (1ನೇ ತಿದ್ದುಪಡಿ)–2015

**1) ಕರ್ನಾಟಕ ಪಂ. ರಾಜ್ ಅಧಿನಿಯಮ - 1993 ಕ್ಕೆ ಮೊದಲ ತಿದ್ದುಪಡಿ-2015 ಜಾರಿಗೆ ಬಂದ ತಿಂಗಳು?**

1) ಮಾರ್ಚ್ 2) ಏಪ್ರಿಲ್ 3) ಮೇ 4) ಜೂನ್

**2) ಕರ್ನಾಟಕ ಪಂಚಾಯತ್ ರಾಜ್ (1 ನೇ ತಿದ್ದುಪಡಿ)-2015 ಕ್ಕೆ ಅಂಕಿತ ಹಾಕಿದ ರಾಜ್ಯಪಾಲರು?**

1) ಹಂಸರಾಜ್ ಭಾರದ್ವಾಜ್ 2) ರೋಸಯ್ಯ
3) ವಾಜುಭಾಯಿವಾಲ್ಹಾ 4) ಟಿ.ಎಸ್. ಠಾಕೂರ್

**3) ಕರ್ನಾಟಕ ಪಂಚಾಯತ್ ರಾಜ್ (1 ನೇ ತಿದ್ದುಪಡಿ)-2015ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು?**

1) ಮಾರ್ಚ್ 31 2) ಏಪ್ರಿಲ್ 4
3) ಏಪ್ರಿಲ್ 29 4) ಜೂನ್ 1

**4) ಕರ್ನಾಟಕ ಪಂ. ರಾಜ್ (1ನೇ ತಿದ್ದುಪಡಿ)-2015 ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕ?**

1) ಏಪ್ರಿಲ್ 15 2) ಏಪ್ರಿಲ್ 30
3) ಮಾರ್ಚ್ 31 4) ಏಪ್ರಿಲ್ 1

**5) ಕರ್ನಾಟಕ ಪಂಚಾಯತ್ ರಾಜ್ (1ನೇ ತಿದ್ದುಪಡಿ)-2015 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?**

ಎ) ಪಂ. ನಲ್ಲಿ ಮಹಿಳಾ ಮೀಸಲಾತಿ ಹೆಚ್ಚಿಸಿದ್ದು
ಬಿ) ಮತದಾನ ಮಾಡುವುದನ್ನು ಕರ್ತವ್ಯ& ಕಡ್ಡಾಯಗೊಳಿಸಿದ್ದು
ಸಿ) ಪಂಚಾಯಿತಿಗಳಲ್ಲಿ ಅಧ್ಯಕ್ಷ & ಉಪಾಧ್ಯಕ್ಷರ ಅಧಿಕಾರಾವಧಿಯನ್ನು 5 ವರ್ಷಕ್ಕೆ ನಿಗದಿ ಮಾಡಿದ್ದು
ಡಿ) ಮೀಸಲಾತಿ ಅವಧಿಯನ್ನು ನಿಗದಿ ಪಡಿಸಿದ್ದು

**ಸಂಕೇತಗಳು:**-1) ಎ, ಬಿ, ಸಿ & ಡಿ 2) ಎ & ಬಿ
3) ಸಿ ಮಾತ್ರ 4) ಬಿ & ಡಿ

**6) ಕರ್ನಾಟಕ ಪಂಚಾಯತ್ ರಾಜ್ (1ನೇ ತಿದ್ದುಪಡಿ)-2015 ರಲ್ಲಿ ಪ್ರಕರಣ 5 ಕ್ಕೆ ತಿದ್ದುಪಡಿ ತಂದು, ಗ್ರಾಮ ಪಂ.ಯಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಶೇಕಡಾ ಎಷ್ಟು ನಿಗದಿ ಮಾಡಲಾಯಿತು?**

1) 33% 2) 50% 3) 30% 4) 40%

**7) ಮೀಸಲಾತಿಯ ಅವಧಿಯನ್ನು ಪಂಚಾಯತ್‌ಗಳಲ್ಲಿ ಎಷ್ಟು ವರ್ಷಗಳವರೆಗೆ ಮುಂದುವರೆಸಲು ಕರ್ನಾಟಕ ಪಂಚಾಯತ್ ರಾಜ್ (1ನೇ ತಿದ್ದುಪಡಿ)-2015 ಅವಕಾಶ ಕಲ್ಪಿಸಿತು?**

1)10ವರ್ಷ 2)15ವರ್ಷ 3)20ವರ್ಷ 4) 25 ವರ್ಷ

**8) ಕರ್ನಾಟಕ ಪಂಚಾಯತ್ ರಾಜ್ (1ನೇ ತಿದ್ದುಪಡಿ)-2015 ರಲ್ಲಿ ಪ್ರಕರಣ-9 ಕ್ಕೆ ತಿದ್ದುಪಡಿ ತಂದು, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮತದಾನ ಮಾಡುವುದನ್ನು ಪ್ರತಿಯೊಬ್ಬ ಮತದಾರನಿಗೆ ಯಾವ ಅವಕಾಶವನ್ನು ಕಲ್ಪಿಸಿದೆ?**

1) ಕರ್ತವ್ಯ 2) ಕಡ್ಡಾಯ
3) ಸೇವೆ 4) ಮೂಲಭೂತ ಹಕ್ಕು

**ಸಂಕೇತಗಳು:**-1) ಎ ಮಾತ್ರ 2) ಎ & ಬಿ
3) ಎ & ಸಿ 4) ಎ, ಬಿ, ಸಿ & ಡಿ

**9) ಕರ್ನಾಟಕ ಪಂಚಾಯತ್ ರಾಜ್ (1ನೇ ತಿದ್ದುಪಡಿ)-2015 ರಲ್ಲಿ ಪ್ರಕರಣ-44 ಕ್ಕೆ ತಿದ್ದುಪಡಿ ತಂದು, ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನದಲ್ಲಿ ಮಹಿಳೆಯರಿಗೆ ಶೇಕಡಾ ಎಷ್ಟು ಸ್ಥಾನಗಳನ್ನು ನಿಗದಿಪಡಿಸಲಾಯಿತು?**

1) 30% 2) 33% 3) 50% 4) 35%

**10) ಕರ್ನಾಟಕ ಪಂ. ರಾಜ್ (1 ನೇ ತಿದ್ದುಪಡಿ)-2015 ಕ್ಕೆ ಸಂಬಂಧಿಸಿದಂತೆ ಯಾವ ಹೇಳಿಕೆ ಸರಿಯಾಗಿದೆ?**

1) ಪ್ರ–46ಕ್ಕೆ ತಿದ್ದುಪಡಿ ತಂದು ಗ್ರಾಮ ಪಂ. ಅಧ್ಯಕ್ಷ & ಉಪಾಧ್ಯಕ್ಷರ ಅವಧಿಯನ್ನು 5 ವರ್ಷಕ್ಕೆ ನಿಗದಿ
2) ಪ್ರಕರಣ123ಕ್ಕೆ ತಿದ್ದುಪಡಿ ತಂದು ತಾಲ್ಲೂಕು ಪಂ. ಗೆ ಮಹಿಳೆಯರ ಮೀಸಲಾತಿಯನ್ನು ಶೇ 50 ಕ್ಕೆ ನಿಗದಿ
3) ಪ್ರ.–125ಕ್ಕೆ ತಿದ್ದುಪಡಿ ತಂದು, ತಾಲ್ಲೂಕು ಪಂ. ಯಲ್ಲಿ ಮತದಾನ ಮಾಡುವುದು ಕರ್ತವ್ಯ & ಕಡ್ಡಾಯ
4) ಪ್ರಕರಣ138ಕ್ಕೆ ತಿದ್ದುಪಡಿ ತಂದು, ತಾಲ್ಲೂಕು ಪಂ. ಅಧ್ಯಕ್ಷ & ಉಪಾಧ್ಯಕ್ಷರ ಹುದ್ದೆಯಲ್ಲಿ ಶೇ 50 ರಷ್ಟು ಮೀಸಲಾತಿ ಮತ್ತು ಹುದ್ದೆಯ ಅವಧಿ 5 ವರ್ಷ
ಇ) ಪ್ರ.162ಕ್ಕೆ ತಿದ್ದುಪಡಿ ತಂದು, ಜಿಲ್ಲಾ ಪಂ. ಸದಸ್ಯರ ಸ್ಥಾನದಲ್ಲಿ ಮಹಿಳಾ ಮೀಸಲಾತಿ ಶೇ 50 ರಷ್ಟು
ಎಫ್) ಪ್ರಕರಣ 164 ಕ್ಕೆ ತಿದ್ದುಪಡಿ ತಂದು, ಮತದಾನ ಮಾಡುವುದು ಕಡ್ಡಾಯ & ಕರ್ತವ್ಯ
ಜಿ) ಪ್ರ. 177 ಕ್ಕೆ ತಿದ್ದುಪಡಿ ತಂದು, ಜಿ.ಪಂ. ಅಧ್ಯಕ್ಷ & ಉಪಾಧ್ಯಕ್ಷರ ಹುದ್ದೆಯಲ್ಲಿ ಮಹಿಳೆಯರಿಗೆ ಶೇ 50 ರಷ್ಟು ಮೀಸಲಾತಿ & ಹುದ್ದೆ ಅವಧಿ 5 ವರ್ಷ ನಿಗದಿ

**ಸಂಕೇತಗಳು:**-1) ಎ & ಜಿ 2) ಎ, ಬಿ, ಸಿ & ಡಿ
3) ಎ, ಬಿ, ಇ & ಎಫ್ 4) ಮೇಲಿನ ಎಲ್ಲವೂ

**ಉತ್ತರಗಳು:**- 1) 2 2) 3 3) 3 4) 2 5) 1 6) 2 7) 1 8) 2 9) 3 10) 4



Scanned by CamScanner

chanakyaloka.com



# ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) – 2015 (ರಮೇಶ್ ಕುಮಾರ್ ಸಮಿತಿ ಶಿಫಾರಸ್ಸುಗಳು)

1) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ಕ್ಕೆ ಅಂಕಿತ ಹಾಕಿದ ರಾಜ್ಯಪಾಲರು?
1) ಹಂಸರಾಜ್ ಭಾರದ್ವಾಜ್ 2) ರೋಸಯ್ಯ
3) ವಾಜುಭಾಯಿವಾಲಾ 4) ಟಿ.ಎಸ್. ಠಾಕೂರ್

2) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ ದಿನಾಂಕ?
1) ಮಾರ್ಚ್ 31 2) ಡಿಸೆಂಬರ್ 16
3) ಏಪ್ರಿಲ್ 29 4) ಜೂನ್ 1

3) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕ?
1) ಏಪ್ರಿಲ್ 15 2) ಏಪ್ರಿಲ್ 30
3) ಮಾರ್ಚ್ 31 4) ಡಿಸೆಂಬರ್ 31

4) ಕರ್ನಾಟಕ ಪಂ. ರಾಜ್ ಅಧಿನಿಯಮ - 1993 ಕ್ಕೆ ಎರಡನೇ ತಿದ್ದುಪಡಿ-2015ಯನ್ನು ಜಾರಿಗೆ ತಂದದ್ದು?
1) 2016 ಫೆಬ್ರವರಿ 25 2) 2015 ಡಿಸೆಂಬರ್ 31
3) 2016 ಮಾರ್ಚ್ 31 4) 2015 ಡಿಸೆಂಬರ್ 20

5) ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) - 2015 ನ್ನು ಈ ಕೆಳಗಿನ ಯಾವ ಸಮಿತಿಯ ಶಿಫಾರಸ್ಸನ್ನು ಆಧರಿಸಿ ತಿದ್ದುಪಡಿ ಮಾಡಲಾಗಿದೆ?
1) ಎಸ್.ಜಿ. ನಂಜಯ್ಯ ಮಠ ಸಮಿತಿ
2) ರಮೇಶ್ ಕುಮಾರ್ ಸಮಿತಿ
3) ಕುಮಾರ ನಾಯ್ಕ ಸಮಿತಿ
4) ವೀರಪ್ಪ ಮೊಯ್ಲಿ ಸಮಿತಿ

6) ರಮೇಶ್ ಕುಮಾರ್ ಅವರು ಪ್ರಸ್ತುತವಾಗಿ ಈ ಕೆಳಗಿನ ಯಾವ ಖಾತೆಯ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ?
1) ಪಂಚಾಯತ್ ರಾಜ್ 2) ಆರೋಗ್ಯ
3) ಶಿಕ್ಷಣ 4) ಕಾನೂನು

7) ಕೆ. ರಮೇಶ್ ಕುಮಾರ್ ಅವರು ಈ ಕೆಳಗಿನ ಯಾವ ಹುದ್ದೆಯನ್ನು ಅಲಂಕರಿಸಿದ್ದರು?
1) ವಿಧಾನ ಸಭೆಯ ಸಭಾಪತಿ
2) ವಿಧಾನ ಪರಿಷತ್‌ನ ಸಭಾಪತಿ
3) ವಿಧಾನಸಭೆ ಉಪ ಸಭಾಪತಿ
4) ವಿಧಾನ ಪರಿಷತ್‌ನ ಉಪ ಸಭಾಪತಿ

8) ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) - 2015 ರ ಅನ್ವಯ ಈ ಕೆಳಗಿನ ಯಾವ ಶೀರ್ಷಿಕೆಯಿಂದ ಜಾರಿಗೆ ತರಲಾಗಿದೆ?
1) ಕರ್ನಾಟಕಪಂಚಾಯತ್‌ರಾಜ್‌ಅಧಿನಿಯಮ– 2015
2) ಕರ್ನಾಟಕ ಗ್ರಾಮ ಸ್ವರಾಜ್ & ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ – 2015
3) ಕರ್ನಾಟಕ ಗ್ರಾಮಸ್ವರಾಜ್ ಅಧಿನಿಯಮ – 1993
4) ಕರ್ನಾಟಕ ಗ್ರಾಮ, ತಾಲ್ಲೂಕು & ಜಿಲ್ಲಾ ಪಂಚಾಯತ್ ಅಧಿನಿಯಮ – 2015

9) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ಪ್ರಮುಖವಾಗಿ ಈ ಕೆಳಕಂಡ ಯಾವ ಅಂಶಗಳನ್ನು ತಿದ್ದುಪಡಿ ಮಾಡಲಾಗಿದೆ?
ಎ) ಪ್ರಕರಣಗಳು ಬಿ) ಅನುಸೂಚಿಗಳು
ಸಿ) ಅಧ್ಯಾಯಗಳು 4) ಕೆಲವು ವ್ಯಾಖ್ಯೆಗಳು
ಸಂಕೇತಗಳು:-1) ಎ & ಬಿ ಮಾತ್ರ 2) 2 & 4
3) ಎ, ಬಿ, ಸಿ, ಡಿ ಡಿ) ಎ ಮಾತ್ರ

10) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ರಲ್ಲಿ ಈ ಕೆಳಗಿನ ಯಾವುದನ್ನು ಹೊಸದಾಗಿ ಸೇರ್ಪಡೆ ಮಾಡಲಾಯಿತು?
1) ಗ್ರಾಮಸಭೆ 2) ಜನವಸತಿಸಭೆ
2) ವಾರ್ಡ್‌ಸಭೆ 4) ಗ್ರಾಮ ಪಂಚಾಯಿತಿ ಸಭೆ

11) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ರಲ್ಲಿ ಗೊತ್ತುಪಡಿಸಿದ ನ್ಯಾಯಾಲಯ ಎಂಬುದು ಗ್ರಾಮ ಪಂಚಾಯಿತಿ & ತಾಲ್ಲೂಕು ಪಂ. ಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತಿದೆ?
1) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ
2) ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗ
3) ಸೆಷನ್ ನ್ಯಾಯಾಧೀಶ
4) ಹೈಕೋರ್ಟ್ ನ್ಯಾಯಾಧೀಶರು

12) ಕರ್ನಾಟಕ ಪಂಚಾಯತ್ ರಾಜ್ (2 ನೇ ತಿದ್ದುಪಡಿ)-2015 ರಲ್ಲಿ ಗೊತ್ತುಪಡಿಸಿದ ನ್ಯಾಯಾಲಯ ಎಂಬುದು ಜಿಲ್ಲಾ ಪಂಚಾಯಿತಿಗೆ ಸಂಬಂಧಿಸಿದಂತೆ ಇದಾಗಿದೆ?
1) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ
2) ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗ
3) ಸೆಷನ್ ನ್ಯಾಯಾಧೀಶ
4) ಹೈಕೋರ್ಟ್ ನ್ಯಾಯಾಧೀಶರು

**ಉತ್ತರಗಳು:-** 1) 3 2) 2 3) 4 4) 1 5) 2 6) 2 7) 1 8) 2 9) 3 10) 2 11) 1 12) 3



Scanned by CamScanner

ಅಧ್ಯಾಯ: 1

# ಪ್ರಾರಂಭಿಕ

## ಅಧ್ಯಾಯ-1 : ಪ್ರಾರಂಭಿಕ (ಪ್ರಕರಣ 1 & 2)

1) 'ಅಧ್ಯಾಯ-1' ಈ ಕೆಳಗಿನ ಯಾವ ವಿಷಯಕ್ಕೆ ಸಂಬಂಧಿಸಿದೆ?

1) ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2) ಅರ್ಥ ವಿವರಣೆ 3) ಗ್ರಾಮ ಸ್ವರಾಜ್ ಘಟಕಗಳು
4) ಸಂಕ್ಷಿಪ್ತ ಹೆಸರು, ಪ್ರಾರಂಭ ಹಾಗೂ ಅರ್ಥವಿವರಣೆ

2) ಅಧ್ಯಾಯ-1 ಈ ಕೆಳಗಿನ ಯಾವ ಪ್ರಕರಣಗಳನ್ನು ಒಳಗೊಂಡಿದೆ?

1) ಪ್ರಕರಣ 1 2) ಪ್ರಕರಣ 2
3) ಪ್ರಕರಣ 1 & 2 4) ಪ್ರಕರಣ 1, 2 & 3

## ಪ್ರಕರಣ-1: ಸಂಕ್ಷಿಪ್ತ ಹೆಸರು & ಪ್ರಾರಂಭ

3) ಅಧ್ಯಾಯ-1 ರ 'ಪ್ರಕರಣ 1' ಏನನ್ನು ಹೇಳುತ್ತದೆ?

1) ಸಂಕ್ಷಿಪ್ತ ಹೆಸರು & ಪ್ರಾರಂಭ
2) ಅರ್ಥವಿವರಣೆ 3) ಜನವಸತಿ ಪ್ರದೇಶ
4) ಜನವಸತಿ ಸಭೆ

4) ಪ್ರಕರಣ 1 ರ ಅನ್ವಯ 'ಮೂಲ ಅಧಿನಿಯಮ'ದ ಸಂಕ್ಷಿಪ್ತ ಹೆಸರು?

1) ಕರ್ನಾಟಕ ಪಂಚಾಯತ್ ರಾಜ್ & ಸ್ಥಳೀಯ ಸಂಸ್ಥೆ ಅಧಿನಿಯಮ–1993
2)ಕರ್ನಾಟಕ ಪಂ. ರಾಜ್ ಅಧಿನಿಯಮ– 1993
3)ಕರ್ನಾಟಕ ಪಂ.ರಾಜ್ ಅಧಿನಿಯಮ –1992
4) ಕರ್ನಾಟಕ ಗ್ರಾಮ ಸ್ವರಾಜ್ & ಪಂಚಾಯತ್ ರಾಜ್ ಅಧಿನಿಯಮ – 1993

5) 2015 ರ '2ನೇ ತಿದ್ದುಪಡಿ ಅನ್ವಯ' ಪ್ರಕರಣ 1 ರಲ್ಲಿ ಸಂಕ್ಷಿಪ್ತ ಹೆಸರನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ?

1) ಕರ್ನಾಟಕ ಗ್ರಾಮ ಸ್ವರಾಜ್ & ಸ್ಥಳೀಯ ಆಡಳಿತ ಅಧಿನಿಯಮ – 1993
2) ಕರ್ನಾಟಕ ಗ್ರಾಮ ಸ್ವರಾಜ್ & ಪಂಚಾಯತ್ ರಾಜ್ ಅಧಿನಿಯಮ – 1993
3) ಕರ್ನಾಟಕ ಗ್ರಾಮಸ್ವರಾಜ್ & 3 ಹಂತದ ಪಂಚಾಯತ್ ರಾಜ್ ಅಧಿನಿಯಮ – 1993
4) ಕರ್ನಾಟಕ ಗ್ರಾಮ ಸ್ವರಾಜ್ & ಗ್ರಾಮ ಪಂಚಾಯತ್ ತಾಲ್ಲೂಕು ಪಂಚಾಯತ್ & ಜಿಲ್ಲಾ ಪಂಚಾಯತ್ ಅಧಿನಿಯಮ – 1993

6) ಪ್ರಕರಣ-1 ಉಪಪ್ರಕರಣ-2 ರಲ್ಲಿ ಈ ಅಧಿನಿಯಮವು ಎಂದಿನಿಂದ ಜಾರಿಗೆ ಬರಬೇಕೆಂದು ಹೇಳುತ್ತದೆ?

1) 73 ನೇ ಸಂವಿಧಾನಾತ್ಮಕ ತಿದ್ದುಪಡಿಯು ಸಂಸತ್ತಿನಲ್ಲಿ ಅಂಗೀಕಾರವಾದ ದಿನಾಂಕದಿಂದ
2) ಅಧಿನಿಯಮವು ವಿಧಾನಮಂಡಲದಲ್ಲಿ ಅಂಗೀಕಾರ ವಾದ ದಿನಾಂಕದಿಂದ
3) 73ನೇ ಸಂವಿಧಾನಾತ್ಮಕ ತಿದ್ದುಪಡಿ ಜಾರಿಗೆ ಬಂದ ದಿನಾಂಕದಿಂದ
4) ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟ ಪಡಿಸಬಹುದಾದ ದಿನಾಂಕದಿಂದ & ಬೇರೆ ಬೇರೆ ಪ್ರದೇಶಗಳಿಗೆ, ಉಪವಿಧಿಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಗೊಳಿಸಬಹುದು.

## ಪ್ರಕರಣ-2: ಅರ್ಥವಿವರಣೆ:-

7) ಅಧ್ಯಾಯ-1ರ ಪ್ರಕರಣ 2 ಏನನ್ನು ಹೇಳುತ್ತದೆ?

1) ಅಧಿನಿಯಮದಲ್ಲಿ ಬರುವ ಪ್ರಮುಖವಾದ ಪದಗಳ ಅರ್ಥವಿವರಣೆಯನ್ನು ಹೇಳುತ್ತದೆ.
2) ಪಂಚಾಯಿತಿಯಲ್ಲಿ ಬಳಸುವ ಪ್ರಮುಖ ಪದಗಳ ಅರ್ಥಗಳನ್ನು ಹೇಳುತ್ತದೆ.
3) 73ನೇ ಸಂವಿಧಾನಾತ್ಮಕ ತಿದ್ದುಪಡಿಯಲ್ಲಿ ಬರುವ ಪದಗಳ ಅರ್ಥವನ್ನು ಹೇಳುತ್ತದೆ.
4) ಪಂಚಾಯಿತಿ ಯೋಜನೆ & ಕಾರ್ಯಕ್ರಮಗಳಲ್ಲಿ ಬಳಕೆ ಮಾಡುವ ಪದಗಳ ಅರ್ಥವನ್ನು ಹೇಳುತ್ತದೆ.

8) ಅಧ್ಯಾಯ-1 ರ 'ಪ್ರಕರಣ 2' ರಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಸಂಬಂಧಿಸಿದಂತೆ 'ಚುನಾವಣಾ ವಿವಾದ'ವನ್ನು ಅಧಿವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿರುವ ಗೊತ್ತು ಪಡಿಸಿದ ನ್ಯಾಯಾಲಯ ಎಂಬುದನ್ನು ಈ ಕೆಳಕಂಡಂತೆ ಅರ್ಥವಿವರಣೆಯಲ್ಲಿ ನೀಡಲಾಗಿದೆ?

1) ಸೆಷನ್ ನ್ಯಾಯಾಲಯ
2) ಹಿರಿಯ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ
3) ಕಿರಿಯ ಸಿವಿಲ್ ನ್ಯಾಯಾಧೀಶ
4)ಹಿರಿಯಕ್ರಿಮಿನಲ್ ನ್ಯಾಯಾಲಯದ ನ್ಯಾಯಾಧೀಶರು

ಉತ್ತರಗಳು:- 1) 4 2) 3 3) 1 4) 2 5) 2 6) 4 7) 1 8) 2



Scanned by CamScanner

**9) ಅಧ್ಯಾಯ-1 ರ ಪ್ರಕರಣ2 ರಲ್ಲಿ ಜಿಲ್ಲಾ ಪಂಚಾಯತ್‌ಗೆ ಸಂಬಂಧಿಸಿದಂತೆ ಚುನಾವಣಾ ವಿವಾದವನ್ನು ಅಧಿವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿರುವ ಗೊತ್ತು ಪಡಿಸಿದ ನ್ಯಾಯಾಲಯ ಎಂಬುದನ್ನು ಈ ಕೆಳಕಂಡಂತೆ ಅರ್ಥವಿವರಣೆಯಲ್ಲಿ ನೀಡಲಾಗಿದೆ?**

1) ಜಿಲ್ಲಾ ನ್ಯಾಯಾಧೀಶ(ಸೆಷನ್)ರ ನ್ಯಾಯಾಲಯ
2) ಹಿರಿಯ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ
3) ಕಿರಿಯ ಸಿವಿಲ್ ನ್ಯಾಯಾಧೀಶ
4) ಹಿರಿಯ ಕ್ರಿಮಿನಲ್ ನ್ಯಾ.ದ ನ್ಯಾಯಾಧೀಶರು

**10) ಗೊತ್ತು ಪಡಿಸಿದ ನ್ಯಾಯಾಲಯ ಎಂಬುದು ಈ ಕೆಳಗಿನ ಯಾವ ನ್ಯಾಯಾಲಯವಾಗುತ್ತದೆ?**

1) ರಾಜ್ಯದ ವ್ಯಾಪ್ತಿ ಮತ್ತು ಹೊರಗೆ ಬರುವ ಸಂಬಂಧಿಸಿದ ಗೊತ್ತು ಪಡಿಸಿದ ನ್ಯಾಯಾಲಯಗಳು
2) ರಾಜ್ಯದ ವ್ಯಾಪ್ತಿಗೆ ಬರುವ ಸಂಬಂಧಿಸಿದ ಗೊತ್ತು ಪಡಿಸಿದ ನ್ಯಾಯಾಲಯಗಳು
3) ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ & ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಸಂಬಂಧಿಸಿದ ಗೊತ್ತು ಪಡಿಸಿದ ನ್ಯಾಯಾಲಯಗಳು
4) ದೇಶದ ವ್ಯಾಪ್ತಿಗೆ ಬರುವ ಯಾವುದೇ ಗೊತ್ತು ಪಡಿಸಿದ ನ್ಯಾಯಾಲಯಗಳು

**11) ಅರ್ಥವಿವರಣೆಯಲ್ಲಿ ಜವಾಬ್ದಾರಿಗಳ ನಕ್ಷೆ ಎಂದರೆ, ಪಂಚಾಯತ್ ರಾಜ್ ಸಂಸ್ಥೆಗಳು ಈ ಅಧಿನಿಯಮದಡಿಯಲ್ಲಿ ಹೊಂದಿರಬಹುದಾದ**

1) ಭೂಮಿಗಳ ನಕ್ಷೆ 2) ಆಸ್ತಿಗಳ ನಕ್ಷೆ
3)ಸರಹದ್ದಿನನಕ್ಷೆ 4)ಜವಾಬ್ದಾರಿಗಳ ವಿವರವಾದ ಪಟ್ಟಿ

**12) ಈ ಅಧಿನಿಯಮದಲ್ಲಿ ಬಳಸಿರುವ ರಿಟರ್ನಿಂಗ್ ಆಫೀಸರ್, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್ ಮತ್ತು ಪೋಲಿಂಗ್ ಆಫೀಸರ್‌ಗಳ ಪದವು ಈ ಕೆಳಗಿನ ಅರ್ಥವನ್ನು ನೀಡುತ್ತದೆ?**

............ ಪಂಚಾಯತ್‌ಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಈ ಎಲ್ಲಾ ಪದಗಳು ಜನ ಪ್ರತಿನಿಧಿಯ ಅಧಿನಿಯಮ 1951 ರಂತೆ ಅರ್ಥ ನೀಡುತ್ತದೆ. ಈ ಮೇಲಿನ ಖಾಲಿ ಜಾಗದಲ್ಲಿ ಕೆಳಗಿನ ಯಾವ ಪದ ಅನ್ವಯವಾಗುತ್ತದೆ?

1) ರಾಜ್ಯ ಚುನಾವಣಾ ಆಯೋಗ
2) ಕೇಂದ್ರ ಚುನಾವಣಾ ಆಯೋಗ
3) ಜಿಲ್ಲಾಧಿಕಾರಿಗಳು 4) ಉಪವಿಭಾಗಾಧಿಕಾರಿ

**13) ಸಮಾಜದ ಸುರಕ್ಷಿತವಲ್ಲದ ವರ್ಗ (Vulnerable) ಎಂಬುದರ ಅರ್ಥವು ಈ ಕೆಳಗಿನದ್ದಾಗಿರುತ್ತದೆ?**

ಎ) ಮಕ್ಕಳು, ಅಪ್ರಾಪ್ತ ವಯಸ್ಸಿನ ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು
ಬಿ) ರೋಗಗ್ರಸ್ಥರು & ಅಶಕ್ತರು, ಅಸಮರ್ಥರು ಮತ್ತು ವಿಕಲಚೇನತರು, ಅ. ಜಾತಿ ಮತ್ತು ಅ.ಪಂಗಡಗಳು
ಸಿ) ಸಮಾಜದ ಧಾರ್ಮಿಕ, ಭಾಷಾ ಮತ್ತು ಲೈಂಗಿಕ ಅಲ್ಪಸಂಖ್ಯಾತರು, ಜೀತ ಕಾರ್ಮಿಕರು ಇವರಲ್ಲಿ ಯಾರಾದರೂ ಇದ್ದಲ್ಲಿ
ಡಿ) ಅಲೆಮಾರಿಗಳು ಮತ್ತು ಬುಡಕಟ್ಟು ಸಮೂಹಗಳು ಹಾಗೂ ವಲಸೆ ಕಾರ್ಮಿಕರು

**ಮೇಲಿನ ಆಯ್ಕೆಗಳಲ್ಲಿ ಈ ಕೆಳಗಿನ ಯಾವುದು ಸರಿಯಾದುದು?**

1) ಎ & ಬಿ 2) ಬಿ & ಸಿ
3) ಬಿ, ಸಿ & ಡಿ 4) ಎ, ಬಿ, ಸಿ & ಡಿ

**14) ದೂರದೃಷ್ಟಿ ಯೋಜನೆ ಯ ಅರ್ಥ?**

1) ಪಂಚಾಯಿತಿ ಪ್ರದೇಶದಲ್ಲಿರುವ ದೃಷ್ಟಿ ದೋಷವಿರುವವರಿಗೆ ಕೈಗೊಳ್ಳುವ ಯೋಜನೆ
2)ಪಂ.ಪ್ರದೇಶದಲ್ಲಿಒಟ್ಟಾರೆಅಭಿವೃದ್ಧಿಸಾಧಿಸುವುದಕ್ಕಾಗಿ ಇರುವ ದೀರ್ಘಾವಧಿ ದೂರದೃಷ್ಟಿ ಯೋಜನೆ
3) ದೃಷ್ಟಿದೋಷದವರ ಕಲ್ಯಾಣಕ್ಕಾಗಿರುವ ಯೋಜನೆ
4) ದೂರದೃಷ್ಟಿ ಯೋಜನೆ ಎಂದರೆ 10 ವರ್ಷಗಳವರೆಗೆ ಕೈಗೊಳ್ಳುವ ಯೋಜನೆಯಾಗಿದೆ.

**15) ಆಕಸ್ಮಿಕ ಸ್ಥಾನ ಖಾಲಿಯಾಗುವುದು ಎಂದರೆ,**

1) ಕಾಲಾವಧಿ ಮುಕ್ತಾಯವಾದ ನಂತರ ಸ್ಥಾನ ಖಾಲಿಯಾಗುವುದು 2) ನಿಗದಿತ ಅವಧಿ ಪೂರ್ಣಗೊಂಡ ನಂತರ ಸ್ಥಾನ ಖಾಲಿಯಾಗುವುದು
3) ಕಾಲಾವಧಿ ಮುಗಿದು 1 ವರ್ಷದ ನಂತರ ಖಾಲಿಯಿರುವ ಸ್ಥಾನ
4) ಕಾಲಾವಧಿ ಮುಕ್ತಾಯವಾಗವುದರಿಂದಲ್ಲದೇ, ಬೇರೆ ರೀತಿಯಿಂದ ಸ್ಥಾನ ಖಾಲಿಯಾಗುವುದು.

**16) ಆಕಸ್ಮಿಕ ಸ್ಥಾನವು ಖಾಲಿಯಾಗುವುದು ಈ ಕೆಳಗಿನ ಯಾವ ವಿಧಾನದಿಂದ ಅಲ್ಲ?**

1) ರಾಜೀನಾಮೆ ನೀಡುವುದರಿಂದ
2) ಅಭ್ಯರ್ಥಿಯು ಅನರ್ಹಗೊಳ್ಳುವುದರಿಂದ
3) ಆಸ್ತಿ ಘೋಷಣೆಯನ್ನು ನಿಗದಿತ ಅವಧಿಯಲ್ಲಿ ಮಾಡದೇ, ರಾಜ್ಯ ಚುನಾವಣಾ ಆಯೋಗದಿಂದ ಅನರ್ಹಗೊಳ್ಳುವುದು 4) ತನ್ನ ಅಧಿಕಾರಾವಧಿ ಪೂರ್ಣಗೊಂಡು, ಖಾಲಿಯಾಗುವುದು

**ಉತ್ತರಗಳು:-** 9) 1 10) 3 11) 4 12) 1 13) 4 14) 2 15) 4 16) 4



Scanned by CamScanner

**17) ಡೆಪ್ಯುಟಿ ಕಮೀಷನರ್ ಎಂದರೆ**

1) ಜಿಲ್ಲಾ ಡೆಪ್ಯುಟಿ ಕಮೀಷನರ್/ಜಿಲ್ಲೆಯ ಜಿಲ್ಲಾಧಿಕಾರಿ
2) ಜಿಲ್ಲಾ ಪಂಚಾಯಿತಿ ಕಮೀಷನರ್
3) ಜಿಲ್ಲಾ ಸ್ಥಳೀಯ ಸಂಸ್ಥೆ ಕಮೀಷನರ್
4) ಪ್ರಾದೇಶಿಕ ಕಮೀಷನರ್

**18) ಡೆಪ್ಯುಟಿ ಕಮೀಷನರ್/ಜಿಲ್ಲಾಧಿಕಾರಿ ಎಂದರೆ?**

1) ಜಿಲ್ಲೆಯ ಪಂ.ಗಳ ಮೇಲ್ವಿಚಾರಣೆ ನಡೆಸುವ ವಿಶೇಷಾಧಿಕಾರಿ
2) ಪಂಚಾಯಿತಿ ಆಡಳಿತವನ್ನು ನೋಡಿಕೊಳ್ಳಲು ನೇಮಕಗೊಂಡಿರುವ ಜಿಲ್ಲೆಯ ಅಧಿಕಾರಿ
3) ಜಿಲ್ಲೆಯ ಕಂದಾಯ ಅಧಿಕಾರಿ & ಜಿಲ್ಲಾ ದಂಡಾಧಿಕಾರಿ 4) ಜಿಲ್ಲೆಯ ಪಂಚಾಯಿತಿ ಅಧಿಕಾರಿ

**19) ಅಸಿಸ್ಟೆಂಟ್ ಕಮೀಷನರ್ ಎಂದರೆ ಅರ್ಥ**

1) ವಿಭಾಗದ ಅಸಿಸ್ಟೆಂಟ್ ಕಮೀಷನರ್
2) ರೆವಿನ್ಯೂ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್
3) ಪಂಚಾಯಿತಿ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್ 4) ಪೊಲೀಸ್ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್

**20) ಅಧಿನಿಯಮದಲ್ಲ ಕಂಪನಿಯ ಅರ್ಥ?**

1) 1958 ರ ಕಂಪನಿ ಅಧಿನಿಯಮದಲ್ಲಿ ಅರ್ಥ ವಿವರಣೆ ನೀಡಿರುವ ಕಂಪನಿ ಅಥವಾ 1969 ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದಡಿ ನೊಂದಾಯಿತವಾದ ಸಹಕಾರಿ ಸಂಘ & ನಿಗಮವಾಗಿರಲಿ / ಇಲ್ಲದಿರಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಿರ್ವಹಿಸುತ್ತಿರುವ ಯಾವುದೇ ಫರ್ಮ್ ಅಥವಾ ವ್ಯಕ್ತಿಗಳ ಸಂಘ ಒಳಗೊಳ್ಳುತ್ತದೆ.
2) 1956 ರ ಕಂಪನಿ ಅಧಿನಿಯಮದಲ್ಲಿ ಅರ್ಥ ವಿವರಣೆ ನೀಡಿರುವ ಕಂಪನಿ ಅಥವಾ 1959 ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದಡಿ ನೊಂದಾಯಿತವಾದ ಸಹಕಾರಿ ಸಂಘ & ನಿಗಮವಾಗಿರಲಿ / ಇಲ್ಲದಿರಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಿರ್ವಹಿಸುತ್ತಿರುವ ಯಾವುದೇ ಫರ್ಮ್ ಅಥವಾ ವ್ಯಕ್ತಿಗಳ ಸಂಘ ಒಳಗೊಳ್ಳುತ್ತದೆ.
3) 1946 ರ ಕಂಪನಿ ಅಧಿನಿಯಮದಲ್ಲಿ ಅರ್ಥ ವಿವರಣೆ ನೀಡಿರುವ ಕಂಪನಿ ಅಥವಾ 1969 ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದಡಿ ನೊಂದಾಯಿತವಾದ ಸಹಕಾರಿ ಸಂಘ & ನಿಗಮವಾಗಿರಲಿ / ಇಲ್ಲದಿರಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಿರ್ವಹಿಸುತ್ತಿರುವ ಯಾವುದೇ ಫರ್ಮ್ ಅಥವಾ ವ್ಯಕ್ತಿಗಳ ಸಂಘ ಒಳಗೊಳ್ಳುತ್ತದೆ.
4) 1966 ರ ಕಂಪನಿ ಅಧಿನಿಯಮದಲ್ಲಿ ಅರ್ಥ ವಿವರಣೆ ನೀಡಿರುವ ಕಂಪನಿ ಅಥವಾ 1969 ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದಡಿ ನೊಂದಾಯಿತವಾದ ಸಹಕಾರಿ ಸಂಘ & ನಿಗಮವಾಗಿರಲಿ / ಇಲ್ಲದಿರಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಿರ್ವಹಿಸುತ್ತಿರುವ ಯಾವುದೇ ಫರ್ಮ್ ಅಥವಾ ವ್ಯಕ್ತಿಗಳ ಸಂಘ ಒಳಗೊಳ್ಳುತ್ತದೆ.

**21) ಅಧಿನಿಯಮದಲ್ಲ ಕಾರ್ಯನಿರ್ವಹಣಾಧಿಕಾರಿ ಎಂದರೆ?**

1) ತಾಲ್ಲೂಕು ಪಂ.ಯಲ್ಲಿ ಕಾರ್ಯನಿರ್ವಹಿಸುವ ಸರ್ಕಾರದ ಅಧಿಕಾರಿ
2) ಜಿಲ್ಲಾ ಪಂ. ಯಲ್ಲಿ ಕಾರ್ಯನಿರ್ವಹಿಸುವ ಸರ್ಕಾರದ ಅಧಿಕಾರಿ
3) ಗ್ರಾಮ ಪಂ.ಯಲ್ಲಿ ಕಾರ್ಯ ನಿರ್ವಹಿಸುವ ಸರ್ಕಾರದ ಅಧಿಕಾರಿ
4)ಗ್ರಾಮೀಣಾಭಿವೃದ್ಧಿ& ಪಂ. ರಾಜ್ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುವ ಸರ್ಕಾರದ ಅಧಿಕಾರಿ

**22) ಜಿಲ್ಲೆ ಎಂದರೆ ಈ ಅಧಿನಿಯಮದಲ್ಲ ಅರ್ಥ?**

1) ರೆವಿನ್ಯೂ ಜಿಲ್ಲೆ 2) ಪಂಚಾಯಿತಿ ಜಿಲ್ಲೆ
3) ಶೈಕ್ಷಣಿಕ ಜಿಲ್ಲೆ 4) ಪೊಲೀಸ್ ಜಿಲ್ಲೆ

**23) ಕಮೀಷನರ್ ಎಂದರೆ ಈ ಅಧಿನಿಯಮದಲ್ಲ ಅರ್ಥ?**

1) ಜಿಲ್ಲೆಯ ಜಿಲ್ಲಾಧಿಕಾರಿ 2) ಪ್ರಾದೇಶಿಕ ಕಮೀಷನರ್
3)ನಗರ ಪೊಲೀಸ್ ಕಮೀಷನರ್ 4)ಅಸಿಸ್ಟೆಂಟ್ ಕಮೀಷನರ್

**24) ಪಂಚಾಯಿತಿ ಪ್ರದೇಶ ಎಂಬುದರ ಅರ್ಥ?**

1) ಅಧಿನಿಯಮದ 3ನೇ ಪ್ರಕರಣದಲ್ಲಿರುವ ಪಂ. ಪ್ರದೇಶ ಎಂದು ಘೋಷಿಸಿರುವ ಯಾವುದೇ ಪ್ರದೇಶ
2) ಅಧಿನಿಯಮದ 5ನೇ ಪ್ರಕರಣದಲ್ಲಿರುವ ಪಂ. ಪ್ರದೇಶ ಎಂದು ಘೋಷಿಸಿರುವ ಯಾವುದೇ ಪ್ರದೇಶ
3) ಅಧಿನಿಯಮದ 4ನೇ ಪ್ರಕರಣದಲ್ಲಿರುವ ಪಂ. ಪ್ರದೇಶ ಎಂದು ಘೋಷಿಸಿರುವ ಯಾವುದೇ ಪ್ರದೇಶ
4) ಅಧಿನಿಯಮದ 2ನೇ ಪ್ರಕರಣದಲ್ಲಿರುವ ಪಂ. ಪ್ರದೇಶ ಎಂದು ಘೋಷಿಸಿರುವ ಯಾವುದೇ ಪ್ರದೇಶ

**25) ರಾಜ್ಯ ಚುನಾವಣಾ ಆಯೋಗದ ಅರ್ಥ?**

1) ಅಧಿನಿಯಮದ 308 ನೇ ಪ್ರಕರಣದಡಿಯಲ್ಲಿ ರಚಿತವಾದ ಕರ್ನಾಟಕ ಚುನಾವಣಾ ಆಯೋಗ
2) ಅಧಿನಿಯಮದ 267 ನೇ ಪ್ರಕರಣದಡಿಯಲ್ಲಿ ರಚಿತವಾದ ಕರ್ನಾಟಕ ಚುನಾವಣಾ ಆಯೋಗ
3) ಅಧಿನಿಯಮದ 309 ನೇ ಪ್ರಕರಣದಡಿಯಲ್ಲಿ ರಚಿತವಾದ ಕರ್ನಾಟಕ ಚುನಾವಣಾ ಆಯೋಗ
4) ಅಧಿನಿಯಮದ 310 ನೇ ಪ್ರಕರಣದಡಿಯಲ್ಲಿ ರಚಿತವಾದ ಕರ್ನಾಟಕ ಚುನಾವಣಾ ಆಯೋಗ

ಉತ್ತರಗಳು:- 17) 1 18) 3 19) 2 20) 2 21) 1 22) 1 23) 2 24) 3 25) 1



Scanned by CamScanner

**26) ಈ ಅಧಿನಿಯಮದಲ್ಲಿ ತಾಲ್ಲೂಕು ಎಂದರೆ?**

1) ಪಂಚಾಯಿತಿ ತಾಲ್ಲೂಕು, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ (ನಿರ್ದಿಷ್ಟಪಡಿಸಿದ) ದೊಡ್ಡ ನಗರ ಪ್ರದೇಶ ಅಥವಾ ಚಿಕ್ಕ ನಗರ ಪ್ರದೇಶ, ಪರಿವರ್ತಿತವಾಗುತ್ತಲಿರುವ ಪ್ರದೇಶ ಅಥವಾ ಕೈಗಾರಿಕಾ ಉಪನಗರದ ಪರಿಮಿತಿಗಳನ್ನು ಹೊರತುಪಡಿಸಿದ ಪಂಚಾಯಿತಿ ತಾಲ್ಲೂಕು.

2) ರೆವಿನ್ಯೂ ತಾಲ್ಲೂಕು, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ (ನಿರ್ದಿಷ್ಟಪಡಿಸಿದ) ದೊಡ್ಡ ನಗರ ಪ್ರದೇಶ ಅಥವಾ ಚಿಕ್ಕ ನಗರ ಪ್ರದೇಶ, ಪರಿವರ್ತಿತವಾಗುತ್ತಲಿರುವ ಪ್ರದೇಶ ಅಥವಾ ಕೈಗಾರಿಕಾ ಉಪನಗರದ ಪರಿಮಿತಿಗಳನ್ನು ಹೊರತುಪಡಿಸಿದ ರೆವಿನ್ಯೂ ತಾಲ್ಲೂಕು.

3) ಚುನಾವಣಾ ಕ್ಷೇತ್ರದ ತಾಲ್ಲೂಕು, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ (ನಿರ್ದಿಷ್ಟಪಡಿಸಿದ) ದೊಡ್ಡ ನಗರ ಪ್ರದೇಶ ಅಥವಾ ಚಿಕ್ಕ ನಗರ ಪ್ರದೇಶ, ಪರಿವರ್ತಿತವಾಗುತ್ತಲಿರುವ ಪ್ರದೇಶ ಅಥವಾ ಕೈಗಾರಿಕಾ ಉಪನಗರದ ಪರಿಮಿತಿಗಳನ್ನು ಹೊರತುಪಡಿಸಿದ ಚುನಾವಣಾ ಕ್ಷೇತ್ರದ ತಾಲ್ಲೂಕು.

4) ಶೈಕ್ಷಣಿಕ ಕ್ಷೇತ್ರದ ತಾಲ್ಲೂಕು, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ (ನಿರ್ದಿಷ್ಟಪಡಿಸಿದ) ದೊಡ್ಡ ನಗರ ಪ್ರದೇಶ ಅಥವಾ ಚಿಕ್ಕ ನಗರ ಪ್ರದೇಶ, ಪರಿವರ್ತಿತವಾಗುತ್ತಲಿರುವ ಪ್ರದೇಶ / ಕೈಗಾರಿಕಾ ಉಪನಗರದ ಪರಿಮಿತಿಗಳನ್ನು ಹೊರತುಪಡಿಸಿದ ಶೈಕ್ಷಣಿಕ ಕ್ಷೇತ್ರದ ತಾಲ್ಲೂಕು.

**27) ವಾರ್ಡ್‌ಸಭೆ ಎಂದರೆ?**

1) ವಾರ್ಡ್ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಗ್ರಾಮ ಪಂ.ಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಮತದಾರರಾಗಿ ನೊಂದಾಯಿತರಾದ ಎಲ್ಲ ವ್ಯಕ್ತಿಗಳನ್ನು ಒಳಗೊಂಡ ನಿಕಾಯ

2) ಗ್ರಾಮ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಎಲ್ಲ ಜನರನ್ನು ಒಳಗೊಂಡ ನಿಕಾಯ

3) ವಾರ್ಡ್ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಜನರನ್ನು ಒಳಗೊಂಡ ನಿಕಾಯ

4) ವಾರ್ಡ್ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಪುರುಷ ನೊಂದಾಯಿತರಾದ ಎಲ್ಲ ವ್ಯಕ್ತಿಗಳನ್ನು ಒಳಗೊಂಡ ನಿಕಾಯ

**28) ಕಾರ್ಯದರ್ಶಿ ಎಂದರೆ?**

1) ರೆವಿನ್ಯೂ ಇಲಾಖೆಯಲ್ಲಿ ಬರುವ ಗ್ರಾಮ ಸಹಾಯಕ

2) ಗ್ರಾಮ ಪಂಚಾಯಿತಿ ಕಾರ್ಯದರ್ಶಿ

3) ಪಂಚಾಯಿತಿಗಳ ಕಾರ್ಯದರ್ಶಿ

4) ಸಹಕಾರ ಸಂಘಗಳ/ಇತರೆ ಯಾವುದೇ ಸಂಘಗಳ ಕಾರ್ಯದರ್ಶಿ

**29) ಅಧಿನಿಯಮದಲ್ಲಿ ಜನಸಂಖ್ಯೆಯ ಅರ್ಥ?**

1) ಒಂದು ಪಂಚಾಯಿತಿ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆ

2) ಒಂದು ಪ್ರದೇಶಲ್ಲಿ ವಾಸಿಸುವ ಒಟ್ಟು ಜನರು

3) ಕಳೆದ ಸಲ ಜನಗಣತಿಯಲ್ಲಿ ಕಂಡು ಕೊಂಡಿರುವ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಸುಸಂಗತ ಅಂಕಿ-ಅಂಶಗಳಲ್ಲಿ ಪ್ರಕಟಿಸಿರುವ ಜನಸಂಖ್ಯೆ

4)ಒಂದು ಭೌಗೋಳಿಕ ಪ್ರದೇಶದಲ್ಲಿವಾಸಿಸುವ ಜನರು

**30) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅರ್ಥ?**

1) ಜಿಲ್ಲಾ ಪಂ.ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

2) ತಾಲ್ಲೂಕು ಪಂಚಾಯಿತಿಯ ಮುಖ್ಯಸ್ಥ

3) ಜಿಲ್ಲಾ ಪಂಚಾಯಿತಿ ಅಧ್ಯಕ್ಷರು

4) ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ

**31) ವ್ಯವಹಾರ ಎಂಬ ಪದದ ಅರ್ಥ?**

1) ವಾಣಿಜ್ಯ & ವಾಣಿಜ್ಯೇತರ ಚಟುವಟಿಕೆಗಳು

2) ಯಾವುದೇ ವ್ಯಾಪಾರ, ವಾಣಿಜ್ಯ ಅಥವಾ ತಯಾರಿಕೆ ಅಥವಾ ವ್ಯಾಪಾರ, ವಾಣಿಜ್ಯ ಅಥವಾ ತಯಾರಿಕೆಯ ಸ್ವರೂಪದ ಸಾಹಸೋದ್ಯಮ ಅಥವಾ ವ್ಯಾಪಾರ ಸಂಸ್ಥೆ ಒಳಗೊಳ್ಳುತ್ತದೆ.

3) ಸರ್ಕಾರದಿಂದ ಅಂಗೀಕಾರಗೊಂಡಿರುವ ವಾಣಿಜ್ಯ ಚಟುವಟಿಕೆಗಳು

4) ಒಂದು ಪಂಚಾಯಿತಿ ಪ್ರದೇಶದಲ್ಲಿ ನಡೆಸುವ ವಾಣಿಜ್ಯ ವಹಿವಾಟುಗಳು

**32) ಕಟ್ಟಡ ಎಂಬ ಪದದ ಅರ್ಥ?**

1) ಮನೆ ಅಥವಾ ನಿರ್ಮಾಣಗೊಂಡಿರುವ ವಸತಿಗೆ ಯೋಗ್ಯವಾದ ಸ್ಥಳ

2)ಸರ್ಕಾರದ ಅನುಮತಿಯಿಂದನಿರ್ಮಿಸಲಾದ ಕಟ್ಟಡ

3) ಪಂಚಾಯಿತಿಯಿಂದ ಅನುಮತಿ ಪಡೆದ ನಿರ್ಮಿಸಲಾದ ಕಟ್ಟಡ

4) ಮನೆ, ಹೊರಮನೆ, ಅಂಗಡಿ, ಕೊಟ್ಟಿಗೆ, ಉಗ್ರಾಣ, ಕಾರ್ಯಾಗಾರ, ಮೇಲ್ಚಪ್ಪರ, ಷೆಡ್, ಗುಡಿಸಲು, ಅಥವಾ ಮಾನವ ವಾಸಕ್ಕಾಗಿ ಅಥವಾ ಬೇರೆ ರೀತಿಯಾಗಿ ಉಪಯೋಗಿಸುವ ಇತರ ಆವರಣಗಳು ಒಳಗೊಳ್ಳುತ್ತವೆ.

**ಉತ್ತರಗಳು:-** 26) 2 27) 1 28) 2 29) 3 30) 1 31) 2 32) 4



Scanned by CamScanner

chanakyaloka.com



**33) ಈ ಅಧಿನಿಯಮದಲ್ಲಿ ಕಾರ್ಖಾನೆ ಎಂದರೆ?**

1) 1948 ರ ಕಾರ್ಖಾನೆಗಳ ಅಧಿನಿಯಮದಲ್ಲಿ (1948 ರ ಕೇಂದ್ರ ಅಧಿನಿಯಮ ಸಂಖ್ಯೆ 13) ಅರ್ಥ ವಿವರಣೆ ನೀಡಿರುವ ಕಾರ್ಖಾನೆಯೇ ಅಲ್ಲದೆ ಆದರೆ, ಮಾನವ ಇಲ್ಲವೆ ಪ್ರಾಣಿ ಶಕ್ತಿಯ ಮೂಲಕ ಉತ್ಪಾದನೆ ಮಾಡಿರದ, ಯಾಂತ್ರಿಕವಾಗಿ ರವಾನಿಸಿದ ಉಗಿ, ನೀರು, ತೈಲ, ಅನಿಲ, ವಿದ್ಯುತ್ ಅಥವಾ ಯಾವುದೇ ಇತರ ರೀತಿಯ ಶಕ್ತಿಯ ಸಹಾಯದಿಂದ ಯಾವುದೇ ಔದ್ಯಮಿಕ ತಯಾರಿಕಾ /ವ್ಯಾಪಾರ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆಯೋ ಅಲ್ಲಿನ ಪ್ರಾಕಾರಗಳು ಒಳಗೊಂಡಿರುವ ಯಾವುದೇ ಆವರಣಗಳು

2) ಉತ್ಪಾದನೆ ಮಾಡುವ ಒಂದು ತಯಾರಿಕಾ ಘಟಕ

3) ಸರ್ಕಾರದಿಂದ ಅನುಮತಿ ಪಡೆದು ಅಥವಾ ಅನುಮತಿ ಪಡೆಯದೇ ಸ್ಥಾಪಿತವಾಗಿರುವ ಕಾರ್ಖಾನೆ

4) ಉತ್ಪಾದನೆ ಮಾಡುವ ಅಥವಾ ಯಾವುದಾದರೂ ವಸ್ತುವನ್ನು ಪುನರ್ ಉತ್ಪಾದಿಸುವ ಘಟಕ

**34) ಸರ್ಕಾರ ಎಂದರೆ ಅರ್ಥ?**

1) ಕೇಂದ್ರ ಸರ್ಕಾರ 2) ರಾಜ್ಯ ಸರ್ಕಾರ

3) ಸ್ಥಳೀಯ ಸರ್ಕಾರ 4) ಪ್ರಾಧಿಕಾರ

**35) ಗ್ರಾಮ ಪಂಚಾಯಿತಿ ಎಂಬ ಪದದ ಅರ್ಥ?**

1) ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿರುವ ಗ್ರಾಮ ಪಂಚಾಯಿತಿ

2) ಗ್ರಾಮದಲ್ಲಿ ಸ್ಥಾಪಿತವಾಗಿರುವ ಮತದಾರರನ್ನೊಳಗೊಂಡ ನಿಕಾಯ

3) ಗ್ರಾಮದಲ್ಲಿ ಸ್ಥಾಪನೆಯಾಗಿರುವ ಜನಪ್ರತಿನಿಧಿಗಳನ್ನೊಳಗೊಂಡ ನಿಕಾಯ

4) ಅಸಿಸ್ಟೆಂಟ್ ಕಮೀಷನರ್ ಅವರಿಂದ ವಿಶೇಷ ಆದೇಶಕ್ಕೊಳಪಟ್ಟು ಸ್ಥಾಪಿತವಾದ ಸಂಸ್ಥೆ

**36) ಗ್ರಾಮ ಸಭಾ ಎಂಬ ಪದದ ಅರ್ಥ?**

1) ಗ್ರಾಮ ಪಂ.ಯ ಜನರನ್ನು ಒಳಗೊಂಡ ಒಂದು ಮಂಡಲಿ 2) ಗ್ರಾಮ ಪಂ.ಯ ವಯಸ್ಕರನ್ನೊಳಗೊಂಡ ಒಂದು ಮಂಡಲಿ

3) ಗ್ರಾಮ ಪಂ.ಯ ವಿದ್ಯಾವಂತರನ್ನೊಳಗೊಂಡ ಒಂದು ಮಂಡಲಿ 4) ಗ್ರಾಮ ಪಂಚಾಯಿತಿಯ ಮತದಾರರ ಪಟ್ಟಿಯಲ್ಲಿ ನೊಂದಾಯಿತ ವ್ಯಕ್ತಿಗಳು ಇರುವ ಒಂದು ಮಂಡಲಿ

**37) ಆರೋಗ್ಯಾಧಿಕಾರಿ ಎಂಬ ಪದದ ಅರ್ಥ?**

1)ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುವಸರ್ಕಾರಿ ವೈದ್ಯ

2)ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುವ ವೈದ್ಯ

3) ಜಿಲ್ಲಾ ಪಂಚಾಯಿತಿಯಿಂದ ಅಥವಾ ಅದರ ಪರವಾಗಿ ನಿಯೋಜಿತವಾದ ಆರೋಗ್ಯಾಧಿಕಾರಿ ಮತ್ತು ಅಂಥ ಯಾವ ಅಧಿಕಾರಿ ಇಲ್ಲದಿದ್ದರೆ ಸಂಬಂಧಪಟ್ಟ ತಾಲ್ಲೂಕು ಅಥವಾ ಜಿಲ್ಲೆಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸರ್ಕಾರಿ ಆರೋಗ್ಯಾಧಿಕಾರಿ

4) ಪಂಚಾಯಿತಿ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯ

**38) ಸಾಂಕ್ರಾಮಿಕ ರೋಗ ಪದದ ಅರ್ಥ?**

1) ಬೇಗ ಹರಡಬಹುದಾದ ಔಷಧಿಯಿಲ್ಲದ ರೋಗವಾಗಿದೆ

2) ಮಿದುಳು ಮತ್ತು ಮಿದುಳು ಬಳ್ಳಿಯ ಜ್ವರ, ಸೀತಾಳ ಸಿಡುಬು, ಕಾಲರಾ, ಡಿಫ್ತೀರಿಯಾ, ವಿಷಮಶೀತಜ್ವರ, ಸಾಂಕ್ರಾಮಿಕ ಇನ್‌ಫ್ಲೂಯೆಂಜಾ, ಕುಷ್ಠರೋಗ, ದಡಾರ, ಪ್ಲೇಗು, ರೇಬಿಸ್, ಕೆಂಜ್ವರ, ಸಿಡುಬು, ಕ್ಷಯ, ಟೈಫಸ್ ಜ್ವರ, ಬೊಕ್ಕೆ ರೋಗ /ಈ ಬಗ್ಗೆ ಸರ್ಕಾರವು ಸಾಮಾನ್ಯವಾಗಿ ರಾಜ್ಯಾದ್ಯಂತ /ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯದ ಭಾಗ ಅಥವಾ ಭಾಗಗಳಲ್ಲಿ ಅಧಿಸೂಚಿಸಬಹುದಾದಂಥ ಯಾವುದೇ ಇತರೆ ರೋಗ 3) ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಅಧಿಕೃತವಾಗಿ ಪಟ್ಟಿ ಮಾಡಿದ ರೋಗಗಳು

4) ಸರ್ಕಾರದಿಂದ ಅಧಿಸೂಚಿಸಿದ ರೋಗಗಳು

**39) ಭೂ ಕಂದಾಯ ಎಂಬ ಪದದ ಅರ್ಥ?**

1) ಪಂ. ಪ್ರದೇಶದಲ್ಲಿ ವಸೂಲಿಮಾಡುವ ಕಂದಾಯ

2) ಭೂಮಿಯನ್ನು ಧಾರಣ ಮಾಡಿರುವುದರಿಂದಾಗಿ ಅಥವಾ ಅದು ನಿಹಿತವಾಗಿರುವುದರಿಂದಾಗಿ ಯಾವನೇ ವ್ಯಕ್ತಿಯಿಂದ, ಆ ಭೂಮಿಯು ಇರುವಂಥ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಕಂದಾಯ ವ್ಯವಸ್ಥೆಯಲ್ಲಿ ನಿಗದಿಪಡಿಸಿದಂತೆ ಸರ್ಕಾರವು ಅಥವಾ ಅದರ ಪರವಾಗಿ ಸ್ವೀಕರಿಸಿದ ಅಥವಾ ಕೋರಬಹುದಾದ ಎಲ್ಲಾ ಮೊತ್ತಗಳು & ಸಂದಾಯಗಳು

3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸಂಗ್ರಹಿಸಬಹುದಾದ ಕಂದಾಯ

4) ರೆವಿನ್ಯೂ ಭೂಪ್ರದೇಶವಲ್ಲದೆ ಇತರೆ ಭೂ ಪ್ರದೇಶಕ್ಕೆ ವಿಧಿಸುವ ಕಂದಾಯ

**40) ಈ ಅಧಿನಿಯಮದಲ್ಲಿ ಪಾಯಖಾನೆ ಮನೆ ಎದರೆ?**

1) ಶೌಚಾಲಯ, ಶೌಚಗೃಹ ಮತ್ತು ಮೂತ್ರಸ್ಥಳ ಒಳಗೊಳ್ಳುತ್ತದೆ.

2) ಶುಚಿತ್ವವನ್ನು ಕಾಪಾಡಲು ನಿರ್ಮಿಸಿರುವ ವಸತಿ

3) ನೈರ್ಮಲ್ಯವನ್ನು ಕಾಪಾಡಲು ಕಟ್ಟಿದ ಮನೆ

4) ಸರ್ಕಾರದಿಂದ ನಿರ್ಮಿಸಲ್ಪಟ್ಟ ಶೌಚಗೃಹವಾಗಿದೆ.

ಉತ್ತರಗಳು:- 33) 1 34) 2 35) 1 36) 4 37) 3 38) 2 39) 2 40) 1



Scanned by CamScanner

**41) ಸ್ಥಳೀಯ ಪ್ರಾಧಿಕಾರ ಎಂಬ ಪದದ ಅರ್ಥ?**

1) ಸ್ಥಳೀಯ ಅಭಿವೃದ್ಧಿ ಪ್ರಾಧಿಕಾರ

2) ಸ್ಥಳೀಯವಾಗಿ ಮೂಲಭೂತ ಸೌಕರ್ಯವನ್ನು ಒದಗಿಸುವಂತಹ ಒಂದು ಪ್ರಾಧಿಕಾರ

3) ಸ್ಥಳೀಯವಾಗಿ ಸ್ಥಾಪಿತಗೊಂಡ ಒಂದು ನಿಕಾಯ.

4) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಿದ ಮುನಿಸಿಪಲ್ ಕಾರ್ಪೋರೇಷನ್, ಮುನಿಸಿಪಲ್ ಕೌನ್ಸಿಲ್, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಕೈಗಾರಿಕಾ ಉಪನಗರ, ಅಭಿವೃದ್ಧಿ ಮಂಡಲಿ, ನಗರ ಅಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ ಒಳಗೊಳ್ಳುತ್ತದೆ.

**42) ಈ ಅಧಿನಿಯಮದಲ್ಲಿ ಮಾರುಕಟ್ಟೆ ಎಂಬ ಪದದ ಅರ್ಥ?**

1) ಸರಕುಗಳು ಅಥವಾ ಪ್ರಾಣಿಗಳನ್ನು ಎಲ್ಲಿ ಸಾರ್ವಜನಿಕವಾಗಿ ಮಾರಾಟಕ್ಕಾಗಿ ಇಡಲಾಗಿದೆಯೋ, ಎಲ್ಲಿ ಸಾಮಾನ್ಯವಾಗಿ ಅಥವಾ ನಿಯತಕಾಲಿಕವಾಗಿ ಕನಿಷ್ಠ ಪಕ್ಷ ನಾಲ್ಕು ಅಂಗಡಿಗಳು, ಮಳಿಗೆಗಳು ಅಥವಾಷೆಡ್ಡುಗಳನ್ನು ಸ್ಥಾಪಿಸಲಾಗಿದೆಯೋ ಅಥವಾ ಕನಿಷ್ಠ ಪಕ್ಷ ಹತ್ತು ಪ್ರಾಣಿಗಳನ್ನು ಮಾರಾಟಕ್ಕಾಗಿ ತರಲಾಗಿದೆಯೋ ಆ ಸ್ಥಳ.

2) ವ್ಯಾಪಾರ ವಹಿವಾಟು ಮಾಡುವ ಕನಿಷ್ಠ 2 ಅಂಗಡಿಗಳನ್ನು ಹೊಂದಿರುವುದು

3) ವಾಣಿಜ್ಯ ವಹಿವಾಟು ನಡೆಸುವ ಮತ್ತು ಕನಿಷ್ಠ 10 ಅಂಗಡಿಗಳನ್ನು ಹೊಂದಿರುವ ಸ್ಥಳ

4) ವಾಣಿಜ್ಯ, ವ್ಯಾಪಾರ ನಡೆಸಲು ಕನಿಷ್ಠ 15 ಅಂಗಡಿಗಳನ್ನು ಹೊಂದಿರುವ ಸ್ಥಳ

**43) ಈ ಅಧಿನಿಯಮದಲ್ಲಿ ಉಪದ್ರವ ಎಂಬ ಪದದ ಅರ್ಥ?**

1) ಅಪಾಯಕಾರಿ ವಸ್ತುಗಳನ್ನು ಪ್ರತಿನಿಧಿಸುತ್ತದೆ

2) ಗಾಯ, ಅಪಾಯ, ಕಿರುಕುಳಗಳನ್ನು ಅಥವಾ ದೃಷ್ಟಿಶಕ್ತಿ, ಘ್ರಾಣಶಕ್ತಿ, ಅಥವಾ ಶ್ರವಣಶಕ್ತಿಗೆ ಕಿರಿಕಿರಿಯನ್ನು ಅಥವಾ ವಿಶ್ರಾಂತಿ ಅಥವಾ ನಿದ್ರೆಗೆ ತೊಂದರೆಯನ್ನು ಉಂಟು ಮಾಡುವ ಅಥವಾ ಉಂಟುಮಾಡಬಹುದಾದಂತಹ ಅಥವಾ ಪ್ರಾಣಕ್ಕೆ ಅಪಾಯಕಾರಿಯಾದ ಅಥವಾ ಅಪಾಯಕಾರಿಯಾಗಬಹುದಾದ ಅಥವಾ ಸಾರ್ವಜನಿಕ ಆರೋಗ್ಯ ಅಥವಾ ಸ್ವತ್ತಿಗೆ ಅಥವಾ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ಜನಸಾಮಾನ್ಯರ ಅಥವಾ ಸಾರ್ವಜನಿಕ ಹಕ್ಕನ್ನು ಚಲಾಯಿಸಬಹುದಾದಂತಹ ಅವಕಾಶ ಹೊಂದಿರುವ ವ್ಯಕ್ತಿಗಳ ಆರೋಗ್ಯ ಅಥವಾ ಸ್ವತ್ತಿಗೆ ಹಾನಿಕಾರಕವಾದ ಯಾವುದೇ ಕಾರ್ಯಲೋಪ, ಸ್ಥ[illegible] ಅಥವಾ ವಸ್ತು ಒಳಗೊಳ್ಳುತ್ತದೆ.

3) ಕಿರಿಕಿರಿ ಉಂಟು ಮಾಡುವ ಶಬ್ದ ಎಂದರ್ಥ

4) ಸಾರ್ವಜನಿಕವಾಗಿ ಜನರಿಗೆ ಹಿಂಸೆ ಕೊಡುವ ಕಾರ್ಯವಾಗಿದೆ.

**44) ಈ ಅಧಿನಿಯಮದಲ್ಲಿ ಅಸಹ್ಯ ಅಥವಾ ಅಪಾಯಕರ ವ್ಯಾಪಾರ ಎಂಬ ಪದದ ಅರ್ಥ?**

1) ಸಾರ್ವಜನಿಕರ ಜೀವನಕ್ಕೆ ಅಪಾಯ ಉಂಟು ಮಾಡುವ ವ್ಯಾಪಾರಗಳು 2) ಸರ್ಕಾರವು ನಿಷೇಧಿಸಿರುವ ವ್ಯವಹಾರ /ವ್ಯಾಪಾರಗಳು

3) ಜೀವ, ಆರೋಗ್ಯ ಅಥವಾ ಆಸ್ತಿಗೆ ಅಪಾಯಕಾರಿಯಾದ, 67 ನೇ ಪ್ರಕರಣದಡಿ ಸರ್ಕಾರವು ಅಧಿಸೂಚಿಸುವ ಅಥವಾ ಉಪದ್ರವನ್ನುಂಟು ಮಾಡುವ ಸಂಭವವಿರುವ ಯಾವುದೇ ವ್ಯಾಪಾರ, ವ್ಯವಹಾರ ಅಥವಾ ಉದ್ಯಮ 4) ಸಾರ್ವಜನಿಕವಾಗಿ ವ್ಯವಹರಿಸದ ಹಾಗೂ ಸಾರ್ವಜನಿಕರಿಗೆ ಅಸಹ್ಯ ಉಂಟು ಮಾಡುವ ವ್ಯಾಪಾರ

**45) ಈ ಅಧಿನಿಯಮದಲ್ಲಿ ಅನುಭವದಾರ ಎಂದರೆ?**

1) ಬಹಳ ವರ್ಷಗಳಿಂದ ವಾಸಿಸುವ ವ್ಯಕ್ತಿಯಾಗಿರುತ್ತಾನೆ

2) ಒಂದು ಸ್ವತ್ತಿನ ಮೇಲೆ ಅಧಿಕಾರಹೊಂದಿರುವ ವ್ಯಕ್ತಿ

3) ಒಂದು ಸ್ವತ್ತು ಅಥವಾ ವಸ್ತುವಿನ ಮೇಲೆ ಕಾನೂನಾತ್ಮಕವಾಗಿ ಅಧಿಕಾರ ಹೊಂದಿರುವ ವ್ಯಕ್ತಿ

4) ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗದ ವಾಸ್ತವಿಕ ಸ್ವಾಧೀನತೆ ಹೊಂದಿರುವ ಯಾವನೇ ವ್ಯಕ್ತಿ ಮತ್ತು ಅದು ವಾಸ್ತವಿಕ ಸ್ವಾಧೀನತೆ ಹೊಂದಿರುವ ಮಾಲೀಕ ಮತ್ತು ಬಾಡಿಗೆದಾರ ಅಥವಾ ಲೈಸೆನ್ಸುದಾರರನ್ನು ಅಂತಹ ಬಾಡಿಗೆದಾರ ಅಥವಾ ಲೈಸೆನ್ಸುದಾರನು ಬಾಡಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳುತ್ತದೆ.

**46) ಈ ಅಧಿನಿಯಮದಲ್ಲಿ ಅಸಹ್ಯಕರ ವಸ್ತು ಎಂದರೆ?**

1) ಹೊಸಲು, ಗ್ರಾಮಸಾರ, ಕೊಚ್ಚೆ, ಮನೆಯಕಸ ಮತ್ತು ಅಗಿದ ಎಲೆ ಮತ್ತು ಹೊಗೆಸೊಪ್ಪು ಒಳಗೊಂಡ ಉಗುಳು, ಅಡಿಗೆ ಮನೆಯ ಅಥವಾ ಕೊಟ್ಟಿಗೆಯ ಕಸ, ಒಡೆದ ಗಾಜುಗಳ ಅಥವಾ ಮಣ್ಣಿನ ಪಾತ್ರೆಗಳ ಚೂರುಗಳು, ಮುರುಕಲು ಗುಪ್ಪೆ ಮತ್ತು ರದ್ದಿ ಕಾಗದ ಒಳಗೊಳ್ಳುತ್ತದೆ.

2) ರೋಗರುಜಿನವನ್ನು ಉಂಟು ಮಾಡುವ ವಸ್ತು

3) ವಾಸನೆ ಬರುವ &ಆರೋಗ್ಯ ಕೆಡಿಸುವಂತಹ ವಸ್ತು

4) ಸಾರ್ವಜನಿಕ ಆರೋಗ್ಯಕ್ಕೆ ಹಾನಿ ಮಾಡುವ ವಸ್ತು

**ಉತ್ತರಗಳು:-** 41) 4 42) 1 43) 2 44) 3 45) 4 46) 1



Scanned by CamScanner

**47) ಈ ಅಧಿನಿಯಮದಲ್ಲಿ ಮಾಲೀಕ ಎಂಬ ಪದದ ಅರ್ಥ?**

1) ಒಂದು ವಸ್ತುವಿನ ಮೇಲೆ ಕಾನೂನಾತ್ಮಕವಾಗಿ ಒಡೆತನ ಹೊಂದಿರುವ ವ್ಯಕ್ತಿ

2) ತತ್ಕಾಲದಲ್ಲಿ ತನ್ನ ಸ್ವಂತ ಲೆಕ್ಕದಲ್ಲಿ ಅಥವಾ ಏಜೆಂಟ್, ರಿಸೀವರ್, ಅಥವಾ ಟ್ರಸ್ಟಿಯಾಗಿ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಯಾವುದೇ ಭಾಗದ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗವನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ ಬಾಡಿಗೆಯನ್ನು ಸ್ವೀಕರಿಸುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

3) ನೊಂದಣಿ ಇಲಾಖೆಯಲ್ಲಿ ಒಂದು ವಸ್ತುವಿನ ಮಾಲೀಕತ್ವ ಹೊಂದಿರುವ ವ್ಯಕ್ತಿ

4) ಸಾರ್ವಜನಿಕವಾಗಿ ಆ ವಸ್ತುವು ವ್ಯಕ್ತಿಗೆ ಸೇರಿದೆ ಎಂದು ಅಭಿಪ್ರಾಯ ಹೊಂದಿರುವ ವ್ಯಕ್ತಿ.

**48) ಈ ಅಧಿನಿಯಮದಲ್ಲಿ ಪಂಚಾಯಿತಿ ಪ್ರದೇಶ ಎಂದರೆ?**

1) ತಾಲ್ಲೂಕು ಪಂಚಾಯಿತಿಯ ಒಂದು ಭಾಗವಾಗಿದೆ

2) 4ನೇ ಪ್ರಕರಣದಡಿ ಪಂಚಾಯಿತಿ ಪ್ರದೇಶ ಎಂದು ಘೋಷಿಸಿರುವ ಯಾವುದೇ ಪ್ರದೇಶ

3) ಜಿಲ್ಲಾ ಪಂಚಾಯತಿಗೆ ಸೇರುವ ಒಂದು ಪ್ರದೇಶ.

4) ರಾಜ್ಯದ ಭೌಗೋಳಿಕ ಭಾಗದ ಒಂದು ಪ್ರದೇಶ.

**49) ಈ ಅಧಿನಿಯಮದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂಬ ಪದದ ಅರ್ಥ?**

1) ತಾಲ್ಲೂಕು ಪಂ.ಯ ಕಾರ್ಯನಿರ್ವಹಣಾಧಿಕಾರಿ

2) ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ

3) ಗ್ರಾಮ ಪಂ.ಯ ಪಂ. ಅಭಿವೃದ್ಧಿ ಅಧಿಕಾರಿ.

4) ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುವ ಪಿ.ಡಿ.ಓ ಅಧೀನದಲ್ಲಿರುವ ಅಧಿಕಾರಿ

**50) ಪಂಚಾಯಿತಿ ಓಂಬುಡ್ಸ್‌ಮನ್ ಎಂದರೆ?**

1) 296 ನೇ ಪ್ರಕರಣದಡಿಯಲ್ಲಿ ರಾಜ್ಯ ಸರ್ಕಾರವು ನೇಮಕ ಮಾಡಿದ ಪಂಚಾಯಿತಿ ಓಂಬುಡ್ಸ್‌ಮನ್.

2) 296 ನೇ ಪ್ರಕರಣದಡಿಯಲ್ಲಿ ಕೇಂದ್ರ ಸರ್ಕಾರವು ನೇಮಕ ಮಾಡಿದ ಪಂಚಾಯಿತಿ ಓಂಬುಡ್ಸ್‌ಮನ್

3) 296 ನೇ ಪ್ರಕರಣದಡಿಯಲ್ಲಿ ಜಿಲ್ಲಾ ಪಂಚಾಯಿತಿಯು ನೇಮಕ ಮಾಡಿದ ಪಂಚಾಯಿತಿ ಓಂಬುಡ್ಸ್‌ಮನ್

4) 296 ನೇ ಪ್ರಕರಣದಡಿಯಲ್ಲಿ ತಾಲ್ಲೂಕು ಪಂ.ಯು ನೇಮಕ ಮಾಡಿದ ಪಂಚಾಯಿತಿ ಓಂಬುಡ್ಸ್‌ಮನ್

**51) ಈ ಅಧಿನಿಯಮದಲ್ಲಿ ಪಂಚಾಯಿತಿ ಸಿಬ್ಬಂದಿ ಎಂದರೆ?**

1) ಜಿಲ್ಲಾ ಪಂ.ಯಿಂದ ಗ್ರಾಮ ಪಂ.ಗೆ ನೇಮಿಸಿದ ಸಿಬ್ಬಂದಿ 2) ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆಯಲ್ಲಿ ಇರುವ ಹುದ್ದೆಗಳನ್ನು ಹೊರತುಪಡಿಸಿ ಪಂಚಾಯಿತಿಯು ನೇಮಕ ಮಾಡಿದ ಅಧಿಕಾರಿಗಳು ಮತ್ತು ಸಿಬ್ಬಂದಿ;

3) ತಾಲ್ಲೂಕು ಪಂಚಾಯಿತಿಯಿಂದ ಗ್ರಾಮ ಪಂಚಾಯಿತಿಗೆ ನೇಮಿಸಿದ ಅಧಿಕಾರಿಗಳು & ಸಿಬ್ಬಂದಿ

4) ಡಿ.ಸಿ. ಯಿಂದ ಗ್ರಾಮ ಪಂ.ಗೆ ನೇಮಿಸಿದ ಅಧಿಕಾರಿಗಳು

**52) ಈ ಅಧಿನಿಯಮದಲ್ಲಿ ಖಾಸಗಿ ಮಾರುಕಟ್ಟೆ ಎಂದರೆ?**

1) ಖಾಸಗಿಯವರಿಂದ & ಸರ್ಕಾರದಿಂದ ನಡೆಸುವ ಮಾರುಕಟ್ಟೆ

2) ಸಾರ್ವಜನಿಕ ಮಾರುಕಟ್ಟೆಯಲ್ಲದ ಇತರೆ ಮಾರುಕಟ್ಟೆ 3) ಖಾಸಗಿಯವರು ಮಾತ್ರ ವ್ಯಾಪಾರ ಮಾಡಬಹುದಾದ ಮಾರುಕಟ್ಟೆ

4) ಖಾಸಗಿಯವರು ನಡೆಸುವ & ನಿಯಂತ್ರಿಸುವ ಸಾರ್ವಜನಿಕರಿಗೆ ಅವಕಾಶವಿಲ್ಲದ ಮಾರುಕಟ್ಟೆ

**53) ಈ ಅಧಿನಿಯಮದಲ್ಲಿ ಸಾರ್ವಜನಿಕ ಮಾರುಕಟ್ಟೆ ಎಂದರೆ?**

1) ಗ್ರಾಮ ಪಂಚಾಯಿತಿಯ ಒಡೆತನದಲ್ಲಿರುವ ಅಥವಾ ಗ್ರಾಮ ಪಂಚಾಯಿತಿಯು ಅರ್ಜಿಸಿದ, ನಿರ್ಮಿಸಿದ, ನಡೆಸಿಕೊಂಡು ಬರುತ್ತಿರುವ ಅಥವಾ ನಿರ್ವಹಿಸುತ್ತಿರುವ ಯಾವುದೇ ಮಾರುಕಟ್ಟೆ,

2) ಸಾರ್ವಜನಿಕರಿಂದ ನಡೆಸಲ್ಪಟ್ಟ ಮಾರುಕಟ್ಟೆ

3) ರಾಜ್ಯ ಸರ್ಕಾರದಿಂದ ಅನುಮತಿ ಪಡೆದ ಮಾರುಕಟ್ಟೆ 4) ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಮಾರುಕಟ್ಟೆ

**54) ಈ ಅಧಿನಿಯಮದಲ್ಲಿ ಸಾರ್ವಜನಿಕ ಬೀದಿ ಎಂದರೆ?**

1) ಖಾಸಗಿಯವರು ಬಳಕೆ ಮಾಡದ ಬೀದಿಯಾಗಿದೆ.

2) ಅದು ಮುಖ್ಯ ರಸ್ತೆಯಾಗಿರಲಿ ಅಥವಾ ಇಲ್ಲದಿರಲಿ ಸಾರ್ವಜನಿಕರಿಗೆ ದಾರಿ ಹಕ್ಕು ಇರುವ ಯಾವುದೇ ಬೀದಿ. 3) ಸರ್ಕಾರವು ಬಳಕೆ ಮಾಡುವ ಬೀದಿಯಾಗಿದೆ. 4) ಸರ್ಕಾರದಿಂದ ಪರವಾನಗಿ ಪಡೆದ ವಾಹನಗಳು ಸಂಚರಿಸುವ ಬೀದಿ.

**55) ಈ ಅಧಿನಿಯಮದಲ್ಲಿ ಅನುಸೂಚಿ ಎಂದರೆ?**

1) ಸಂವಿಧಾನದ ಅನುಸೂಚಿಯಾಗಿದೆ.

2) ಒಂದು ನಿರ್ದಿಷ್ಟ ಜನಾಂಗವನ್ನು ಸೂಚಿಸುವುದು

3) ಈ ಅಧಿನಿಯಮಕ್ಕೆ ಲಗತ್ತಿಸಿರುವ ಅನುಸೂಚಿ.

4) ಜಾತಿಗಳನ್ನು ಸೂಚಿಸುವ ಒಂದು ಪಟ್ಟಿಯಾಗಿದೆ.

**ಉತ್ತರಗಳು:-** 47) 2 48) 2 49) 3 50) 1 51) 2 52) 2 53) 1 54) 2 55) 3



Scanned by CamScanner

**56) ಈ ಅಧಿನಿಯಮದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಎಂಬ ಪದದ ಅರ್ಥ?**

1)ಸಂವಿಧಾನದಲ್ಲಿ ಸೂಚಿಸಿರದ ಜಾತಿಗಳು&ಪಂ.ಗಳು

2) ರಾಜ್ಯ ಸರ್ಕಾರವು ಪಟ್ಟಿ ಮಾಡಿದ ಅನುಸೂಚಿತ ಜಾತಿಗಳು

3) ರಾಜ್ಯ ಸರ್ಕಾರವು ಪಟ್ಟಿ ಮಾಡಿ ಕೇಂದ್ರವು ಅನುಮೋದಿಸಿರುವ ಅನುಸೂಚಿತ ಜಾತಿಗಳು

4) ತತ್ಕಾಲದಲ್ಲಿ ಜಾರಿಯಲ್ಲಿರುವ 1950 ರ ಸಂವಿಧಾನದ(ಅನುಸೂಚಿತ ಜಾತಿಗಳು) ಆದೇಶದಲ್ಲಿ ಮತ್ತು 1950 ರ ಸಂವಿಧಾನದ (ಅನುಸೂಚಿತ ಪಂಗಡಗಳು) ಆದೇಶದಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿರುವ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು.

**57) ಈ ಅಧಿನಿಯಮದಲ್ಲಿ ಬೀದಿ ಎಂಬ ಪದದ ಅರ್ಥ?**

1) ಯಾವುದೇ ಹೆದ್ದಾರಿ, ಒಡ್ಡುದಾರಿ, ಸೇತುವೆ, ಸೇತುವೆರಸ್ತೆ, ಕಮಾನು, ರಸ್ತೆ, ಭೂಮಿ, ಕಾಲುದಾರಿ, ಸುರಂಗಮಾರ್ಗ, ಅಂಗಳ, ಓಣಿ / ಸವಾರಿದಾರಿ/ ಮಾರ್ಗ. ಅದು ಮುಖ್ಯ ರಸ್ತೆಯಾಗಿರಲಿ / ಇಲ್ಲದಿರಲಿ, ಒಳಗೊಳ್ಳುತ್ತದೆ. ಮತ್ತು ಯಾವುದೇ ಬೀದಿಯಲ್ಲಿ ಕಾಲುದಾರಿ ಮತ್ತು ಬಂಡಿರಸ್ತೆ ಇದ್ದರೆ, ಆ ಪದವು ಅವೆರಡನ್ನೂ ಒಳಗೊಳ್ಳುತ್ತದೆ.

2) ರಾಷ್ಟ್ರೀಯ ಹೆದ್ದಾರಿಯು ನಿರ್ವಹಿಸುತ್ತಿರುವ ರಸ್ತೆ.

3) ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ರಸ್ತೆ

4) ಜಿಲ್ಲಾ ಪಂಚಾಯಿತಿಯಿಂದ ನಿರ್ವಹಿಸುವ ರಸ್ತೆ.

**58) ತಾಲ್ಲೂಕು ಪಂಚಾಯಿತಿ ಎಂದರೆ ?**

1) 1983 ರ ಅಧಿನಿಯಮದಡಿಯಲ್ಲಿ ಸ್ಥಾಪಿಸಿದ ತಾ.ಪಂ. 2) ಈ ಅಧಿನಿಮಯದ ಅಡಿಯಲ್ಲಿ ಸ್ಥಾಪಿಸಿದ ತಾಲ್ಲೂಕು ಪಂಚಾಯಿತಿ.

3) 4 ಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳನ್ನು ಹೊಂದಿರುವ ತಾಲ್ಲೂಕು ಪಂಚಾಯಿತಿ

4) ತಾಲ್ಲೂಕಿನ ಎಲ್ಲ ಪ್ರದೇಶಕ್ಕೂ ವ್ಯಾಪಿಸಿರುವ ಪಂಚಾಯಿತಿ.

**59) ಈ ಅಧಿನಿಯಮದಲ್ಲಿ ತಹಸೀಲ್ದಾರ್ ಎಂದರೆ?**

1) ಪಂಚಾಯಿತಿ ಪ್ರದೇಶವನ್ನು ನಿರ್ವಹಿಸಲು ನೇಮಕವಾದ ಅಧಿಕಾರಿ

2) ತಾಲ್ಲೂಕಿಗೆ ಸಂಬಂಧಿಸಿದಂತೆ ಪಂಚಾಯತಿಗಳ ಆಡಳಿತವನ್ನು ನೋಡಿಕೊಳ್ಳುವ ವಿಶೇಷಾಧಿಕಾರಿ

3) ರೆವಿನ್ಯೂ ತಾಲ್ಲೂಕಿನ ತಹಸೀಲ್ದಾರ್.

4) ಪಂಚಾಯತ್ ರಾಜ್ ಅಧಿನಿಯಮದ ಮೂಲಕ ನೇಮಕಗೊಂಡ ಸರ್ಕಾರದ ಅಧಿಕಾರಿ.

**60) ಈ ಅಧಿನಿಯಮದಲ್ಲಿ ವಾಹನ ಎಂಬ ಪದದ ಅರ್ಥ?**

1) ಬೈಸಿಕಲ್, ಸೈಕಲ್ ರಿಕ್ಷಾ, ಮೋಟಾರು ಕಾರು ಮತ್ತು ಸಾರ್ವಜನಿಕ ರಸ್ತೆಯಲ್ಲಿ ಬಳಸುತ್ತಿರುವ ಅಥವಾ ಬಳಸಲು ಸಾಧ್ಯವಿರುವಂತಹ, ಚಕ್ರ ಇರುವ ಪ್ರತಿಯೊಂದು ವಾಹನ ಒಳಗೊಳ್ಳುತ್ತದೆ.

2) ಇಂಧನಗಳಿಂದ ಚಲಿಸುವಂತಹ ವಾಹನವಾಗಿದೆ.

3) ಸರ್ಕಾರದಿಂದ ಪರವಾನಗಿ ಪಡೆದು ಚಲಿಸುವಂತಹ ವಾಹನ 4) ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆದು ಚಲಿಸುವ ವಾಹನವಾಗಿದೆ.

**61) ಈ ಅಧಿನಿಯಮದಲ್ಲಿ ಗ್ರಾಮ ಎಂಬ ಪದದ ಅರ್ಥ?**

1) ವಾರ್ಡ್‌ಗಳನ್ನು ಒಳಗೊಂಡಿರುವ ಒಂದು ಪಂಚಾಯಿತಿ ಭಾಗ

2) ಗ್ರಾಮ ಪಂಚಾಯಿತಿಯ ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶ

3) ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯಪಾಲರು ಸಾರ್ವಜನಿಕ ಅಧಿಸೂಚನೆಯ ಮೂಲಕ ಗ್ರಾಮವೆಂದು ನಿರ್ದಿಷ್ಟಪಡಿಸುವ ಗ್ರಾಮ ಮತ್ತು ಅದರಲ್ಲಿ, ಹಾಗೆ ನಿರ್ದಿಷ್ಟಪಡಿಸುವ ಗ್ರಾಮಗಳ ಗುಂಪು ಒಳಗೊಳ್ಳುತ್ತದೆ.

4) 400 ಮತದಾರರನ್ನು ಹೊಂದಿರುವ ಗ್ರಾಮ ಪಂಚಾಯಿತಿಯ ಒಂದು ಭಾಗ.

**62) ಈ ಅಧಿನಿಯಮದಲ್ಲಿ ಸಾರ್ವಜನಿಕ ಸ್ಥಳ ಎಂದರೆ?**

1) ಖಾಸಗಿಯವರು ಬಳಕೆ ಮಾಡದೇ ಇರುವ ಸ್ಥಳ.

2) ಸಾರ್ವಜನಿಕರು ಉಪಯೋಗಿಸಬಹುದಾದ ಗ್ರಾ.ಪಂ. ಇಂದ ಪ್ರತ್ಯೇಕಿಸಲ್ಪಟ್ಟ ಪ್ರದೇಶ.

3) ಅಂತಹ ಸ್ಥಳವು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯಲ್ಲಿ ನಿಹಿತವಾಗಿರಲಿ, ಅಥವಾ ಇಲ್ಲದಿರಲಿ ಸಾರ್ವಜನಿಕರ ಬಳಕೆಗೆ ಅಥವಾ ಉಪಯೋಗಕ್ಕೆ ಅವಕಾಶ ಇರುವಂತಹ ಖಾಸಗಿ ಸ್ವತ್ತು ಅಲ್ಲದ ಯಾವುದೇ ಸ್ಥಳ.

4) ಖಾಸಗಿಯವರು ಯಾವುದೇ ಚಟುವಟಿಕೆಗಳನ್ನು ನಡೆಸದೇ ಇರುವ ಸ್ಥಳ.

**63) ಈ ಅಧಿನಿಯಮದಲ್ಲಿ ಜಿಲ್ಲಾ ಪಂಚಾಯಿತಿ ಪದದ ಅರ್ಥ?**

1) ಜಿಲ್ಲೆಯ ಸಂಪೂರ್ಣ ಪ್ರದೇಶವನ್ನು ಪ್ರತಿನಿಧಿಸುವ ಜಿಲ್ಲಾ ಪಂ. 2) ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ಜಿಲ್ಲಾ ಪಂ.

3) 4 ಕ್ಕಿಂತ ಹೆಚ್ಚು ತಾಲ್ಲೂಕುಗಳನ್ನು ಒಳಗೊಂಡ ಒಂದು ಪಂಚಾಯಿತಿ.

4) ರಾಜ್ಯ ಸರ್ಕಾರವು ನಿರ್ದಿಷ್ಟ ಪಡಿಸಿದ ಕೆಲವು ತಾಲ್ಲೂಕುಗಳನ್ನು ಒಳಗೊಂಡ ಪಂಚಾಯಿತಿ.

**ಉತ್ತರಗಳು:-** 56) 4 57) 1 58) 2 59) 3 60) 1 61) 3 62) 3 63) 2



Scanned by CamScanner

64) ಈ ಅಧಿನಿಯಮದಲ್ಲಿ ಜನವಸತಿ ಎಂದರೆ?

1) ಒಂದು ಗ್ರಾಮದಲ್ಲಿ ವಾಸಿಸುವ ಜನರನ್ನು ಒಳಗೊಂಡ ಪ್ರದೇಶವಾಗಿದೆ.

2) ಗ್ರಾಮದ ಪರಿಮಿತ ಹೊರಗೆ ಇರುವ ಒಂದು ನೂರರಿಂದ ಮುನ್ನೂರೈವತ್ತು(200 ರಿಂದ 450) ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ, ಇತರೆ ಸಣ್ಣ ವಸತಿ ಸಮೂಹ (Hamlet) ಅಥವಾ ಅಂತಹ ಸಣ್ಣ ವಸತಿ ಪ್ರದೇಶ (Small Settlement) ಅಥವಾ ಸಣ್ಣ ವಸತಿ ಸಮೂಹಗಳ ಗುಂಪು ಮತ್ತು 3ನೇ ಪ್ರಕರಣದ ಅಡಿಯಲ್ಲಿ ಹಾಗೆ ಅಧಿಸೂಚಿತವಾದುದು;

3) ಗ್ರಾಮದ ಪರಿಮಿತ ಹೊರಗೆ ಇರುವ ಒಂದು ನೂರರಿಂದ ಮುನ್ನೂರೈವತ್ತು(100 ರಿಂದ 350) ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ, ಇತರೆ ಸಣ್ಣ ವಸತಿ ಸಮೂಹ (Hamlet) ಅಥವಾ ಅಂತಹ ಸಣ್ಣ ವಸತಿ ಪ್ರದೇಶ (Small Settlement) ಅಥವಾ ಸಣ್ಣ ವಸತಿ ಸಮೂಹಗಳ ಗುಂಪು ಮತ್ತು 3ನೇ ಪ್ರಕರಣದ ಅಡಿಯಲ್ಲಿ ಹಾಗೆ ಅಧಿಸೂಚಿತವಾದುದು;

4) ಗ್ರಾಮದ ಪರಿಮಿತ ಹೊರಗೆ ಇರುವ ಒಂದು ನೂರರಿಂದ ಮುನ್ನೂರೈವತ್ತು(50 ರಿಂದ 350) ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ, ಇತರೆ ಸಣ್ಣ ವಸತಿ ಸಮೂಹ (Hamlet) ಅಥವಾ ಅಂತಹ ಸಣ್ಣ ವಸತಿ ಪ್ರದೇಶ (Small Settlement) ಅಥವಾ ಸಣ್ಣ ವಸತಿ ಸಮೂಹಗಳ ಗುಂಪು ಮತ್ತು 3ನೇ ಪ್ರಕರಣದ ಅಡಿಯಲ್ಲಿ ಹಾಗೆ ಅಧಿಸೂಚಿತವಾದುದು;

65) ಈ ಅಧಿನಿಯಮದಲ್ಲಿ ಜನವಸತಿ ಸಭಾ ಎಂದರೆ?

1) ಜನರು ವಾಸಿಸಲು ಯೋಗ್ಯವಾಗಿರುವ ಸ್ಥಳದಲ್ಲಿ ನಡೆಸುವಂತಹ ಸಭೆ

2) ಗ್ರಾಮ ಪಂಚಾಯಿತಿಯಲ್ಲಿರುವ ಜನವಸತಿಯ ಮತದಾರರ ಪಟ್ಟಿಯಲ್ಲಿ ನೊಂದಾಯಿಸಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ

3) ಗ್ರಾಮ ಪಂ. ಯಲ್ಲಿರುವ ಜನವಸತಿಯಲ್ಲಿ ವಾಸಿಸುವವರನ್ನೊಳಗೊಂಡ ನಿಕಾಯ

4) ಗ್ರಾಮ ಪಂ.ಯಲ್ಲಿರುವ ಜನವಸತಿ ಪ್ರದೇಶದಲ್ಲಿ ವಾಸಿಸುವ ವಯಸ್ಕರನ್ನೊಳಗೊಂಡ ಪ್ರದೇಶ.

66) ಈ ಅಧಿನಿಯಮದಲ್ಲಿ ಜಿಲ್ಲೆ ಎಂಬ ಪದದ ಅರ್ಥ?

1) ರೆವಿನ್ಯೂ ಜಿಲ್ಲೆ

2) ಪಂಚಾಯಿತಿ ಜಿಲ್ಲೆ

3) ಪೊಲೀಸ್ ಜಿಲ್ಲೆ 4) ಶೈಕ್ಷಣಿಕ ಜಿಲ್ಲೆ

67) ಅಧಿನಿಯಮದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಎಂದರೆ?

1) ಕಟ್ಟಡವನ್ನು ಹೊಸದಾಗಿ ನಿರ್ಮಿಸುವುದು ಎಂಬರ್ಥ.

2) ಹಳೆಯ ಕಟ್ಟಡವನ್ನು ಮಾರ್ಪಡಿಸುವುದು.

3) ದೊಡ್ಡದಾಗಿ ನಿರ್ಮಿಸಿದ ಕಟ್ಟಡ ಮಾತ್ರ.

4) ಪುನರ್ ನಿರ್ಮಾಣ ಅಥವಾ ವಿಸ್ತರಣೆ. ಯಾವುದೇ ಕಟ್ಟಡ ಮಾಡುವ ಮುಖ್ಯ ಬದಲಾವಣೆ ಅಥವಾ ವಿಸ್ತರಣೆ.

68) ಈ ಅಧಿನಿಯಮದಲ್ಲಿ ಹಿಂದುಳಿದ ವರ್ಗ ಎಂದರೆ?

1) ಜಿಲ್ಲಾ ಪಂಚಾಯಿತಿ, ತಾಲ್ಲೂಕುಪಂಚಾಯಿತಿ, ಗ್ರಾಮ ಪಂಚಾಯಿತಿ ಸ್ಥಾನಗಳಲ್ಲಿ ಮತ್ತು ಅದರ ಅಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ 'ಎ'(60%) ಮತ್ತು 'ಬಿ'(40%) ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂತಹ ವರ್ಗ ಅಥವಾ ವರ್ಗಗಳ ನಾಗರೀಕರು.

2) ಜಿಲ್ಲಾ ಪಂಚಾಯಿತಿ, ತಾಲ್ಲೂಕುಪಂಚಾಯಿತಿ, ಗ್ರಾಮ ಪಂಚಾಯಿತಿ ಸ್ಥಾನಗಳಲ್ಲಿ ಮತ್ತು ಅದರ ಅಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ 'ಎ'(80%) ಮತ್ತು 'ಬಿ'(20%) ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂತಹ ವರ್ಗ ಅಥವಾ ವರ್ಗಗಳ ನಾಗರೀಕರು.

3) ಜಿಲ್ಲಾ ಪಂಚಾಯಿತಿ, ತಾಲ್ಲೂಕುಪಂಚಾಯಿತಿ, ಗ್ರಾಮ ಪಂಚಾಯಿತಿ ಸ್ಥಾನಗಳಲ್ಲಿ ಮತ್ತು ಅದರ ಅಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ 'ಎ'(70%) ಮತ್ತು 'ಬಿ'(30%) ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂತಹ ವರ್ಗ ಅಥವಾ ವರ್ಗಗಳ ನಾಗರೀಕರು.

4) ಜಿಲ್ಲಾ ಪಂಚಾಯಿತಿ, ತಾಲ್ಲೂಕುಪಂಚಾಯಿತಿ, ಗ್ರಾಮ ಪಂಚಾಯಿತಿ ಸ್ಥಾನಗಳಲ್ಲಿ ಮತ್ತು ಅದರ ಅಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ 'ಎ'(50%) ಮತ್ತು 'ಬಿ'(50%) ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂತಹ ವರ್ಗ ಅಥವಾ ವರ್ಗಗಳ ನಾಗರೀಕರು.

ಉತ್ತರಗಳು:- 64) 3 65) 2 66) 1 67) 4 68) 2



Scanned by CamScanner

ಅಧ್ಯಾಯ: 1ಎ

# ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು (ಪ್ರಕರಣ 2ಎ)

**1) ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ - 2015 ರಂತೆ ಈ ಕೆಳಗಿನ ಯಾವ ಅಧ್ಯಾಯವನ್ನು ಸೇರ್ಪಡೆ ಮಾಡಲಾಗಿದೆ?**

1) ಅಧ್ಯಾಯ 3ಎ 2) ಅಧ್ಯಾಯ 2ಎ
3) ಅಧ್ಯಾಯ 1ಎ 4) ಅಧ್ಯಾಯ 4ಎ

**2) ಅಧ್ಯಾಯ-1ಎ ಈ ಕೆಳಗಿನ ಯಾವ ವಿಷಯದ ಬಗ್ಗೆ ಹೇಳಲಾಗಿದೆ?**

1) ರಾಜ್ಯ ನಿರ್ದೇಶಕ ತತ್ವಗಳು
2) ಪಂಚಾಯಿತಿಯ ನೀತಿ ನಿರ್ದೇಶಕ ತತ್ವಗಳು
3) ಪಂ.ಯ ಕ್ಷೇಮಾಭಿವೃದ್ಧಿಯ ಕಾರ್ಯಕ್ರಮಗಳು
4) ಪಂಚಾಯಿತಿಯ ಹಂತಗಳು

## ಪ್ರ-2ಎ: ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು

**3) ಪಂಚಾಯಿತಿಯ ನೀತಿ ನಿರ್ದೇಶಕ ತತ್ವಗಳನ್ನು ಅಧ್ಯಾಯ 1ಎ ನಲ್ಲಿ ಯಾವ ಪ್ರಕರಣದಡಿಯಲ್ಲಿ ವಿವರಿಸಲಾಗಿದೆ?**

1) ಪ್ರಕರಣ 3 2) ಪ್ರಕರಣ 2
3) ಪ್ರಕರಣ 1ಎ 4) ಪ್ರಕರಣ 2ಎ

**4) ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು ಪ್ರಮುಖವಾಗಿ ಈ ಕೆಳಗಿನ ಯಾವ ಅಂಶವನ್ನು ಒಳಗೊಂಡಿದೆ?**

ಎ) ಪಂಚಾಯಿತಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಶ್ರಮಿಸುವುದು
ಬಿ) ಪಂ. ಪ್ರದೇಶದಲ್ಲಿನ ಜನರ ಸುರಕ್ಷತೆ ಕಾಪಾಡುವುದು
ಸಿ) ಪಂಚಾಯಿತಿ ಪ್ರದೇಶದಲ್ಲಿನ ಜನರಿಗೆ 3 ಹಂತದ ಪಂಚಾಯಿತಿ ಬಗ್ಗೆ ಜಾಗೃತಿ ಮೂಡಿಸುವುದು
ಡಿ) ಪಂಚಾಯಿತಿ ಚುನಾವಣೆ ಬಗ್ಗೆ ಜಾಗೃತಿ

**ಇವುಗಳಲ್ಲಿ ಯಾವುವು ಸರಿಯಾದವುಗಳಾಗಿವೆ?**

1) ಎ ಮಾತ್ರ ಸರಿ 2) ಎ & ಬಿ ಸರಿ
3) ಬಿ & ಸಿ 4) ಎ, ಬಿ, ಸಿ & ಡಿ

**5) ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳಲ್ಲಿ ಈ ಕೆಳಗಿನವುಗಳನ್ನು ಪ್ರೋತ್ಸಾಹಿಸಲು ಶ್ರಮಿಸತಕ್ಕದ್ದು?**

ಎ) ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯ ಒದಗಿಸುವುದು
ಬಿ) ಅಗತ್ಯ ಗ್ರಾಮೀಣ ಮೂಲಸೌಲಭ್ಯಗಳನ್ನು ಒದಗಿಸುವುದು ಸಿ) ಆರ್ಥಿಕ, ಸಾಮಾಜಿಕ & ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸುವುದಕ್ಕೆ ಆಸ್ತಿಗಳ ನಿರ್ವಹಣೆ & ಸುಸ್ಥಿರ ಅಭಿವೃದ್ಧಿ
ಡಿ) ಪಂಚಾಯಿತಿ ಅಧೀನದಲ್ಲಿರುವ ಸಂಪನ್ಮೂಲಗಳ ಬಳಕೆ ಮಾಡಿಕೊಂಡು ಪಂಚಾಯಿತಿ ಪ್ರದೇಶದ ಅರಣ್ಯ ಮತ್ತು ವನ್ಯಜೀವಿಗಳ ಸುಸ್ಥಿರ ಅಭಿವೃದ್ಧಿ ಮಾಡುವುದು.

**ಇವುಗಳಲ್ಲಿ ಯಾವುದು ಸರಿಯಾಗಿದೆ?**

1) ಎ ಮಾತ್ರ 2) ಬಿ ಮಾತ್ರ
3) ಎ, ಬಿ & ಸಿ 4) ಎ, ಬಿ, ಸಿ & ಡಿ

**6) ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳಲ್ಲಿ ಈ ಕೆಳಗಿನವುಗಳನ್ನು ಪ್ರೋತ್ಸಾಹಿಸಲು ಶ್ರಮಿಸತಕ್ಕದ್ದು?**

ಎ) ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ & ಪರಂಪರೆಯನ್ನು ರಕ್ಷಿಸುವುದು ಮತ್ತು ಕಾಪಾಡುವುದು
ಬಿ) ನವಣೆ, ಸಜ್ಜೆ, ಬಿಳಿಜೋಳ, ಸಾಮೆ, ಸಾವೆ, ಕೋರ್ಲಿ ಇತ್ಯಾದಿ ಮತ್ತು ಔಷಧೀಯ ಮೌಲ್ಯವುಳ್ಳ ಗಿಡಮೂಲಿಕೆಗಳನ್ನು ಸಂರಕ್ಷಿಸುವುದು
ಸಿ) ಗುಡಿ ಕೈಗಾರಿಕೆಗಳನ್ನು ಉತ್ತೇಜಿಸಿ ಉದ್ಯೋಗ ಸೃಷ್ಟಿಸುವುದು. ಡಿ) ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಮನೋಭಾವ ಬೆಳೆಸುವುದು ಇ) ಗ್ರಾಮೀಣ ಪ್ರದೇಶದ ಜನರಲ್ಲಿ ಕೌಶಲ್ಯ, ಜ್ಞಾನ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸುವುದು ಎಫ್) ಶಾಂತಿಯುತ ಸಮಾಜ ಮತ್ತು ಕೋಮು ಸೌಹಾರ್ದವನ್ನು ರಕ್ಷಿಸುವುದು

**ಈ ಮೇಲಿನವುಗಳಲ್ಲಿ ಯಾವುದು ಸರಿಯಾಗಿದೆ?**

1) ಎ, ಬಿ ಮಾತ್ರ 2) ಎ, ಬಿ, ಸಿ, ಡಿ, ಇ & ಎಫ್
3) ಎ, ಬಿ & ಸಿ 4) ಬಿ, ಸಿ, ಡಿ ಮಾತ್ರ

**7) ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳಲ್ಲಿ ಈ ಕೆಳಗಿನವುಗಳನ್ನು ತಡೆಗಟ್ಟುವ ಬಗ್ಗೆ ಹೇಳಲಾಗಿದೆ?**

ಎ) ನಿರಾಶಾದಾಯಕ ಪ್ರವೃತ್ತಿಯನ್ನು ತಡೆಗಟ್ಟುವುದು
ಬಿ) ಆತ್ಮಹತ್ಯೆಯಂತಹ ನಿರ್ಧಾರ ಹೊಂದಿರುವ ರೈತರ ಬಗ್ಗೆ ವಿಶೇಷ ಗಮನ ಹರಿಸಿ ಅದನ್ನು ತಡೆಗಟ್ಟುವುದು
ಸಿ) ಪಂಚಾಯಿತಿಯ ಸದಸ್ಯರು ಮತ್ತು ಗ್ರಾಮ ಪಂಚಾಯಿತಿಯು ಸಾಮಾಜಿಕ & ಆರ್ಥಿಕ ಒತ್ತಡಕ್ಕೆ ಸಿಲುಕಿರುವವರ ಬಗ್ಗೆ ವಿಶ್ವಾಸ ಕುದುರಿಸುವ ಕ್ರಮ ಕೈಗೊಳ್ಳುವುದು

**ಸಂಕೇತಗಳು:-** 1) ಎ, ಬಿ ಮಾತ್ರ 2) ಬಿ, ಸಿ, ಮಾತ್ರ 3) ಎ & ಸಿ 4) ಎ, ಬಿ, & ಸಿ

**ಉತ್ತರಗಳು:-** 1) 3 2) 2 3) 4 4) 2 5) 4 6) 2 7) 4



Scanned by CamScanner

chanakyaloka.com



ಅಧ್ಯಾಯ: 2

# ವಾರ್ಡ್‌ಸಭೆ & ಗ್ರಾಮಸಭೆ

(ಪ್ರಕರಣ 3 ರಿಂದ 3 ಹೆಚ್ ವರೆಗೆ)

## ಪ್ರಕರಣ 3: ಗ್ರಾಮ ಸ್ವರಾಜ್‌ನ ಘಟಕಗಳು

1) **ಅಧಿನಿಯಮದ 3ನೇ ಪ್ರಕರಣವು ಈ ಕೆಳಗಿನ ಯಾವುದರ ಬಗ್ಗೆ ತಿಳಿಸುತ್ತದೆ?**

1)ಗ್ರಾಮಸ್ವರಾಜ್ ಘಟಕಗಳು 2)ಜನವಸತಿ ಸಭೆ ಮಾತ್ರ
3) ವಾರ್ಡ್ ಸಭೆ ಮಾತ್ರ 4) ಗ್ರಾಮಸಭೆ ಮಾತ್ರ

2) **ಗ್ರಾಮ ಸ್ವರಾಜ್ ಘಟಕಗಳು ಗ್ರಾಮ ಪಂಚಾಯಿತಿಯ ಈ ಘಟಕಗಳನ್ನು ಒಳಗೊಂಡಿದೆ?**

1)ಜನವಸತಿಸಭೆ, ವಾರ್ಡ್‌ಸಭೆ, ಗ್ರಾಮಸಭೆ, ಗ್ರಾಮಪಂ.ಸಭೆ
2) ಜನವಸತಿ ಸಭೆ, ವಾರ್ಡಸಭೆ, ಗ್ರಾಮಸಭೆ, ನ್ಯಾಯ ಪಂಚಾಯಿತಿ ಸಭೆ
3) ಜನವಸತಿ ಸಭೆ, ವಾರ್ಡ್‌ಸಭೆ & ಗ್ರಾಮಸಭೆ
4) ಗ್ರಾಮ ಪಂ., ತಾಲ್ಲೂಕು ಪಂ., ಜಿಲ್ಲಾ ಪಂಚಾಯಿತಿ

3) **ಗ್ರಾಮಸ್ವರಾಜ್ ಘಟಕದ ಅತ್ಯಂತ ಕೆಳಹಂತದ ಘಟಕ?**

1) ಜನವಸತಿ ಸಭಾ 2) ವಾರ್ಡ್‌ಸಭಾ
3) ಗ್ರಾಮಸಭಾ 4) ಗ್ರಾಮ ಪಂಚಾಯಿತಿ ಸಭಾ

4) **ಗ್ರಾಮಸ್ವರಾಜ್ ಘಟಕವನ್ನು ಸೇರ್ಪಡೆ ಮಾಡಿದ ತಿದ್ದುಪಡಿ?**

1) ಮೂಲ ಅಧಿನಿಯಮ – 1993
2) ಪಂಚಾಯತ್ ರಾಜ್ ತಿದ್ದುಪಡಿ – 2003
3) ಪಂಚಾಯತ್ ರಾಜ್ 2ನೇ ತಿದ್ದುಪಡಿ – 2015
4) ಪಂಚಾಯತ್ ರಾಜ್ 1ನೇ ತಿದ್ದುಪಡಿ – 2015

5) **ಗ್ರಾಮ ಸ್ವರಾಜ್‌ನ 3 ಘಟಕಗಳನ್ನು ಸೇರ್ಪಡೆ ಮಾಡಿದ್ದು ಈ ಕೆಳಗಿನ ಯಾವ ಸಮಿತಿ ಶಿಫಾರಸ್ಸಿನಂತೆ ಅಧಿನಿಯಮಕ್ಕೆ ಸೇರ್ಪಡೆ ಮಾಡಲಾಯಿತು.**

1) ನಂಜಯ್ಯ ಮಠ ಸಮಿತಿ
2) ರಮೇಶ್ ಕುಮಾರ್ ಸಮಿತಿ
3) ಎಂ.ವೈ ಘೋರ್ಪಡೆ ಸಮಿತಿ
4) ಎಂ. ವೀರಪ್ಪ ಮೊಯ್ಲಿ ಅವರ 2ನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನ ಮೇಲೆ

6) **ಗ್ರಾಮ ಸ್ವರಾಜ್ ಘಟಕದ ಸೇರ್ಪಡೆಗೆ ಮುಂಚಿತವಾಗಿ ಇದ್ದ ಹಂತಗಳೆಷ್ಟು?**

1) ವಾರ್ಡ್ ಸಭೆ & ಗ್ರಾಮಸಭೆ
2) ವಾರ್ಡ್‌ಸಭೆ & ಜನವಸತಿ ಸಭೆ
3) ಜನವಸತಿ ಸಭೆ & ಗ್ರಾಮಸಭೆ
4) ಗ್ರಾಮಸಭೆ & ಗ್ರಾಮ ಪಂಚಾಯಿತಿ ಸಭೆ

# ಜನವಸತಿ ಸಭಾ (ಪ್ರಕರಣ 3ಎ & 3ಬಿ)

## ಪ್ರಕರಣ 3ಎ: ಜನವಸತಿ ಸಭಾದ ಪ್ರಕಾರ್ಯಗಳು & ಅಧಿಕಾರಗಳು

7) **ಅಧಿನಿಯಮದ ಅಧ್ಯಾಯ-2 ರ 3ಎ ಪ್ರಕರಣವು ಈ ಕೆಳಗಿನ ಯಾವುದರ ಬಗ್ಗೆ ತಿಳಿಸುತ್ತದೆ?**

1) ವಾರ್ಡ್‌ಸಭೆಯ ಪ್ರಕಾರ್ಯಗಳು &ಅಧಿಕಾರಗಳು
2)ಜನವಸತಿ ಸಭೆಯ ಪ್ರಕಾರ್ಯಗಳು & ಅಧಿಕಾರಗಳು
3) ಗ್ರಾಮಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು
4) ಗ್ರಾಮ ಪಂಚಾಯಿತಿ ಸಭೆಯ ಪ್ರಕಾರ್ಯಗಳು& ಅಧಿಕಾರಗಳು

8) **ಜನವಸತಿ ಪ್ರದೇಶದ ಜನಸಂಖ್ಯೆ?**

**ಗ್ರಾಮದ ಪರಿಮಿತಿ ಹೊರಗೆ ಇರುವ ............... ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿಂದ ಕರೆಯಲಾಗುವ ಇತರ ಸಣ್ಣ ವಸತಿ ಸಮೂಹ ಅಥವಾ ಅಂತಹ ಸಣ್ಣ ವಸತಿ ಪ್ರದೇಶ ಅಥವಾ ಸಣ್ಣ ವಸತಿ ಸಮೂಹಗಳ ಗುಂಪು & 3ನೇ ಪ್ರಕರಣದಡಿಯಲ್ಲಿ ಹಾಗೆಯೇ ಅಧಿಸೂಚಿತವಾದದ್ದು. ಮೇಲಿನ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಯಾವ ಜನಸಂಖ್ಯೆಯನ್ನು ಒಳಗೊಂಡಿದೆ?**

1) 100 ರಿಂದ 250 ಜನಸಂಖ್ಯೆ
2) 100 ರಿಂದ 350 ಜನಸಂಖ್ಯೆ
3) 100 ರಿಂದ 400 ಜನಸಂಖ್ಯೆ
4) 100 ರಿಂದ 200 ಜನಸಂಖ್ಯೆ

250

9) **ಜನವಸತಿ ಸಭಾವನ್ನು ಈ ಕೆಳಗಿನ ಯಾವ ತಿದ್ದುಪಡಿಯಲ್ಲಿ ಅಧಿನಿಯಮಕ್ಕೆ ಸೇರಿಸಲಾಯಿತು?**

1) 1993 ರ ಮೂಲ ಅಧಿನಿಯಮದಲ್ಲಿ ಸೇರ್ಪಡೆ
2) 2000 ರಲ್ಲಿನ ತಿದ್ದುಪಡಿಯಲ್ಲಿ ಸೇರ್ಪಡೆ
3) 2015ರ ಮೊದಲ ತಿದ್ದುಪಡಿಯಲ್ಲಿ ಸೇರ್ಪಡೆ
4) 2015ರ ಎರಡನೇ ತಿದ್ದುಪಡಿಯಲ್ಲಿ ಸೇರ್ಪಡೆ

ಉತ್ತರಗಳು:- 1) 1 2) 3 3) 1 4) 3 5) 2 6) 1 7) 2 8) 2 9) 4



Scanned by CamScanner

**10) ಜನವಸತಿ ಪ್ರದೇಶವನ್ನು ಈ ಕೆಳಗಿನ ಯಾರು ನಿರ್ದಿಷ್ಟ ಪಡಿಸಿ, ಅಧಿಸೂಚಿಸುತ್ತಾರೆ?**

1) ಜಿಲ್ಲೆಯ ಜಿಲ್ಲಾಧಿಕಾರಿ 2) ಉಪ ವಿಭಾಗಾಧಿಕಾರಿ
3) ರಾಜ್ಯ ಚುನಾವಣಾ ಆಯೋಗ 4) ರಾಜ್ಯ ಸರ್ಕಾರ

**11) ಜನವಸತಿ ಪ್ರದೇಶದಲ್ಲಿ ಎಷ್ಟು ಜನವಸತಿ ಸಭಾಗಳಿರಬೇಕು?** ........... ಜನವಸತಿ ಪ್ರದೇಶವೆಂದು ನಿರ್ದಿಷ್ಟಪಡಿಸಿ ಅಧಿಸೂಚಿಸುವ ಅಂತಹ ಜನವಸತಿಗಳಷ್ಟು ಸಂಖ್ಯೆಯ ಜನವಸತಿ ಸಭಾಗಳಿರತಕ್ಕದ್ದು

1) ಉಪ ವಿಭಾಗಾಧಿಕಾರಿ 2) ಜಿಲ್ಲೆಯ ಜಿಲ್ಲಾಧಿಕಾರಿ
3) ಕಾರ್ಯನಿರ್ವಹಣಾಧಿಕಾರಿ 4) ಪಿ.ಡಿ.ಒ

**12) ಜನವಸತಿ ಸಭಾ ಎಂದರೆ, ಈ ಕೆಳಕಂಡಂತಿದೆ?**

1) ಗ್ರಾಮ ಪಂ.ಯಲ್ಲಿರುವ ಜನವಸತಿ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ 2) ಗ್ರಾಮ ಪಂ.ಯಲ್ಲಿರುವ ಜನವಸತಿಯ ವಯಸ್ಕ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ 3) ಗ್ರಾಮ ಪಂ.ಯಲ್ಲಿರುವ ಜನವಸತಿಯ 18 ವರ್ಷ ತುಂಬಿದ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ

4) ಗ್ರಾಮ ಪಂ.ಯಲ್ಲಿರುವ ಜನವಸತಿಯ ಮತದಾರರ ಪಟ್ಟಿಯಲ್ಲಿ ನೊಂದಾಯಿಸಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ

**13) ಜನವಸತಿ ಸಭೆಯ ಪ್ರಮುಖ ಕಾರ್ಯಗಳು ಮತ್ತು ಅಧಿಕಾರಗಳು ಈ ಕೆಳಗಿನ ಯಾವುದಾಗಿದೆ?**

ಎ) ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಮತ್ತು ಸಮಾಜದ ಸುರಕ್ಷಿತವಲ್ಲದ ವರ್ಗಗಳ ಸುರಕ್ಷತೆ ಕಾಪಾಡುವುದು ಬಿ) ಅಪಾಯಕಾರಕಗಳನ್ನು ಗುರುತಿಸಿ, ಆರೋಗ್ಯಕರ ಪರಿಸರ ಒದಗಿಸುವುದು

ಸಿ) ಜನವಸತಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು ಡಿ) ಬಡತನ ನಿರ್ಮೂಲನೆ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವುದು

ಇ) ಗ್ರಾಮ ಪಂಚಾಯಿತಿಗೆ ಸಂದಾಯಿಸಬೇಕಾದ ತೆರಿಗೆಗಳನ್ನು ಮತ್ತು ಮರುಪಾವತಿ ಮಾಡಬೇಕಾದ ಸಾಲಗಳನ್ನು ಪಾವತಿಸುವಂತೆ ಜನವಸತಿ ನಿವಾಸಿಗಳನ್ನು ಪ್ರೇರೇಪಿಸುವುದು.

**ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?**

1) ಎ, ಬಿ & ಸಿ 2) ಎ, ಸಿ & ಡಿ
3) ಎ, ಬಿ, ಸಿ, ಡಿ & ಇ 4) ಎ & ಇ ಮಾತ್ರ

**14) ಜನವಸತಿ ಸಭೆಯ ಪ್ರಮುಖ ಕಾರ್ಯಗಳು ಮತ್ತು ಅಧಿಕಾರಗಳು ಈ ಕೆಳಗಿನ ಯಾವುದಾಗಿದೆ?**

ಎ) ಜನವಸತಿ ಪ್ರದೇಶದಲ್ಲಿನ ನೀರಿನ ಪೂರೈಕೆ ವ್ಯವಸ್ಥೆಯಲ್ಲಿ ಇರುವ ಕುಂದು ಕೊರತೆಗಳನ್ನು ಗುರ್ತಿಸುವುದು ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಬಿ) ಜಾತಿ, ಧರ್ಮ, ಲಿಂಗ, ಇತ್ಯಾದಿಗಳ ಆಧಾರದ ಮೇಲೆ ತಾರತಮ್ಯ ಆಗುವುದನ್ನು ತಡೆಯಲು ಕ್ರಮ ಕೈಗೊಳ್ಳುವುದು

ಸಿ) ಕೈಗೊಂಡ ಯೋಜನೆ, ಕಾರ್ಯಕ್ರಮಗಳನ್ನು ರೂಪಿಸಲು, ಮೇಲ್ವಿಚಾರಣೆ ಮಾಡಲು, ಅನುಷ್ಠಾನಗೊಳಿಸಲು ಗ್ರಾಮಸಭೆ ಮತ್ತು ಗ್ರಾಮ ಪಂಚಾಯಿತಿಗೆ ನೆರವಾಗುವುದು.

ಡಿ) ದೂರದೃಷ್ಟಿ ಯೋಜನೆಯನ್ನು ರೂಪಿಸುವುದು ಮತ್ತು ಸಿದ್ಧಪಡಿಸುವುದು

ಇ) ಗ್ರಾಮ ಪಂಚಾಯಿತಿಗೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ ಸಮಾಜೋ ಆರ್ಥಿಕ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೆ ಜನವಸತಿ ಪ್ರದೇಶದ ಅಭಿವೃದ್ಧಿಗಾಗಿ ಅಲ್ಲಿನ ನಿವಾಸಿಗಳ ಅಗತ್ಯತೆಗಳನ್ನು ನಿರ್ಧರಿಸುವುದಕ್ಕೆ, ಕ್ರಮಗಳನ್ನು ಸಮೀಕ್ಷೆ ಮಾಡುವುದಕ್ಕೆ ಅಥವಾ ಗ್ರಾಮೀಣ ಪರಾಮರ್ಶನದಲ್ಲಿ ಭಾಗವಹಿಸುವುದಕ್ಕೆ ಗ್ರಾಮ ಪಂಚಾಯತ್‌ಗೆ ನೆರವಾಗುವುದು.

1) ಎ ಮತ್ತು ಬಿ ಮಾತ್ರ 2) ಎ, ಬಿ & ಸಿ ಮಾತ್ರ
3) ಎ, ಬಿ, ಸಿ, ಡಿ & ಇ 4) ಎ, ಬಿ & ಡಿ ಮಾತ್ರ

**15) ಈ ಕೆಳಗಿನ ಯಾವುದು ಜನವಸತಿ ಸಭಾದ ಪ್ರಕಾರ್ಯ & ಅಧಿಕಾರವಲ್ಲ?**

1) ಆ ಪ್ರದೇಶದ ಸ್ಥಳಗಳಲ್ಲಿ ಆಟಗಳಿಗೆ ಮತ್ತು ಕ್ರೀಡಾ ಸ್ಪರ್ಧೆಗಳಿಗೆ, ಸಾಹಿತ್ಯ, ಕಲೆ, ಸಂಸ್ಕೃತಿಗೆ ಉತ್ತೇಜನ ನೀಡುವುದು 2) ಸ್ವಚ್ಛತೆ, ಪರಿಸರ ಸಂರಕ್ಷಣೆ ಕಾಪಾಡುವುದು 3) ವಯಸ್ಕರ ಶಿಕ್ಷಣಕ್ಕೆ ಉತ್ತೇಜಿಸುವುದು. 4) ಆ ಪ್ರದೇಶದಲ್ಲಿನ ಹೆದ್ದಾರಿಗಳ ನಿರ್ವಹಣೆ ಮಾಡುವುದು

**16) ಈ ಕೆಳಗಿನ ಯಾವುದು ಜನವಸತಿ ಸಭಾದ ಅಧಿಕಾರ & ಪ್ರಕಾರ್ಯವಾಗಿದೆ?**

1) ಜನವಸತಿ ಪ್ರದೇಶದಲ್ಲಿನ ಗೋಮಾಳ, ಹುಲ್ಲುಗಾವಲು & ಇತ್ಯಾದಿಗಳನ್ನು ನಿರ್ವಹಣೆ ಮಾಡುವುದು, ಸಾರ್ವಜನಿಕ ಆರೋಗ್ಯ ಕೇಂದ್ರಗಳ ಮೇಲ್ವಿಚಾರಣೆ ಮಾಡುವುದು

2) ಜಾನಪದ ಕಲೆಗಳನ್ನು ಮತ್ತು ಕರಕುಶಲಗಳನ್ನು, ಗುಡಿ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು

3) ಅಭಿವೃದ್ಧಿ ಕಾರ್ಯಗಳಿಗೆ ನಗದು ಮತ್ತು ವಸ್ತು ರೂಪದ ಕೊಡುಗೆ ಮತ್ತು ಶ್ರಮದಾನದ ಕಾರ್ಮಿಕರನ್ನು ಕ್ರೋಡೀಕರಿಸುವುದು 4) ಮೇಲಿನ ಎಲ್ಲವೂ

**ಉತ್ತರಗಳು:-** 10) 1 11) 2 12) 4 13) 3 14) 3 15) 4 16) 4



Scanned by CamScanner

# ಚಾಣಕ್ಯಲೋಕ

ಪ್ರತಿದಿನ ತಪ್ಪದೇ ವಿಜಯವಾಣಿ ಮಿನಿ ಪೇಪರ್, ವಿಜಯ ಕರ್ನಾಟಕ ಮಿನಿ ಪೇಪರ್, ಪ್ರಜಾವಾಣಿ ಮಿನಿ ಪೇಪರ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ಮಾಹಿತಿ ಪಡೆಯಲು ಕೆಳಗೆ ನೀಡಿರುವ ಬಟನ್ ಮೇಲೆ ಕ್ಲಿಕ್ ಮಾಡಿ ಚಾಣಕ್ಯಲೋಕ ಟೆಲಿಗ್ರಾಂ, ವಾಟ್ಸಾಪ್ ಗ್ರೂಪ್‌ಗೆ **Join** ಆಗಿರಿ.

chanakyaloka
Click Here to Join

chanakyaloka
Click Here to Join

chanakyaloka
Click Here to Join

chanakyaloka
M chanakyaloka

ನಿರ್ವಾಹಕರು: ಮೋಹನ್ ಶೆಟ್ಟಿ, 9353896440

ಆತ್ಮೀಯ ಸ್ಪರ್ಧಾರ್ಥಿಗಳೇ ನೀವು ಇಟ್ಟಿರುವ ಗುರಿಯನ್ನು ಬಹುಬೇಗ ತಲುಪಿ, ಯಶಸ್ಸು ನಿಮ್ಮದಾಗಲಿ, ಶುಭವಾಗಲಿ ಧನ್ಯವಾದಗಳು.

–ಚಾಣಕ್ಯಲೋಕ.ಕಾಂ ಬಳಗ

## ಪ್ರಕರಣ 3ಬಿ : ಜನವಸತಿ ಸಭಾದ ಸಭೆಗಳು

1) ಪ್ರಕರಣ 3 ಬಿ ಯು ಈ ಕೆಳಗಿನ ಯಾವ ವಿಷಯದ ಬಗ್ಗೆ ತಿಳಿಸುತ್ತದೆ?

1) ಜನವಸತಿ ಸಭಾದ ಪ್ರಕಾರ್ಯಗಳು
2) ವಾರ್ಡ್ ಸಭೆಗಳು
3) ಗ್ರಾಮಸಭೆಗಳು 4) ಜನವಸತಿ ಸಭಾದ ಸಭೆಗಳು

2) ಜನವಸತಿ ಸಭಾದ ಸಭೆಯು ಕೊನೆಯ ಪಕ್ಷ ಎಷ್ಟು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು?

1) 3 ತಿಂಗಳು 2) 4 ತಿಂಗಳು
3) 6 ತಿಂಗಳು 4) ವರ್ಷಕ್ಕೊಮ್ಮೆ

3) ಜನವಸತಿ ಸಭಾದ ಕಲಾಪಗಳು ........... ನ ಚುನಾಯಿತ ಸದಸ್ಯರು ನಿರ್ಧರಿಸಬಹುದಾದ ಸ್ಥಳದಲ್ಲಿ ತನ್ನ ಕಲಾಪವನ್ನು ನಡೆಸುತ್ತದೆ?

1) ವಾರ್ಡ್ ನ ಚುನಾಯಿತ ಸದಸ್ಯರು
2) ಗ್ರಾಮ ಪಂಚಾಯಿತಿ ಸದಸ್ಯರು
3) ಗ್ರಾಮಪಂ. ಚುನಾಯಿತ ಅಧ್ಯಕ್ಷರು 4) ಪಿಡಿಒ

4) ಜನವಸತಿ ಸಭೆಯು ಗ್ರಾಮಸಭಾದ ಸಭೆಯು ಸಭೆ ಸೇರುವ ಕನಿಷ್ಠ..........ಗಿಂತ ಮೊದಲುಸಭೆ ಸೇರತಕ್ಕದ್ದು?

1) 1 ತಿಂಗಳು 2) 15 ದಿನಗಳು
3) 45 ದಿನಗಳು 4) 2 ತಿಂಗಳು

5) ಜನವಸತಿ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸುವರು? ಆಯಾ ಜನವಸತಿ ಪ್ರದೇಶವನ್ನು ಪ್ರತಿನಿಧಿಸುವ ............. ಸದಸ್ಯ

1) ವಿಧಾನಸಭಾ ಸದಸ್ಯ
2) ವಾರ್ಡ್‌ನ ಚುನಾಯಿತ ಸದಸ್ಯ
3) ತಾಲ್ಲೂಕು ಪಂಚಾಯಿತಿ ಸದಸ್ಯ
4) ಜಿಲ್ಲಾ ಪಂಚಾಯಿತಿ ಸದಸ್ಯ

6) ವಾರ್ಡ್‌ನ ಚುನಾಯಿತ ಸದಸ್ಯನ ಅನುಪಸ್ಥಿತಿಯಲ್ಲಿ ಆ ಜನವಸತಿ ಸಭೆಯ ಅಧ್ಯಕ್ಷತೆಯನ್ನು..........ರವರು ವಹಿಸುತ್ತಾರೆ?

1) ಗ್ರಾಮ ಪಂಚಾಯಿತಿ ಅಧ್ಯಕ್ಷರು ವಹಿಸತಕ್ಕದ್ದು
2) ಗ್ರಾಮ ಪಂ.ಯ ಉಪಾಧ್ಯಕ್ಷರು ವಹಿಸತಕ್ಕದ್ದು
3) ಸದರಿ ಜನವಸತಿ ಸಭಾದಿಂದ ಚುನಾಯಿತನಾದ ಗ್ರಾಮ ಪಂಚಾಯಿತಿಯ ಯಾವೊಬ್ಬ ಇತರೆ ಮತದಾರನು ಅಧ್ಯಕ್ಷತೆ ವಹಿಸತಕ್ಕದ್ದು.
4) ಪಿ.ಡಿ.ಒ ವಹಿಸತಕ್ಕದ್ದು

7) ವಾರ್ಡ್‌ನ್ನು ಪ್ರತಿನಿಧಿಸುವ ಚುನಾಯಿತ ಸದಸ್ಯರ ಸಂಖ್ಯೆಯು ಒಂದಕ್ಕಿಂತ ಹೆಚ್ಚಾಗಿರುವ ಸಂದರ್ಭದಲ್ಲಿ ಈ ಕೆಳಗಿನ ಯಾರು ಅಧ್ಯಕ್ಷತೆ ವಹಿಸುತ್ತಾರೆ?

1) ಗ್ರಾಮ ಪಂಚಾಯಿತಿಯಲ್ಲಿ ತಮ್ಮ ಪೈಕಿಯಲ್ಲೇ ಚುನಾಯಿತರಾದ ಸದಸ್ಯನೊಬ್ಬನು ಸಭೆಯನ್ನು ಕರೆದು ಅಧ್ಯಕ್ಷತೆ ವಹಿಸತಕ್ಕದ್ದು
2) ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಸಭೆಯನ್ನು ಕರೆದು ಅಧ್ಯಕ್ಷತೆ ವಹಿಸತಕ್ಕದ್ದು
3) ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು ಸಭೆಯನ್ನು ಕರೆದು ಅಧ್ಯಕ್ಷತೆ ವಹಿಸತಕ್ಕದ್ದು
4) ಪಿ.ಡಿ.ಒ ಅಥವಾ ಕಾರ್ಯದರ್ಶಿ ವಹಿಸತಕ್ಕದ್ದು

8) ವಾರ್ಡ್‌ಗೆ ಚುನಾಯಿತರಾದ ಜನವಸತಿ ಪ್ರದೇಶದಲ್ಲಿರುವ ಸದಸ್ಯನು ಜನವಸತಿ ಪ್ರದೇಶದ ಸಭಾದ ಸಭೆಯನ್ನು ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ತಪ್ಪಿದರೆ .................. ಕರೆಯುವರು?

1) ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ
2) ಪಿ.ಡಿ.ಒ ಅಥವಾ ಸಂದರ್ಭಾನುಸಾರ ಕಾರ್ಯದರ್ಶಿ
3) ಗ್ರಾಮ ಪಂಚಾಯಿತಿ ಅಧ್ಯಕ್ಷ
4) ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ

9) ವಾರ್ಡ್‌ಗೆ ಚುನಾಯಿತರಾದ ಜನವಸತಿ ಪ್ರದೇಶದಲ್ಲಿರುವ ಸದಸ್ಯನು ಜನವಸತಿ ಪ್ರದೇಶದ ಸಭಾದ ಸಭೆಯನ್ನು ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ತಪ್ಪಿದರೆ ಪಿ.ಡಿ.ಒ ಅಥವಾ ಸಂದರ್ಭಾನುಸಾರ ಕಾರ್ಯದರ್ಶಿ ಕರೆದ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವವರು?

1) ಜನವಸತಿಸಭಾದ ಸಭೆಯಲ್ಲಿ ಭಾಗವಹಿಸಿದ ಪಿಡಿಒ
2) ಜನವಸತಿ ಸಭಾದ ಸಭೆಯಲ್ಲಿ ಉಪಸ್ಥಿತರಿರುವ ಸದಸ್ಯರು ಗ್ರಾಮ ಪಂಚಾಯಿತಿಯ ಯಾವೊಬ್ಬ ಇತರ ಮತದಾರನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಬಹುದು
3) ಜನವಸತಿ ಸಭಾದ ಸಭೆಯಲ್ಲಿ ಭಾಗವಹಿಸಿದ ಪ.ಜಾ.,/ ಪ.ಪಂ.ದ ಒಬ್ಬ ಸದಸ್ಯ
4) ಜನವಸತಿ ಸಭಾದಲ್ಲೇ ಭಾಗವಹಿಸಿದ ಒಬ್ಬ ಮಹಿಳಾ ಸದಸ್ಯೆ

10) ಜನವಸತಿ ಸಭಾದ ಕೋರಂ ಎಷ್ಟಿರಬೇಕು?

ಒಟ್ಟು ಮತದಾರರ ಪೈಕಿ ........... ರಷ್ಟು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರ ಸಂಖ್ಯೆಯು ಜನವಸತಿ ಸಭಾದ ಕೋರಂ ಆಗಿರತಕ್ಕದ್ದು?

1) ಕನಿಷ್ಠ 1/3 ಸದಸ್ಯರು ಅಥವಾ 20 ಸದಸ್ಯರು
2) ಕನಿಷ್ಠ 1/20 ಸದಸ್ಯರು ಅಥವಾ 15 ಸದಸ್ಯರು
3) ಕನಿಷ್ಠ 1/10 ಸದಸ್ಯರು ಅಥವಾ 10 ಸದಸ್ಯರು
4) ಕನಿಷ್ಠ 1/5 ಸದಸ್ಯರು ಅಥವಾ 20 ಸದಸ್ಯರು

ಉತ್ತರಗಳು:- 1) 4 2) 3 3) 1 4) 1 5) 2 6) 3 7) 1 8) 2 9) 2 10) 4



Scanned by CamScanner

chanakyaloka.com



11) ಜನವಸತಿ ಸಭಾ ಸದಸ್ಯರಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿಗಳು ......... ರಕ್ಷಿರಬೇಕು?

1) ಶೇ 30 2) ಶೇ 20 3) ಶೇ 10

4) ಅವರವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಸಾರ ವಾಗಿರಬೇಕು

12) ಜನವಸತಿ ಸಭಾದ ಸದಸ್ಯರ ಪೈಕಿ ......... ಕ್ಕಿಂತ ಕಡಿಮೆಯಿಲ್ಲದಷ್ಟು ಮಹಿಳೆಯರು ಇರತಕ್ಕದ್ದು?

1) ಶೇ 30 2) ಶೇ 33 3) ಶೇ 25 4) ಶೇ 50

13) ಕೋರಂ ಇಲ್ಲದೇ ಮುಂದೂಡಿದ ಸಭೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಸರಿಯಾದ ಹೇಳಿಕೆಯಾಗಿದೆ?

1) ಮುಂದೂಡಿದ ಸಭೆಗೆ ಯಾವುದೇ ಕೋರಂ ಅಗತ್ಯವಿರುವುದಿಲ್ಲ

2) ಮುಂದೂಡಿದಸಭೆಗೆ ನಿಗದಿತಕ್ಕಿಂತ 1/2 ದಷ್ಟು ಕೋರಂ ಅಗತ್ಯ

3) ಮುಂದೂಡಿದ ಸಭೆಗೆ ಕೋರಂ ಕಡ್ಡಾಯವಾಗಿರುತ್ತದೆ

4) ಮುಂದೂಡಿದ ಸಭೆಗೆ ಕೋರಂನ್ನು ಅಧ್ಯಕ್ಷರು ನಿರ್ಧರಿಸುತ್ತಾರೆ.

14) ಜನವಸತಿ ಸಭೆಯ ನಿರ್ಣಯಗಳನ್ನು ಈ ಕೆಳಗಿನ ಯಾವ ರೀತಿಯಲ್ಲಿ ಅಂಗೀಕರಿಸಲಾಗುತ್ತದೆ?

ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಎಲ್ಲ ನಿರ್ಣಯಗಳನ್ನು ಹಾಜರಿದ್ದು, ಮತ ಚಲಾಯಿಸುವ ಸದಸ್ಯರ ......... ಅಂಗೀಕರಿಸಲಾಗುತ್ತದೆ.

1) ವಿಶೇಷ ಬಹುಮತ 2) ಹಾಜರಾತಿ ಮೂಲಕ

3) ಸದಸ್ಯರ ಬಹುಮತ 4)ಲಿಖಿತ ರೂಪದ ಮೂಲಕ

15) ಜನವಸತಿ ಸಭೆಯ ವಿಶೇಷ ಸಭೆಯನ್ನು ಈ ಕೆಳಗಿನ ಯಾರು ಕರೆಯುತ್ತಾರೆ?

1) ಗ್ರಾಮ ಪಂಚಾಯಿತಿ ಅಧ್ಯಕ್ಷರು

2) ಪಿ.ಡಿ.ಒ ಅಥವಾ ಸಂದರ್ಭಾನುಸಾರ ಕಾರ್ಯದರ್ಶಿ

3) ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು

4) ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ

16) ಜನವಸತಿಯ ವಿಶೇಷ ಸಭೆಯನ್ನು ಜನವಸತಿ ಪ್ರದೇಶದ ಮತದಾರರ ಕೊನೆಯ ಪಕ್ಷ ಶೇ ......... ರಷ್ಟು ಕಡಿಮೆ ಇಲ್ಲದ ಮತದಾರರು ಸಭೆಯಲ್ಲಿ ಚರ್ಚಿಸಬೇಕಾದ ವಿಷಯವನ್ನು ನಿರ್ದಿಷ್ಟಪಡಿಸಿ ಲಿಖಿತ ಮನವಿಯನ್ನು ಸಲ್ಲಿಸಿದಾಗ ಕರೆಯಲಾಗುತ್ತದೆ?

1) ಶೇ 10 2) ಶೇ 20 3) ಶೇ 30 4) ಶೇ 40

17) ವಿಶೇಷಸಭೆಯನ್ನು ಈ ಕೆಳಕಂಡಂತೆ ಕರೆಯುವಂತಿಲ್ಲ?

1) 6 ತಿಂಗಳೊಳಗೆ 2 ಸಲ ವಿಶೇಷ ಸಭೆ ಕರೆಯುವಂತಿಲ್ಲ

2) 3 ತಿಂಗಳೊಳಗೆ 2ಸಲ ವಿಶೇಷಸಭೆ ಕರೆಯುವಂತಿಲ್ಲ

3) 1 ತಿಂಗಳೊಳಗೆ 2 ಸಲ ವಿಶೇಷ ಸಭೆ ಕರೆಯುವಂತಿಲ್ಲ

4) 1 ವರ್ಷದೊಳಗೆ 2ಸಲ ವಿಶೇಷಸಭೆ ಕರೆಯುವಂತಿಲ್ಲ

18) ಪ್ರಕೃತಿ ವಿಕೋಪ ಉಂಟಾದಾಗ ಸಾರ್ವಜನಿಕ ಮಹತ್ವದ ತುರ್ತು ವಿಷಯದ ಸಂದರ್ಭದಲ್ಲಿ ಜನವಸತಿ ಪ್ರದೇಶದ ತುರ್ತು ಸಭೆಯನ್ನು ಸಂಬಂಧಪಟ್ಟ ಚುನಾಯಿತ ಸದಸ್ಯರು ಕರೆಯಬಹುದು ಮತ್ತು ಸದರಿ ಜನವಸತಿ ಪ್ರದೇಶದ ಚುನಾಯಿತ ಸದಸ್ಯರು & ಅಧ್ಯಕ್ಷರು/ಉಪಾಧ್ಯಕ್ಷರು ಅಥವಾ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಚುನಾಯಿತರಾಗಿರುವ ಸದಸ್ಯರು ಅಂತಹ ತುರ್ತು ಸಭೆಗೆ ಹಾಜರಾಗತಕ್ಕದ್ದು. ಈ ತುರ್ತು ಸಭೆಯ ಅಧ್ಯಕ್ಷತೆಯನ್ನು ಈ ಕೆಳಗಿನ ಯಾರು ವಹಿಸುತ್ತಾರೆ?

1) ಗ್ರಾಮ ಪಂಚಾಯಿತಿ ಅಧ್ಯಕ್ಷನ ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು

2) ಪಿ.ಡಿ.ಒ 3)ಮುಖ್ಯಕಾರ್ಯನಿರ್ವಹಣಾಧಿಕಾರಿ

4) ಜನವಸತಿ ಪ್ರದೇಶವನ್ನು ಪ್ರತಿನಿಧಿಸುವ ವಾರ್ಡ್‌ಸದಸ್ಯ

19) ಆಸಕ್ತ ಗುಂಪು ಒತ್ತು ನೀಡಿದ ಅಗತ್ಯತೆಗಳನ್ನು ಜನವಸತಿ ಸಭಾದ ಸಭೆಯಲ್ಲಿ ಚರ್ಚಿಸತಕ್ಕದ್ದು ಮತ್ತು ಅದನ್ನು ತನ್ನದೆಂಬಂತೆಯೇ ಜನವಸತಿ ಸಭೆಯು ದಾಖಲಿಸತಕ್ಕದ್ದು, ಅದನ್ನು ........ ಸಭೆಯಲ್ಲಿ ಮಂಡಿಸಲು ಕಳುಹಿಸತಕ್ಕದ್ದು

1) ವಾರ್ಡ್‌ಸಭೆ 2) ಗ್ರಾಮಸಭೆ

3) ಗ್ರಾಮ ಪಂ. ಸಭೆ 4) ತಾಲ್ಲೂಕು ಪಂ. ಸಭೆ

20) ಜನವಸತಿ ಸಭೆಯನ್ನು ಕರೆಯುವುದಕ್ಕೆ ಮತ್ತು ನಡೆಸುವುದಕ್ಕೆ ಅಗತ್ಯವಾದ ವಿಧಾನಗಳು ಈ ಕೆಳಕಂಡಂತಿರುತ್ತವೆ

1) ಗೊತ್ತು ಪಡಿಸಿದ ರೀತಿಯಂತಿರತಕ್ಕದ್ದು

2) ಜನವಸತಿ ಸಭಾದ ಅಧ್ಯಕ್ಷರು ನಿರ್ಧರಿಸಿದಂತೆ ಇರತಕ್ಕದ್ದು

3) ಜನವಸತಿ ಸಭೆಯ ಮತದಾರರು ನಿರ್ಧರಿಸಿದಂತೆ ಇರತಕ್ಕದ್ದು

4) ಪಿಡಿಒ ನಿರ್ಧರಿಸಿದಂತೆ ಇರತಕ್ಕದ್ದು

**ಉತ್ತರಗಳು:-** 11) 4 12) 1 13) 1 14) 3 15) 2 16) 1 17) 2 18) 1 19) 2 20) 1



Scanned by CamScanner

**1) ಜನವಸತಿ ಸಭಾದ ಸಭೆಯ ಪ್ರಮುಖ ಉದ್ದೇಶವು**

ಎ) ಗ್ರಾಮದ ಹೊರಗೆ ವಾಸಿಸುವ ಜನವಸತಿ ಜನರ ಆಶೋತ್ತರಗಳು ಮತ್ತು ಅವರನ್ನು ಪಂಚಾಯತ್‌ನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದು

ಬಿ) ಗ್ರಾಮದ ಒಳಗೆ ವಾಸಿಸುವ ಜನವಸತಿ ಜನರ ಆಶೋತ್ತರಗಳು ಮತ್ತು ಅವರನ್ನು ಪಂಚಾಯತ್‌ನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದು

ಸಿ) ಗ್ರಾಮದ ಹೊರಗೆ ವಾಸಿಸುವ ಜನವಸತಿ ಜನರಲ್ಲಿ ಫಲಾನುಭವಿಗಳನ್ನು ಗುರ್ತಿಸಿ, ಬಡತನ ಮತ್ತು ಕಲ್ಯಾಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದು

ಡಿ) ಜನವಸತಿ ಪ್ರದೇಶದಲ್ಲಿನ ಜನರ ಜೀವನ ಮಟ್ಟ ಸುಧಾರಿಸುವುದು ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸುವುದು

**ಸಂಕೇತಗಳು:-**

1) ಎ & ಬಿ
2) ಎ, ಬಿ & ಸಿ
3) ಎ, ಸಿ & ಡಿ
4) ಎ, ಬಿ, ಸಿ & ಡಿ

**22) ಜನವಸತಿ ಸಭಾದ ಸಭೆಯ ಪ್ರಮುಖ ಉದ್ದೇಶವು**

ಎ) ಗೃಹ & ಗುಡಿ ಕೈಗಾರಿಕೆಗಳ ಪುನರುಜ್ಜೀವನಗೊಳಿಸುವುದು.

ಬಿ) ಸಣ್ಣ & ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು

ಸಿ) ಗ್ರಾಮ ಪಂಚಾಯಿತಿಗೆ ಸಂದಾಯವಾಗಬೇಕಾದ ತೆರಿಗೆಗಳನ್ನು ಮತ್ತು ಮರುಪಾವತಿ ಮಾಡಬೇಕಾದ ಸಾಲಗಳನ್ನು ಪಾವತಿಸುವಂತೆ ಜನವಸತಿ ನಿವಾಸಿಗಳನ್ನು ಪ್ರೇರೇಪಿಸುವುದು.

ಡಿ) ಮಾದಕ ದ್ರವ್ಯಗಳ ಸೇವನೆ & ಧೂಮಪಾನ ತ್ಯಜಿಸುವುದಕ್ಕೆ ಪ್ರೇರೇಪಿಸುವ ಮೂಲಕ ಚಾರಿತ್ರ್ಯ ನಿರ್ಮಾಣ ಕೈಗೊಳ್ಳುವುದು

ಇ) ಜನವಸತಿ ನಿವಾಸಿಗಳ ಹಿತ ಅಥವಾ ಆರೋಗ್ಯ & ಸುರಕ್ಷತೆಗೆ ಹಾನಿಯಾಗುವ ಯಾವುದೇ ಚಟುವಟಿಕೆಯನ್ನು ನಿಯಂತ್ರಿಸುವುದು.

**ಸಂಕೇತಗಳು:-**

1) ಎ & ಇ
2) ಮೇಲಿನ ಎಲ್ಲವೂ
3) ಎ, ಬಿ & ಸಿ
4) ಸಿ, ಡಿ & ಇ

ಉತ್ತರಗಳು:- 21) 4 22) 2



Scanned by CamScanner

# ವಾರ್ಡ್ ಸಭೆ (ಪ್ರಕರಣ 3ಸಿ & 3ಡಿ)

**1) ಈ ಕೆಳಗಿನ ಯಾವ ಹೇಳಿಕೆಯು ವಾರ್ಡ್ ಅರ್ಥ?**

1) ಗ್ರಾಮ ಪಂಚಾಯಿತಿಯ ಯೋಜನೆಗಳನ್ನು ಜಾರಿ ಮಾಡುವ ಉದ್ದೇಶದಿಂದ ಗ್ರಾಮ ಪಂ.ಯ ಒಳಗೆ ಗಡಿ ಗುರುತು ಮಾಡಲಾಗಿರುವ ಒಂದು ಪ್ರದೇಶ.

2) ಗ್ರಾಮ ಪಂಚಾಯಿತಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಒಂದು ಎಲ್ಲೆಯನ್ನು ಒಳಗೊಂಡ ಒಂದು ಪ್ರದೇಶ.

3)ಗ್ರಾಮ ಪಂ.ಯ ಒಳಗಿರುವ ಒಂದು ಪುಟ್ಟ ಪ್ರದೇಶ.

4) ಗ್ರಾಮ ಪಂಚಾಯಿತಿಗೆ ಚುನಾವಣೆಗಳನ್ನು ನಡೆಸುವ ಉದ್ದೇಶದಿಂದ ಗ್ರಾಮ ಪಂಚಾಯಿತಿಯ ಒಳಗೆ ಗಡಿ ಗುರುತು ಮಾಡಲಾಗಿದೆಯೋ ಆ ಸ್ಥಳೀಯ ಚುನಾವಣಾ ಕ್ಷೇತ್ರವಾಗಿದೆ.

**2) ವಾರ್ಡ್ ಸಭಾ ಎಂದರೆ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿನ ಚುನಾವಣಾ ಕ್ಷೇತ್ರದ..........ನಲ್ಲಿ ನೋಂದಾಯಿತರಾಗಿರುವ ಎಲ್ಲಾ ವ್ಯಕ್ತಿಗಳನ್ನು ಒಳಗೊಂಡ ನಿಕಾಯವಾಗಿದೆ.**

1) ಗ್ರಾಮದ ಜನಸಂಖ್ಯಾ ಪಟ್ಟಿಯಲ್ಲಿ ನೋಂದಾಯಿತನಾಗಿರುವ

2) ಮತದಾರರ ಪಟ್ಟಿಯಲ್ಲಿ ಮತದಾರನಾಗಿರುವ

3) ಗ್ರಾಮದ ಪ್ರಜೆಯಾಗಿ ನೋಂದಾಯಿತನಾಗಿರುವ

4) ಗ್ರಾಮದಲ್ಲಿ ವಯಸ್ಕರ ಪಟ್ಟಿಯಲ್ಲಿ ನೋಂದಾಯಿತನಾಗಿರುವ

## ಪ್ರಕರಣ 3ಸಿ: ವಾರ್ಡ್‌ಸಭೆಯ ಪ್ರಕಾರ್ಯಗಳು

**3) ವಾರ್ಡ್ ಸಭೆಯ ಪ್ರಕಾರ್ಯಗಳನ್ನು ಈ ಕೆಳಗಿನ ಯಾವ ಪ್ರಕರಣವು ತಿಳಿಸುತ್ತದೆ?**

1) ಪ್ರಕರಣ – 3ಸಿ 2) ಪ್ರಕರಣ – 3ಬಿ

3) ಪ್ರಕರಣ – 3ಎ 4) ಪ್ರಕರಣ – 3ಡಿ

**4) ೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಕ್ಕೆ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ-೨೦೦೩ನ್ನು ಮಾಡಿ ಈ ಅಧಿನಿಯಮ ಸಂಖ್ಯೆ ಮೂಲಕ ವಾರ್ಡ್ ಸಭೆಯನ್ನು ಪಂಚಾಯಿತಿಗೆ ಸೇರಿಸಲಾಯಿತು?**

1) 2003ರ ಅಧಿನಿಯಮ ಸಂಖ್ಯೆ – 37ರ ಅನ್ವಯ

2) 2009ರ ಅಧಿನಿಯಮ ಸಂಖ್ಯೆ – 2ರ ಅನ್ವಯ

3) 2010ರ ಅಧಿನಿಯಮ ಸಂಖ್ಯೆ – 2ರ ಅನ್ವಯ

4) 2011ರ ಅಧಿನಿಯಮ ಸಂಖ್ಯೆ – 2ರ ಅನ್ವಯ

2) ಅಸಿಸ್ಟೆಂಟ್ ಕಮೀಷನರ್
3) ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗ
4) ಕಮೀಷನರ್

71) ಗ್ರಾಮ ಪಂಚಾಯತಿಯ ಎರಡು ಚುನಾವಣಾ ಕ್ಷೇತ್ರದಿಂದ ಆಯ್ಕೆಯಾದ ವ್ಯಕ್ತಿಯು ನಿಗದಿಪಡಿಸಿದ ಅವಧಿಯಲ್ಲಿ ಒಂದು ಕ್ಷೇತ್ರವನ್ನು ಆಯ್ಕೆ ಮಾಡದಿದ್ದರೆ ಡೆಪ್ಯೂಟಿ ಕಮೀಷನರ್‌ರವರು ಈ ಕೆಳಗಿನ ಯಾವ ವಿಧಾನದ ಮೂಲಕ ವ್ಯಕ್ತಿಯು ಸೇವೆ ಸಲ್ಲಿಸಬೇಕಾದ ಕ್ಷೇತ್ರವನ್ನು ನಿರ್ಧರಿಸುತ್ತಾರೆ ಮತ್ತು ಅಧಿಸೂಚಿಸುತ್ತಾರೆ?

1) ಚೀಟಿ ಎತ್ತುವ ಮೂಲಕ
2) ವಿವೇಚನೆ ಮೂಲಕ
3) ವರ್ಣಮಾಲೆಯ ಆಧಾರದ ಮೇಲೆ
4) ಚುನಾವಣಾ ಆಯೋಗದ ಆದೇಶದ ಅನ್ವಯ

72) ಏಕಕಾಲದಲ್ಲಿ ಚುನಾಯಿತರಾದ ವ್ಯಕ್ತಿಗೆ ಒಂದು ಚುನಾವಣಾ ಕ್ಷೇತ್ರವನ್ನು ನಿರ್ಧರಿಸಿದ ನಂತರ ಖಾಲಿ ಸ್ಥಾನವನ್ನು ಈ ಕೆಳಗಿನ ಯಾವ ವಿಧಾನದ ಮೂಲಕ ಭರ್ತಿ ಮಾಡತಕ್ಕದ್ದು.

1) ನಾಮ ನಿರ್ದೇಶನ ಮಾಡುವುದು
2) ಚುನಾವಣೆ ನಡೆಸುವುದು
3) ಆಡಳಿತಾಧಿಕಾರಿ ನೇಮಿಸುವುದು
4) ನೇರವಾಗಿ ಡಿ.ಸಿರವರ ನಿಯಂತ್ರಣದಲ್ಲಿರುವುದು.

## ಪ್ರಕರಣ-15: ಚುನಾವಣಾ ತಕರಾರು ಅರ್ಜಿ

73) ಪ್ರಕರಣ-15 ಈ ಕೆಳಗಿನ ಯಾವ ವಿಷಯನ್ನು ಪ್ರಸ್ತಾಪಿಸುತ್ತದೆ?

1) ಚುನಾವಣಾ ತಕರಾರು ಅರ್ಜಿ 2) ಮತದಾರರ ಪಟ್ಟಿ
3) ಮತದಾನದ ವಿಧಾನ 4) ಭ್ರಷ್ಟಾಚಾರಗಳು

74) ಗ್ರಾಮ ಪಂಚಾಯತಿಯ ಸ್ಥಾನಗಳನ್ನು ಭರ್ತಿ ಮಾಡಲು ನಡೆಸಿದ ಚುನಾವಣೆಗೆ ಸಂಬಂಧಿಸಿದ ತಕರಾರು ಅರ್ಜಿಯನ್ನು ಈ ಕೆಳಗಿನ ಯಾರು ಸಲ್ಲಿಸಬಹುದು.?

1) ಚುನಾವಣೆಯಲ್ಲಿ ಸ್ಪರ್ಧಿಸಿದ ಯಾವುದೇ ಅಭ್ಯರ್ಥಿ
2) ಅಂತಹ ಚುನಾವಣೆಯಲ್ಲಿ ಮತ ನೀಡಲು ಅರ್ಹರಾದ ಯಾವುದೇ ಮತದಾರ
3) ಯಾವುದೇ ವ್ಯಕ್ತಿ ಬೇಕಾದರೂ ಅರ್ಜಿ ಸಲ್ಲಿಸಬಹುದು 4) 1 ಮತ್ತು 2

ಉತ್ತರಗಳು:- 66) 1 67) 2 68) 4 69) 2 70) 1 71) 1 72) 2 73) 1 74) 4



Scanned by CamScanner

**75) ಗ್ರಾಮ ಪಂಚಾಯತಿಯ ಸ್ಥಾನಗಳನ್ನು ಭರ್ತಿ ಮಾಡಲು ನಡೆಸಿದ ಚುನಾವಣೆಗೆ ಸಂಬಂಧಿಸಿದ ತಕರಾರು ಅರ್ಜಿಯನ್ನು ಯಾರಿಗೆ ಸಲ್ಲಿಸಬೇಕು?**

1) ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗ (ಗೊತ್ತುಪಡಿಸಿದ ನ್ಯಾಯಾಲಯ)
2) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ (ಗೊತ್ತುಪಡಿಸಿದ ನ್ಯಾಯಾಲಯ)
3) ಹೈಕೋರ್ಟ್ 4) ರಾಜ್ಯ ಚುನಾವಣಾ ಆಯೋಗ

**76) ತಕರಾರು ಅರ್ಜಿ ಸಲ್ಲಿಸಲು ಖರ್ಚುಗಳಿಗೆ ಭದ್ರತೆಗಾಗಿ ಎಷ್ಟು ಠೇವಣಿ ಇಡಬೇಕು.**

1) 500ರೂ 2)1000ರೂ 2)2000ರೂ 3)3000ರೂ

**77) ತಕರಾರು ಅರ್ಜಿಯನ್ನು ಚುನಾವಣಾ ಫಲಿತಾಂಶ ಘೋಷಣೆ ಯಾದ ದಿನಾಂಕದಿಂದ ಎಷ್ಟು ದಿನದೊಳಗೆ ಸಲ್ಲಿಸಬೇಕು.**

1) 40 ದಿನದೊಳಗೆ 3) 30ದಿನದೊಳಗೆ
3) 20ದಿನದೊಳಗೆ 4) 50ದಿನದೊಳಗೆ

**78) 2ನೇ ತಿದ್ದುಪಡಿ - 2015ಕ್ಕಿಂತ ಮುಂಚಿತವಾಗಿ ಗ್ರಾಮ ಪಂಚಾಯಿತಿಯ ಚುನಾವಣಾ ತಕರಾರು ಅರ್ಜಿಯನ್ನು ಈ ಕೆಳಗಿನ ಯಾರಿಗೆ ಸಲ್ಲಿಸಲಾಗುತ್ತಿತ್ತು?**

1) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ
2) ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗ
3) ಜಿಲ್ಲಾ ನ್ಯಾಯಾಧೀಶ
4) ಅಸಿಸ್ಟೆಂಟ್ ಕಮೀಷನರ್

**79) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯಲ್ಲಿ ಈ ಕೆಳಗಿನ ಅಂಶಗಳು ಕಡ್ಡಾಯವಾಗಿರತಕ್ಕದ್ದಲ್ಲ?**

1) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯಲ್ಲಿ ಎಷ್ಟು ಜನ ಪ್ರತಿವಾದಿಗಳನ್ನು ಹೇಳಲಾಗಿದೆಯೋ, ಅಷ್ಟೇ ಪ್ರತಿಗಳು ಆ ಅರ್ಜಿಯ ಜೊತೆ ಇರತಕ್ಕದ್ದು.
2) ಪ್ರತಿಯೊಂದು ಅಂತಹ ಪ್ರತಿಗಳಿಗೆ ಅರ್ಜಿದಾರನು ಅದು ಅರ್ಜಿಯ ಯಥಾ ಪ್ರತಿಯೆಂದು ದೃಢೀಕರಿಸಿ ಸಹಿ ಮಾಡತಕ್ಕದ್ದು.
3) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯಲ್ಲೂ ಸೂಕ್ತವಾದ ತಹಸೀಲ್ದಾರರಿಂದ ದೃಢೀಕರಿಸಿದ ದಾಖಲೆಗಳಿರಬೇಕು
4) ಮೇಲಿನ ಯಾವುದೂ ಅಲ್ಲ

## ಪ್ರಕರಣ-16: ತಕರಾರು ಅರ್ಜಿ ಒಳಾಂಶಗಳು ಮತ್ತು ಕೋರಬಹುದಾದ ಪರಿಹಾರ

**80) ಪ್ರಕರಣ-16 ಈ ಕೆಳಗಿನ ಯಾವ ಅಂಶವನ್ನು ತಿಳಿಸುತ್ತದೆ?**

1) ಮತದಾರರ ಪಟ್ಟಿ 2) ಮತದಾನದ ಹಕ್ಕು
3) ಚುನಾವಣಾ ತಕರಾರು ಅರ್ಜಿಯ ವಿಚಾರಣೆ
4) ಚುನಾವಣಾ ತಕರಾರು ಅರ್ಜಿಯ ಒಳಾಂಶಗಳು ಮತ್ತು ಕೋರಬಹುದಾದ ಪರಿಹಾರ

**81) ಚುನಾವಣೆಗೆ ಸಂಬಂಧಿಸಿದಂತೆ ಸಲ್ಲಿಸುವ ತಕರಾರು ಅರ್ಜಿ ಈ ಕೆಳಗಿನ ಒಳಾಂಶವನ್ನು ಹೊಂದಿರತಕ್ಕದ್ದು**

1) ಅರ್ಜಿದಾರನು ತಕರಾರು ಕೋರುವ ಮುಖ್ಯ ಸಂಗತಿಗಳ ಸಂಕ್ಷಿಪ್ತ ವಿವರಣೆ ಇರತಕ್ಕದ್ದು.
2) ಅರ್ಜಿದಾರನು ಯಾರ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಲಾಗಿದೆಯೋ ಆ ಪಕ್ಷಕಾರನ ಹೆಸರುಗಳು & ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಸಂಕ್ಷಿಪ್ತ ಮಾಹಿತಿ ನೀಡಬೇಕು.
3) ಅರ್ಜಿದಾರನು ಸಹಿ ಹಾಕಿರತಕ್ಕದ್ದು ಮತ್ತು ಸತ್ಯಾಪನೆ ಮಾಡಿರತಕ್ಕದ್ದು. & ಅರ್ಜಿದಾರನು ಭ್ರಷ್ಟಾಚಾರ ಆರೋಪ & ಅದರ ವಿವರಣೆಗಳನ್ನು ಸಮರ್ಥಿಸುವ, ಗೊತ್ತುಪಡಿಸಿರುವ ನಮೂನೆಯಲ್ಲಿ ಶಪಥ ಪತ್ರವನ್ನುಸಹ ನೀಡತಕ್ಕದ್ದು.
4) ಮೇಲಿನ ಎಲ್ಲವೂ

**82) ಅರ್ಜಿದಾರನು ಸತ್ಯಾಪನೆಗಾಗಿ ಈ ಕೆಳಗಿನ ಯಾವ ಸಂಹಿತೆಯನ್ನು ಪಾಲಿಸಬೇಕು?**

1) 1908 ರ ಸಿವಿಲ್ ಪ್ರಕ್ರಿಯಾ ಸಂಹಿತೆ
2) 1909 ರ ಸಿವಿಲ್ ಪ್ರಕ್ರಿಯಾ ಸಂಹಿತೆ
3) 1904 ರ ಸಿವಿಲ್ ಪ್ರಕ್ರಿಯಾ ಸಂಹಿತೆ
4) 1973 ರ ದಂಡ ಪ್ರಕ್ರಿಯಾ ಸಂಹಿತೆ

## ಪ್ರಕರಣ-17: ಚುನಾವಣಾ ತಕರಾರು ಅರ್ಜಿ ವಿಚಾರಣೆ

**83) ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ ಇವರು ಈ ಕೆಳಗಿನ ಯಾವ ಕ್ರಮಕೈಗೊಳ್ಳಬಹುದು?**

1) ಸೂಕ್ತವಾದಂತಹ ನಿಯಮಗಳನ್ನು ಪಾಲಿಸದ ತಕರಾರು ಅರ್ಜಿಗಳನ್ನು ವಜಾಗೊಳಿಸಬಹುದು.
2) ಒಂದೇ ಚುನಾವಣೆಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಚುನಾವಣಾ ತಕರಾರು ಅರ್ಜಿಗಳನ್ನು ತಮ್ಮ ವಿವೇಚನೆ ಮೇರೆಗೆ ಅವುಗಳ ಪ್ರತ್ಯೇಕವಾಗಿ/ಗುಂಪಿನಲ್ಲಿ ವಿಚಾರಣೆ ಮಾಡಬಹುದು.
3) ಚುನಾವಣೆ ತಕರಾರು ಅರ್ಜಿಯ ವಿಚಾರಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಶೀಘ್ರವಾಗಿ ವಿಚಾರಣೆ ಮಾಡತಕ್ಕದ್ದು. 4) ಮೇಲಿನ ಎಲ್ಲವೂ

**ಉತ್ತರಗಳು:-** 75) 2 76) 1 77) 3 78) 2 79) 3 80) 4 81) 4 82) 1 83) 4



chaluvaloka.com
Scanned by CamScanner

84) ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯ ಹಿರಿಯವರ್ಗ ಇವರು ಈ ಕೆಳಗಿನ ಅವಧಿಯವರೆಗೆ ವಿಚಾರಣೆಯನ್ನು ಮುಗಿಸಲು ಪ್ರಯತ್ನಿಸತಕ್ಕದ್ದು.

1)1ವರ್ಷ 2)6 ತಿಂಗಳು 3)3ತಿಂಗಳು 4)9 ತಿಂಗಳು

85) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯನ್ನು ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ ಇವರು ಯಾವ ಸಂಹಿತೆಯಂತೆ ವಿಚಾರಣೆ ನಡೆಸುತ್ತಾರೆ?

1) 1908 ರ ಸಿವಿಲ್ ಪ್ರಕ್ರಿಯಾ ಸಂಹಿತೆ
2) 1909 ರ ಸಿವಿಲ್ ಪ್ರಕ್ರಿಯಾ ಸಂಹಿತೆ
3) 1904 ರ ಸಿವಿಲ್ ಪ್ರಕ್ರಿಯಾ ಸಂಹಿತೆ
4) 1973 ರ ದಂಡ ಪ್ರಕ್ರಿಯಾ ಸಂಹಿತೆ

86) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗದವರು ಈಗಾಗಲೇ ಪ್ರತಿವಾದಿಯಾಗಿರದ ಯಾವನೇ ಅಭ್ಯರ್ಥಿಯು ವಿಚಾರಣೆಯ ಪ್ರಾರಂಭದ ದಿನಾಂಕದಿಂದ ........... ದಿವಸದೊಳಗೆ ಅವನು ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಖರ್ಚಿಗಾಗಿ ಭದ್ರತೆ ಬಗ್ಗೆ ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ ಮಾಡಬಹುದಾದ ಯಾವುದೇ ಆದೇಶಕ್ಕೊಳಪಟ್ಟು ಸೇರಿಕೊಳ್ಳಬಹುದು?

1)30 ದಿನ 2) 14 ದಿನ 3) 15 ದಿನ 4) 20 ದಿನ

87) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ ಇವರು ತಕರಾರು ಅರ್ಜಿಯ ವಿಚಾರಣೆಯ ಪ್ರತಿವಾದಿಗಳು ಹಾಜರಾಗಲು & ಅರ್ಜಿಯಲ್ಲಿ ಮಾಡಿಕೊಂಡ ಕೋರಿಕೆ/ಕೋರಿಕೆಗಳಿಗೆ ಉತ್ತರಿಸಲು ......... ದಿನಾಂಕದಂದು ಪ್ರಾರಂಭವಾಗಬೇಕೆಂದು ಭಾವಿಸತಕ್ಕದ್ದು?

1) ನಿಗದಿಪಡಿಸಿದ ದಿನಾಂಕದಂದು
2) ಒಂದು ತಿಂಗಳ ನಂತರ
3) 1 ವಾರದ ನಂತರ
4) ಮೂರು ತಿಂಗಳ ನಂತರ

88) ಸಿವಿಲ್ ನ್ಯಾಯಾಧೀಶ ಹಿರಿಯವರ್ಗ ಇವರು ತಕರಾರು ಅರ್ಜಿಗೆ ಸಂಬಂಧಿಸಿದಂತೆ ನಿಷ್ಪಕ್ಷಪಾತ ಮತ್ತು ಪರಿಣಾಮಕಾರಿ ವಿಚಾರಣೆಗೆ ಸಂಬಂಧಿಸಿದಂತೆ ಈ ಕೆಳಗಿನವುದಕ್ಕೆ ಅನುಮತಿ ನೀಡಬಹುದು?

1) ಅವಶ್ಯಕವಾಗಬಹುದಾದ ರೀತಿಯಲ್ಲಿ ಅರ್ಜಿಯಲ್ಲಿ ಆರೋಪಿಸಲಾದ ಭ್ರಷ್ಟಾಚಾರದ ವಿವರಗಳನ್ನು ನೀಡಲು
2) ತಿದ್ದುಪಡಿ ಮಾಡಲು 3) ವಿಷದೀಕರಿಸಲು
4) ಮೇಲಿನ ಎಲ್ಲದಕ್ಕೂ

89) ಸಿವಿಲ್ ನ್ಯಾಯಾಧೀಶ ಹಿರಿಯವರ್ಗ ಇವರು ತಕರಾರು ಅರ್ಜಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದಕ್ಕೆ ಅನುಮತಿ ಕೊಡತಕ್ಕದ್ದಲ್ಲ?

1) ಅರ್ಜಿಯಲ್ಲಿ ಹಿಂದೆ ಆರೋಪಿಸಿಲ್ಲದ ಭ್ರಷ್ಟಾಚಾರದ ವಿವರಗಳನ್ನು ಸೇರಿಸುವ ಪರಿಣಾಮವನ್ನು ಹೊಂದಿರುವಂತಹ ಯಾವುದೇ ತಿದ್ದುಪಡಿಗೆ
2) ಅರ್ಜಿಯಲ್ಲಿ ಹಿಂದೆ ಆರೋಪಿಸಿದ ಭ್ರಷ್ಟಾಚಾರದ ವಿವರಗಳನ್ನು ಸೇರಿಸುವ ಪರಿಣಾಮವನ್ನು ಹೊಂದಿರುವಂತಹ ಯಾವುದೇ ತಿದ್ದುಪಡಿಗೆ
3) ಅರ್ಜಿಯಲ್ಲಿ ಹಿಂದೆ ಆರೋಪಿಸಿದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ನೀಡಲು
4) ಮೇಲಿನ ಯಾವ ಸಂದರ್ಭದಲ್ಲೂ ಅನುಮತಿ ನೀಡತಕ್ಕದ್ದಲ್ಲ.

90) ತಕರಾರು ಅರ್ಜಿಯ ವಿಚಾರಣೆಯನ್ನು ದಾಖಲೆ ಮಾಡಬೇಕಾದ ಕಾರಣಗಳಿಗೆ ಆ ವಿಚಾರಣೆಯನ್ನು ........... ದಿನವನ್ನು ಮೀರಿ ಮುಂದೂಡುವುದು ಅವಶ್ಯಕವೆಂದು ಕಂಡು ಬರದ ಹೊರತು. ಆ ವಿಚಾರಣೆಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ ಇವರು ಮುಕ್ತಾಯವಾಗುವವರೆಗೆ ದಿನ-ದಿನವೂ ವಿಚಾರಣೆಯನ್ನು ಮುಂದುವರೆಸತಕ್ಕದ್ದ?

1) ಮೂರನೇ ದಿನ 2) ನಾಲ್ಕನೇ ದಿನ
3) ಎಂಟು ದಿನ 4) ಐದನೇ ದಿನ

91) ಈ ಕೆಳಗಿನ ಯಾವ ಅಧಿನಿಯಮದನ್ವಯ ಸಾಕ್ಷ್ಯಗಳನ್ನು ಪರಿಗಣಿಸುತ್ತಾರೆ?

1) 1972 ರ ಭಾರತ ಸಾಕ್ಷ್ಯ ಅಧಿನಿಯಮ
2) 1869 ರ ಭಾರತ ಸಾಕ್ಷ್ಯ ಅಧಿನಿಯಮ
3) 1872 ರ ಭಾರತ ಸಾಕ್ಷ್ಯ ಅಧಿನಿಯಮ
4) 1873 ರ ಭಾರತ ಸಾಕ್ಷ್ಯ ಅಧಿನಿಯಮ

92) ಈ ಕೆಳಗಿನ ಯಾವ ಸಂದರ್ಭದಲ್ಲಿ ಸಾಕ್ಷ್ಯಗಳನ್ನು ನಿರಾಕರಿಸುವ ವಿವೇಚನೆಯನ್ನು ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ ಹೊಂದಿರುತ್ತಾರೆ?

1) ಕ್ಷುಲ್ಲಕ ಎಂದು ಭಾವಿಸಿದಾಗ
2) ವ್ಯವಹರಣೆ ಕಾಲವಿಳಂಬ ದೃಷ್ಟಿಯಿಂದ
3) ಸಾಕ್ಷ್ಯವು ಮಹತ್ವವಿಲ್ಲವೆಂದಾಗ
4) ಮೇಲಿನ ಎಲ್ಲ ಸಂದರ್ಭದಲ್ಲೂ

93) ಈ ಕೆಳಗಿನ ಯಾವ ಸಂದರ್ಭದಲ್ಲಿ ಸಾಕ್ಷ್ಯವು ಅನಂಗೀಕಾರಾರ್ಹವಾಗತಕ್ಕದ್ದಲ್ಲ

1) ಯಾವುದೇ ದಾಸ್ತಾವೇಜು ಚುನಾವಣಾ ತಕರಾರು ಅರ್ಜಿ ವಿಚಾರಣೆಯಲ್ಲಿ ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪು ಹಾಕಿಲ್ಲವೆಂಬ ಕಾರಣದಿಂದ
2) ಅದನ್ನು ನೊಂದಾಯಿಸಿಲ್ಲವೆಂಬ ಕಾರಣದಿಂದ
3) 1 ಮತ್ತು 2 4) ಮೇಲಿನ ಯಾವುದೂ ಅಲ್ಲ

ಉತ್ತರಗಳು:- 84) 2 85) 1 86) 2 87) 1 88) 4 89) 1 90) 1 91) 3 92) 4 93) 3



Scanned by CamScanner

chanakyaloka.com



**94) ಈ ಕೆಳಗಿನ ಸಂದರ್ಭದಲ್ಲಿ ಚುನಾವಣಾ ತಕರಾರು ಅರ್ಜಿಯ ವಿಚಾರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ ?**

1) ತಕರಾರು ವಿಚಾರಣೆಯನ್ನು 1908ರ ಸಿವಿಲ್ ಪ್ರಕ್ರಿಯ ಸಂಹಿತೆ ಅಡಿಯಲ್ಲಿ ವಿಚಾರಣೆ ಮಾಡತಕ್ಕದ್ದು.

2) ಅರ್ಜಿಯ ತೀರ್ಮಾನಕ್ಕಾಗಿ ಯಾವುದೇ ಸಾಕ್ಷಿಗಳು ಕ್ಷುಲ್ಲಕವೆಂದು ಭಾವಿಸಿದರೆ ಅಂತಹ ಸಾಕ್ಷವನ್ನು ವಜಾ ಮಾಡುವ ವಿವೇಚನೆಯನ್ನು ನ್ಯಾಯಾಧೀಶರು ಹೊಂದಿರುತ್ತಾರೆ.

3) ಯಾವುದೇ ದಾಸ್ತಾವೇಜು ಚುನಾವಣಾ ತಕರಾರು ಅರ್ಜಿವಿಚಾರಣೆಯಲ್ಲಿ ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಅಂಟಿಸಿಲ್ಲವೆಂದು ಅಥವಾ ನೊಂದಾಯಿಸಿಲ್ಲವೆಂಬ ಕಾರಣಕ್ಕಾಗಿ ಅನಂಗೀಕಾರವಾಗಿರತಕ್ಕದ್ದಲ್ಲ.

4) ಮೇಲಿನ ಎಲ್ಲವೂ

## ಪ್ರಕರಣ-18: ಸಿವಿಲ್‌ನ್ಯಾಯಾಧೀಶ(ಹಿರಿಯವರ್ಗ)ರ ತೀರ್ಮಾನ

**95) ಪ್ರಕರಣ-18 ಏನನ್ನು ತಿಳಿಸುತ್ತದೆ?**

1) ಸಮಾನ ಮತ ಬಿದ್ದಾಗ ತೀರ್ಮಾನ

2) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)ರ ತೀರ್ಮಾನ

3)ಚುನಾವಣೆ ಸಭೆಗಳಲ್ಲಿ ಗಲಭೆ 4)ಹುದ್ದೆಯ ಅವಧಿ

**96) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ) ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು.**

1) ಚುನಾವಣಾ ತಕರಾರರು ಅರ್ಜಿಯನ್ನು ವಜಾ ಮಾಡಬಹುದು

2) ಚುನಾಯಿತರಾದ ಎಲ್ಲಾ ಅಥವಾ ಯಾವುದೇ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು ಘೋಷಿಸಬಹುದು.

3) ಚುನಾಯಿತರಾದ ಎಲ್ಲಾ ಅಥವಾ ಯಾವುದೇ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು & ಅರ್ಜಿದಾರರು ಅಥವಾ ಯಾರೇ ಇತರೆ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆ ಎಂದು ಘೋಷಿಸುವ ಆದೇಶ ಮಾಡಬಹುದು.

4) ಮೇಲಿನ ಎಲ್ಲವೂ

**97) ತಕರಾರು ಅರ್ಜಿಯಲ್ಲಿ ಚುನಾವಣೆಯ ಯಾವುದೇ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಆರೋಪ ಮಾಡಿದ್ದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಈ ಕೆಳಗಿನ ಯಾವ ಆದೇಶವನ್ನು ಹೊರಡಿಸಬಹುದು.**

1) ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿದೆ ಅಥವಾ ರುಜುವಾತಾಗಿಲ್ಲ ಎಂಬುದನ್ನು ನಿರ್ಣಯಿಸಬಹುದು.

2) ವಿಚಾರಣೆಯಲ್ಲಿ ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥರೆಂದು ರುಜುವಾತಾದ ವ್ಯಕ್ತಿಗಳು ಯಾರಾದರೂ ಇದ್ದರೆ ಅವರೆಲ್ಲರ ಹೆಸರುಗಳನ್ನು & ಭ್ರಷ್ಟಾಚಾರದ ಸ್ವರೂಪಗಳನ್ನು ದಾಖಲು ಮಾಡಿ ಆದೇಶ ಹೊರಡಿಸಬಹುದು.

3) ಸಂದಾಯ ಮಾಡಬೇಕಾದ ಖರ್ಚುಗಳ ಒಟ್ಟು ಮೊಬಲಗನ್ನು ನಿಗಧಿಪಡಿಸಿ ಯಾರು & ಯಾರಿಗೆ ಸಂದಾಯ ಮಾಡಬೇಕೆಂದು ನಿರ್ದಿಷ್ಟ ಪಡಿಸಿ ಆದೇಶ ಮಾಡತಕ್ಕದ್ದು. 4) ಮೇಲಿನ ಎಲ್ಲವೂ

## ಪ್ರಕರಣ-19. ಚುನಾವಣೆಯು ಅನೂರ್ಜಿತವೆಂದು ಘೋಷಿಸಲು ಕಾರಣ

**98) ಪ್ರಕರಣ-19, ಈ ಕೆಳಗಿನ ಯಾವ ವಿಷಯವನ್ನು ಪ್ರಸ್ತಾಪಿಸುತ್ತದೆ.**

1)ಚುನಾವಣೆಯು ಅನೂರ್ಜಿತವೆಂದು ಘೋಷಿಸಲು ಕಾರಣ

2)ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದಂಡನೆ

3)ಚುನಾವಣೆ ಸಂದರ್ಭದಲ್ಲಿ ಜಾತ್ರೆಗಳ ನಿಷೇಧ

4)ಚುನಾವಣೆ ಸಂದರ್ಭದಲ್ಲಿ ಸಭೆ ಸಮಾರಂಭಗಳ ನಿಷೇಧ

**99) ಚುನಾವಣೆಯು ಅನೂರ್ಜಿತಗೊಂಡಿದೆ ಎಂದು ಘೋಷಿಸುವವರು**

1) ಸಿವಿಲ್ ನ್ಯಾಯಾಧೀಶ (ಹಿರಿಯವರ್ಗ)

2) ಸಿವಿಲ್ ನ್ಯಾಯಾಧೀಶ (ಕಿರಿಯವರ್ಗ)

3) ಜಿಲ್ಲಾ ನ್ಯಾಯಾಧೀಶ

4) ಡೆಪ್ಯುಟಿ ಕಮೀಷನರ್

**99ಎ) ಚುನಾವಣೆಯು ಅನೂರ್ಜಿತವೆಂದು ಘೋಷಿಸಲು ಈ ಕೆಳಗಿನ ಯಾವುದು ಕಾರಣವಾಗಿರುತ್ತದೆ?**

1) ಚುನಾಯಿತನಾದ ಅಭ್ಯರ್ಥಿಯು ಚುನಾವಣಾ ದಿನದಂದು ಅನರ್ಹನಾಗಿದ್ದರೆ

2) ನಾಮ ಪತ್ರ ಕ್ರಮಬದ್ಧವಾಗಿರದಿಲ್ಲದಿರುವುದನ್ನು ಅಂಗೀಕರಿಸುವುದು

3) ಯಾವುದೇ ಚುನಾಯಿತ ಅಭ್ಯರ್ಥಿ ಅಥವಾ ಅವನ ಏಜೆಂಟ್ ಭ್ರಷ್ಟಾಚಾರ ಮಾಡಿರುವನೆಂದು ಕಂಡು ಬಂದಲ್ಲಿ ಚುನಾವಣೆ ಅನೂರ್ಜಿತವೆಂದು ಘೋಷಿಸಬಹುದು.

4) ಮೇಲಿನ ಎಲ್ಲ ಸಂದರ್ಭದಲ್ಲೂ

ಉತ್ತರಗಳು:- 94) 4 95) 2 96) 4 97) 4 98) 1 99) 1 99ಎ) 4



Scanned by CamScanner

**100) ಈ ಕೆಳಗಿನ ಯಾವ ಸಂದರ್ಭದಲ್ಲಿ ಚುನಾಯಿತ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವಾಗಿಲ್ಲವೆಂದು ಘೋಷಿಸಬಹುದು.**

1) ಯಾವುದೇ ಏಜೆಂಟ್/ಚುನಾಯಿತ ಅಭ್ಯರ್ಥಿಯು ಭ್ರಷ್ಟಾಚಾರ ಮಾಡಿಲ್ಲವೆಂದು ತಿಳಿದು ಬಂದರೆ

2) ಅಭ್ಯರ್ಥಿಯು ಚುನಾವಣೆಯಲ್ಲಿ ಭ್ರಷ್ಟಾಚಾರ ನಡೆಯುವುದನ್ನು ತಡೆಗಟ್ಟಲು ಸೂಕ್ತ ಕ್ರಮವನ್ನು ಕೈಗೊಂಡಿದ್ದಾನೆಂದು ತಿಳಿದು ಬಂದರೆ

3) ಯಾವುದೇ ಭ್ರಷ್ಟಾಚಾರಗಳು ಅಭ್ಯರ್ಥಿಯ ಸಮ್ಮತಿ ಇಲ್ಲದೆ ಅಭ್ಯರ್ಥಿಯ ಆದೇಶಗಳ ವಿರುದ್ಧವಾಗಿ ಮಾಡಲಾಯಿತೆಂದು ತಿಳಿದು ಬಂದರೆ

4) ಮೇಲಿನ ಎಲ್ಲವೂ

## ಪ್ರಕರಣ-20: ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದಂತ ಕಾರಣಗಳು

**101) ಪ್ರಕರಣ-20 ಈ ಕೆಳಗಿನ ಯಾವ ವಿಷಯವನ್ನು ಪ್ರಸ್ತಾಪಿಸುತ್ತದೆ?**

1) ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ

2) ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದಂತ ಕಾರಣಗಳು 3) ಭ್ರಷ್ಟಾಚಾರಗಳು

4) ಭ್ರಷ್ಟಾಚಾರ ಆದೇಶ ತಿಳಿಸುವುದು

**102) ಈ ಕೆಳಗಿನ ಯಾವ ಕಾರಣಗಳ ಮೂಲಕ ಚುನಾಯಿತನಲ್ಲದ ಇತರೆ ವ್ಯಕ್ತಿಯನ್ನು ಚುನಾಯಿತನಾಗಿದ್ದಾನೆಂದು ಘೋಷಿಸಬಹುದು**

1) ಚುನಾವಣಾ ತಕರಾರು ಅರ್ಜಿಯಲ್ಲಿ ಚುನಾಯಿತ ಅಭ್ಯರ್ಥಿಯ ಆಯ್ಕೆಯನ್ನು ಪ್ರಶ್ನಿಸುವುದರ ಜೊತೆ-ಗೆ ಇತರ ಯಾವುದೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದೇನೆಂದು ಘೋಷಿಸಬೇಕೆಂದು ಕೋರಿದ್ದರೆ.

2) ಚುನಾಯಿತನಲ್ಲದ ಇತರೆ ಅಭ್ಯರ್ಥಿಯು ಸಿಂಧುವಾದ ಬಹುಸಂಖ್ಯೆ ಮತಗಳನ್ನು ಪಡೆದಿದ್ದೇನೆಂದು ಕೋರಿದ್ದರೆ

3) ಭ್ರಷ್ಟಾಚಾರದ ಮೂಲಕ ಚುನಾಯಿತನಾದ ಅಭ್ಯರ್ಥಿಯು ಮತಗಳನ್ನು ಪಡೆದುಕೊಳ್ಳದೆ ಇರದಿದ್ದರೆ ಇತರ ಅಭ್ಯರ್ಥಿಯು ಸಿಂಧುವಾದ ಬಹುಸಂಖ್ಯೆ ಮತವನ್ನು ಪಡೆಯುತ್ತಿದ್ದನೆಂದು ಅಭಿಪ್ರಾಯ ಪಟ್ಟರೆ

4) ಮೇಲಿನ ಎಲ್ಲಾ ಸಂದರ್ಭದಲ್ಲೂ ಘೋಷಿಸಬಹುದು

**103) ಈ ಕೆಳಗಿನ ಯಾವ ಸಂದರ್ಭದಲ್ಲಿ ಕೂಡ ಚುನಾಯಿತ ಅಭ್ಯರ್ಥಿಯಲ್ಲದ ಇತರೆ ಅಭ್ಯರ್ಥಿಯನ್ನು ಚುನಾಯಿತನಾಗಿದ್ದಾನೆಂದು ಘೋಷಿಸಲಾಗುತ್ತದೆ?**

1) ವಾಸ್ತವವಾಗಿ ಅರ್ಜಿದಾರನು ಅಥವಾ ಇತ-ರೆ ಅಭ್ಯರ್ಥಿಯು ಸಿಂಧುವಾದ ಬಹುಸಂಖ್ಯೆಯ ಮತವನ್ನು ಪಡೆದಿದ್ದರೆ

2) ವಾಸ್ತವವಾಗಿ ಅರ್ಜಿದಾರನು ಅಥವಾ ಇತರೆ ಅಭ್ಯರ್ಥಿಯು ಸಿಂಧುವಾದ ಸಮಾನ ಮತ ಪಡೆದಿದ್ದರೆ

3) ವಾಸ್ತವವಾಗಿ ಅರ್ಜಿದಾರನು ಅಥವಾ ಇತರೆ ಅಭ್ಯರ್ಥಿಯು ಸಿಂಧುವಾದ ಕಡಿಮೆ ಪಡೆದಿದ್ದರೆ

4) ಮೇಲಿನ ಎಲ್ಲ ಸಂದರ್ಭದಲ್ಲೂ

**104) ಈ ಕೆಳಗಿನ ಯಾವ ಸಂದರ್ಭದಲ್ಲಿ ಚುನಾಯಿತನಲ್ಲದ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದ ಕಾರಣವಾಗಿದೆ?**

1) ಭ್ರಷ್ಟಾಚಾರದ ಮೂಲಕ ಚುನಾಯಿತನಾದ ಅಭ್ಯರ್ಥಿಯು ಮತಗಳನ್ನು ಪಡೆದುಕೊಳ್ಳದೇ ಇರುತ್ತಿದ್ದರೆ, ಅರ್ಜಿದಾರನು ಅಥವಾ ಇತ-ರೆ ಅಭ್ಯರ್ಥಿಯು ಗೆಲ್ಲುವ ಸಂಭವವಿದೆ ಎಂದು ಅಭಿಪ್ರಾಯಪಟ್ಟರೆ

2) ಗೆದ್ದ ಅಭ್ಯರ್ಥಿಯು ಭ್ರಷ್ಟಾಚಾರದಿಂದ ಚುನಾಯಿತನಾಗಿದ್ದು, ಅವನು ಭ್ರಷ್ಟಾಚಾರವನ್ನು ಎಸಗದಿದ್ದರೆ, ಸೋಲನ್ನಪ್ಪಿ ಬೇರೆ ಅಭ್ಯರ್ಥಿಯು ಗೆಲ್ಲುವಂತಿದ್ದರೆ.

3) ಭ್ರಷ್ಟಾಚಾರದ ಮೂಲಕ ಚುನಾಯಿತನಾದ ಅಭ್ಯರ್ಥಿಯು ಮತಗಳನ್ನು ಪಡೆದುಕೊಳ್ಳದೇ ಇರುತ್ತಿದ್ದರೆ. ಅರ್ಜಿದಾರನು / ಅಂತಹ ಇತ-ರ ಅಭ್ಯರ್ಥಿಯು ಸಿಂಧುವಾದ ಬಹು ಸಂಖ್ಯೆಯ ಮತಗಳನ್ನು ಪಡೆಯುತ್ತಿದ್ದಾನೆಂದು ಅಭಿಪ್ರಾಯ ಪಟ್ಟ-ರೆ 4) ಮೇಲಿನ ಎಲ್ಲಾ ಸಂದರ್ಭದಲ್ಲೂ

**105) ಚುನಾಯಿತ ಅಭ್ಯರ್ಥಿಯಲ್ಲದ ಇತರೆ ಅಭ್ಯರ್ಥಿಯನ್ನು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಈ ಕೆಳಗಿನ ಯಾರು ಘೋಷಿಸುತ್ತಾರೆ?**

1) 1)ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ)

2) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)

3) ಅಸಿಸ್ಟೆಂಟ್ ಕಮೀಷನರ್

4) ಡೆಪ್ಯೂಟಿ ಕಮೀಷನರ್

**106) ಚುನಾವಣೆಯ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಹಿರಿಯ ಸಿವಿಲ್ ನ್ಯಾಯಾಧೀಶರು ನೀಡಿದ ತೀರ್ಮಾನಕ್ಕೆ ಸಂಬಂಧಿಸಿದಂತೆ ಅಪೀಲನ್ನು ಎಲ್ಲಿ ಸಲ್ಲಿಸಬೇಕು?**

1) ಸೆಷನ್ ನ್ಯಾಯಾಲಯ 2) ಹೈ ಕೋರ್ಟ್

3) ಮುನ್ಸಿಫ್ ಕೋರ್ಟ್ 4) ಅಪೀಲಿಗೆ ಅವಕಾಶವಿಲ್ಲ

**ಉತ್ತರಗಳು:-** 100) 4 101) 2 102) 1 103) 1 104) 4 105) 2 106) 4



Scanned by CamScanner

107) ಚುನಾವಣೆಯ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾರ ತೀರ್ಮಾನವು ಅಂತಿಮವಾಗಿರತಕ್ಕದ್ದು.

1) ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ)
2) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)
3) ಅಸಿಸ್ಟೆಂಟ್ ಕಮೀಷನರ್ 4) ಡೆಪ್ಯೂಟಿ ಕಮೀಷನರ್

## ಪ್ರಕರಣ-21. ಸಮಾನ ಮತಗಳು ಬಂದ ಸಂದರ್ಭದಲ್ಲಿ ಕಾರ್ಯವಿಧಾನ

108) ಪ್ರಕರಣ-21 ಈ ಕೆಳಗಿನ ಯಾವುದನ್ನು ವಿವರಿಸುತ್ತದೆ?

1) ಭ್ರಷ್ಟಾಚಾರಗಳು 2) ಅಧ್ಯಕ್ಷರ ಚುನಾವಣೆ
3) ಉಪಾಧ್ಯಕ್ಷರ ಚುನಾವಣೆ
4) ಸಮಾನ ಮತಗಳು ಬಂದಾಗ ಕಾರ್ಯವಿಧಾನ

109) ಚುನಾವಣೆ ತಕರಾರು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಗಳಿಗೆ ಸಮಾನ ಮತಗಳು ಬಂದಿದ್ದವೆಂದು, 1 ಮತ ಸೇರಿದರೆ ಚುನಾಯಿತರಾಗುತ್ತಿದ್ದರೆಂದು ಕಂಡು ಬಂದರೆ ಈ ಕೆಳಗಿನ ಯಾರು ತೀರ್ಮಾನ ತೆಗೆದುಕೊಳ್ಳತಕ್ಕದ್ದು.

1) ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ)
2) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)
3) ಡೆಪ್ಯೂಟಿ ಕಮೀಷನರ್ 4) ಅಸಿಸ್ಟೆಂಟ್ ಕಮೀಷನರ್

110) ಚುನಾವಣೆ ತಕರಾರು ಅರ್ಜಿ ವಿಚಾರಣೆ ಸಂದರ್ಭದಲ್ಲಿ ಸಮಾನ ಮತ ಇದ್ದಾಗ ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)ರು ಈ ವಿಧಾನದ ಮೂಲಕ ತೀರ್ಮಾನ ಕೈಗೊಳ್ಳತಕ್ಕದ್ದು

1)ಚೀಟಿ ಎತ್ತುವ ಮೂಲಕ 2) ಹಿರಿಯ ವ್ಯಕ್ತಿ ಪರವಾಗಿ
3) ಅನೇಕ ಬಾರಿ ಆಯ್ಕೆಯಾದ ವ್ಯಕ್ತಿಯ ಪರವಾಗಿ
4) ವಿವೇಚನೆ ಮೂಲಕ

## ಪ್ರಕರಣ-22. ಭ್ರಷ್ಟಾಚಾರಗಳು

111) ಪ್ರಕರಣ-22 ಈ ಕೆಳಗಿನ ಯಾವ ವಿಷಯವನ್ನು ತಿಳಿಸುತ್ತದೆ?

1)ಭ್ರಷ್ಟಾಚಾರಗಳು 2)ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ
3)ಮತಗಟ್ಟೆ ವಶಪಡಿಸಿಕೊಂಡ ಅಪರಾಧ
4)ಮತಕೇಂದ್ರದ ಬಳಿ ಪ್ರಚಾರ ಮಾಡುವುದು

112)ಪ್ರಕರಣ 22ರ ಪ್ರಕಾರ ಈ ಕೆಳಗಿನ ಯಾವುದನ್ನು ಭ್ರಷ್ಟಾಚಾರ ಎಂದು ಭಾವಿಸಲಾಗುತ್ತದೆ?

1) 1951ರ ಜನಪ್ರಾತಿನಿಧ್ಯ ಅಧಿನಿಯಮದ 123ನೇ ಪ್ರಕರಣ ವಿವರಿಸುವ ಲಂಚಗುಳಿತನ
2) 1951ರ ಜನಪ್ರಾತಿನಿಧ್ಯ ಅಧಿನಿಯಮದ 123ನೇ ಪ್ರಕರಣ ವಿವರಿಸುವ ಅನುಚಿತ ಪ್ರಭಾವ ಬೀರುವುದು
3) ಧರ್ಮ, ಜಾತಿ, ಜನಾಂಗಗಳ ನಡುವೆ ದ್ವೇಷವನ್ನು ಉಂಟು ಮಾಡಿ ಮತ ಪಡೆಯುವುದು.
4) ಮೇಲಿನ ಎಲ್ಲವೂ

113) ಪ್ರಕರಣ 22ರ ಪ್ರಕಾರ ಈ ಕೆಳಗಿನ ಯಾವುದನ್ನು ಭ್ರಷ್ಟಾಚಾರ ಎಂದು ಭಾವಿಸಲಾಗುತ್ತದೆ?

1) ರಾಷ್ಟ್ರಧ್ವಜ, ರಾಷ್ಟ್ರಲಾಂಛನಗಳ ಸಂಕೇತಗಳ ದುರ್ಬಳಕೆ ಮಾಡುವುದು.
2) ಅಭ್ಯರ್ಥಿಯು ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಅಥವಾ ವಾಪಸ್ಸು ಪಡೆಯುವಾಗ ಸುಳ್ಳು ವಿವರಣೆ ನೀಡುವುದು
3) ಮತದಾರರನ್ನು ಮತದಾನದ ಕೇಂದ್ರಕ್ಕೆ ಕೊಂಡೊಯ್ಯಲು, ಹಿಂದಿರುಗಿಸಲು ನಿಯಮ ಮೀರಿ ವಾಹನ ಬಳಕೆ ಮಾಡುವುದು. 4) ಮೇಲಿನ ಎಲ್ಲವೂ

114) ಪ್ರಕರಣ 22ರ ಪ್ರಕಾರ ಈ ಕೆಳಗಿನ ಯಾವುದನ್ನು ಭ್ರಷ್ಟಾಚಾರ ಎಂದು ಭಾವಿಸಲಾಗುತ್ತದೆ?

1)ಯಾವುದೇ ಸಭೆಗಳನ್ನು ನಡೆಸುವುದು ಅಲ್ಲಿ ಮಾದಕ ಪಾನಿಯಗಳನ್ನು ಸರಬರಾಜು ಮಾಡುವುದು
2)ಮುದ್ರಕ, ಪ್ರಕಾಶಕರ ಹೆಸರು ಮತ್ತು ವಿಳಾಸವನ್ನು ಹೊಂದಿರದ ಯಾವುದೇ ಸುತ್ತೋಲೆ, ಪ್ರಕಟಣ ಪತ್ರ, ಭಿತ್ತಿಪತ್ರಗಳನ್ನು ಚುನಾವಣೆ ಸಂದರ್ಭದಲ್ಲಿ ಹೊರಡಿಸುವುದು.
3)ಸರ್ಕಾರವು ನಿಗಧಿಪಡಿಸಿದ ನಿಯಮದ ಮೂಲಕ ಭ್ರಷ್ಟಾಚಾರವೆಂದು ನಿರ್ದಿಷ್ಟ ಪಡಿಸಬಹುದಾದಂತಹ ಯಾವುದೇ ಆಚರಣೆಗಳು 4)ಮೇಲಿನ ಎಲ್ಲವೂ

115) ಈ ಕೆಳಗಿನ ಯಾವುದು ಪ್ರಕರಣ-22 ರ ಪ್ರಕಾರ ಭ್ರಷ್ಟಾಚಾರ ಎನಿಸಿಕೊಳ್ಳುತ್ತದೆ?

1) ಚುನಾವಣೆ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ/ ತಾಲ್ಲೂಕು ಪಂಚಾಯಿತಿ/ಸಂದರ್ಭಾನುಸಾರ ಜಿಲ್ಲಾ ಪಂಚಾಯಿತಿಯ ಸದಸ್ಯ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಹುದ್ದೆಯ ವ್ಯಾಪಾರಕ್ಕೆ ಯಾವುದೇ ಪಂಚಾಯಿತಿಯ ಮತದಾರ ಅಥವಾ ಸದಸ್ಯರನ್ನು ಸೆಳೆಯುವುದು ಅಥವಾ ದಬ್ಬಾಳಿಕೆ ನಡೆಸುವುದು.
2) ಅನುಚಿತ ವರ್ತನೆ
3) ಸರ್ಕಾರದ ನಿಯಮದ ಮೂಲಕ ಭ್ರಷ್ಟಾಚಾರವೆಂದು ನಿರ್ದಿಷ್ಟಪಡಿಸಬಹುದಾದ ಇತರೆ ಆಚರಣೆ
4) ಮೇಲಿನ ಎಲ್ಲವೂ

ಉತ್ತರಗಳು:- 107) 2 108) 4 109) 2 110) 1 111) 1 112) 1 113) 4 114) 4 115) 4



Scanned by CamScanner

116) ಚುನಾವಣಾ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಸಂಬಂಧಿಸಿದೆ?

1) ಧಾರ್ಮಿಕ ಸಂಕೇತಗಳ ದುರ್ಬಳಕೆ ಮಾಡಿಕೊಂಡು ಮತವನ್ನು ಪಡೆಯುವುದು

2) ಪ್ರಚಾರದ ಸಂದರ್ಭದಲ್ಲಿ ರಾಷ್ಟ್ರಲಾಂಛನ, ರಾಷ್ಟ್ರಧ್ವಜ, ರಾಷ್ಟ್ರ ಸಂಕೇತಗಳನ್ನು ಬಳಕೆ ಮಾಡುವುದು

3) ಅಭ್ಯರ್ಥಿಗಳ ಚಾರಿತ್ರ್ಯ ವಧೆ ಮಾಡಲು ಅವರ ಬಗ್ಗೆ ಸುಳ್ಳು ಮಾಹಿತಿಯನ್ನು ಪ್ರಕಟಿಸಿ, ಪ್ರತಿಕೂಲ ಪ್ರಭಾವ ಬೀರುವಂತಹ ವಿಷಯವನ್ನು ಪ್ರಕಟಿಸುವುದು

4) ಮೇಲಿನ ಎಲ್ಲವೂ

## ಪ್ರಕರಣ-23. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ

117) ಪ್ರಕರಣ-23 ಈ ಕೆಳಗಿನ ಯಾವ ವಿಷಯವನ್ನು ತಿಳಿಸುತ್ತದೆ?

1)ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ
2)ಆದೇಶ ತಿಳಿಸುವುದು 3)ಹುದ್ದೆಯ ಅವಧಿ
4)ಖಾಲಿಯಾದ ಸ್ಥಾನಕ್ಕೆ ಹೊಸ ಚುನಾವಣೆ

118) ಪ್ರಕರಣ-22ರಲ್ಲಿ ನಡೆದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶವನ್ನು ಪ್ರಕರಣ-23ರಲ್ಲಿ ಹೊರಡಿಸುವವರು?

1) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ) (ಗೊತ್ತುಪಡಿಸಿದ ನ್ಯಾಯಾಲಯ)
2)ಕಮೀಷನರ್ 3)ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ) 4) ಡೆಪ್ಯೂಟಿ ಕಮೀಷನರ್

119)ಪ್ರಕರಣ-23ರಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಡೆದಿರುವ ಬಗೆಗಿನ ನಿರ್ಣಯದ ದಿನಾಂಕದಿಂದ____ ಅವಧಿವರೆಗೆ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯತ್ವಕ್ಕೆ ಅನರ್ಹನಾಗಿ ಮಾಡತಕ್ಕದ್ದು ಎಂಬ ಆದೇಶವನ್ನು ಹೊರಡಿಸಬಹುದು?

1) 5 ವರ್ಷಗಳು 2) 10 ವರ್ಷಗಳು
3) 3 ವರ್ಷಗಳು 4) 4ವರ್ಷಗಳು

## ಪ್ರಕರಣ-24. ಆದೇಶಗಳನ್ನು ತಿಳಿಸುವುದು

120) ಪ್ರಕರಣ-24 ಏನನ್ನು ಪ್ರಸ್ತಾಪಿಸುತ್ತದೆ?

1) ಆದೇಶಗಳನ್ನು ತಿಳಿಸುವುದು 2) ಪದಾವಧಿ ಆರಂಭ 3) ಮತದಾರರ ರಹಸ್ಯ ಕಾಪಾಡುವುದು 4) ಮತಗಟ್ಟೆ ವಶಪಡಿಸಿಕೊಳ್ಳುವುದು

121) ಪ್ರಕರಣ-24ರಲ್ಲಿ ಈ ಕೆಳಗಿನ ಯಾವ ಪ್ರಕರಣಗಳಿಗೆ ಸಂಬಂಧಿಸಿದ ಆದೇಶವನ್ನು ತಿಳಿಸಲಾಗುತ್ತದೆ?

1) ಪ್ರಕರಣ 19 & 20 2)ಪ್ರಕರಣ 18 & 19
3) ಪ್ರಕರಣ 4 & 5 4)ಪ್ರಕರಣ 8 & 9

122). ಪ್ರಕರಣ24ರಲ್ಲಿ ಆದೇಶಗಳನ್ನು ತಿಳಿಸುವವರು?

1) ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ)
2) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)
3)ಡೆಪ್ಯೂಟಿ ಕಮೀಷನರ್ 4)ಅಸಿಸ್ಟೆಂಟ್ ಕಮೀಷನರ್

123) ಪ್ರಕರಣ 24ರಲ್ಲಿ ಆದೇಶದ ಒಂದು ಪ್ರತಿಯನ್ನು ಈ ಕೆಳಗಿನ ಯಾರಿಗೆ ಕಳುಹಿಸುತ್ತಾರೆ?

1) ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ)
2) ಸಿವಿಲ್ ನ್ಯಾಯಾಧೀಶ(ಹಿರಿಯ ವರ್ಗ)
3) ರಾಜ್ಯ ಚುನಾವಣಾ ಆಯುಕ್ತರು & ಸಂಬಂಧಪಟ್ಟ ಪಂಚಾಯತ್ 4) ಅಸಿಸ್ಟೆಂಟ್ ಕಮೀಷನರ್

## ಪ್ರಕರಣ-24ಎ: ಬಾಕಿ ಪ್ರಕರಣಗಳ ವರ್ಗಾವಣೆ

124) ಪ್ರಕರಣ-24ಎ ಏನನ್ನು ತಿಳಿಸುತ್ತದೆ?

1) ಆದೇಶಗಳನ್ನು ತಿಳಿಸುವುದು
2) ಬಾಕಿ ಪ್ರಕರಣಗಳ ವರ್ಗಾವಣೆ
3) ಸ್ಥಾನ ಖಾಲಿಯಾದಾಗ ಹೊಸ ಚುನಾವಣೆ
4) ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ

125) ಪ್ರಕರಣ-24ಎ ನಲ್ಲಿ ಯಾವ ಪ್ರಕರಣಗಳ ವರ್ಗಾವಣೆ ಮಾಡಬೇಕೆಂದು ತಿಳಿಸುತ್ತದೆ?

1) 2015 ರ 1 ನೇ ತಿದ್ದುಪಡಿ ಆರಂಭವಾಗುವುದಕ್ಕೂ ಮೊದಲು ಪಂಚಾಯಿತಿ ಚುನಾವಣಾ ವಿವಾದಗಳನ್ನು ವರ್ಗಾವಣೆ ಮಾಡಬೇಕೆಂದು ತಿಳಿಸುತ್ತದೆ.

2) 1995 ರ ತಿದ್ದುಪಡಿ ಆರಂಭವಾಗುವುದಕ್ಕೂ ಮೊದಲು ಪಂಚಾಯಿತಿ ಚುನಾವಣಾ ವಿವಾದಗಳನ್ನು ವರ್ಗಾವಣೆ ಮಾಡಬೇಕೆಂದು ತಿಳಿಸುತ್ತದೆ.

3) 2015 ರ 2ನೇ ತಿದ್ದುಪಡಿ ಆರಂಭವಾಗುವುದಕ್ಕೂ ಮೊದಲು ಪಂಚಾಯಿತಿ ಚುನಾವಣಾ ವಿವಾದಗಳನ್ನು ವರ್ಗಾವಣೆ ಮಾಡಬೇಕೆಂದು ತಿಳಿಸುತ್ತದೆ.

4) 1993 ರ ತಿದ್ದುಪಡಿ ಆರಂಭವಾಗುವುದಕ್ಕೂ ಮೊದಲು ಪಂಚಾಯಿತಿ ಚುನಾವಣಾ ವಿವಾದಗಳನ್ನು ವರ್ಗಾವಣೆ ಮಾಡಬೇಕೆಂದು ತಿಳಿಸುತ್ತದೆ.

126) ಪ್ರಕರಣ-24ಎ ನಲ್ಲಿ ಚುನಾವಣೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳನ್ನು ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗದಿಂದ ಗೊತ್ತು ಪಡಿಸಿದ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಹೇಳಲಾಗಿದೆ. ಹಾಗಾದರೆ ಗ್ರಾಮ ಪಂಚಾಯಿತಿಯ ಪ್ರಕರಣಗಳನ್ನು ಗೊತ್ತು ಪಡಿಸಿದ ನ್ಯಾಯಾಲಯ ಎಂದರೆ ಎಲ್ಲಿಗೆ ವರ್ಗಾವಣೆ ಮಾಡಬೇಕಾಗುತ್ತದೆ?

1) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ
2) ಮುನ್ಸಿಪ್ ನ್ಯಾಯಾಲಯ
3) ಸೆಷನ್ ನ್ಯಾಯಾಲಯ 4) ಹೈ ಕೋರ್ಟ್

ಉತ್ತರಗಳು:- 116) 4 117)1 118)1 119)1 120) 1 121) 2 122) 2 123) 3 124)2 125)3 126)1



Scanned by CamScanner

chanakyaloka.com



127) 2015 ರ 2ನೇ ತಿದ್ದುಪಡಿಯು ಎಂದಿನಿಂದ ಪ್ರಾರಂಭವಾಗುತ್ತದೆ & ಚುನಾವಣಾ ವಿವಾದಗಳು ಆ ದಿನಾಂಕದಿಂದ ವರ್ಗಾವಣೆಯಾಗುತ್ತವೆ?

1) 2015 ಡಿಸೆಂಬರ್ 16 2) 2016 ಮಾರ್ಚ್ 31
3) 2016 ಫೆಬ್ರವರಿ 25 4) 2015 ಜೂನ್ 1

128) 2016 ಫೆಬ್ರವರಿ 25 ಕ್ಕಿಂತ ಮುಂಚಿತವಾಗಿ ಪಂಚಾಯಿತಿ ಚುನಾವಣಾ ವಿವಾದಗಳನ್ನು ಬಗೆಹರಿಸುವವರು?

1) ಸಿವಿಲ್ ನ್ಯಾಯಾಧೀಶರ ಹಿರಿಯ ವರ್ಗ
2) ಸಿವಿಲ್ ನ್ಯಾಯಾಧೀಶ ಕಿರಿಯ ವರ್ಗ
3)ಸೆಷನ್ ನ್ಯಾಯಾಲಯ 4)ಮುನ್ಸಿಪ್ ನ್ಯಾಯಾಲಯ

## ಪ್ರಕರಣ-25. ಸ್ಥಾನವು ಖಾಲಿಯಾದರೆ ಹೊಸ ಚುನಾವಣೆ

129) ಪ್ರಕರಣ-25 ಏನನ್ನು ತಿಳಿಸುತ್ತದೆ?

1) ಸ್ಥಾನವು ಖಾಲಿಯಾದರೆ ಹೊಸ ಚುನಾವಣೆ
2) ಪದಾವಧಿ 3) ಪದಾವಧಿ ಆರಂಭ
4) ಉಪಾಧ್ಯಕ್ಷರ ಚುನಾವಣೆ

130) ಪ್ರಕರಣ-25ರ ಪ್ರಕಾರ ಖಾಲಿಯಾದ ಸ್ಥಾನಕ್ಕೆ ಈ ಕೆಳಗಿನ ಯಾವ ವಿಧಾನದ ಮೂಲಕ ಸ್ಥಾನವನ್ನು ತುಂಬಲಾಗುತ್ತದೆ?

1) ನಾಮ ನಿರ್ದೇಶನ ಮಾಡುವ ಮೂಲಕ
2) ಹೊಸ ಚುನಾವಣೆ
3) ಆಡಳಿತಾಧಿಕಾರಿ ನೇಮಕ 4) ಖಾಲಿ ಬಿಡುವುದು

131)ಪ್ರಕರಣ-25ರಲ್ಲಿ ಖಾಲಿಯಾದ ಸ್ಥಾನಕ್ಕೆ ಈ ಕೆಳಗಿನ ಯಾವ ಪ್ರಕರಣದಲ್ಲಿನ ಖಾಲಿಯಾದ ಸ್ಥಾನಗಳಿಗೆ ಹೊಸ ಚುನಾವಣೆ ನಡೆಸಬೇಕೆಂದು ತಿಳಿಸುತ್ತದೆ?

1)ಪ್ರ.–14 2)ಪ್ರ.–13 3)ಪ್ರ.–15 4)ಪ್ರ.–16

132) ಪ್ರಕರಣ-13 ಏನನ್ನು ಹೇಳುತ್ತದೆ?

1) ಅರ್ಹತೆ 2) ಅನರ್ಹತೆ
3) ಸದಸ್ಯರ ಸ್ಥಾನವು ಖಾಲಿಯಾವುದು
4) ಚುನಾವಣಾ ತಕರಾರು ಅರ್ಜಿ

## ಪ್ರಕರಣ-26. ಮತದಾನ ಕೇಂದ್ರದಲ್ಲಿ ಅಥವಾ ಅದರ ಬಳಿಯಲ್ಲಿ ಚುನಾವಣಾ ಪ್ರಚಾರದ ನಿಷೇಧ

133) ಪ್ರಕರಣ-26 ಏನನ್ನು ತಿಳಿಸುತ್ತದೆ?

1) ಪದಾವಧಿ 2) ಪದಾವಧಿ ಆರಂಭ
3) ಅಧ್ಯಕ್ಷರ ಚುನಾವಣೆ
4) ಮತದಾನ ಕೇಂದ್ರದಲ್ಲಿ ಅಥವಾ ಅದರ ಬಳಿಯಲ್ಲಿ ಚುನಾವಣಾ ಪ್ರಚಾರದ ನಿಷೇಧ

134) ಪ್ರಕರಣ-26ರ ಅನ್ವಯ ಮತದಾನ ಕೇಂದ್ರದಿಂದ ಎಷ್ಟು ಅಂತರದವರೆಗೆ ಚುನಾವಣಾ ಪ್ರಚಾರ ನಿಷೇಧಿಸಲಾಗಿದೆ?

1)100ಮೀ 2)50 ಮೀ 3)100ಗಜ 4)200ಮೀ

135)ಮತದಾರರ ಕೇಂದ್ರದ ಬಳಿ ಚುನಾವಣಾ ಪ್ರಚಾರ ನಿಷೇಧವನ್ನು ಉಲ್ಲಂಘಿಸಿದರೆ ನೀಡುವ ದಂಡ?

1)500ರೂ ದಂಡ 2)600 ರೂ
3)1000ರೂ 4) 2000ರೂ

136) ಮತದಾನ ಕೇಂದ್ರದಲ್ಲಿ ಚುನಾವಣಾ ಪ್ರಚಾರ ನಿಷೇಧಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ.

1)ಮತ ಪ್ರಚಾರ ಮಾಡುವುದು & ಮತ ಕೋರುವುದು
2)ಯಾವುದೇ ನಿರ್ದಿಷ್ಟ ವ್ಯಕ್ತಿಗೆ ಮತ ನೀಡಬಾರದೆಂದು ಮನವೊಲಿಸುವುದು & ಚುನಾವಣೆಯಲ್ಲಿ ಮತ ನೀಡದಂತೆ ಮನವೊಲಿಸುವುದು.
3)ಚುನಾವಣೆಗೆ ಯಾವುದೇ ನೋಟೀಸ್ ಅಥವಾ ಚುನಾವಣೆ ಯ ಚಿಹ್ನೆಯನ್ನು ಪ್ರದರ್ಶಿಸುವುದು.
4)ಮೇಲಿನ ಎಲ್ಲವೂ

137) ಮತದಾನ ಕೇಂದ್ರದಲ್ಲಿ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದ ದಂಡನೀಯ ಅಪರಾಧವು ಈ ಕೆಳಗಿನ ಅಪರಾಧವಾಗಿರುತ್ತದೆ?

1) ಸಂಜ್ಞೆಯಾಗಿರತಕ್ಕದ್ದು 2)ಅಸಂಜ್ಞೆಯಾಗಿರತಕ್ಕದ್ದು
3) 1 ಅಥವಾ 2 4) 1 ಮತ್ತು 2

## ಪ್ರಕರಣ-27. ಮತದಾನ ಕೇಂದ್ರದಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ದಂಡನೆ

138) ಪ್ರಕರಣ-27 ಏನನ್ನು ತಿಳಿಸುತ್ತದೆ?

1) ಮತದಾನದ ರಹಸ್ಯವನ್ನು ಕಾಪಾಡುವುದು
2) ಮತದಾನ ಕೇಂದ್ರದಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ದಂಡನೆ
3) ಚುನಾವಣೆ ಸಂಬಂಧ ಸರ್ಕಾರಿ ಕರ್ತವ್ಯದ ಭಂಗ
4) ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ

139) ಮತದಾನದ ಕೇಂದ್ರದಲ್ಲಿ ಅಥವಾ ಅದರ ಹತ್ತಿರ ಅನುಚಿತ ನಡತೆಯನ್ನು ಈ ಕೆಳಗಿನ ಯಾವ ದಿನದಂದು ನಡೆಸಬಾರದು?

1) ಮತದಾನ ನಡೆಯುವ ದಿನಾಂಕದಂದು
2) ಮತದಾನ ನಡೆಯುವ ಒಂದು ವಾರದಲ್ಲಿ
3) ಮತದಾನ ನಡೆಯುವ ಮುನ್ನಾ ದಿನ
4) ಮತದಾನ ನಡೆಯುವ ಒಂದು ತಿಂಗಳಲ್ಲಿ

**ಉತ್ತರಗಳು:**-127)3 128)2 129)1 130)2 131)2 132)3 133)4 134)1 135)1 136)4 137)1 138)2 139)1



Scanned by CamScanner

**140) ಪ್ರಕರಣ-27ರ ಅಡಿಯಲ್ಲಿ ಈ ಕೆಳಗಿನ ಯಾವ ಚಟುವಟಿಕೆಗಳನ್ನು ಅನುಚಿತ ವರ್ತನೆ ಎಂದು ಹೇಳಲಾಗಿದೆ?**

1) ಮತದಾನ ಕೇಂದ್ರದೊಳಗೆ ಅಥವಾ ಪ್ರವೇಶದ್ವಾರದಲ್ಲಿ ಧ್ವನಿವರ್ಧಕಗಳನ್ನು ಉಪಯೋಗಿಸುವುದು.

2) ಮೆಗಾ ಫೋನ್‌ನ್ನು ಬಳಕೆ ಮಾಡುವುದು

3) ಗಟ್ಟಿಯಾಗಿ ಕೂಗಾಡುವಂತದ್ದು

4) ಮೇಲಿನ ಎಲ್ಲವೂ

**141) ಮತದಾನ ಕೇಂದ್ರದಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ಈ ಕೆಳಗಿನ ಯಾವ ದಂಡನೆಯನ್ನು ವಿಧಿಸಲಾಗುತ್ತದೆ?**

1) 3 ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆವಾಸ ಅಥವಾ ಜುಲ್ಮಾನೆ / ಎರಡರಿಂದಲೂ ದಂಡಿಸಬಹುದು.

2) 6 ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆವಾಸ ಅಥವಾ ಜುಲ್ಮಾನೆ /ಎರಡರಿಂದಲೂ ದಂಡಿಸಬಹುದು.

3) 1 ವರ್ಷದವರೆಗೆ ವಿಸ್ತರಿಸಬಹುದಾದ ಸೆರೆವಾಸ ಅಥವಾ ಜುಲ್ಮಾನೆ / ಎರಡರಿಂದಲೂ ದಂಡಿಸಬಹುದು.

4) 2 ವರ್ಷದವರೆಗೆ ವಿಸ್ತರಿಸಬಹುದಾದ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸಬಹುದು.

**142) ಮತ ಕೇಂದ್ರದ ಬಳಿ ಅನುಚಿತ ವರ್ತನೆ ಮಾಡುತ್ತಿದ್ದಾನೆಂದು ನಂಬಲು ಕಾರಣವಿದ್ದರೆ ಅಂತಹ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ಪೋಲೀಸ್ ಅಧಿಕಾರಿಗಳಿಗೆ ನಿರ್ದೇಶಿಸಬಹುದು.**

1) ಮತಕೇಂದ್ರದ ಪ್ರಿಸೈಡಿಂಗ್ ಆಫೀಸರ್

2) ಮತಕೇಂದ್ರದ ರಿಟರ್ನಿಂಗ್ ಆಫೀಸರ್

3) ತಹಸೀಲ್ದಾರರು

4) ಅಸಿಸ್ಟೆಂಟ್ ಕಮೀಷನರ್

**143) ಮತ ಕೇಂದ್ರಗಳ ಬಳಿ ಅನುಚಿತ ವರ್ತನೆಯನ್ನು ತಡೆಗಟ್ಟುವುದಕ್ಕಾಗಿ ಪೋಲೀಸ್ ಅಧಿಕಾರಿಗಳು ಈ ಕೆಳಗಿನ ಕ್ರಮವನ್ನು ಕೈಗೊಳ್ಳಬಹುದು**

1) ಅನುಚಿತ ವರ್ತನೆ ತೋರಿಸಿದ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು

2) ಬಲವನ್ನು ಪ್ರಯೋಗಿಸಬಹುದು

3) ಉಲ್ಲಂಘನೆಗಾಗಿ ಉಪಯೋಗಿಸಿದ ಯಾವುದೇ ಸಲಕರಣೆಗಳನ್ನು ವಶಪಡಿಸಿಕೊಳ್ಳಬಹುದು

4) ಮೇಲಿನ ಎಲ್ಲವೂ

## ಪ್ರಕರಣ-28. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ

**144) ಪ್ರಕರಣ-28 ಏನನ್ನು ತಿಳಿಸುತ್ತದೆ?**

1) ಮತದಾನದ ರಹಸ್ಯ ಕಾಪಾಡುವುದು

2) ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ

3) ಮತ ಕೇಂದ್ರದಿಂದ ಮತ ಪತ್ರ ತೆಗೆದುಕೊಂಡು ಹೋಗುವುದು

4) ಚುನಾವಣಾ ಏಜೆಂಟರಾಗಿ ಸರ್ಕಾರಿ ಅಧಿಕಾರಿ ಕಾರ್ಯ ನಿರ್ವಹಿಸುವುದು.

**145) ಯಾವುದೇ ಮತದಾನ ಕೇಂದ್ರದಲ್ಲಿ ದುರ್ನಡತೆ ಮಾಡಿದರೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ?**

1) ಪ್ರಿಸೈಡಿಂಗ್ ಆಫೀಸರ್‌ರವರು ದುರ್ವರ್ತನೆ ನಡೆಸುತ್ತಿರುವ ವ್ಯಕ್ತಿಯನ್ನು ಮತದಾನ ಕೇಂದ್ರದಿಂದ ಹೊರ ಹಾಕುವಂತೆ ಆದೇಶಿಸಬಹುದು.

2) ಮತಕೇಂದ್ರದಿಂದ ಹೊರ ಹಾಕಲ್ಪಟ್ಟ ವ್ಯಕ್ತಿಯು ಪ್ರಿಸೈಡಿಂಗ್ ಆಫೀಸರ್‌ರವರ ಅನುಮತಿ ಇಲ್ಲದೆ ಮತ ಕೇಂದ್ರವನ್ನು ಪುನಃ ಪ್ರವೇಶಿಸಿದರೆ ಅಪರಾಧವೆಂದು ಪರಿಗಣಿಸಲಾಗುತ್ತದೆ.

3) ಈ ಅಪರಾಧವು ಸಂಜ್ಞೆಯವಾಗಿರತಕ್ಕದ್ದು

4) ಮೇಲಿನ ಎಲ್ಲವೂ

**146) ಮತದಾನದ ಕೇಂದ್ರದಲ್ಲಿ ದುರ್ನಡತೆಗಾಗಿ ಈ ಕೆಳಗಿನ ಯಾವ ಶಿಕ್ಷೆಯನ್ನು ವಿಧಿಸಬಹುದು**

1) ಮೂರು ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

2) ನಾಲ್ಕು ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

3) ಎರಡು ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

4) ಒಂದು ವರ್ಷದವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

## ಪ್ರಕರಣ-29. ಮತದಾನ ರಹಸ್ಯ ಕಾಪಾಡುವುದು

**147) ಪ್ರಕರಣ-29 ಏನನ್ನು ತಿಳಿಸುತ್ತದೆ?**

1) ಮತದಾನ ರಹಸ್ಯ ಕಾಪಾಡುವುದು

2) ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ

3) ಮತಪತ್ರವನ್ನು ಕೊಂಡೊಯ್ಯುವುದು.

4) ಭ್ರಷ್ಟಾಚಾರ

**ಉತ್ತರಗಳು:-** 140) 4 141) 1 142) 1 143) 4 144) 2 145) 4 146) 1 147) 1



Scanned by CamScanner

148) ಮತದಾನದ ರಹಸ್ಯವನ್ನು ಈ ಕೆಳಗಿನ ಯಾರು ಕಾಪಾಡಬೇಕು?

ಎ) ಚುನಾವಣೆಗೆ ನಿಯೋಜಿತವಾದ ಸರ್ಕಾರಿ ಅಧಿಕಾರಿ

ಬಿ) ಚುನಾವಣೆಗೆ ನಿಯೋಜಿತವಾದ ಗುಮಾಸ್ತ

ಸಿ) ಚುನಾವಣೆಗೆ ನಿಯೋಜಿತವಾದ ಏಜೆಂಟ್

ಡಿ) ಚುನಾವಣೆಗೆ ನಿಯೋಜಿತವಾದ ಇತರೆ ವ್ಯಕ್ತಿಗಳು

ಸಂಕೇತಗಳು:-

1) ಎ & ಬಿ 2) ಮೇಲಿನ ಎಲ್ಲವೂ

3) ಬಿ & ಸಿ 4) ಎ, ಬಿ & ಡಿ

149) ಮತದಾನದ ರಹಸ್ಯ ಕಾಪಾಡುವುದು ಎಂದರೆ ಯಾವುದೇ ಚುನಾವಣೆಯಲ್ಲಿ

1) ಮತಗಳನ್ನು ದಾಖಲುಮಾಡುವ ರಹಸ್ಯ ಕಾಪಾಡುವುದು.

2) ಮತಗಳ ಎಣಿಕೆಗೆ ಸಂಬಂಧಿಸಿದ ಕರ್ತವ್ಯ ನೆರವೇರಿಸುವವರು ರಹಸ್ಯ ಕಾಪಾಡುವುದು.

3) ರಹಸ್ಯವನ್ನು ಭಂಗಗೊಳಿಸುವಂತಹ ಯಾವುದೇ ಮಾಹಿತಿ ಯನ್ನು ಯಾವುದೇ ವ್ಯಕ್ತಿಗೆ ನೀಡದಿರುವುದು.

4) ಮೇಲಿನ ಎಲ್ಲವೂ

150) ಮತದಾನ ರಹಸ್ಯ ಕಾಪಾಡುವುದನ್ನು ಉಲ್ಲಂಘಿಸಿದ್ದಲ್ಲಿ ಈ ಕೆಳಗಿನ ಯಾವ ದಂಡನೆಗೆ ಗುರಿಯಾಗಬೇಕಾಗುತ್ತದೆ?

1) 3 ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

2) ನಾಲ್ಕು ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

3) ಎರಡು ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

4) ಒಂದು ವರ್ಷದವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

**ಪ್ರಕರಣ–30: ಚುನಾವಣೆ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದಲ್ಲ/ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ**

151) ಪ್ರಕರಣ-30 ಏನನ್ನು ತಿಳಿಸುತ್ತದೆ?

1)ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು

2)ಚುನಾವಣೆ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದಲ್ಲ ಅಥವಾ ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ

3)ಮತದಾರರ ಮೇಲೆ ಪ್ರಭಾವ ಬೀರುವುದು

4)ಮತದಾರರಿಗೆ ಆಮಿಷ ಒಡ್ಡುವುದು.

152) ಈ ಕೆಳಗಿನ ಯಾವ ಚುನಾವಣಾ ಅಧಿಕಾರಿಗಳು ಚುನಾವಣಾ ಅಭ್ಯರ್ಥಿ ಪರವಾಗಿ ಕೆಲಸ ಮಾಡತಕ್ಕದ್ದಲ್ಲ ಎಂದು ಹೇಳಲಾಗಿದೆ?

1) ರಿಟರ್ನಿಂಗ್ ಆಫೀಸರ್ 2) ಪೋಲಿಂಗ್ ಆಫೀಸರ್

3) ಪ್ರಿಸೈಡಿಂಗ್ ಆಫೀಸರ್ 4) ಮೇಲಿನ ಎಲ್ಲರೂ

153) ಅಭ್ಯರ್ಥಿ ಪರವಾಗಿ ಕೆಲಸ ಮಾಡುವುದು ಎಂದರೆ

1) ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಪರವಾಗಿ ಮತ ಕೊಡುವಂತೆ ಮನವೊಲಿಸುವುದು

2) ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಪರವಾಗಿ ಮತ ನೀಡದಂತೆ ವಿಮುಖಗೊಳಿಸುವುದು.

3) ಯಾವುದೇ ರೀತಿಯಲ್ಲಿ ಚುನಾವಣೆಯಲ್ಲಿ ಯಾವುದೇ ವ್ಯಕ್ತಿಯ ಮೇಲೆ ಪ್ರಭಾವ ಬೀರಿ ಗೆಲ್ಲುವ ಸಂಭವ ಹೆಚ್ಚಿಸುವುದಕ್ಕಾಗಿ ಪ್ರಯತ್ನಿಸುವುದು

4) ಮೇಲಿನ ಎಲ್ಲವೂ

154) ಪ್ರಕರಣ 30ರ ಅನ್ವಯ ಮತದಾರರ ಪರವಾಗಿ ಕೆಲಸ ಮಾಡಿದ್ದಲ್ಲಿ ಈ ಕೆಳಗಿನ ಯಾವ ಶಿಕ್ಷೆಯನ್ನು ವಿಧಿಸಲಾಗುತ್ತದೆ?

1) 6 ತಿಂಗಳವರೆಗೆ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು,

2) 4 ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು,

3) 2 ತಿಂಗಳವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು,

4) 1 ವರ್ಷದವರೆಗಿನ ಸರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು,

155) ಚುನಾವಣಾ ಅಭ್ಯರ್ಥಿಗಳು ಮತ್ತು ಇತರೆ ವ್ಯಕ್ತಿಗಳ ಪರವಾಗಿ ಕೆಲಸ ಮಾಡಿದರೆ, ಸಂಬಂಧಿಸಿದ ದಂಡನೀಯ ಅಪರಾಧವು ಈ ಕೆಳಗಿನ ಯಾವ ವಿಧದ ಅಪರಾಧವಾಗಿರುತ್ತದೆ?

1) ಸಂಜ್ಞೆಯಾಗಿರತಕ್ಕದ್ದು 2)ಅಸಂಜ್ಞೆಯಾಗಿರತಕ್ಕದ್ದು

3) 1 ಅಥವಾ 2 4) 1 ಮತ್ತು 2

**ಪ್ರಕರಣ–31. ಚುನಾವಣೆಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ**

156) ಪ್ರಕರಣ 31 ಏನನ್ನು ತಿಳಿಸುತ್ತದೆ?

1) ಚುನಾವಣಾ ಅಕ್ರಮ

2) ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವುದು

3) ಚುನಾವಣೆಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ

4) ಚುನಾವಣಾ ಏಜೆಂಟ್ ಆಗಿ ಕಾರ್ಯನಿರ್ವಹಿಸಿದವರಿಗೆ ದಂಡನೆ

ಉತ್ತರಗಳು:- 148) 2 149) 4 150) 1 151) 2 152) 4 153) 4 154) 1 155) 1 156) 3



Scanned by CamScanner

157) **ಪ್ರಕರಣ-31ರ ಅನ್ವಯ ಯುಕ್ತ ಕಾರಣವಿಲ್ಲದೆ ಸರ್ಕಾರಿ ಕರ್ತವ್ಯವನ್ನು ಭಂಗ ಮಾಡಿದಾಗ ಅಂತಹ ತಪಿತಸ್ಥರಿಗೆ ಯಾವ ಶಿಕ್ಷೆಯನ್ನು ವಿಧಿಸಲಾಗುತ್ತದೆ?**

1) 500ರೂ ದಂಡ 2) 1000ರೂ ದಂಡ
3) 2000ರೂ ದಂಡ 4) 3000ರೂ ದಂಡ

158) **ಸರ್ಕಾರಿ ಕರ್ತವ್ಯ ಎಂದರೆ ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್‌ಗಳು, ಪೋಲಿಂಗ್ ಆಫೀಸರ್‌ಗಳು ನಿರ್ವಹಿಸುವ ಯಾವ ಕರ್ತವ್ಯಗಳಾಗಿವೆ?**

1)ನಾಮ ಪತ್ರವನ್ನು ಸ್ವೀಕರಿಸುವ ಕರ್ತವ್ಯಗಳು
2)ಉಮೇದುವಾರಿಕೆ ಹಿಂತೆಗೆದುಕೊಳ್ಳುವ ಕರ್ತವ್ಯಗಳು
3)ಚುನಾವಣೆಯಲ್ಲಿ ಮತಗಳನ್ನು ಎಣಿಕೆ ಮಾಡುವ ಸಂಬಂಧಪಟ್ಟ ಕರ್ತವ್ಯಗಳು 4) ಮೇಲಿನ ಎಲ್ಲವೂ

## ಪ್ರಕರಣ 31ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ

159) **ಪ್ರಕರಣ 31ಎ ಏನನ್ನು ತಿಳಿಸುತ್ತದೆ?**

1) ಪದಾವಧಿ 2) ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ 3) ಅಧ್ಯಕ್ಷರ & ಉಪಾಧ್ಯಕ್ಷರ ಚುನಾವಣೆ 4) ಮತಕೇಂದ್ರದಲ್ಲಿ ಅಕ್ರಮ

160) **ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವ ಅಪರಾಧಕ್ಕೆ ಸಾಮಾನ್ಯ ವ್ಯಕ್ತಿಗೆ ಯಾವ ಶಿಕ್ಷೆ ವಿಧಿಸಲಾಗುತ್ತದೆ?**

1) ಆರು ತಿಂಗಳಿಗಿಂತ ಕಡಿಮೆ ಇಲ್ಲದ ಆದರೆ 2 ವರ್ಷದವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.
1) ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಆದರೆ 2 ವರ್ಷದವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.
3) 3 ತಿಂಗಳಿಗಿಂತ ಕಡಿಮೆ ಇಲ್ಲದ ಆದರೆ 2ವರ್ಷದವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.
4) 2 ವರ್ಷಕ್ಕಿಂತ ಕಡಿಮೆ ಇಲ್ಲದ ಆದರೆ 5 ವರ್ಷದ ವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತ ವಾಗತಕ್ಕದ್ದು.

161) **ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವ ಅಪರಾಧಕ್ಕೆ ಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿ ಎಸಗಿದರೆ ಈ ಕೆಳಗಿನ ದಂಡ ವಿಧಿಸಲಾಗುತ್ತದೆ?**

1) 6 ತಿಂಗಳಿಗಿಂತ ಕಡಿಮೆ ಇಲ್ಲದ ಆದರೆ 2ವರ್ಷದ ವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು. 2) 1 ವರ್ಷಕ್ಕಿಂತ ಕಡಿಮೆ ಇಲ್ಲದ ಆದರೆ 3 ವರ್ಷದವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತ ವಾಗತಕ್ಕದ್ದು. 3) 3 ತಿಂಗಳಿಗಿಂತ ಕಡಿಮೆ ಇಲ್ಲದ ಆದರೆ 2ವರ್ಷದ ವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತ ವಾಗತಕ್ಕದ್ದು. 4) 2 ವರ್ಷಕ್ಕಿಂತ ಕಡಿಮೆ ಇಲ್ಲದ ಆದರೆ 5 ವರ್ಷದ ವರೆಗಿನ ಕಾರಾವಾಸ & ಜುಲ್ಮಾನೆಯಿಂದ ದಂಡಿತವಾ ಗತಕ್ಕದ್ದು.

162) **ಮತಗಟ್ಟೆ ವಶಪಡಿಸಿಕೊಳ್ಳುವುದು ಎಂಬುದರಲ್ಲಿ ಇತರೆ ವಿಷಯಗಳೊಂದಿಗೆ ಈ ಕೆಳಗಿನ ಯಾವ ಚಟುವಟಿಕೆ ಸೇರುತ್ತದೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನದ ಕೇಂದ್ರವನ್ನು ಅಥವಾ ಮತದಾನಕ್ಕೆ ನಿಗದಿಪಡಿಸಿದ ಸ್ಥಳವನ್ನು**

1) ವಶಪಡಿಸಿಕೊಳ್ಳುವುದು/ಸ್ವಾಧೀನಪಡಿಸಿಕೊಳ್ಳುವುದು
3) ಮತ ನೀಡದಂತೆ ಮತದಾರರನ್ನು ಬೆದರಿಸುವುದು
4) ಮತ ಎಣಿಕೆ ಮಾಡುತ್ತಿರುವ ಅಧಿಕಾರಿಗಳ ಮತ ಪತ್ರವನ್ನು ಅಥವಾ ಮತ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು. 4) ಮೇಲಿನ ಎಲ್ಲವೂ

## ಪ್ರಕರಣ-31 ಬ, ಚುನಾವಣಾ ಏಜೆಂಟ್, ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಆಗಿ ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರನಿಗೆ ದಂಡನೆ ವಿಧಿಸುವುದು.

163) **ಪ್ರಕರಣ-31ಬ ಏನನ್ನು ಪ್ರಸ್ತಾಪಿಸುತ್ತದೆ?**

1) ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್, ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಆಗಿ ಕೆಲಸ ಮಾಡಿದರೆ ದಂಡನೆ ವಿಧಿಸುವುದರ ಬಗ್ಗೆ ತಿಳಿಸುತ್ತದೆ.
2) ಕೇಂದ್ರ ಸರ್ಕಾರದ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್, ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಆಗಿ ಕೆಲಸ ಮಾಡಿದರೆ ದಂಡನೆ ವಿಧಿಸುವುದರ ಬಗ್ಗೆ ತಿಳಿಸುತ್ತದೆ.
3) ರಾಜ್ಯ ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್, ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಆಗಿ ಕೆಲಸ ಮಾಡಿದರೆ ದಂಡನೆ ವಿಧಿಸುವುದರ ಬಗ್ಗೆ ತಿಳಿಸುತ್ತದೆ.
4) ಸ್ಥಳೀಯ ಪ್ರಾಧಿಕಾರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್, ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಆಗಿ ಕೆಲಸ ಮಾಡಿದರೆ ದಂಡನೆ ವಿಧಿಸುವುದರ ಬಗ್ಗೆ ತಿಳಿಸುತ್ತದೆ.

ಉತ್ತರಗಳು:- 157) 1 158) 4 159) 2 160) 1 161) 2 162) 4 163) 1



Scanned by CamScanner

**164) ಸರ್ಕಾರಿ ಸೇವೆಯಲ್ಲಿರುವವರು ಮತದಾನದ ಏಜೆಂಟ್ ಅಥವಾ ಚುನಾವಣಾ ಏಜೆಂಟ್ ಆಗಿ ಕಾರ್ಯನಿರ್ವಹಿಸಿದ್ದರೆ ಈ ಕೆಳಗಿನ ಯಾವ ದಂಡನೆ ನೀಡಲಾಗುತ್ತದೆ?**

1) ಮೂರು ತಿಂಗಳವರೆಗಿನ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

2) ನಾಲ್ಕು ತಿಂಗಳವರೆಗಿನ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

3) ಎರಡು ತಿಂಗಳವರೆಗಿನ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

4) ಒಂದು ವರ್ಷದವರೆಗಿನ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸತಕ್ಕದ್ದು.

**165) ಸರ್ಕಾರಿ ಸೇವೆಯಲ್ಲಿರುವ ಯಾವುದೇ ನೌಕರನು ಅಭ್ಯರ್ಥಿಯ ಪರವಾಗಿ ಚುನಾವಣೆ ಸಂದರ್ಭದಲ್ಲಿ ಈ ಕರ್ತವ್ಯವನ್ನು ನಿರ್ವಹಿಸುವಂತಿಲ್ಲ?**

1) ಎಣಿಕೆ ಏಜೆಂಟ್

2) ಮತದಾನದ ಏಜೆಂಟ್

3) ಚುನಾವಣಾ ಏಜೆಂಟ್

4) ಮೇಲಿನ ಎಲ್ಲವೂ

## ಪ್ರಕರಣ-32. ಮತ ಕೇಂದ್ರಗಳಿಂದ ಮತಪತ್ರಗಳನ್ನು ತಗೆದುಕೊಂಡು ಹೋಗುವುದು ಅಪರಾಧ

**165ಎ) ಪ್ರಕರಣ-32 ಏನನ್ನು ತಿಳಿಸುತ್ತದೆ?**

1)ಯಾವುದೇ ಚುನಾವಣೆಯಲ್ಲಿ ಯಾವುದೇ ವ್ಯಕ್ತಿಯ ಮತದಾನ ಕೇಂದ್ರದಿಂದ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋಗುವುದು, ಪ್ರಯತ್ನಿಸುವುದು, ಉದ್ದೇಶ ಪೂರ್ವಕವಾಗಿ ಸಹಾಯಮಾಡುವುದು ಅಥವಾ ದುಷ್ಪ್ರೇರಿಸುವುದು ಅಪರಾಧ ಎಂದು ತಿಳಿಸುತ್ತದೆ.

2)ಯಾವುದೇ ಚುನಾವಣೆಯಲ್ಲಿ ಯಾವುದೇ ವ್ಯಕ್ತಿಯ ಮತದಾನ ಕೇಂದ್ರದಿಂದ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋಗುವುದು.

3)ಯಾವುದೇ ಚುನಾವಣೆಯಲ್ಲಿ ಯಾವುದೇ ವ್ಯಕ್ತಿಯ ಮತದಾನ ಕೇಂದ್ರದಿಂದ ಮತಪತ್ರವನ್ನು ತೆಗೆದು-ಕೊಂಡು ಹೋಗಲು ಪ್ರಯತ್ನಿಸುವುದು.

4)ಯಾವುದೇ ಚುನಾವಣೆಯಲ್ಲಿ ಯಾವುದೇ ವ್ಯಕ್ತಿಯ ಮತದಾನ ಕೇಂದ್ರದಿಂದ ಮತಪತ್ರವನ್ನು ಕೊಂಡೊಯ್ಯಲು ಉದ್ದೇಶಪೂರ್ವಕವಾಗಿ ಸಹಾಯ ಮಾಡುವುದು.

**166) ಮತ ಕೇಂದ್ರಗಳಿಂದ ಮತಪತ್ರವನ್ನು ತೆಗೆದು ಕೊಂಡು ಹೋಗುವುದು ಅಪರಾಧವಾಗಿದ್ದು, ಇಂತಹ ಅಪರಾಧ ಎಸಗಿದವರಿಗೆ ಈ ಕೆಳಗಿನ ಯಾವ ಶಿಕ್ಷೆಯನ್ನು ವಿಧಿಸಲಾಗುತ್ತದೆ?**

1) ಎರಡು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ / ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

2) ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ / ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

3) ಆರು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ / ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

4) ಮೂರು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ / ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

**167) ಮತದಾನ ಕೇಂದ್ರದಿಂದ ಮತಪತ್ರವನ್ನು ಕೊಂಡೊಯ್ದ ಸಂದರ್ಭದಲ್ಲಿ ಈ ಕೆಳಗಿನ ಯಾವ ಕ್ರಮಗಳನ್ನು ಕೈಗೊಳ್ಳತಕ್ಕದ್ದು.**

1) ಯಾವುದೇ ವ್ಯಕ್ತಿ ಮತ ಪತ್ರವನ್ನು ತೆಗೆದುಕೊಂಡು ಹೋಗಿದ್ದಾನೆಂದು ನಂಬಲು ಕಾರಣವಿದ್ದರೆ ಪ್ರಿಸೈಡಿಂಗ್ ಆಫೀಸರ್‌ರವರು ಅನುಮಾನಸ್ಪದ ವ್ಯಕ್ತಿಯನ್ನು ತಪಾಸಣೆ ಒಳಪಡಿಸಿದ ನಂತರ ದೊರೆತ ಯಾವುದೇ ಮತ ಪತ್ರವನ್ನು ಪೋಲೀಸರ ಅಭಿರಕ್ಷೆಗೆ ನೀಡುವುದು ಹಾಗೂ ಆ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು.

2) ಅನುಮಾನಾಸ್ಪದ ವ್ಯಕ್ತಿಯು ಮಹಿಳೆಯಾಗಿದ್ದರೆ ಮಹಿಳೆಯರಿಂದಲೇ ತಪಾಸಣೆ ಮಾಡಸಬೇಕು & ಸಭ್ಯತೆಗೆ ಧಕ್ಕೆ ಬರದಂತೆ ಕಾಪಾಡಬೇಕು.

3) ಶೋಧನೆಯ ನಂತರ ದಸ್ತಗಿರಿಯ ಆದ ವ್ಯಕ್ತಿಯ ಬಳಿ ಸಿಕ್ಕಿದ ಯಾವುದೇ ಮತ ಪತ್ರವನ್ನು ಪೊಲೀಸ್ ಅಧಿಕಾರಿಗಳು ತಮ್ಮ ಅಭಿರಕ್ಷೆಯಲ್ಲಿಟ್ಟಿರಬೇಕು.

4) ಮೇಲಿನ ಎಲ್ಲಾ ಕ್ರಮಗಳನ್ನು ಅನುಸರಿಸಬೇಕು.

**168) ಮತಪತ್ರ ಅಕ್ರಮವಾಗಿ ಕೊಂಡೊಯ್ಯುವುದು ಈ ಕೆಳಗಿನ ಯಾವ ವಿಧದ ಅಪರಾಧವಾಗಿದೆ.**

1) ಸಂಜ್ಞೆ ಅಪರಾಧವಾಗಿದೆ

2) ಅಸಂಜ್ಞೆ ಅಪರಾಧವಾಗಿದೆ

3) 1 ಮತ್ತು 2

4) 1 ಅಥವಾ 2

**ಉತ್ತರಗಳು:-** 164) 1 165) 4 165ಎ) 1 166) 2 167) 4 168) 1



Scanned by CamScanner

chanakyaloka.com



## ಪ್ರಕರಣ-33. ಇತರೆ ಅಪರಾಧಗಳು & ದಂಡನೆಗಳು

**169) ಪ್ರಕರಣ 33 ಏನನ್ನು ತಿಳಿಸುತ್ತದೆ?**

1) ಇತರೆ ಅಪರಾಧಗಳು & ದಂಡನೆಗಳು

2) ಮತಗಟ್ಟೆಗೆ ಅಕ್ರಮವಾಗಿ ಪ್ರವೇಶಿಸುವುದು

3) ಅಧ್ಯಕ್ಷರ ಅಧಿಕಾರವಧಿ 4) ಸದಸ್ಯರ ರಾಜೀನಾಮೆ

**170) ಪ್ರಕರಣ 33ರ ಅನ್ವಯ ಈ ಕೆಳಗಿನ ಯಾವ ಕೃತ್ಯವನ್ನು ಮತದಾರರು ಎಸಗಿದರೆ ಅಪರಾಧ ಎನಿಸುತ್ತದೆ?**

1)ನಾಮ ಪತ್ರವನ್ನು ಮೋಸದಿಂದ ವಿರೂಪಗೊಳಿಸುವುದು, ರಿಟರ್ನಿಂಗ್ ಆಫೀಸರ್ ಅಂಟಿಸಿದ ಯಾವುದೇ ಪಟ್ಟಿಯನ್ನು ವಿರೂಪಗೊಳಿಸುವುದು.

2) ಅಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಬೇರೆ ವ್ಯಕ್ತಿಗೆ ಸರಬರಾಜು ಮಾಡುವುದು.

3) ಕಾನೂನಿನ ಪ್ರಕಾರ ತಾನು ಹಾಕಲು ಅಧಿಕೃತವಾಗಿರುವ ಮತಪತ್ರದ ಬದಲಿಗೆ ಬೇರೆಯಾವುದನ್ನಾದರೂ ಮತಪೆಟ್ಟಿಗೆಗೆ ಹಾಕುವುದು

4) ಮೇಲಿನ ಎಲ್ಲವೂ

**171) 33ನೇ ಪ್ರಕರಣದಲ್ಲಿ ಚುನಾವಣೆಗೆ ನಿಯೋಜನೆಗೊಂಡ ಅಧಿಕಾರಿ ಅಪರಾಧ ಎಸಗಿದರೆ ಶಿಕ್ಷೆ?**

1) 6 ತಿಂಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ದಂಡನೆ/ ಎರಡರಿಂದಲೂ ದಂಡಿತನಾಗತಕ್ಕದ್ದು

2) 2 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ ದಂಡನೆ/ಎರಡರಿಂದಲೂ ದಂಡಿತನಾಗತಕ್ಕದ್ದು

3) 3 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ ದಂಡನೆ/ಎರಡರಿಂದಲೂ ದಂಡಿತನಾಗತಕ್ಕದ್ದು

4) 5 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ ದಂಡನೆ/ಎರಡರಿಂದಲೂ ದಂಡಿತನಾಗತಕ್ಕದ್ದು

**172) 33 ನೇ ಪ್ರಕರಣದಲ್ಲಿ ಮತದಾರನು ಎಸಗಿದ ಇತರೆ ಅಪರಾಧಗಳಿಗೆ ಸಂಬಂಧಿಸಿದ ಶಿಕ್ಷೆ ಏನು?**

1) 6 ತಿಂಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ದಂಡನೆ/ ಎರಡರಿಂದಲೂ ದಂಡಿತನಾಗತಕ್ಕದ್ದು

2) 2 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ ದಂಡನೆ/ಎರಡರಿಂದಲೂ ದಂಡಿತನಾಗತಕ್ಕದ್ದು

3) 3 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ ದಂಡನೆ/ಎರಡರಿಂದಲೂ ದಂಡಿತನಾಗತಕ್ಕದ್ದು

4) 5 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ/ ದಂಡನೆ/ಎರಡರಿಂದಲೂ ದಂಡಿತನಾಗತಕ್ಕದ್ದು.

## ಪ್ರಕರಣ-34. ಚುನಾವಣೆ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವ ವನ್ನು ಉತ್ತೇಜಿಸುವುದು

**173) 34ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1) ಜಾತಿ, ಜನಾಂಗ, ಧರ್ಮನಡುವೆ ಚುನಾವಣಾ ಸಂಬಂಧ ವೈರತ್ವ ಉಂಟು ಮಾಡುವುದು, ಪ್ರಚೋದಿಸುವುದು, ಅಪರಾಧವೆಂದು ತಿಳಿಸುತ್ತದೆ.

2) ಚುನಾವಣೆಯಲ್ಲಿ ಅಕ್ರಮ ಎಸಗುವುದು ಅಪರಾಧ ಎಂದು ತಿಳಿಸುತ್ತದೆ.

3) ಚುನಾವಣೆಯಲ್ಲಿ ಮದ್ಯಪಾನ ಹಂಚುವುದು ಅಪರಾಧ ಎಂದು ಹೇಳುತ್ತದೆ.

4) ಚುನಾವಣೆಯಲ್ಲಿ ರಾಜಕೀಯ ಪ್ರಭಾವ ಬೀರುವುದು ಅಪರಾಧ ಎಂದು ತಿಳಿಸುತ್ತದೆ.

**174) ಚುನಾವಣೆ ಸಂದರ್ಭದಲ್ಲಿ ಜನಾಂಗ, ವರ್ಗಗಳ ಮಧ್ಯೆ ವೈರತ್ವವನ್ನು ಉತ್ತೇಜಿಸುವುದಕ್ಕೆ ಈ ಕೆಳಗಿನ ಯಾವ ಶಿಕ್ಷೆಯನ್ನು ವಿಧಿಸಲಾಗುತ್ತದೆ?**

1) ಎರಡು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ/ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

2) ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ/ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

3) ಆರು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ/ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

4) ಮೂರು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಜೈಲುವಾಸ/ಜುಲ್ಮಾನೆ ಎರಡರಿಂದಲೂ ದಂಡಿಸತಕ್ಕದ್ದು.

## ಪ್ರಕರಣ-35. ಚುನಾವಣಾ ದಿವಸದ ಹಿಂದಿನ ದಿವಸದಂದು & ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ

**175) ಪ್ರಕರಣ-35 ಏನನ್ನು ತಿಳಿಸುತ್ತದೆ?**

1) ಚುನಾವಣಾ ದಿವಸದ ಹಿಂದಿನ ದಿವಸದಂದು & ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ

2)ಚುನಾವಣಾ ದಿವಸದ ಹಿಂದಿನ ದಿವಸದಂದು & ಚುನಾವಣಾ ದಿವಸದಂದು ಜಾತ್ರೆಯ ನಿಷೇಧ

3)ಚುನಾವಣಾ ದಿವಸದ ಹಿಂದಿನ ವಾರದಂದು & ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ

4)ಚುನಾವಣಾ ದಿವಸದ ಹಿಂದಿನ ಮೂರು ದಿನಗಳು & ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ

**ಉತ್ತರಗಳು:-** 169) 1 170) 4 171) 2 172) 1 173) 1 174) 4 175) 1



Scanned by CamScanner

176) ಮತದಾನ ಪ್ರಾರಂಭವಾಗುವ ದಿನಾಂಕಕ್ಕೆ ಎಷ್ಟು ಗಂಟೆ ಮುಂಚಿತವಾಗಿ ಯಾವುದೇ ಸಭೆಗಳನ್ನು ಕರೆಯತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ ಅಥವಾ ಹಾಜರಾಗತಕ್ಕದ್ದಲ್ಲ?

1) 24ಗಂಟೆ 2) 48ಗಂಟೆ
3) 25ಗಂಟೆ 4) 30ಗಂಟೆ

177) ಮತದಾನ ಪ್ರಾರಂಭವಾಗುವ ಮುನ್ನಾ ದಿನ ಮತ್ತು ಆ ದಿನದಂದು ಸಾರ್ವಜನಿಕ ಸಭೆ ಕರೆಯುವ ನಿಷೇಧವನ್ನು ಉಲ್ಲಂಘಿಸಿದರೆ ಈ ಕೆಳಗಿನ ಯಾವ ದಂಡ ವಿಧಿಸಲಾಗುತ್ತದೆ?

1) 250ರೂ 2) 350ರೂ
3) 400ರೂ 4) 500ರೂ

**ಪ್ರಕರಣ-36. ಚುನಾವಣಾ ದಿನದಂದು ಜಾತ್ರೆ ಇತ್ಯಾದಿಗಳನ್ನು ನಿಷೇಧಿಸಲು ಡೆಪ್ಯೂಟಿ ಕಮೀಷನರ್‌ರವರಿಗೆ ಇರುವ ಅಧಿಕಾರಗಳು**

178) ಪ್ರಕರಣ-36 ಈ ಕೆಳಗಿನ ಯಾವ ವಿಷಯವನ್ನು ಪ್ರಸ್ತಾಪಿಸುತ್ತದೆ?

1)ಚುನಾವಣಾ ದಿನದಂದು ಪಂಚಾಯತಿ ಪ್ರದೇಶದಲ್ಲಿ ಯಾವುದೇ ಜಾತ್ರೆ ಅಥವಾ ಸಂತೆಯನ್ನು ಡೆಪ್ಯೂಟಿ ಕಮೀಷನರ್‌ರವರು ನಿಷೇಧಿಸುವ ಅಧಿಕಾರ ಹೊಂದಿರುತ್ತಾರೆ.

2)ಚುನಾವಣಾ ದಿನದಂದು ಪಂಚಾಯತಿ ಪ್ರದೇಶದಲ್ಲಿ ಯಾವುದೇ ಜಾತ್ರೆ ಅಥವಾ ಸಂತೆಯನ್ನು ಕಮೀಷನರ್‌ರವರು ನಿಷೇಧಿಸುವ ಅಧಿಕಾರ ಹೊಂದಿರುತ್ತಾರೆ.

3)ಚುನಾವಣಾ ದಿನದಂದು ಪಂಚಾಯತಿ ಪ್ರದೇಶದಲ್ಲಿ ಯಾವುದೇ ಜಾತ್ರೆ ಅಥವಾ ಸಂತೆಯನ್ನು ತಹಸೀಲ್ದಾರರವರು ನಿಷೇಧಿಸುವ ಅಧಿಕಾರ ಹೊಂದಿರುತ್ತಾರೆ.

4)ಚುನಾವಣಾ ದಿನದಂದು ಪಂಚಾಯತಿ ಪ್ರದೇಶದಲ್ಲಿ ಯಾವುದೇ ಜಾತ್ರೆ ಅಥವಾ ಸಂತೆಯನ್ನು ಸಿವಿಲ್ ನ್ಯಾಯಾಧೀಶ(ಕಿರಿಯ ವರ್ಗ)ರವರು ನಿಷೇಧಿಸುವ ಅಧಿಕಾರ ಹೊಂದಿರುತ್ತಾರೆ.

**ಪ್ರಕರಣ-37. ಚುನಾವಣಾ ಸಭೆಯಲ್ಲಿ ಗಲಭೆ**

179) ಪ್ರಕರಣ-37 ಏನನ್ನು ತಿಳಿಸುತ್ತದೆ?

1) ಚುನಾವಣಾ ವಿಧಾನ 2)ಚುನಾವಣಾ ಅಕ್ರಮ
3) ಚುನಾವಣಾ ಸಭೆಯಲ್ಲಿ ಗಲಭೆ
4) ಚುನಾವಣಾ ಫಲಿತಾಂಶ ಘೋಷಣೆ

180) 37ರ ಪ್ರಕರಣದ ಅನ್ವಯ ಚುನಾವಣಾ ಸಂಬಂಧದಲ್ಲಿ ನಡೆದ ಸಭೆಯಲ್ಲಿ ಅಡ್ಡಿ ಉಂಟು ಮಾಡಿದರೆ ಅನುಚಿತವಾಗಿ ನಡೆದುಕೊಂಡರೆ ಎಷ್ಟು ದಂಡ ಕಟ್ಟಬೇಕಾಗುತ್ತದೆ?

1) 1500ರೂ 2) 600ರೂ
3) 800ರೂ 4) 500ರೂ

181) ಚುನಾವಣೆ ಸಂಬಂಧಿಸಿದಂತೆ ನಡೆಸಿದ ಸಾರ್ವಜನಿಕ ಸಭೆಗೆ ಅಡ್ಡಿ ಉಂಟು ಮಾಡಿದರೆ ಪೋಲೀಸ್ ಅಧಿಕಾರಿಯು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

1) ಅಪರಾಧ ಮಾಡಿರುವ ಯಾವುದೇ ವ್ಯಕ್ತಿಯ ಬಗ್ಗೆ ಸಂಶಯ ಪಟ್ಟರೆ ಆ ವ್ಯಕ್ತಿಯ ಹೆಸರು & ವಿಳಾಸವನ್ನು ಕೂಡಲೆ ತಿಳಿಸಲು ಅಗತ್ಯಪಡಿಸಬಹುದು

2) ವ್ಯಕ್ತಿಯು ಹೆಸರು & ವಿಳಾಸವನ್ನು ಹೇಳಲು ನಿರಾಕರಿಸಿದರೆ ವಾರೆಂಟ್ ಇಲ್ಲದೆ ಬಂಧಿಸಬಹುದು.

3) ವ್ಯಕ್ತಿಯು ಸುಳ್ಳು ವಿಳಾಸವನ್ನು ಕೊಟ್ಟಿದ್ದಾನೆಂದು ಸಂಶಯ ಪಟ್ಟಿದ್ದರೆ ಪೊಲೀಸ್ ಅಧಿಕಾರಿಗಳು ವಾರೆಂಟ್ ಇಲ್ಲದೆ ಬಂಧಿಸಬಹುದು.

4) ಮೇಲಿನ ಎಲ್ಲವೂ

182) ಚುನಾವಣೆಯ ಸಂದರ್ಭದಲ್ಲಿ ಗಲಭೆಯಲ್ಲಿ ವ್ಯಕ್ತಿಯು ತಪ್ಪು ವಿಳಾಸ ನೀಡಿದರೆ, ಪೊಲೀಸ್ ಅಧಿಕಾರಿಯು ಈ ಕೆಳಗಿನ ಯಾವ ಕ್ರಮವನ್ನು ಕೈಗೊಳ್ಳಬಹುದು?

1) ವಾರೆಂಟ್ ಇಲ್ಲದೇ ದಸ್ತಗಿರಿ ಮಾಡಬಹುದು
2) ವಾರೆಂಟ್ ಸಹಿತ ದಸ್ತಗಿರಿ ಮಾಡಬಹುದು
3) ವಿಚಾರಣೆ ನಡೆಸಿ ದಸ್ತಗಿರಿ ಮಾಡಬಹುದು
4) ದಸ್ತಗಿರಿ ಮಾಡುವಂತಿಲ್ಲ.

**ಪ್ರಕರಣ-38. ಕಿರುಹೊತ್ತಿಗೆಗಳು, ಭಿತ್ತಿಪತ್ರಗಳು ಮುಂತಾದವು ಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧ**

183) ಪ್ರಕರಣ-38 ಏನನ್ನು ತಿಳಿಸುತ್ತದೆ?

1)ಯಾವುದೇ ವ್ಯಕ್ತಿಯು ಮುದ್ರಕರ ಹಾಗೂ ಪ್ರಕಾಶಕರ ಹೆಸರಿಲ್ಲದ ಚುನಾವಣಾ ಕಿರುಹೊತ್ತಿಗೆಗಳು, ಭಿತ್ತಿಪತ್ರಗಳು ಮುಂತಾದವುಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧ

2)ಚುನಾವಣೆ ಸಂದರ್ಭದಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ಬಗ್ಗೆ ನಿರ್ಬಂಧ ಹೇರುತ್ತದೆ.

3)ಚುನಾವಣೆ ಸಂದರ್ಭದಲ್ಲಿ ಗಲಭೆಗಳ ಬಗ್ಗೆ ತಿಳಿಸುತ್ತದೆ

4)ಅಪರಾಧಗಳ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ಬಗ್ಗೆ ತಿಳಿಸುತ್ತದೆ.

**ಉತ್ತರಗಳು:-** 176) 2 177) 1 178) 1 179) 3 180) 4 181) 4 182) 1 183) 1



Scanned by CamScanner

184) ಮುದ್ರಕರು ಯಾವುದೇ ದಾಸ್ತಾವೇಜನ್ನು ಮುದ್ರಿಸದ ತರುವಾಯ ಸೂಕ್ತ ಕಾಲದೊಳಗೆ ಘೋಷಣೆಯ ಒಂದು ಪ್ರತಿಯನ್ನು ದಾಸ್ತಾವೇಜನ ಒಂದು ಪ್ರತಿಯೊಂದಿಗೆ.............ರವರಿಗೆ ಕಳುಹಿಸದ ಹೊರತು ಮುದ್ರಿಸತಕ್ಕದ್ದಲ್ಲ.

1) ಜಿಲ್ಲಾಮ್ಯಾಜಿಸ್ಟ್ರೇಟರ್ 2) ಕೇಂದ್ರ ಚು. ಆಯೋಗ
3) ರಾಜ್ಯ ಚುನಾವಣಾ ಆಯೋಗ
4) ಅಸಿಸ್ಟಂಟ್ ಕಮೀಷನರ್

185) ಮುದ್ರಕನು ಯಾವುದೇ ಚುನಾವಣಾ ಕಿರುಹೊತ್ತಿಗೆಯನ್ನು ಅಥವಾ ಭಿತ್ತಿ ಪತ್ರವನ್ನು ಮುದ್ರಿಸುವ ಸಂದರ್ಭದಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸತಕ್ಕದ್ದು.

1) ಪ್ರಕಾಶಕನ ಗುರುತಿನ ಬಗ್ಗೆ ರುಜು ಮಾಡಿರುವ ಘೋಷಣೆಯನ್ನು ಪಡೆಯತಕ್ಕದ್ದು.
2) ತಾನು ಬಲ್ಲ ಇಬ್ಬರು ವ್ಯಕ್ತಿಗಳು ಅನುಪ್ರಮಾಣಿಸಿದ ಘೋಷಣೆಯನ್ನು ಮುದ್ರಕನು ದ್ವಿಪ್ರತಿಯಲ್ಲಿ ಪಡೆಯಬೇಕು.
3) ಪ್ರಕಾಶಕನ ವಿಳಾಸ, ಹೆಸರು ಒಳಗೊಂಡ ಮಾಹಿತಿಯನ್ನು ಪಡೆದಿರಬೇಕು.
4) ಮೇಲಿನ ಎಲ್ಲಾ ಕ್ರಮ ಅನುಸರಿಸಬೇಕು.

186) ಕಿರಿಹೊತ್ತಿಗೆಗಳು, ಭಿತ್ತಿಪತ್ರಗಳನ್ನು ಮುದ್ರಕರ ಅಥವಾ ಪ್ರಕಾಶಕರ ಹೆಸರಿಲ್ಲದೆ ಮುದ್ರಿಸಿದರೆ ದಂಡನೆ

1) ಆರು ತಿಂಗಳು ಸೆರೆವಾಸ ಅಥವಾ 2000ರೂವರೆಗೆ ದಂಡ ಅಥವಾ ಎರಡನ್ನು ವಿಧಿಸಬಹುದು.
2) ಆರು ತಿಂಗಳು ಸೆರೆವಾಸ ಅಥವಾ 1000ರೂವರೆಗೆ ದಂಡ ಅಥವಾ ಎರಡನ್ನು ವಿಧಿಸಬಹುದು.
3) ಮೂರು ತಿಂಗಳು ಸೆರೆವಾಸ ಅಥವಾ 1000ರೂವರೆಗೆ ದಂಡ ಅಥವಾ ಎರಡನ್ನು ವಿಧಿಸಬಹುದು.
4) ಆರು ತಿಂಗಳು ಸೆರೆವಾಸ ಅಥವಾ 3000ರೂವರೆಗೆ ದಂಡ ಅಥವಾ ಎರಡನ್ನು ವಿಧಿಸಬಹುದು.

## ಪ್ರಕರಣ-39. ಚುನಾವಣೆಯಲ್ಲಿ ಕಾನೂನು ವಿರುದ್ಧವಾಗಿ ವಾಹನವನ್ನು ಬಾಡಿಗೆ ಪಡೆಯುವುದಕ್ಕೆ ಅಥವಾ ಒದಗಿಸುವುದಕ್ಕೆ ದಂಡನೆ

187) 39ನೇ ಪ್ರಕರಣವು ಏನನ್ನು ತಿಳಿಸುತ್ತದೆ?

1) ಯಾವುದೇ ಅಭ್ಯರ್ಥಿಯು ಯಾವುದೇ ವಾಹನವನ್ನು ಯಾವುದೇ ಮತದಾರನನ್ನು ಉಚಿತವಾಗಿ ಮತಕೇಂದ್ರಕ್ಕೆ ಕರೆದು ತರಲು ಅಥವಾ ಹಿಂತಿರುಗಿಸಿದ ಅಪರಾಧಕ್ಕೆ ದಂಡನೆಯನ್ನು ತಿಳಿಸುತ್ತದೆ.
2) ಮಧ್ಯಪಾನ ಸರಬರಾಜು ಮಾಡಿದ್ದಕ್ಕೆ ದಂಡನೆ
3) ಅಪರಾಧಗಳಿಗೆ ಸಂಬಂಧಿಸಿದ ಪ್ರಾಸಿಕ್ಯೂಶನ್
4) ಹುದ್ದೆಯ ಅವಧಿ

188) ಚುನಾವಣೆಗಳಲ್ಲಿ ವಾಹನ ಬಾಡಿಗೆ ಪಡೆಯುವುದು & ಭ್ರಷ್ಟಾಚಾರವೆಂದು ಈ ಕೆಳಗಿನ ಯಾವ ಪ್ರಕರಣದಲ್ಲಿ ತಿಳಿಸಲಾಗಿದೆ?

1) ಪ್ರಕರಣ-22 ರ ಉಪ ಪ್ರಕರಣ 6 ರಲ್ಲಿ ತಿಳಿಸಿದೆ.
2) ಪ್ರಕರಣ-24 ರ ಉಪ ಪ್ರಕರಣ 6 ರಲ್ಲಿ ತಿಳಿಸಿದೆ.
3) ಪ್ರಕರಣ-20 ರ ಉಪ ಪ್ರಕರಣ 6 ರಲ್ಲಿ ತಿಳಿಸಿದೆ.
4) ಪ್ರಕರಣ-25 ರ ಉಪ ಪ್ರಕರಣ 6 ರಲ್ಲಿ ತಿಳಿಸಿದೆ.

189) ವಾಹನಗಳನ್ನು ಚುನಾವಣಾ ಸಂದರ್ಭದಲ್ಲಿ ಮತದಾರರಿಗೆ ಒದಗಿಸಿದ ಭ್ರಷ್ಟಾಚಾರಕ್ಕಾಗಿ ಈ ಕೆಳಗಿನ ದಂಡನೆ ವಿಧಿಸಲಾಗುತ್ತದೆ?

1) 600ರೂ ದಂಡ 2)100ರೂ ದಂಡ
3) 500ರೂದಂಡ 4)700ರೂ ದಂಡ

## ಪ್ರಕರಣ-40. ಕೆಲವು ಅಪರಾಧಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್

190) ಈ ಕೆಳಗಿನ ಯಾವ ಪ್ರಕರಣವನ್ನು ನ್ಯಾಯಾಲಯವು ಡೆಪ್ಯೂಟಿ ಕಮೀಷನರ್‌ರವರ ಆದೇಶ ಇಲ್ಲದ ಹೊರತು ದಂಡನೀಯ ಅಪರಾಧವನ್ನು ಸಂಜ್ಞೆ ಅಪರಾಧ ಎಂದು ಪರಿಗಣಿಸತಕ್ಕದ್ದಲ್ಲ

1) 33ನೇ ಪ್ರಕರಣದ 1ನೇ ಉಪಪ್ರಕರಣದ ಎ ಖಂಡದ ಅಡಿಯಲ್ಲಿನ ಅಪರಾಧ
2) 33ನೇ ಪ್ರಕರಣದ 2ನೇ ಉಪಪ್ರಕರಣದ ಎ ಖಂಡದ ಅಡಿಯಲ್ಲಿನ ಅಪರಾಧ
3) 31ನೇ ಪ್ರಕರಣದ 1ನೇ ಉಪಪ್ರಕರಣದ ಎ ಖಂಡದ ಅಡಿಯಲ್ಲಿನ ಅಪರಾಧ
4) 23ನೇ ಪ್ರಕರಣದ 1ನೇ ಉಪಪ್ರಕರಣದ ಎ ಖಂಡದ ಅಡಿಯಲ್ಲಿನ ಅಪರಾಧ

191) 33ನೇ ಪ್ರಕರಣದ 2ನೇ ಉಪಪ್ರಕರಣದ ಎ ಖಂಡದ ಅಡಿಯಲ್ಲಿನ ಅಪರಾಧ ಏನು ಹೇಳುತ್ತದೆ?

1) ಅಭ್ಯರ್ಥಿ ಪರವಾಗಿ ಸರ್ಕಾರಿ ಅಧಿಕಾರಿ ಮತ ಪ್ರಚಾರ ಮಾಡುವುದು.
2) ಅಭ್ಯರ್ಥಿ ಗೆಲ್ಲಲು ಸರ್ಕಾರಿ ಅಧಿಕಾರಿ ಏಜೆಂಟ್ ಆಗುವುದು
3) ಚುನಾವಣೆಯಲ್ಲಿ ಸರ್ಕಾರಿ ಅಧಿಕಾರಿ ಅಕ್ರಮ ಎಸಗುವುದು.
4) ಮತದಾನ ಕೇಂದ್ರದ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿದ್ದರೆ ಚುನಾವಣೆ ಸಂಬಂಧಪಟ್ಟ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜನೆಗೊಂಡ ಇತರೆ ಯಾವುದೇ ಅಧಿಕಾರಿಯು 33ನೇ ಪ್ರಕರಣದ ಅಡಿಯಲ್ಲಿ ಬರುವ ಅಪರಾಧ ಎಸಗಿದಾಗ ಎರಡು ವರ್ಷದ ಅವಧಿಯ ಸೆರೆವಾಸ / ಜುಲ್ಮಾನೆ / ಅವೆರಡರಿಂದಲೂ ದಂಡಿಸತಕ್ಕದ್ದು.

ಉತ್ತರಗಳು:- 184) 1 185) 4 186) 2 187) 1 188) 1 189) 3 190) 2 191) 4



Scanned by CamScanner

## ಪ್ರಕರಣ-41. ಹುದ್ದೆಯ ಅವಧಿ

**192) ಪ್ರಕರಣ-41 ಏನನ್ನು ತಿಳಿಸುತ್ತದೆ?**

1) ಜಿ.ಪ ಸದಸ್ಯರ ಹುದ್ದೆಯ ಅವಧಿ ಬಗ್ಗೆ ತಿಳಿಸುತ್ತದೆ.
2) ತಾ.ಪ ಸದಸ್ಯರ ಹುದ್ದೆಯ ಅವಧಿ ಬಗ್ಗೆ ತಿಳಿಸುತ್ತದೆ.
3) ಗ್ರಾಮ ಪಂಚಾಯಿತಿ ಸದಸ್ಯರ ಹುದ್ದೆಯ ಅವಧಿ ಬಗ್ಗೆ ತಿಳಿಸುತ್ತದೆ
4) ಗ್ರಾಮ ಪಂಚಾಯಿತಿ ಸ್ಥಾಯಿ ಸಮಿತಿ ಸದಸ್ಯರ ಹುದ್ದೆಯ ಅವಧಿ

**193) ಗ್ರಾಮ ಪಂಚಾಯಿತಿ ಸದಸ್ಯರ ಹುದ್ದೆಯ ಅವಧಿ**

1) 5ವರ್ಷಗಳು 2) 6ವರ್ಷಗಳು
3) 30ತಿಂಗಳು 4) 4 ವರ್ಷಗಳು

## ಪ್ರಕರಣ-42. ಹುದ್ದೆಯ ಅವಧಿಯ ಪ್ರಾರಂಭ

**194) 42ನೇ ಪ್ರಕರಣವು ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂ. ಸದಸ್ಯರ ಹುದ್ದೆಯ ಅವಧಿಯ ಪ್ರಾರಂಭ
2) ಗ್ರಾಮ ಪಂಚಾಯಿತಿ ಸ್ಥಾಯಿ ಸಮಿತಿ ಸದಸ್ಯರ ಹುದ್ದೆಯ ಅವಧಿ ಆರಂಭ
3) ಗ್ರಾಮ ಪಂ. ಅಧ್ಯಕ್ಷರ ಹುದ್ದೆಯ ಅವಧಿ ಆರಂಭ
4) ಗ್ರಾಮ ಪಂ. ಉಪಾಧ್ಯಕ್ಷರ ಹುದ್ದೆಯ ಅವಧಿ ಆರಂಭ

**195) ಹೊಸದಾಗಿ ಆಯ್ಕೆಯಾದ ಗ್ರಾ.ಪ ಸದಸ್ಯರ ಹುದ್ದೆಯ ಅವಧಿಯು ಈ ಕೆಳಗಿನ ದಿನಾಂಕದಿಂದ ಆರಂಭವಾಗುತ್ತದೆ?**

1) ಚುನಾವಣೆಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ
2) ಸದಸ್ಯನು ಪ್ರಮಾಣ ವಚನ ಸ್ವೀಕರಿಸಿದ ದಿನಾಂಕದಿಂದ
3) ಗ್ರಾಮ ಪಂಚಾಯತಿಯು ಪ್ರಥಮ ಸಭೆಗೆ ಗೊತ್ತು ಪಡಿಸಿದ ದಿನಾಂಕದಂದು ಆರಂಭವಾಗುತ್ತದೆ.
4) ಗ್ರಾ. ಪಂ. ಸದಸ್ಯರ ಹೆಸರು ಪ್ರಕಟವಾದ ದಿನಾಂಕದಿಂದ

**196) ಮರು ಚುನಾವಣೆ ಮೂಲಕ ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬಿದಾಗ ಚುನಾಯಿತ ಸದಸ್ಯನ ಅಧಿಕಾರಾವಧಿಯು ಆರಂಭವಾಗುವುದು**

1) ಚುನಾವಣೆಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ
2) ಸದಸ್ಯನು ಪ್ರಮಾಣ ವಚನ ಸ್ವೀಕರಿಸಿದ ದಿನಾಂಕದಿಂದ
3) ಗ್ರಾಮ ಪಂಚಾಯತಿಯು ಪ್ರಥಮ ಸಭೆಗೆ ಗೊತ್ತು ಪಡಿಸಿದ ದಿನಾಂಕದಂದು ಆರಂಭವಾಗುತ್ತದೆ.
4) ಗ್ರಾಮ ಪಂಚಾಯತಿಯ ಸದಸ್ಯನ ಹೆಸರು ಪ್ರಕಟವಾದ ದಿನಾಂಕದಿಂದ

## ಪ್ರಕರಣ-43. ಸದಸ್ಯರ ರಾಜೀನಾಮೆ

**197) ಪ್ರಕರಣ-43 ಏನನ್ನು ತಿಳಿಸುತ್ತದೆ?**

1) ಗ್ರಾ.ಪ ಅಧ್ಯಕ್ಷರ ರಾಜೀನಾಮೆ
2) ಗ್ರಾಮ ಪಂಚಾಯತಿ ಸದಸ್ಯರ ರಾಜೀನಾಮೆ ಬಗ್ಗೆ
3) ಗ್ರಾ.ಪ ಉಪಾಧ್ಯಕ್ಷರ ರಾಜೀನಾಮೆ
4) ಗ್ರಾ.ಪ ಕಾರ್ಯದರ್ಶಿ ರಾಜೀನಾಮೆ

**198) ಗ್ರಾಮ ಪಂಚಾಯಿತಿ ಸದಸ್ಯನು ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ಈ ಕೆಳಗಿನವರಿಗೆ ಬರಹದಲ್ಲಿ ಬರೆದು ರಾಜೀನಾಮೆಯನ್ನು ಕೊಡಬಹುದು.**

1) ಗ್ರಾ.ಪ ಕಾರ್ಯದರ್ಶಿಗೆ
2) ಅಸಿಸ್ಟೆಂಟ್ ಕಮೀಷನರ್‌ಗೆ
3) ಕಾರ್ಯನಿರ್ವಹಣಾಧಿಕಾರಿಗೆ 4) ಗ್ರಾ.ಪ ಅಧ್ಯಕ್ಷರಿಗೆ

**199) ಗ್ರಾಮ ಪಂಚಾಯಿತಿ ಸದಸ್ಯನು ತನ್ನ ರಾಜೀನಾಮೆ ನೀಡಿದ ಎಷ್ಟು ದಿನದೊಳಗಾಗಿ ತನ್ನ ಸಹಿ ಸಹಿತ ಅಧ್ಯಕ್ಷರಿಂದ ಹಿಂಪಡೆಯದಿದ್ದರೆ ಸದಸ್ಯನ ಸ್ಥಾನ ತೆರವಾಗುತ್ತದೆ?**

1) 10ದಿನ 2) 15ದಿನ 3) 20ದಿನ 4) 30ದಿನ

**200) ಸದಸ್ಯರ ರಾಜೀನಾಮೆಯನ್ನು ಅಧ್ಯಕ್ಷನು ಈ ಕೆಳಗಿನ ಯಾವ ಸಭೆಯಲ್ಲಿ ಮಂಡಿಸುವಂತೆ ಮಾಡತಕ್ಕದ್ದು**

1) ಗ್ರಾಮ ಸಭೆ 2) ವಾರ್ಡ್ ಸಭೆ
3) ಗ್ರಾಮ ಪಂಚಾಯತಿ ಸಭೆ
4) ತಾಲ್ಲೂಕು ಪಂಚಾಯಿತಿ ಸಭೆ

## ಪ್ರಕರಣ-43 ಎ. ದುರ್ನಡತೆಗಾಗಿ ಸದಸ್ಯರನ್ನು ತೆಗೆದು ಹಾಕುವುದು

**201) ಪ್ರಕರಣ-43ಎ ಏನನ್ನು ತಿಳಿಸುತ್ತದೆ?**

1) ಯಾವುದೇ ಸದಸ್ಯನು ತನ್ನ ಕರ್ತವ್ಯ ನಿರ್ವಹಿಸುವಲ್ಲಿ ದುರ್ನಡತೆ/ಅಪಕೀರ್ತಿಕರ ನಡತೆಯ ತಪ್ಪಿತಸ್ಥನಾಗಿದ್ದರೆ ಸದಸ್ಯನನ್ನು ತೆಗೆದು ಹಾಕುವುದು.
2) ಸದಸ್ಯರನ್ನು ತಾತ್ಕಾಲಿಕವಾಗಿ ವಜಾ ಮಾಡುವುದು
3) ಸದಸ್ಯರಿಗೆ ಅನುಚಿತ ವರ್ತನೆಗೆ ದಂಡ ವಿಧಿಸುವುದು.
4) ಸದಸ್ಯರಿಗೆ ಅನುಚಿತ ವರ್ತನೆಗೆ 2 ವರ್ಷ ಕಾರಾಗೃಹ ಶಿಕ್ಷೆ ವಿಧಿಸುವುದು.

**ಉತ್ತರಗಳು:**-192) 3 193) 1 194) 1 195) 3 196) 4 197) 2 198) 4 199) 2 200) 3 201) 1



Scanned by CamScanner

# ಚಾಣಕ್ಯಲೋಕ

ಪ್ರತಿದಿನ ತಪ್ಪದೇ ವಿಜಯವಾಣಿ ಮಿನಿ ಪೇಪರ್, ವಿಜಯ ಕರ್ನಾಟಕ ಮಿನಿ ಪೇಪರ್, ಪ್ರಜಾವಾಣಿ ಮಿನಿ ಪೇಪರ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ಮಾಹಿತಿ ಪಡೆಯಲು ಕೆಳಗೆ ನೀಡಿರುವ ಬಟನ್ ಮೇಲೆ ಕ್ಲಿಕ್ ಮಾಡಿ ಚಾಣಕ್ಯಲೋಕ ಟೆಲಿಗ್ರಾಂ, ವಾಟ್ಸಾಪ್ ಗ್ರೂಪ್‌ಗೆ **Join** ಆಗಿರಿ.

chanakyaloka
Click Here to Join

chanakyaloka
Click Here to Join

chanakyaloka
Click Here to Join

chanakyaloka
chanakyaloka

ನಿರ್ವಾಹಕರು: ಮೋಹನ್ ಶೆಟ್ಟಿ, 9353896440

ಆತ್ಮೀಯ ಸ್ಪರ್ಧಾರ್ಥಿಗಳೇ ನೀವು ಇಟ್ಟಿರುವ ಗುರಿಯನ್ನು ಬಹುಬೇಗ ತಲುಪಿ, ಯಶಸ್ಸು ನಿಮ್ಮದಾಗಲಿ, ಶುಭವಾಗಲಿ ಧನ್ಯವಾದಗಳು.

–ಚಾಣಕ್ಯಲೋಕ.ಕಾಂ ಬಳಗ

202) ಯಾವುದೇ ಸದಸ್ಯನು ತನ್ನ ಕರ್ತವ್ಯ ನಿರ್ವಹಿಸುವಲ್ಲಿ ದುರ್ನಡತೆ/ಅಪಕೀರ್ತಿಕರ ನಡತೆಯ ತಪ್ಪಿತಸ್ಥನಾಗಿದ್ದರೆ ಸದಸ್ಯನನ್ನು ಯಾರು ತೆಗೆದುಹಾಕುತ್ತಾರೆ?

1) ಡೆಪ್ಯೂಟಿ ಕಮೀಷನರ್
2) ಅಸಿಸ್ಟೆಂಟ್ ಕಮೀಷನರ್
3) ಸರ್ಕಾರ 4) ಗ್ರಾಮ ಪಂಚಾಯಿತಿ ಅಧ್ಯಕ್ಷ

203) ಯಾವುದೇ ಸದಸ್ಯನು ತನ್ನ ಕರ್ತವ್ಯ ನಿರ್ವಹಿಸುವಲ್ಲಿ ದುರ್ನಡತೆ/ಅಪಕೀರ್ತಿಕರ ನಡತೆಯ ತಪ್ಪಿತಸ್ಥನಾಗಿದ್ದರೆ ಸದಸ್ಯನನ್ನು ತೆಗೆದು ಹಾಕಲು ಸರ್ಕಾರವು ಈ ಕೆಳಗಿನ ಯಾವ ಕ್ರಮ ಅನುಸರಿಸುತ್ತದೆ?

1) ಗ್ರಾ.ಪಂಯ ಶಿಫಾರಸ್ಸಿನ ಮೇಲೆ ವಜಾಗೊಳಿಸುತ್ತದೆ.
2) ಸದಸ್ಯನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಡುತ್ತದೆ.
3) ಅವಶ್ಯಕವೆಂದು ಭಾವಿಸಿದ್ದರೆ ವಿಚಾರಣೆ ನಡೆಸಿ ಸೂಕ್ತವೆಂದರೆ ವಜಾಗೊಳಿಸುತ್ತದೆ.
4) ಮೇಲಿನ ಎಲ್ಲಾ ಕ್ರಮವನ್ನು ಅನುಸರಿಸುತ್ತದೆ

204) ಯಾವುದೇ ಗ್ರಾಮ ಪಂಚಾಯಿತಿ ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯನನ್ನು ತೆಗೆದುಹಾಕಲಾಗಿದೆ. ಅಂತಹ ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯನು ಆ ಸ್ಥಾನದ ಪ್ರಕಾರ್ಯಗಳನ್ನು ನಿರ್ವಹಿಸುವುದು ನಿಂತು ಹೋಗುತ್ತದೆ & ಮುಂದಿನ ಎಷ್ಟು ವರ್ಷಗಳವರೆಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹನಾಗತಕ್ಕದ್ದು ?

1) 5 ವರ್ಷ 2) 6 ವರ್ಷ
3) 4 ವರ್ಷ 4) 1 ವರ್ಷ

## ಪ್ರಕರಣ-44ಬಿ: ಸದಸ್ಯರಿಂದ ಆಸ್ತಿಗಳ & ಹೊಣೆಗಾರಿಕೆಗಳ ಘೋಷಣೆ

205) ಪ್ರಕರಣ-44 ಬಿ ಏನನ್ನು ತಿಳಿಸುತ್ತದೆ?

1) ಅಧ್ಯಕ್ಷ /ಉಪಾಧ್ಯಕ್ಷರ ರಾಜೀನಾಮೆ
2) ಸದಸ್ಯರಿಂದ ಆಸ್ತಿಗಳ & ಹೊಣೆಗಾರಿಕೆಗಳ ಘೋಷಣೆ 3) ಸದಸ್ಯರನ್ನು ತೆಗೆದು ಹಾಕುವುದು
4) ಸದಸ್ಯರ ರಾಜೀನಾಮೆ

206) ಪ್ರತಿಯೊಬ್ಬ ಸದಸ್ಯನು ತಾನು & ತನ್ನ ಅವಿಭಕ್ತ ಕುಟುಂಬದ ಎಲ್ಲ ಸದಸ್ಯರ ಚರ/ಸ್ಥಿರ ಆಸ್ತಿಯನ್ನು ಯಾವ ಮೊತ್ತಕ್ಕಿಂತ ಹೆಚ್ಚಾಗಿದ್ದರೆ ಘೋಷಿಸಿಕೊಳ್ಳಬೇಕು?

1) 1 ಲಕ್ಷ 2) 5 ಲಕ್ಷ 3) 2 ಲಕ್ಷ 4) 4 ಲಕ್ಷ

207) ಪ್ರತಿಯೊಬ್ಬ ಸದಸ್ಯನು ತನ್ನ ಆಸ್ತಿ ಘೋಷಣೆಯನ್ನು ತನ್ನ ಪದಾವಧಿ ಆರಂಭವಾದ ಎಷ್ಟು ತಿಂಗಳೊಳಗೆ ಮಾಡಿಕೊಳ್ಳಬೇಕು?

1)3ತಿಂಗಳು 2)6ತಿಂಗಳು 3)8ತಿಂಗಳು 4)4 ತಿಂಗಳು

208) ಪ್ರತಿಯೊಬ್ಬ ಸದಸ್ಯನು ತನ್ನ ಆಸ್ತಿ ಘೋಷಣೆಯನ್ನು ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಎಷ್ಟು ತಿಂಗಳೊಳಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಪಿ.ಡಿ.ಓ ಮುಂದೆ ದಾಖಲು ಮಾಡಬೇಕು?

1)1 ತಿಂಗಳು 2)3ತಿಂಗಳು 3)2ತಿಂಗಳು 4)4 ತಿಂಗಳು

209) ಪ್ರತಿಯೊಬ್ಬ ಸದಸ್ಯನು ತನ್ನ ಆಸ್ತಿ ಘೋಷಣೆಯನ್ನು ಈ ಕೆಳಗಿನ ಯಾವ ನಮೂನೆಯಲ್ಲಿ ಘೋಷಿಸಿಕೊಳ್ಳಬೇಕು?

1) ಪಂಚಾಯಿತಿಯು ನಿಯಮಿಸಬಹುದಾದಂತಹ ರೀತಿಯ ನಮೂನೆ
2) ರಾಜ್ಯ ಚುನಾವಣಾ ಆಯೋಗವು ನಿಯಮಿಸಬಹುದಾದಂತಹ ನಮೂನೆ
3) ಕೇಂದ್ರ ಚುನಾವಣಾ ಆಯೋಗ ನಿಯಮಿಸಬಹುದಾದಂತಹ ನಮೂನೆ
4) ರಾಜ್ಯಸರ್ಕಾರ ನಿಯಮಿಸಬಹುದಾದಂತಹ ನಮೂನೆ

210) ಪ್ರತಿಯೊಬ್ಬ ಸದಸ್ಯನು ತನ್ನ ಆಸ್ತಿ ಘೋಷಣೆಯನ್ನು ಈ ಕೆಳಗಿನ ಯಾರಿಗೆ ಸಲ್ಲಿಸಬೇಕು?

1) ಗ್ರಾಮ. ಪಂಚಾಯಿತಿ ಅಧ್ಯಕ್ಷ 2) ಪಿ.ಡಿ.ಓ
3) ಕಾರ್ಯನಿರ್ವಹಣಾಧಿಕಾರಿ
4) ಲೆಕ್ಕ ಪರಿಶೋಧಕ

211) ಗ್ರಾಮ ಪಂಚಾಯಿತಿ ಸದಸ್ಯರು ಸಲ್ಲಿಸಿದ ಆಸ್ತಿ ಘೋಷಣೆಯ ನಮೂನೆಯನ್ನು ಪಿ.ಡಿ.ಓ ಅವರು ಯಾರಿಗೆ ಸಲ್ಲಿಸುತ್ತಾರೆ?

1) ಕೇಂದ್ರ ಚುನಾವಣಾ ಆಯೋಗ 2) ಜಿಲ್ಲಾ ಪಂ.
3) ತಾಲ್ಲೂಕು ಪಂ. 4)ರಾಜ್ಯ ಚುನಾವಣಾ ಆಯೋಗ

212) ಪಿ.ಡಿ.ಓ ಪ್ರತಿಯೊಬ್ಬ ಸದಸ್ಯರು ಆಸ್ತಿ ಘೋಷಣೆ ಮಾಡಿದ ದಾಖಲೆಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಈ ಕೆಳಗಿನ ಎಷ್ಟು ದಿನದೊಳಗೆ ಸಲ್ಲಿಸಬೇಕು?

1) ಪ್ರತಿ ವರ್ಷದ ಮೇ ತಿಂಗಳ ಮೊದಲ ವಾರ
2) ಪ್ರತಿ ವರ್ಷದ ಏಪ್ರಿಲ್ ತಿಂಗಳ ಮೊದಲ ವಾರ
3) ಪ್ರತಿ ವರ್ಷದ ಮಾರ್ಚ್ ತಿಂಗಳ ಕೊನೆಯ ವಾರ
4) ಪ್ರತಿ ವರ್ಷದ ಅಕ್ಟೋಬರ್ ತಿಂಗಳಲ್ಲಿ

ಉತ್ತರಗಳು:- 202)3 203)4 204)2 205)2 206)3 207)1 208)1 209)2 210)2 211)4 212)1



Scanned by CamScanner

**213) ಸದಸ್ಯರು ಆಸ್ತಿ ಘೋಷಣೆಯನ್ನು ತಡವಾಗಿ ದಾಖಲು ಮಾಡಿದ ಸಂದರ್ಭದಲ್ಲಿ ಪಿ.ಡಿ.ಒ ಅವರು ರಾಜ್ಯ ಚುನಾವಣಾ ಆಯೋಗಕ್ಕೆ ಈ ಕೆಳಗಿನ ಎಷ್ಟು ದಿನದೊಳಗೆ ಸಲ್ಲಿಸಬೇಕು?**

1) ಪ್ರತಿ ವರ್ಷದ ಮೇ ತಿಂಗಳ ಮೊದಲ ವಾರ
2) ಪ್ರತಿ ವರ್ಷದ ಜುಲೈ ತಿಂಗಳ ಮೊದಲ ವಾರ
3) ಪ್ರತಿ ವರ್ಷದ ಮಾರ್ಚ್ ತಿಂಗಳ ಕೊನೆಯ ವಾರ
4) ಪ್ರತಿ ವರ್ಷದ ಅಕ್ಟೋಬರ್ ತಿಂಗಳ 2ನೇ ವಾರ

**214) ಹಣಕಾಸು ವರ್ಷ ಮುಕ್ತಾಯವಾಗುವ 2 ತಿಂಗಳ ಮೊದಲು ಸದಸ್ಯರ ಪದಾವಧಿ ಪ್ರಾರಂಭವಾದರೆ, ಅಂತಹ ಸದಸ್ಯರು ಮುಂದಿನ ಹಣಕಾಸು ವರ್ಷ ಪ್ರಾರಂಭವಾದ ನಂತರ ಎಷ್ಟು ತಿಂಗಳೊಳಗೆ ತಮ್ಮ ಘೋಷಣೆಯನ್ನು ದಾಖಲು ಮಾಡತಕ್ಕದ್ದು?**

1)2ತಿಂಗಳು 2)3ತಿಂಗಳು 3)4ತಿಂಗಳು 4)5 ತಿಂಗಳು

**215) ಪ್ರತಿಯೊಬ್ಬ ಸದಸ್ಯನು ತಾನು ಆಸ್ತಿ ಘೋಷಣೆ ಮಾಡಿದ ನಂತರ ಯಾವುದಾದರೂ ಆಸ್ತಿಯನ್ನು ವಿಲೇ ಮಾಡಿದ್ದರೆ ಅಥವಾ ಅರ್ಜಿಸಿದ್ದರೆ ಎಷ್ಟು ದಿನದೊಳಗೆ ಪಿ.ಡಿ.ಒ ಮೂಲಕ ರಾಜ್ಯ ಚುನಾವಣಾ ಆಯೋಗದ ಮೂಲಕ ಮತ್ತೆ ದಾಖಲು ಮಾಡಿಕೊಳ್ಳಬೇಕು?**

1)30 ದಿನ 2)45 ದಿನ 3)15 ದಿನ 4) 40 ದಿನ

**216) ಸದಸ್ಯರು ಆಸ್ತಿ ಘೋಷಣೆಯನ್ನು ನಿಗದಿತ ಅವಧಿಯೊಳಗೆ ದಾಖಲು ಮಾಡದಿದ್ದರೆ ಅಥವಾ ಸುಳ್ಳು ಘೋಷಣೆ ಮಾಡಿರುವುದು ಕಂಡು ಬಂದರೆ, ರಾಜ್ಯ ಚುನಾವಣಾ ಆಯುಕ್ತರು ಈ ಕೆಳಗಿನ ಯಾವ ಕ್ರಮವನ್ನು ಕೈಗೊಳ್ಳಬಹುದು?**

1) ಅಂತಹ ಸದಸ್ಯನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿ ಸದಸ್ಯತ್ವದಿಂದ ತೆಗೆದುಹಾಕುವುದು & ಅವನ ಸ್ಥಾನ ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು

2) ಅಂತಹ ಸದಸ್ಯನ ಸದಸ್ಯತ್ವವನ್ನು ಅಹವಾಲು ಹೇಳಿಕೊಳ್ಳಲು ಅವಕಾಶ ನೀಡದೇ ತೆಗೆದುಹಾಕುವುದು

3) ಅಂತಹ ಸದಸ್ಯನಿಗೆ ಎಚ್ಚರಿಕೆಯನ್ನು ನೀಡಿ ಬೇಗ ಸಲ್ಲಿಸುವಂತೆ ನೋಟೀಸು ನೀಡುವುದು

4) ಅಂತಹ ಸದಸ್ಯನನ್ನು 6 ವರ್ಷ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸುವುದು

## ಪ್ರಕರಣ-44: ಅಧ್ಯಕ್ಷ / ಉಪಾಧ್ಯಕ್ಷರ ಚುನಾವಣೆ

**217) ಪ್ರಕರಣ-44 ಏನನ್ನು ತಿಳಿಸುತ್ತದೆ?**

1) ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಚುನಾವಣೆ
2) ಅಧ್ಯಕ್ಷರ ಚುನಾವಣೆ 3) ಉಪಾಧ್ಯಕ್ಷರ ಚುನಾವಣೆ
4) ಸ್ಥಾಯಿ ಸಮಿತಿ ಚುನಾವಣೆ

**218) ಪ್ರತಿಯೊಂದು ಗ್ರಾಮ ಪಂಚಾಯಿತಿಯು ಗ್ರಾಮ ಪಂಚಾಯಿತಿಯ ಇಬ್ಬರು ಸದಸ್ಯರನ್ನು ಅನುಕ್ರಮವಾಗಿ ಅಧ್ಯಕ್ಷ & ಉಪಾಧ್ಯಕ್ಷರಾಗಿ ಈ ಕೆಳಗಿನ ಅವಧಿಯೊಳಗೆ ಆಯ್ಕೆ ಮಾಡತಕ್ಕದ್ದು**

1) ಚುನಾಯಿತ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ 3ತಿಂಗಳೊಳಗಾಗಿ

2) ಚುನಾಯಿತ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ 1 ತಿಂಗಳೊಳಗಾಗಿ

3) ಚುನಾಯಿತ ಸದಸ್ಯರ ಹೆಸರನ್ನು ಪ್ರಕಟಿಸಿದ 2 ತಿಂಗಳೊಳಗೆ

4) ಚುನಾಯಿತ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ 6 ತಿಂಗಳೊಳಗಾಗಿ

**219) ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಈ ಕೆಳಗಿನ ಯಾರು ಹಂಚಿಕೆ ಮಾಡತಕ್ಕದ್ದು?**

1)ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ /ವಿಶೇಷ ಆದೇಶಕ್ಕೊಳಪಟ್ಟು ಡೆಪ್ಯೂಟಿ ಕಮೀಷನರ್‌ರವರು

2)ರಾಜ್ಯ ಸರ್ಕಾರದ ಸಾಮಾನ್ಯ /ವಿಶೇಷ ಆದೇಶಕ್ಕೊಳಪಟ್ಟು ಡೆಪ್ಯೂಟಿ ಕಮೀಷನರ್‌ರವರು

3)ರಾಜ್ಯ ಸರ್ಕಾರದ ಸಾಮಾನ್ಯ/ವಿಶೇಷ ಆದೇಶಕ್ಕೊಳಪಟ್ಟು ಅಸಿಸ್ಟೆಂಟ್ ಕಮೀಷನರ್

4)ರಾಜ್ಯ ಚುನಾವಣಾ ಆಯೋಗದ ವಿಶೇಷ ಆದೇಶಕ್ಕೊಳಪಟ್ಟು ಕಮೀಷನರ್‌ರವರು

**220) ಅಧ್ಯಕ್ಷ/ಉಪಾಧ್ಯಕ್ಷ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಸ್ಥಾನಕ್ಕೆ ಮೀಸಲರಿಸತಕ್ಕದ್ದು**

1) ಅನುಸೂಚಿತ ಜಾತಿ & ಪಂಗಡಗಳ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು & ಆ ಹುದ್ದೆಗಳ ಸಂಖ್ಯೆಯು ರಾಜ್ಯದ ಜನ ಸಂಖ್ಯೆಯ ಒಟ್ಟು ಜನಸಂಖ್ಯೆಯಲ್ಲಿ ಎಸ್ಸಿ ಎಸ್ಟಿಗಳ ಜನಸಂಖ್ಯೆ ಯಾವ ಅನುಪಾತದಲ್ಲಿರುತ್ತದೋ ಒಟ್ಟು ಸಂಖ್ಯೆಯಲ್ಲಿ ಅದೇ ಅನುಪಾತದಲ್ಲಿರಬೇಕು.

2) ಹಿಂದುಳಿದ ವರ್ಗದವರಿಗೆ ಒಟ್ಟು ಸಂಖ್ಯೆಯ 1/3ರಷ್ಟು ಮೀಸಲಿಡಸತಕ್ಕದ್ದು.

3) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು ರಾಜ್ಯದಲ್ಲಿನ ಆ ಗ್ರಾಮ ಪಂಚಾಯತಿಯಲ್ಲಿನ ಅಧ್ಯಕ್ಷ & ಉಪಾಧ್ಯಕ್ಷ ಹುದ್ದೆಗಳ ಶೇ.50ರಷ್ಟನ್ನು ಮೀರತಕ್ಕದ್ದಲ್ಲ.

4) ಮೇಲಿನ ಎಲ್ಲಾ ಕ್ರಮಗಳನ್ನು ಅನುಸರಿಸತಕ್ಕದ್ದು.

**ಉತ್ತರಗಳು:-** 213)2 214) 1 215) 2 216) 1 217) 1 218) 2 219) 1 220) 4



Scanned by CamScanner

chanakyaloka.com



221) ಹಿಂದುಳಿದ ವರ್ಗದ ಮೀಸಲಿರಿಸಿದ ಒಟ್ಟು ಸಂಖ್ಯೆಗಳಲ್ಲಿ ವರ್ಗ ಎ & ಬಿ ಗೆ ಸೇರಿದ ವ್ಯಕ್ತಿಗಳಿಗೆ ಶೇಕಡಾ ಎಷ್ಟರಷ್ಟು ಸ್ಥಾನಗಳನ್ನು ಅನುಕ್ರಮವಾಗಿ ಮೀಸಲಿರಿಸತಕ್ಕದ್ದು.

1)ಎ ಪ್ರವರ್ಗಕ್ಕೆ ಶೇ.80, ಬಿ ಪ್ರವರ್ಗಕ್ಕೆ ಶೇ.20

2)ಎ ಪ್ರವರ್ಗಕ್ಕೆ ಶೇ.70, ಬಿ ಪ್ರವರ್ಗಕ್ಕೆ ಶೇ.30

3)ಎ ಪ್ರವರ್ಗಕ್ಕೆ ಶೇ.40, ಬಿ ಪ್ರವರ್ಗಕ್ಕೆ ಶೇ.60

4)ಎ ಪ್ರವರ್ಗಕ್ಕೆ ಶೇ.60, ಬಿ ಪ್ರವರ್ಗಕ್ಕೆ ಶೇ.40

222) ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರ & ಉಪಾಧ್ಯಕ್ಷರ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ & ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಅಥವಾ ಮೀಸಲಿಟ್ಟಿರದ ಹುದ್ದೆಗಳಲ್ಲಿ ___ ರಷ್ಟು ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು. ಹಾಗೂ ವಿವಿಧ ಪಂಚಾಯತಿಗಳಲ್ಲಿ ಸರದಿ ಪ್ರಕಾರ ಮೀಸಲಿಟ್ಟ ಹುದ್ದೆಗಳನ್ನು ಹಂಚಿಕೆ ಮಾಡತಕ್ಕದ್ದು.

1)ಶೇ.50 2)ಶೇ.30 3)ಶೇ.40 4)ಶೇ.20

(2010ಕ್ಕಿಂತ ಮುಂಚಿತವಾಗಿ ಮಹಿಳೆಯರಿಗಾಗಿ ಒಟ್ಟು ಸ್ಥಾನದ ಶೇ.1/3ರಷ್ಟು ಸ್ಥಾನಗಳನ್ನು ಮೀಸಲಿಡಲು ನಿಗಧಿ ಮಾಡಲಾಗಿತ್ತು.)

223) ಪ.ಜಾ & ಪ.ಪಂಗಡಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿದ್ದರೆ ಈ ಕೆಳಕಂಡಂತೆ ಭರ್ತಿ ಮಾಡಬೇಕು?

1) ಪ.ಜಾತಿಗೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿದ್ದರೆ ಪ. ಪಂಗಡಕ್ಕೆ ಸೇರಿದವರಿಗೆ, ಪ.ಪಂಗಡದವರಿಗೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿದ್ದರೆ ಅಂತಹ ಮೀಸಲು ಸ್ಥಾನಗಳನ್ನು ಪ. ಜಾತಿಗೆ ಸೇರಿದವರಿಗೆ

2) ಪ.ಜಾತಿಯ ಮೀಸಲು ಸ್ಥಾನಕ್ಕೆ ವ್ಯಕ್ತಿಗಳು ಲಭ್ಯವಿಲ್ಲದಿದ್ದರೆ ಆ ಸ್ಥಾನಗಳನ್ನು ಖಾಲಿ ಬಿಡುವುದು

3) ಪ.ಜಾತಿ & ಪ.ಪಂ.ದವರು ಲಭ್ಯವಿಲ್ಲದಿದ್ದರೆ ಮೀಸಲು ಸ್ಥಾನವನ್ನು ಮಹಿಳೆಯರಿಗೆ ನೀಡುವುದು

4) ಪ.ಜಾತಿ & ಪ.ಪಂಗಡ ಮೀಸಲು ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಹಿಂದುಳಿದ ವರ್ಗದವರಿಗೆ ನೀಡುವುದು.

224) ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ಸ್ಥಾನಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

1)ಎ ವರ್ಗದ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಆ ಸ್ಥಾನಗಳನ್ನು ಅನುಸೂಚಿತ ಜಾತಿಗೆ, ಬಿ ವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಅದನ್ನು ಅನುಸೂಚಿತ ಪಂಗಡಕ್ಕೆ ವರ್ಗಾಯಿಸಲಾಗುತ್ತದೆ.

2)ಎ ವರ್ಗದ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಆ ಸ್ಥಾನಗಳನ್ನು ಬಿ ಪ್ರವರ್ಗಕ್ಕೂ, ಬಿ ಪ್ರವರ್ಗಗಳ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಅದನ್ನು ಎ ವರ್ಗಕ್ಕೆ ವರ್ಗಾಯಿಸಲಾಗುತ್ತದೆ.

3) ಎ ವರ್ಗದ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಆ ಸ್ಥಾನಗಳನ್ನು ಮಹಿಳೆಯರಿಗೆ, ಬಿ ಪ್ರವರ್ಗಗಳ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಅದನ್ನು ಅನುಸೂಚಿತ ಜಾತಿಗೆ ವರ್ಗಾಯಿಸಲಾಗುತ್ತದೆ.

4) ಎ ವರ್ಗದ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಆ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ, ಬಿ ಪ್ರವರ್ಗಗಳ ಮೀಸಲಿರಿಸಿದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಅದನ್ನು ಮಹಿಳೆಯರಿಗೆ ವರ್ಗಾಯಿಸಲಾಗುತ್ತದೆ.

225) ಮೀಸಲಿಟ್ಟ ಹುದ್ದೆಗಳನ್ನು ಈ ಕೆಳಗಿನ ಯಾವ ವಿಧಾನದ ಮೂಲಕ ಹಂಚಿಕೆ ಮಾಡತಕ್ಕದ್ದು?

1) ವಿವಿಧ ಗ್ರಾಮ ಪಂಚಾಯಿತಿಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು

2) ಒಂದೇ ಜಿಲ್ಲೆಗೆ ಹಂಚಿಕೆ ಮಾಡತಕ್ಕದ್ದು

3) ಒಂದೇ ತಾಲ್ಲೂಕಿಗೆ ಹಂಚಿಕೆ ಮಾಡತಕ್ಕದ್ದು

4) ಮೇಲಿನ ಯಾವುದೂ ಅಲ್ಲ

## ಪ್ರಕರಣ-45, ಗ್ರಾಮ ಪಂಚಾಯತಿ ಸ್ಥಾಪನೆಯಾದಾಗ ಅಧ್ಯಕ್ಷ & ಉಪಾಧ್ಯಕ್ಷರ ಕಾರ್ಯ ವಿಧಾನ

226) ಪ್ರಕರಣ-45 ಏನನ್ನು ತಿಳಿಸುತ್ತದೆ?

1) ಗ್ರಾಮ ಪಂಚಾಯತಿ ಸ್ಥಾಪನೆಯಾದಾಗ ಅಧ್ಯಕ್ಷ & ಉಪಾಧ್ಯಕ್ಷರ ಕಾರ್ಯ ವಿಧಾನ

2) ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿ ಸ್ಥಾಪನೆ

3) ಗ್ರಾಮ ಪಂಚಾಯತಿ ಅಧ್ಯಕ್ಷರ ರಾಜೀನಾಮೆ

4) ಗ್ರಾಮ ಪಂಚಾಯತಿಯ ಕಾರ್ಯಗಳು

ಉತ್ತರಗಳು:- 221) 1 222) 1 223) 1 224) 2 225) 1 226) 1



Scanned by CamScanner

**227) ಹೊಸದಾಗಿ ಸ್ಥಾಪನೆಯಾದ ಗ್ರಾಮ ಪಂಚಾಯತಿಗೆ ಅಥವಾ ಆಕಸ್ಮಿಕವಾಗಿ ಖಾಲಿ ಸ್ಥಾನ ಉಂಟಾದಾಗಲೆಲ್ಲಾ ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆಯನ್ನು ಈ ಕೆಳಗಿನವರು ನಡೆಸುತ್ತಾರೆ.**

1) ಗ್ರಾಮ ಪಂಚಾಯತಿ ಕಾರ್ಯದರ್ಶಿ
2) ತಹಸಿಲ್ದಾರರು / ಡಿ.ಸಿರವರು ಗೊತ್ತು ಪಡಿಸಿರುವ ತಹಸೀಲ್ದಾರ್ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿ
3) ಡೆಪ್ಯೂಟಿ ಕಮೀಷನರ್
4) ರಾಜ್ಯ ಚುನಾವಣಾ ಆಯೋಗ

**228) ಗೊತ್ತುಪಡಿಸಿದ ಅಧಿಕಾರಿಯು ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಅಧಿಕಾರವನ್ನು ಹೊಂದಿರುತ್ತಾರೆ?**

1) ಸಭೆಯನ್ನು ಕರೆಯುವ ಅಧಿಕಾರ
2) ಅಧ್ಯಕ್ಷತೆ ವಹಿಸುವ ಅಧಿಕಾರ
3) ಮತಚಲಾಯಿಸುವ ಅಧಿಕಾರವಿರುವುದಿಲ್ಲ
4) ಮೇಲಿನ ಎಲ್ಲವೂ ಸರಿಯಾಗಿದೆ.

**229) ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಚುನಾವಣೆಯ ಸಿಂಧುತ್ವ-ಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವನ್ನು ಗ್ರಾಮ ಪಂಚಾಯತಿ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ, ಗೊತ್ತುಪಡಿಸಿರುವ .......... ಅಧಿಕಾರಿಯು ತೀರ್ಮಾನಿಸತಕ್ಕದ್ದು & ಆ ಬಗ್ಗೆ ಆತನ ತೀರ್ಮಾನವು ಅಂತಿಮವಾಗಿರತಕ್ಕದ್ದು.**

1) ಜಿಲ್ಲಾಧಿಕಾರಿ    2) ನ್ಯಾಯಿಕ ಅಧಿಕಾರಿ
3) ಸಿವಿಲ್ ನ್ಯಾಯಾಧೀಶ ಹಿರಿಯವರ್ಗ
4) ತಹಶೀಲ್ದಾರು

**230) ಗ್ರಾಮ ಪಂಚಾಯಿತಿ ಅಧ್ಯಕ್ಷ/ ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ನಿಯಮಗಳನ್ನು ಈ ಕೆಳಗಿನ ಯಾವ ವರ್ಷ ರಚಿಸಲಾಗಿತ್ತು?**

1) 1992    2) 1993    3) 1994    4) 1995

**231) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣಾ ತಕರಾರು ಅರ್ಜಿಯನ್ನು ಹಿರಿಯ ಸಿವಿಲ್ ನ್ಯಾಯಾಧೀಶರಿಗೆ ಎಷ್ಟು ದಿನದೊಳಗೆ ಸಲ್ಲಿಸಬೇಕಾಗುತ್ತದೆ?**

1) ಫಲಿತಾಂಶ ಬಂದ 20 ದಿನದೊಳಗೆ
2) ಫಲಿತಾಂಶ ಬಂದ 30 ದಿನದೊಳಗೆ
3) ಫಲಿತಾಂಶ ಬಂದ 15 ದಿನದೊಳಗೆ
4) ಫಲಿತಾಂಶ ಬಂದ 10 ದಿನದೊಳಗೆ

**232) ಅಧ್ಯಕ್ಷ & ಉಪಾಧ್ಯಕ್ಷರ ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಹಿರಿಯ ಸಿವಿಲ್ ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸುವಾಗ ಈ ಕೆಳಗಿನ ಯಾವ ಮೊತ್ತವನ್ನು ಠೇವಣಿ ಇಡಬೇಕು?**

1)300 ರೂ.  2)250 ರೂ.  3)150 ರೂ  4)500ರೂ

## ಪ್ರಕರಣ-46, ಅಧ್ಯಕ್ಷ & ಉಪಾಧ್ಯಕ್ಷರ ಅವಧಿ & ಸೇವಾ ಷರತ್ತುಗಳು

**233) ಗ್ರಾಮ ಪಂಚಾಯತಿಯ ಅಧ್ಯಕ್ಷ & ಉಪಾಧ್ಯಕ್ಷರ ಅವಧಿಯು ಕ್ರಮವಾಗಿ ಆತನ ಚುನಾವಣೆಯ ದಿನಾಂಕದಿಂದ ............ ವರ್ಷ/ಆತನು ಗ್ರಾಮ ಸದಸ್ಯನಾಗಿರುವುದು ನಿಂತು ಹೋಗುವವರೆಗೆ ಇವುಗಳಲ್ಲಿ ಯಾವುದು ಮೊದಲು ಅದು**

1) 6 ವರ್ಷ  2)5ವರ್ಷ  3) 3 ವರ್ಷ  4)4 ವರ್ಷ

**234) ಅಧ್ಯಕ್ಷ, ಉಪಾಧ್ಯಕ್ಷ & ಸ್ಥಾಯಿ ಸಮಿತಿ ಅಧ್ಯಕ್ಷರ ವೇತನ ಮತ್ತು ಸೇವಾ ಷರತ್ತುಗಳು ಈ ಕೆಳಕಂಡಂತಿರುತ್ತದೆ?**

1) ಗೊತ್ತುಪಡಿಸಿದ ರೀತಿಯಲ್ಲಿರುತ್ತದೆ.
2) ಕರ್ನಾಟಕ ಸಿವಿಲ್ ಸೇವೆಗಳ ನಿಯಮದಂತಿರುತ್ತವೆ
3) ಭಾರತದ ಸಂವಿಧಾನಕ್ಕೆ ಅನುಗುಣವಾಗಿರುತ್ತವೆ
4) ಕಾನೂನು ಸಚಿವಾಲಯದ ನಿಯಮಾವಳಿಯಂತಿರುತ್ತವೆ

## ಪ್ರಕರಣ-47, ಹುದ್ದೆ ಖಾಲಿ ಇರುವ ಅವಧಿಯಲ್ಲಿ ಅಧ್ಯಕ್ಷರ ನೇಮಕ

**235) ಗ್ರಾಮ ಪಂಚಾಯತಿ ಅಧ್ಯಕ್ಷರ ಹುದ್ದೆಯು ಖಾಲಿ ಇರುವ ಸಮಯದಲ್ಲಿ ಈ ಕೆಳಗಿನ ಯಾರು ಅಧಿಕಾರವನ್ನು ನಡೆಸುತ್ತಾರೆ?**

1) ಉಪಾಧ್ಯಕ್ಷರು    2) ಕಾರ್ಯದರ್ಶಿ
3) ಹಿರಿಯ ಸದಸ್ಯ    4) ಆಡಳಿತಾಧಿಕಾರಿ

**236) ಅಧ್ಯಕ್ಷ & ಉಪಾಧ್ಯಕ್ಷರ ಹುದ್ದೆಗಳೆರಡೂ ಖಾಲಿಯಿದ್ದಾಗ ಈ ಕೆಳಗಿನ ಯಾರು ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವವರು?**

1) ಸಾಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷ
2) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ
3)ಹಣಕಾಸು ಲೆಕ್ಕ ಪರಿಶೋಧನೆ ಸ್ಥಾಯಿಸಮಿತಿ ಅಧ್ಯಕ್ಷ
4) ಗ್ರಾಮ ಪಂಚಾಯಿತಿ ಹಿರಿಯ ಸದಸ್ಯರು

**ಉತ್ತರಗಳು:-** 227) 2  228) 4  229) 3  230) 4  231) 3  232) 2  233) 2  234) 1  235)1  236) 2



Scanned by CamScanner

237) ಅಧ್ಯಕ್ಷ, ಉಪಾಧ್ಯಕ್ಷ & ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷನೂ ಇಲ್ಲದಿದ್ದಾಗ ಅಧ್ಯಕ್ಷನು ಕ್ರಮಬದ್ಧನಾಗಿ ಚುನಾಯಿತನಾಗುವವರೆಗೆ ಈ ಕೆಳಗಿನ ಯಾವ ಅಧಿಕಾರಿಯು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು & ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು

1) ಡಿ.ಸಿ. ಅವರು ನೇಮಕ ಮಾಡಿದ ಒಬ್ಬ ಅಧಿಕಾರಿ
2) ಎ.ಸಿ. ಅವರು ನೇಮಕ ಮಾಡಿದ ಒಬ್ಬ ಅಧಿಕಾರಿ
3) ಕಮೀಷನರ್ ನೇಮಕ ಮಾಡಿದ ಅಧಿಕಾರಿ
4) ಗ್ರಾಮ ಪಂಚಾಯಿತಿಯ ಹಿರಿಯ ಸದಸ್ಯರು

## ಪ್ರಕರಣ-48, ಅಧ್ಯಕ್ಷನ & ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದು ಹಾಕುವಿಕೆ

238) ಪ್ರಕರಣ-48 ಏನನ್ನು ತಿಳಿಸುತ್ತದೆ?

1) ತಾ.ಪ ಅಧ್ಯಕ್ಷ & ಉಪಾಧ್ಯಕ್ಷರ ರಾಜೀನಾಮೆ
2) ಗ್ರಾ. ಪಂ.ಯ ಅಧ್ಯಕ್ಷ & ಉಪಾಧ್ಯಕ್ಷರ ರಾಜೀನಾಮೆ
3) ಜಿ.ಪಂ. ಅಧ್ಯಕ್ಷ & ಉಪಾಧ್ಯಕ್ಷರ ರಾಜೀನಾಮೆ
4) ಸ್ಥಾಯಿಸಮಿತಿ ಅಧ್ಯಕ್ಷ & ಉಪಾಧ್ಯಕ್ಷರ ರಾಜೀನಾಮೆ

239) ಗ್ರಾಮ ಪಂಚಾಯತಿ ಅಧ್ಯಕ್ಷ ತಮ್ಮ ರಾಜೀನಾಮೆಯನ್ನು ತಮ್ಮ ಸಹಿ ಸಹಿತ ಬರಹದಲ್ಲಿ ಬರೆದು ಈ ಕೆಳಗಿನ ಯಾರಿಗೆ ನೀಡಬೇಕು?

1) ಡೆಪ್ಯೂಟಿ ಕಮೀಷನರ್ 2) ಅಸಿಸ್ಟೆಂಟ್ ಕಮೀಷನರ್
3) ತಹಶೀಲ್ದಾರು 4) ಕಾರ್ಯನಿರ್ವಹಣಾಧಿಕಾರಿ

240) ಗ್ರಾಮ ಪಂಚಾಯತಿ ಉಪಾಧ್ಯಕ್ಷ ತಮ್ಮ ರಾಜೀನಾಮೆಯನ್ನು ತಮ್ಮ ಸಹಿ ಸಹಿತ ಬರಹದಲ್ಲಿ ಬರೆದು ಈ ಕೆಳಗಿನ ಯಾರಿಗೆ ನೀಡಬೇಕು?

1) ಡೆಪ್ಯೂಟಿ ಕಮೀಷನರ್ 2) ಅಸಿಸ್ಟೆಂಟ್ ಕಮೀಷನರ್
3) ತಹಶೀಲ್ದಾರು 4) ಗ್ರಾ.ಪ ಅಧ್ಯಕ್ಷರು

241) ಗ್ರಾಮ ಪಂಚಾಯತಿ ಅಧ್ಯಕ್ಷರ ಸ್ಥಾನವು ಖಾಲಿಯಾಗಿದ್ದ ಸಂದರ್ಭದಲ್ಲಿ ರಾಜೀನಾಮೆಯನ್ನು ಉಪಾಧ್ಯಕ್ಷರು ಯಾರಿಗೆ ನೀಡಬೇಕು?

1) ಡೆಪ್ಯೂಟಿ ಕಮೀಷನರ್ 2) ಅಸಿಸ್ಟೆಂಟ್ ಕಮೀಷನರ್
3) ತಹಶೀಲ್ದಾರು 4) ಗ್ರಾ.ಪ ಅಧ್ಯಕ್ಷರು

242) ಅಸಿಸ್ಟೆಂಟ್ ಕಮೀಷನರ್ ರವರು ಗ್ರಾಮ ಪಂಚಾಯತಿ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ನೀಡಿದ ರಾಜೀನಾಮೆಯನ್ನು ಸ್ವೀಕರಿಸಿದ ಎಷ್ಟು ದಿನದೊಳಗೆ ಹಿಂಪಡೆಯದಿದ್ದರೆ ರಾಜೀನಾಮೆ ಅಂಗೀಕರಿಸತಕ್ಕದ್ದು

1) 10ದಿನ 2) 20ದಿನ 3) 15ದಿನ 4) 30ದಿನ

243) ಗ್ರಾಮ ಪಂಚಾಯತಿಯ ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನವು ಅವಧಿಗೆ ಮುಂಚಿತವಾಗಿಯೇ ಈ ಕೆಳಗಿನ ಸಂದರ್ಭದಲ್ಲಿ ತೆರವಾಗತಕ್ಕದ್ದು.

1) ಸದಸ್ಯನಾಗಿ ನಿಂತು ಹೋದಾಗ
2) 20 ತಿಂಗಳಲ್ಲೇ ಮುಗಿದು ಹೋಗತಕ್ಕದ್ದು
3) ಅಸಿಸ್ಟೆಂಟ್ ಕಮೀಷನರ್ ರಾಜೀನಾಮೆ ನೀಡಬೇಕೆಂದು ಕೇಳಿದಾಗ ನಿಂತು ಹೋಗತಕ್ಕದ್ದು.
4) ಡೆಪ್ಯೂಟಿ ಕಮೀಷನರ್

244) ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷ/ ಉಪಾಧ್ಯಕ್ಷನು ಗ್ರಾಮ ಪಂಚಾಯತಿ ಅಧ್ಯಕ್ಷನಾಗಿ/ ಉಪಾಧ್ಯಕ್ಷನಾಗಿ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಅಲಕ್ಷ್ಯ ತೋರಿಸಿದರೆ ಈ ಕೆಳಗಿನ ಯಾರು ಅವರನ್ನು ಸ್ಥಾನದಿಂದ ತೆಗೆದು ಹಾಕಬಹುದು

1)ಡೆಪ್ಯೂಟಿ ಕಮೀಷನರ್ 2) ಅಸಿಸ್ಟೆಂಟ್ ಕಮೀಷನರ್
2) ಸರ್ಕಾರ 4) ಸಿ.ಇ.ಓ

245) ಸರ್ಕಾರವು ಗ್ರಾಮ ಪಂಚಾಯತಿ ಅಧ್ಯಕ್ಷ & ಉಪಾಧ್ಯಕ್ಷರ ದುರ್ನಡತೆಯ ಮೇಲೆ ತೆಗೆದು ಹಾಕಲು ಈ ಕೆಳಗಿನ ಕ್ರಮ ಅನುಸರಿಸತಕ್ಕದ್ದು

1) ಗ್ರಾಮ ಪಂಚಾಯತಿ ಅಧ್ಯಕ್ಷ & ಉಪಾಧ್ಯಕ್ಷರಿಗೆ ಹುದ್ದೆಯಿಂದ ತೆಗೆದು ಹಾಕುವುದಕ್ಕಿಂತ ಮುಂಚಿತವಾಗಿ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ಕಲ್ಪಿಸುವುದು
2) ಅವಶ್ಯವಾದಲ್ಲಿ ತಾಲ್ಲೂಕು ಪಂಚಾಯತಿಯಿಂದ ವರದಿ ತರಿಸಿಕೊಂಡು ಪರಿಶೀಲಿಸುವುದು.
3) ಸರ್ಕಾರದಿಂದ ತೆಗೆದು ಹಾಕಲ್ಪಟ್ಟ ಅಧ್ಯಕ್ಷ/ ಉಪಾಧ್ಯಕ್ಷನನ್ನು ಗ್ರಾ. ಪಂ. ಸದಸ್ಯತ್ವದಿಂದ ತೆಗೆದು ಹಾಕಬಹುದು.
4) ಮೇಲಿನ ಎಲ್ಲಾ ಕ್ರಮವನ್ನು ಅನುಸರಿಸಬಹುದು.

246) ಸರ್ಕಾರದಿಂದ ಗ್ರಾಮ ಪಂಚಾಯತಿಯ ಅಧ್ಯಕ್ಷ/ ಉಪಾಧ್ಯಕ್ಷರ ಹುದ್ದೆಯಿಂದ ತೆಗೆದುಹಾಕಲ್ಪಟ್ಟ ಸದಸ್ಯರಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

1) ಸದಸ್ಯತ್ವವು ನಿಂತು ಹೋಗುತ್ತದೆ
2) ಸದಸ್ಯತ್ವವು ಮುಂದುವರೆಯುತ್ತದೆ ಮತ್ತು ಮುಂದಿನ ಅವಧಿಗೆ ಅಧ್ಯಕ್ಷರಾಗಿ ಚುನಾವಣೆಗೆ ಅರ್ಹರಾಗಿರುತ್ತಾರೆ.
3) ಸದಸ್ಯತ್ವವು ಮುಂದುವರೆಯುತ್ತದೆ ಆದರೆ ಮುಂದಿನ ಅವಧಿಗೆ ಅಧ್ಯಕ್ಷ / ಉಪಾಧ್ಯಕ್ಷರಾಗಲು ಚುನಾವಣೆಗೆ ಅನರ್ಹರಾಗಿರುತ್ತಾರೆ.
4) ಸದಸ್ಯರಾಗಲು ಅನರ್ಹರಾಗಿರುತ್ತಾರೆ & ಅಧ್ಯಕ್ಷರಾಗಲು ಅರ್ಹರಾಗಿರುತ್ತಾರೆ.

ಉತ್ತರಗಳು:- 237) 1 238) 2 239) 2 240) 4 241) 2 242) 1 243) 1 244) 3 245) 4 246) 3



Scanned by CamScanner

247) ಅಧ್ಯಕ್ಷ/ಉಪಾಧ್ಯಕ್ಷನು ಈ ಕೆಳಗಿನ ಯಾವ ಸಂದರ್ಭದಲ್ಲಿ ರಾಜೀನಾಮೆ ನೀಡಿದಾಗ ಸ್ವ-ಇಚ್ಛೆಯಿಂದ ಇಲ್ಲವೇ ಬೆದರಿಕೆಯಿಂದ ಸಲ್ಲಿಸಿದ್ದಾನೆಯೇ ಎಂಬುದನ್ನು ಈ ಕೆಳಗಿನ ಯಾರು ಮನಗಾಣತಕ್ಕದ್ದು?

1) ಎ.ಸಿ 2) ತಹಸೀಲ್ದಾರ್ 3) ಜಿಲ್ಲಾ ಮ್ಯಾಜಿಸ್ಟ್ರೇಟ್
4) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ

248) ಗ್ರಾಮ ಪಂಚಾಯಿತಿ ಅಧ್ಯಕ್ಷ/ಉಪಾಧ್ಯಕ್ಷರು ಯಾವುದಾದರೂ ಅನುಚಿತ ಪ್ರಭಾವ ಅಥವಾ ಬೆದರಿಕೆಗೆ ಸಂಬಂಧಿಸಿದಂತೆ ರಾಜೀನಾಮೆ ನೀಡಿದ್ದರೆ ಅದನ್ನು ಈ ಕೆಳಗಿನ ಯಾರು ವಿಚಾರಣೆ ನಡೆಸತಕ್ಕದ್ದು & ಅಂತಹ ಸಂದರ್ಭದಲ್ಲಿ ರಾಜೀನಾಮೆಯನ್ನು ಸ್ವೀಕರಿಸತಕ್ಕದ್ದಲ್ಲ?

1) ಎ.ಸಿ 2) ಡಿ.ಸಿ 3) ಜಿಲ್ಲಾ ಮ್ಯಾಜಿಸ್ಟ್ರೇಟ್
4) ಸಿವಿಲ್ ನ್ಯಾಯಾಧೀಶ ಹಿರಿಯ ವರ್ಗ

## ಪ್ರಕರಣ-49. ಗ್ರಾಮ ಪಂಚಾಯಿತಿ ಅಧ್ಯಕ್ಷನ/ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ನಿರ್ಣಯ

249) ಪ್ರಕರಣ-49 ಏನನ್ನು ತಿಳಿಸುತ್ತದೆ?

1) ಗ್ರಾಮ ಪಂಚಾಯತಿ ಅಧ್ಯಕ್ಷ / ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಕೈಗೊಳ್ಳಬಹುದೆಂದು ತಿಳಿಸುತ್ತದೆ.
2) ಗ್ರಾ.ಪ ಸದಸ್ಯರ ವಿರುದ್ಧ ಅವಿಶ್ವಾಸ ನಿರ್ಣಯ
3) ತಾ.ಪ ಸದಸ್ಯರ ವಿರುದ್ಧ ಅವಿಶ್ವಾಸ ನಿರ್ಣಯ
4) ಮೇಲಿನ ಯಾವುದೂ ಅಲ್ಲ

250) ಗ್ರಾಮ ಪಂಚಾಯಿತಿ ಅಧ್ಯಕ್ಷ/ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಕೈಗೊಳ್ಳಲು ಒಟ್ಟು ಸದಸ್ಯರಲ್ಲಿ ಎಷ್ಟು ಮಂದಿ ನೋಟೀಸ್‌ಗೆ ಸಹಿ ಹಾಕಿರಬೇಕು?

1)1/4ರಷ್ಟು 2)1/2ರಷ್ಟು 3)2/3ರಷ್ಟು 4) 1/3ರಷ್ಟು

251) ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಥವಾ ಉಪಾಧ್ಯಕ್ಷರ ವಿರುದ್ಧ ನಿರ್ಣಯ ಮಂಡಿಸಲು ಸಂಬಂಧಿಸಿದಂತೆ ನೋಟೀಸ್‌ನ್ನು ಕನಿಷ್ಠ ಪಕ್ಷ ಎಷ್ಟು ದಿನಗಳ ಮುಂಚಿತವಾಗಿ ನೀಡತಕ್ಕದ್ದು

1)10ದಿನಗಳು 2)20ದಿನ 3)30ದಿನ 4)15ದಿನಗಳು

252) ಗ್ರಾಮ ಪಂಚಾಯಿತಿ ಅಧ್ಯಕ್ಷ & ಉಪಾಧ್ಯಕ್ಷನ ವಿರುದ್ಧ ಕೈಗೊಂಡ ನಿರ್ಣಯವನ್ನು ಕಾರ್ಯವಿಧಾನ ಅನುಸಾರವಾಗಿ ಆ ಉದ್ದೇಶಕ್ಕಾಗಿ ವಿಶೇಷವಾಗಿ ಕರೆದ ಸಭೆಯಲ್ಲಿ ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆಯ ......... ಗಿಂತ ಕಡಿಮೆ ಇಲ್ಲದಷ್ಟು ಸಂಖ್ಯೆಯ ಬಹುಮತದಿಂದ ಅಂಗೀಕರಿಸಿದ್ದರೆ ತಕ್ಷಣವೇ ತನ್ನ ಸ್ಥಾನವು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು

1) 1/3 2) 2/3 3) 1/4 4) 1/6

253) ಅಧ್ಯಕ್ಷ & ಉಪಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸವನ್ನು ಸೂಚಿಸುವ ಯಾವುದೇ ನಿರ್ಣಯವನ್ನು ಚುನಾಯಿತನಾದ ____ ಅವಧಿಯೊಳಗೆ ಮಂಡಿಸತಕ್ಕದ್ದಲ್ಲ.

1) 6 ತಿಂಗಳು 2) 20 ತಿಂಗಳು
3) 3 ತಿಂಗಳು 4) 30 ತಿಂಗಳು

254) ಯಾವುದೇ ಅಧ್ಯಕ್ಷ/ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಗ್ರಾಮ ಪಂಚಾಯಿತಿ ಪರಿಶೀಲಿಸಿ ಅಂಗೀಕರಿಸದಿದ್ದರೆ ಅದೇ ಅಧ್ಯಕ್ಷ/ ಉಪಾಧ್ಯಕ್ಷನ ಸಂಬಂಧದಲ್ಲಿ ಗ್ರಾಮ ಪಂಚಾಯಿತಿಯು ತನ್ನ ನಿರ್ಣಯವನ್ನು ನೀಡಿದ ದಿನಾಂಕದಿಂದ ........... ಅವಧಿಯೊಳಗೆ ಅದೇ ರೀತಿಯ ನೋಟೀಸ್ ನೀಡತಕ್ಕದ್ದಲ್ಲ / ಮಂಡಿಸತಕ್ಕದ್ದಲ್ಲ.

1) 6 ತಿಂಗಳು 2) 2ವರ್ಷ 3)1 ವರ್ಷ 4)3ತಿಂಗಳು

255) ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಉಪಾಧ್ಯಕ್ಷ/ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಮಂಡನೆ ಮಾಡಬಹುದು?

1) ಯಾವುದೇ ಸ್ಕೀಂ ಗಳು, ಕ್ರಿಯಾ ಯೋಜನೆ, ಸರ್ಕಾರದ ನಿರ್ದೇಶನವನ್ನು ಕಾರ್ಯಗತಗೊಳಿಸುವಲ್ಲಿ ವಿಫಲನಾದರೆ
2) ಸದಸ್ಯತ್ವದ ಕಾಲದಲ್ಲಿ ಪಂಚಾಯಿತಿ ನಿಧಿ ಅಥವಾ ಇತರೆ ಆಸ್ತಿಯನ್ನು ದುರುಪಯೋಗ ಮಾಡಿಕೊಂಡಿದ್ದರೆ
3) ಕರ್ತವ್ಯ ನಿರ್ವಹಿಸುವಾಗ ಭ್ರಷ್ಟಾಚಾರದಲ್ಲಿ ತೊಡಗಿದ್ದಾನೆಂದು ಆಪಾದನೆ ಎದುರಿಸುತ್ತಿದ್ದರೆ
4) ಮೇಲಿನ ಎಲ್ಲ ಸಂದರ್ಭಗಳಲ್ಲಿ

## ಪ್ರಕರಣ-50. ಗ್ರಾಮ ಪಂಚಾಯಿತಿ ಸಭೆ ಕಾರ್ಯವಿಧಾನ

256) ಪ್ರಕರಣ-50 ಏನನ್ನು ತಿಳಿಸುತ್ತದೆ?

1) ಗ್ರಾಮ ಪಂಚಾಯತಿ ಸಭೆಯಲ್ಲಿ ಕಾರ್ಯವಿಧಾನವು ನಿಗಧಿ ಪಡಿಸಿರುವಂತೆ ತಿಳಿಸುತ್ತದೆ.
2) ಗ್ರಾಮ ಪಂಚಾಯತಿಯಲ್ಲಿನ ಸಭೆಯ ಕಾರ್ಯವಿಧಾನವು ಅಧ್ಯಕ್ಷರು ನಿರ್ಧರಿಸಿದಂತೆ ನಡೆಯಬೇಕೆಂದು ತಿಳಿಸುತ್ತದೆ.
3) ಗ್ರಾಮ ಪಂಚಾಯತಿ ಸಭೆಯ ಕಾರ್ಯವಿಧಾನವು ಕಾರ್ಯದರ್ಶಿ ನಿರ್ಧರಿಸಿದಂತೆ ನಡೆಯಬೇಕು.
4) ಗ್ರಾಮ ಪಂಚಾಯತಿಯ ಸಭೆಯು ಜಿಲ್ಲಾಧಿಕಾರಿಗಳ ನಿರ್ಧರಿಸಿದಂತೆ ನಡೆಯಬೇಕು.

ಉತ್ತರಗಳು:- 247) 1 248) 2 249) 1 250) 3 251) 1 252) 2 253) 4 254) 2 255) 4 256)1



Scanned by CamScanner

chanakyaloka.com



**257) ಈ ಕೆಳಗಿನ ಯಾರು ಗ್ರಾಮ ಪಂಚಾಯಿತಿಯ ಸಭೆಯನ್ನು ಕರೆಯುತ್ತಾರೆ?**

1) ಗ್ರಾಮ ಪಂಚಾಯಿತಿ ಪಿಡಿಒ
2) ಗ್ರಾ.ಪ. ಕಾರ್ಯದರ್ಶಿ 3) ಗ್ರಾ.ಪಂ. ಅಧ್ಯಕ್ಷರು
4) ಕಾರ್ಯನಿರ್ವಹಣಾಧಿಕಾರಿಗಳು

**258) ಗ್ರಾಮ ಪಂಚಾಯಿತಿ ಸಭೆಗೆ ಸಂಬಂಧಿಸಿದ ಕಾರ್ಯ ವಿಧಾನಗಳನ್ನು ಈ ಕೆಳಗಿನ ಯಾವ ನಿಯಮಾವಳಿಗಳು ಹೇಳುತ್ತವೆ?**

1) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಭೆಗಳಲ್ಲಿನ ಕಾರ್ಯ ವಿಧಾನ) 1994
2) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಭೆಗಳಲ್ಲಿನ ಕಾರ್ಯ ವಿಧಾನ) 2004
3) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಭೆಗಳಲ್ಲಿನ ಕಾರ್ಯ ವಿಧಾನ) 2002
4) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಭೆಗಳಲ್ಲಿನ ಕಾರ್ಯ ವಿಧಾನ) 2003

**259) ಗ್ರಾಮ ಪಂಚಾಯಿತಿ ಸಭೆಗೆ ಕಾರ್ಯಸೂಚಿಗಳನ್ನು ಈ ಕೆಳಗಿನ ಯಾರು ಸಿದ್ಧಪಡಿಸುತ್ತಾರೆ?**

1) ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಇಒ
2) ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಪಿಡಿಒ ಅಥವಾ ಕಾರ್ಯದರ್ಶಿ
3) ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಸ್ಥಾಯಿ ಸಮಿತಿ ಅಧ್ಯಕ್ಷರು
4) ಅಧ್ಯಕ್ಷರೊಂದಿಗೆ ಸಮಾಲೋಚಿಸಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು

**260) ಗ್ರಾಮ ಪಂಚಾಯಿತಿಯ ಯಾವುದೇ ಸಭೆಯು ಈ ಕೆಳಗಿನ ಅವಧಿಯೊಳಗೆ ಮಾತ್ರ ನಡೆಯಬೇಕು?**

1) ಬೆಳಗಿನ 7ಗಂಟೆಯಿಂದ ಸಂಜೆ 5 ಗಂಟೆವರೆಗೆ
2) ಬೆಳಗಿನ 8ಗಂಟೆಯಿಂದ ರಾತ್ರಿ 8 ಗಂಟೆವರೆಗೆ
3) ಬೆಳಗಿನ 8ಗಂಟೆಯಿಂದ ಸಂಜೆ 7 ಗಂಟೆವರೆಗೆ
4) ಬೆಳಗಿನ 8ಗಂಟೆಯಿಂದ ಸಂಜೆ 6 ಗಂಟೆವರೆಗೆ

**261) ಈ ಕೆಳಗಿನ ಯಾವ ಅವಧಿಯ ನಂತರ ಸಭೆಯನ್ನು ಮುಂದುವರೆಸತಕ್ಕದ್ದಲ್ಲ?**

1) ಸಂಜೆ 6ಗಂಟೆ 2) ಸಂಜೆ 5 ಗಂಟೆ
3) ಸಂಜೆ 4 ಗಂಟೆ 4) ಸಂಜೆ 7 ಗಂಟೆ

**262) ಈ ಕೆಳಗಿನ ನಿಯಮಾವಳಿ ಅನ್ವಯ ಈ ಕೆಳಗಿನ ಯಾವ ಅವಧಿಗೆ ಮುಂಚೆ ಗ್ರಾಮ ಪಂಚಾಯಿತಿಯ ಸಭೆಯನ್ನು ನಡೆಸತಕ್ಕದ್ದಲ್ಲ.**

1) ಬೆಳಗ್ಗೆ 8 ಗಂಟೆ 2) ಬೆಳಗ್ಗೆ 6ಗಂಟೆ
3) ಬೆಳಗ್ಗೆ 9ಗಂಟೆ 4) ಬೆಳಗ್ಗೆ 10ಗಂಟೆ

**263) ಈ ಕೆಳಗಿನ ಯಾವ ಸಂದರ್ಭವನ್ನು ಹೊರತುಪಡಿಸಿ ಗ್ರಾಮ ಪಂಚಾಯಿತಿಗಳನ್ನು ಸಾರ್ವಜನಿಕವಾಗಿ ಮುಕ್ತವಾಗಿ ನಡೆಸತಕ್ಕದ್ದು.**

1) ಗ್ರಾಮ ಪಂಚಾಯಿತಿಯ ಸದಸ್ಯರು ಸಾರ್ವಜನಿಕವಾಗಿ ಚರ್ಚಿಸಬಾರದೆಂದು ಹೇಳಿದ ಸಂದರ್ಭ ಹೊರತು.
2)ಗ್ರಾ. ಪಂ. ಪಿಡಿಒ ನಿರ್ಧರಿಸಿದ ಸಂದರ್ಭ ಹೊರತು.
3) ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷನು ನಿರ್ಧರಿಸಿದ ಸಂದರ್ಭ ಹೊರತು.
4) ಗ್ರಾಮ ಪಂಚಾಯಿತಿ ಮುಂದೆ ಇತ್ಯರ್ಥವಾಗದಿರುವ ವಿಚಾರಣೆ/ ಚರ್ಚೆಯನ್ನು ರಹಸ್ಯವಾಗಿ ನಡೆಸಬೇಕೆಂದು ಪ್ರಿಸೈಡಿಂಗ್ ಅಧಿಕಾರಿ ಪರಿಗಣಿಸಿದ ಹೊರತು.

**264) ಗ್ರಾಮ ಪಂಚಾಯಿತಿ ಸಭೆಯಲ್ಲಿ ಈ ಕೆಳಗಿನ ಯಾವ ಅಧಿಕಾರವಿರುತ್ತದೆ?**

1) ಯಾವುದೇ ಸಮಯದಲ್ಲಿ ವ್ಯವಹರಣೆಗಳಿಗೆ ಅಡ್ಡಿಯನ್ನುಂಟು ಮಾಡುವ ಯಾವುದೇ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು.
2) ಯಾವುದೇ ಸಮಯದಲ್ಲಿ ವ್ಯವಹರಣೆಗಳಿಗೆ ಅಡ್ಡಿಯನ್ನುಂಟು ಮಾಡುವ ಯಾವುದೇ ವ್ಯಕ್ತಿಯನ್ನು ಹೊರ ಹಾಕುವಂತೆ ಮಾಡಬಹುದು.
3) ಯಾವುದೇ ಸಮಯದಲ್ಲಿ ವ್ಯವಹರಣೆಗಳಿಗೆ ಅಡ್ಡಿಯನ್ನುಂಟು ಮಾಡುವ ಯಾವುದೇ ವ್ಯಕ್ತಿಯನ್ನು ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಮಾಡಬಹುದು.
4) ಯಾವುದೇ ಸಮಯದಲ್ಲಿ ವ್ಯವಹರಣೆಗಳಿಗೆ ಅಡ್ಡಿಯನ್ನುಂಟು ಮಾಡುವ ಯಾವುದೇ ವ್ಯಕ್ತಿಗೆ 500 ರೂ.ವರೆಗೆ ದಂಡ ಹಾಕಬಹುದು.

**265) ಗ್ರಾಮ ಪಂಚಾಯಿತಿ ಸಭೆಗೆ ಸಂಬಂಧಿಸಿದಂತೆ ಸಭೆಯಲ್ಲಿ ಈ ಕೆಳಗಿನ ಯಾವ ನಿಯಮಗಳನ್ನು ಪಾಲಿಸಬೇಕು?**

1) ನ್ಯಾಯಾಲಯದಲ್ಲಿ ಇತ್ಯರ್ಥವಾಗದಿರುವ ವಿಷಯಗಳನ್ನು ಚರ್ಚಿಸಬಾರದು
2) ವೈಯಕ್ತಿಕ ವಿಚಾರಗಳನ್ನು ಚರ್ಚಿಸಬಾರದು
3) ನಡವಳಿಕೆ ಅಥವಾ ವ್ಯವಹರಣೆಗಳ ಬಗ್ಗೆ ಅಪಮಾನಕರ ಭಾಷೆ ಬಳಸಬಾರದು
4) ಮೇಲಿನ ಎಲ್ಲವೂ

**266) ಗ್ರಾಮ ಪಂಚಾಯಿತಿ ಸಭೆಯಲ್ಲಿನ ಕಾರ್ಯವಿಧಾನವನ್ನು ಯಾರು ಕಡ್ಡಾಯವಾಗಿ ಪಾಲಿಸಬೇಕು?**

1) ಸದಸ್ಯರು 2) ಅಧಿಕಾರಿಗಳು
3) ಸಾರ್ವಜನಿಕರು 4) ಮೇಲಿನ ಎಲ್ಲರೂ

**ಉತ್ತರಗಳು:**-257)3 258)1 259)2 260)3 261)4 262)1 263)4 264)2 265) 4 266) 4



Scanned by CamScanner

267) ಪ್ರಿಸೈಡಿಂಗ್ ಆಫೀಸರ್ ಅವರ ಅನುಮತಿ ಪಡೆಯದ ಹೊರತು ಗ್ರಾಮ ಪಂಚಾಯಿತಿ ಸಭೆಯಲ್ಲಿ ಸದಸ್ಯರು ಎಷ್ಟು ನಿಮಿಷ ಅವಧಿಯನ್ನು ಮೀರಿ ಮಾತಾಡತಕ್ಕದ್ದಲ್ಲ?

1) 30 ನಿಮಿಷ  2) 20 ನಿಮಿಷ
3) 10 ನಿಮಿಷ  4) 50 ನಿಮಿಷ

268) ನಿರ್ಣಯ ಮಂಡಿಸಿದವರು ಅದನ್ನು ಮಂಡಿಸುವ ಸಂದರ್ಭದಲ್ಲಿ ಪ್ರಿಸೈಡಿಂಗ್ ಆಫೀಸರ್ ಅವರ ಅನುಮತಿ ಪಡೆದು ಗರಿಷ್ಠ ಎಷ್ಟು ನಿಮಿಷದವರೆಗೆ ಮಾತಾಡಬಹುದು?

1) 10 ನಿಮಿಷ  2) 15 ನಿಮಿಷ
3) 8 ನಿಮಿಷ  4) 20 ನಿಮಿಷ

269) ಸಭೆಯಲ್ಲಿ ಚರ್ಚಿತವಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಸದಸ್ಯರು ಏಕ ಕಾಲದಲ್ಲಿ ಇಬ್ಬರು ಸದಸ್ಯರು ಎದ್ದು ನಿಂತಾಗ ಪ್ರಿಸೈಡಿಂಗ್ ಆಫೀಸರ್ ಈ ಕ್ರಮ ಕೈಗೊಳ್ಳತಕ್ಕದ್ದು?

1) ಹಿರಿಯ ವ್ಯಕ್ತಿಗೆ ಅವಕಾಶ ಕಲ್ಪಿಸುವುದು
2) ತನಗೆ ಇಷ್ಟ ಬಂದವರಿಗೆ ಮಾತಾಡಲು ಅವಕಾಶ
3) ಮೊದಲು ನೋಡಿದ ಸದಸ್ಯರಿಗೆ ಮಾತಾಡಲು ಹೇಳತಕ್ಕದ್ದು
4) ಲಾಟರಿ ಮೂಲಕ ನಿರ್ಧರಿಸುವುದು

## ಪ್ರಕರಣ-51. ಆಕಸ್ಮಿಕ ಖಾಲಿ ಸ್ಥಾನಗಳು

270) ಪ್ರಕರಣ-51 ಏನನ್ನು ತಿಳಿಸುತ್ತದೆ?

1)ಆಕಸ್ಮಿಕ ಖಾಲಿ ಸ್ಥಾನಗಳು  2)ಪದಾವಧಿ
3)ಅಧ್ಯಕ್ಷ & ಉಪಾಧ್ಯಕ್ಷರ ಚುನಾವಣೆ
4)ಗ್ರಾಮ ಪಂಚಾಯಿತಿ ಸಭೆ

271) ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯರ ಸ್ಥಾನಗಳು ಆಕಸ್ಮಿಕವಾಗಿ ಖಾಲಿಯಾದರೆ ಈ ಕೆಳಗಿನ ವಿಧಾನದ ಮೂಲಕ ಭರ್ತಿ ಮಾಡತಕ್ಕದ್ದು

1)ನಾಮನಿರ್ದೇಶನ  2)ಚುನಾವಣೆ ಮೂಲಕ
3)ಆಡಳಿತಾಧಿಕಾರಿ ನೇಮಕ  4)ಖಾಲಿ ಬಿಡುವುದು

272) ಆಕಸ್ಮಿಕವಾಗಿ ಖಾಲಿಯಾದ ಸ್ಥಾನಗಳಿಗೆ ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯರು ಆಯ್ಕೆಯಾದರೆ ಅವರ ಪದಾವಧಿಯು ಈ ಕೆಳಕಂಡಂತೆ ಇರುತ್ತದೆ?

1)ಆ ಸ್ಥಾನ ತೆರವಾಗದೆ ಇದ್ದರೆ, ಆಯ್ಕೆಯಾದ ಸದಸ್ಯನು ಎಲ್ಲಿಯವರೆಗೆ ಅಧಿಕಾರದಲ್ಲಿರುತ್ತಿದ್ದಾನೆಯೋ ಅಲ್ಲಿಯವರೆಗೂ ಹುದ್ದೆಯ ಅವಧಿ ಯಾಗಿರುತ್ತದೆ.
2)5ವರ್ಷಗಳ ಪೂರ್ಣ ಅವಧಿ
3)ಆಯ್ಕೆಯಾದ ದಿನದಿಂದ 4 ವರ್ಷದ ಅವಧಿ
4)ಆಯ್ಕೆಯಾದ ದಿನದಿಂದ 2 ವರ್ಷಗಳು

## ಪ್ರಕರಣ-52. ಗ್ರಾಮ ಪಂಚಾಯಿತಿ ಸಭೆ

273) ಪ್ರಕರಣ-52 ಏನನ್ನು ತಿಳಿಸುತ್ತದೆ?

1) ಗ್ರಾಮ ಸಭೆ  2)ಗ್ರಾಮ ಪಂಚಾಯತಿ ಸಭೆ
3) ವಾರ್ಡ್ ಸಭೆ 4)ತಾಲ್ಲೂಕು ಪಂಚಾಯತಿ ಸಭೆ

274) ಗ್ರಾಮ ಪಂಚಾಯತಿ ಸಭೆಯು ಕನಿಷ್ಠ ಈ ಅವಧಿಗೆ ಸೇರಬೇಕು

1)6ತಿಂಗಳು 2)2ತಿಂಗಳು 3)1 ತಿಂಗಳು 4)3 ತಿಂಗಳು

275) ಗ್ರಾಮ ಪಂಚಾಯತಿ ಸಭೆ ಎಲ್ಲಿ ಸೇರಬೇಕು?

1)ಗ್ರಾಮದಲ್ಲಿ  2)ತಾಲ್ಲೂಕು ಪಂಚಾಯತಿಯಲ್ಲಿ
3)ತಾಲ್ಲೂಕು ಆಫೀಸ್‌ನಲ್ಲಿ  4)ಗ್ರಾಮ ಪಂ.ಕಛೇರಿಯಲ್ಲಿ

276)ಗ್ರಾಮ ಪಂಚಾಯತಿಯ ಸಭೆಯನ್ನು ಈ ಕೆಳಗಿನ ಯಾರು ನಿರ್ದಿಷ್ಟಪಡಿಸಬಹುದಾದ ಕಾಲದಲ್ಲಿ ಸಭೆ ಕರೆಯತಕ್ಕದ್ದು

1)ಕಾರ್ಯದರ್ಶಿ 2)ಇ.ಓ 3)ಅಧ್ಯಕ್ಷರು 4)ಉಪಾಧ್ಯಕ್ಷರು

277) ಗ್ರಾಮ ಪಂಚಾಯತಿಯ ಸಭೆಯನ್ನು ಅಧ್ಯಕ್ಷರು ಸೂಕ್ತವೆಂದು ಯೋಚಿಸಿದಾಗಲೆಲ್ಲಾ ಎಷ್ಟು ದಿನದೊಳಗೆ ವಿಶೇಷ ಸಭೆ ಕರೆಯಬಹುದು.

1)15 ದಿನ  2)30ದಿನ  3)45ದಿನ  4)60ದಿನ

278) ವಿಶೇಷ ಸಭೆ ಕರೆಯಲು ಅಧ್ಯಕ್ಷರಿಗೆ ಸದಸ್ಯರ ಒಟ್ಟು ಸಂಖ್ಯೆಯ ____ಗಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಬರಹದಲ್ಲಿ ಕೋರಿಕೆ ಸಲ್ಲಿಸಬೇಕು?

1)1/3  2)2/3  3)1/4  4)3/4

279) ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯನ್ನು ನಡೆಸಲು ಈ ಕೆಳಗಿನ ಯಾರು ಸ್ಥಳಗಳನ್ನು & ಅದಕ್ಕೆ ಸಂಬಂಧಿಸಿದ ಮಾಹಿತಿ ಒಳಗೊಂಡ ನೋಟೀಸ್‌ನ್ನು ಸದಸ್ಯರಿಗೆ ನೀಡಬೇಕಾಗಿದೆ

1) ಅಧ್ಯಕ್ಷರು  2) ಉಪಾಧ್ಯಕ್ಷರು
3) ಪಿಡಿಓ/ಕಾರ್ಯದರ್ಶಿ  4) ಇ.ಓ

280) ಗ್ರಾಮ ಪಂಚಾಯತಿ ಸಾಮಾನ್ಯ ಸಭೆ ನಡೆಸಲು ಸದಸ್ಯರಿಗೆ ನೋಟೀಸ್‌ನ್ನು ಎಷ್ಟು ಪೂರ್ಣ ದಿನಗಳ ಮುಂಚಿತವಾಗಿ ನೀಡಬೇಕು?

1)10 ದಿನ  2)15ದಿನ  3)20ದಿನ  4)7ದಿನ

281) ಗ್ರಾಮ ಪಂಚಾಯತಿ ವಿಶೇಷ ಸಭೆ ನಡೆಸಲು ಸದಸ್ಯರಿಗೆ ನೋಟೀಸ್‌ನ್ನು ಎಷ್ಟು ಪೂರ್ಣ ದಿನಗಳ ಮುಂಚಿತವಾಗಿ ನೀಡಬೇಕು

1)10 ದಿನ  2)15ದಿನ  3)3ದಿನ  4)7ದಿನ

ಉತ್ತರಗಳು:- 267)3 268)2 269)3 270)1 271)2 272)1 273)2 274)3 275)4 276) 3 277)1 278)1 279)3 280)4 281)3



Scanned by CamScanner

**282) ಗ್ರಾಮ ಪಂಚಾಯತಿಯ ಸಭೆ ನಡೆಯುವ ಸ್ಥಳ, ದಿನಾಂಕ, ವೇಳೆ ಹಾಗೂ ಸಭೆಯಲ್ಲಿ ನಡೆಯಲಿರುವ ಕಲಾಪಗಳನ್ನು ನಿರ್ದಿಷ್ಟ ಪಡಿಸಿದ ನೋಟೀಸ್‌ನ್ನು ಈ ಕೆಳಗಿನ ಜಾಗದಲ್ಲಿ ಅಂಟಿಸತಕ್ಕದ್ದು**

1) ಸಾರ್ವಜನಿಕ ಬಸ್ ನಿಲ್ದಾಣದಲ್ಲಿ
2) ರೈಲ್ವೆ ನಿಲ್ದಾಣದಲ್ಲಿ
3) ತಾಲ್ಲೂಕು ಕಛೇರಿ ನೋಟೀಸ್ ಬೋರ್ಡ್‌ನಲ್ಲಿ
4) ಗ್ರಾಮ ಪಂಚಾಯತಿ ನೋಟೀಸ್ ಬೋರ್ಡ್‌ನಲ್ಲಿ

**283) ಗ್ರಾಮ ಪಂಚಾಯತಿ ವಿಶೇಷ ಸಭೆಯನ್ನು ಕರೆಯಲು ಅಧ್ಯಕ್ಷರು ವಿಫಲರಾದರೆ ಈ ಕೆಳಗಿನ ಯಾರು ವಿಶೇಷ ಸಭೆಯನ್ನು ಕರೆಯಬಹುದು**

1) ಕಾರ್ಯದರ್ಶಿ 2) ಇ.ಓ
3) ಜಿಲ್ಲಾಧಿಕಾರಿ 4) ಉಪಾಧ್ಯಕ್ಷರು

**284) ಗ್ರಾಮ ಪಂಚಾಯತಿಯ ಸಭೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ**

1) ಗ್ರಾಮ ಪಂಚಾಯತಿ ಪ್ರದೇಶದ ಮೇಲೆ ಅಥವಾ ಅದರ ಯಾವುದೇ ಭಾಗದ ಮೇಲೆ ಅಧಿಕಾರ ಹೊಂದಿರುವ ಯಾವುದೇ ಅಧಿಕಾರಿಗೆ ಸಭೆಗೆ ಭಾಗವಹಿಸಲು ನೋಟೀಸ್‌ನ್ನು ನೀಡಬಹುದು
2) ಗ್ರಾಮ ಪಂಚಾಯತಿ ಪ್ರದೇಶದ ಅಧಿಕಾರಿಯು ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಗೂ ಹಾಜರಾಗತಕ್ಕದ್ದು ಮತ್ತು ಕಲಾಪದಲ್ಲಿ ಭಾಗವಹಿಸತಕ್ಕದ್ದು.
3) ಗ್ರಾಮ ಪಂಚಾಯತಿ ಸಭೆಗೆ ಹಾಜರಾದ ಅಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸಬಹುದು ಆದರೆ ಮತ ಹಾಕುವಂತಿಲ್ಲ.
4) ಗ್ರಾಮ ಪಂಚಾಯತಿ ಸಭೆಗೆ ಹಾಜರಾದ ಅಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸಬಹುದು & ಮತ ಹಾಕಬಹುದು.

**285) ಗ್ರಾಮ ಪಂಚಾಯತಿಯ ವಿಶೇಷ ಸಭೆಯನ್ನು ನಡೆಸಲು ಕ್ರಮ ಕೈಗೊಳ್ಳುವಂತೆ ಈ ಕೆಳಗಿನ ಯಾರಿಗೆ ಅಧ್ಯಕ್ಷರು ನಿರ್ದೇಶಿಸುತ್ತಾರೆ?**

1) ಪಿ.ಡಿ.ಓ/ಕಾರ್ಯದರ್ಶಿ 2) ಉಪಾಧ್ಯಕ್ಷರಿಗೆ
3) ಇ.ಓ 4) ಸ್ಥಾಯಿಸಮಿತಿ ಅಧ್ಯಕ್ಷರಿಗೆ

**286) ಪಿಡಿಓ/ಕಾರ್ಯದರ್ಶಿರವರು ಗ್ರಾಮ ಪಂಚಾಯತಿ ಸಭೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಕಾರ್ಯ ನಿರ್ವಹಿಸುತ್ತಾರೆ?**

1) ಸದಸ್ಯರಿಗೆ ನೋಟೀಸ್ ಕಳುಹಿಸುವುದು
2) ಸಭೆ ಕರೆಯಲು ಅಗತ್ಯ ಕ್ರಮ ಕೈಗೊಳ್ಳುವುದು
3)ನೋಟೀಸ್‌ನ್ನು ಗ್ರಾಮ ಪಂಚಾಯತಿ ನೋಟೀಸ್ ಬೋರ್ಡ್‌ನಲ್ಲಿ ಅಂಟಿಸುವ ವ್ಯವಸ್ಥೆ ಮಾಡುವುದು.
4)ಮೇಲಿನ ಎಲ್ಲವೂ

## ಪ್ರಕರಣ 63. ಕೋರಂ & ಕಾರ್ಯವಿಧಾನ

**287) ಪ್ರಕರಣ 63 ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂಚಾಯತಿ ಸಭೆ
2) ಗ್ರಾ.ಪಂ. ಸಭೆಯ ಕೋರಂ & ಕಾರ್ಯವಿಧಾನ
3) ತಾಲ್ಲೂಕು ಪಂಚಾಯತಿ ಸಭೆ
4) ಗ್ರಾಮ ಪಂಚಾಯತಿ ನಿರ್ಣಯ

**288) ಗ್ರಾಮ ಪಂಚಾಯತಿಯ ಸಭೆ ನಡೆಸಲು ಒಟ್ಟು ಸದಸ್ಯರ ಸಂಖ್ಯೆಯ__ದಷ್ಟು ಕನಿಷ್ಠ ಕೋರಂ ಈ ಕೆಳಗಿನದ್ದಾಗಿರುತ್ತದೆ.**

1) 1/2 2) 2/3 3)3/4 4)1/4

**289) ಗ್ರಾಮ ಪಂಚಾಯತಿಯ ಸಭೆಗಾಗಿ ಕೋರಂ ಇಲ್ಲದಿದ್ದರೆ ಈ ಕೆಳಗಿನ ಯಾವ ಕ್ರಮವನ್ನು ಅನುಸರಿಸತಕ್ಕದ್ದು**

1) 30ನಿಮಿಷಗಳವರೆಗೆ ಕಾಯತಕ್ಕದ್ದು
2) ಸಭೆಯನ್ನು ಮಾರನೇ ದಿನಕ್ಕೆ ಅಥವಾ ತರುವಾಯದ ದಿನಕ್ಕೆ ನಿಗದಿಪಡಿಸಿ ಮುಂದೂಡತಕ್ಕದ್ದು
3)ನಿಗದಿಪಡಿಸಿದ ಸಭೆಯ ಬಗ್ಗೆ ನೋಟೀಸ್‌ನ್ನು ಗ್ರಾಮ ಪಂಚಾಯತಿ ಕಛೇರಿಯಲ್ಲಿ ಅಂಟಿಸತಕ್ಕದ್ದು
4)ಮೇಲಿನ ಎಲ್ಲಾ ಕ್ರಮ ಅನುಸರಿಸತಕ್ಕದ್ದು

**290) ಗ್ರಾಮ ಪಂಚಾಯತಿಯ ಸಭೆಯನ್ನು ಕೋರಂ ಇಲ್ಲದೆ ಮುಂದೂಡಿದಾಗ ಅಂದಿನ ಕಲಾಪಗಳಿಗೆ ಸಂಬಂಧಿಸಿದಂತಹ ವಿಷಯಗಳಿಗೆ ಈ ಕೆಳಗಿನ ಕ್ರಮ ಕೈಗೊಳ್ಳಬೇಕು?**

1)ತರುವಾಯ ನಿಗಧಿಪಡಿಸಿದ ಕೋರಂ ಇರುವ ಸಭೆ ಮುಂದಿಟ್ಟು ವಿಲೇ ಮಾಡತಕ್ಕದ್ದು
2)ಆ ಎಲ್ಲಾ ವಿಷಯಗಳು ಕೋರಂ ಇಲ್ಲದಿದ್ದರೆ ವಜಾಗೊಳ್ಳುತ್ತದೆ.
3) ಎಲ್ಲಾ ವಿಷಯಗಳನ್ನು ಕೋರಂ ಇಲ್ಲದಿದ್ದರೆ ಅಂಗೀಕಾರವಾಗುತ್ತದೆ.
4)ಎಲ್ಲಾ ವಿಷಯಗಳನ್ನು ನಿರ್ಣಯವಾಗಿಲ್ಲವೆಂದು ಭಾವಿಸಬೇಕು

**291) ಅಧ್ಯಕ್ಷರ / ಉಪಾಧ್ಯಕ್ಷರನ್ನು ಚುನಾಯಿಸಲು ಉದ್ದೇಶಕ್ಕಾಗಿ ಕರೆದಿರುವ ಯಾವುದೇ ಸಭೆಯನ್ನು ಕೋರಂ ಅಭಾವದಿಂದ ಮುಂದೂಡಿದ್ದರೆ, ಅಂತಹ ಮುಂದೂಡಲಾದ ಸಭೆಯಲ್ಲಿ ಕೋರಂ ಇರುವುದು**

1)ಕಡ್ಡಾಯವಾಗಿಲ್ಲ 2)ಕಡ್ಡಾಯವಾಗಿದೆ
3)ಕಡ್ಡಾಯವಾಗಿರಬಹುದು/ಕಡ್ಡಾಯವಾಗಿಲ್ಲದೆ ಇರಬಹುದು 4)ಅಧ್ಯಕ್ಷರ ವಿವೇಚನೆಗೆ ಬಿಟ್ಟದ್ದು

**ಉತ್ತರಗಳು:-** 282) 4 283) 4 284) 4 285) 1 286) 4 287) 2 288) 1 289) 4 290) 1 291) 1



Scanned by CamScanner

**292) ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಇಬ್ಬರು ಗೈರು ಹಾಜರಾಗಿದ್ದರೆ ಸಭೆಯ ಅಧ್ಯಕ್ಷತೆಯನ್ನು ಈ ಕೆಳಗಿನ ಯಾರು ವಹಿಸತಕ್ಕದ್ದು**

1) ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡತಕ್ಕದ್ದು
2) ಉತ್ಪಾದಕ ಸ್ಥಾಯಿ ಸಮಿತಿಯ ಅಧ್ಯಕ್ಷರು
3) ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷರು
4) ಮಹಿಳಾ ಸದಸ್ಯರು

**293) ಗ್ರಾಮ ಪಂಚಾಯತಿ ಸಭೆಯ ಯಾವುದೇ ವಿಷಯಗಳನ್ನು ಈ ಕೆಳಗಿನ ಯಾವ ವಿಧಾನದ ಮೂಲಕ ತೀರ್ಮಾನಿಸತಕ್ಕದ್ದು**

1) ಸರಳ ಬಹುಮತ ಮೂಲಕ
2) ಸದಸ್ಯರ ಬಹುಮತದ ಮೂಲಕ
3) ಮೌಖಿಕವಾಗಿ
4) ಬಹುಮತದ ಅವಶ್ಯಕತೆ ಇಲ್ಲ

**294) ಯಾವುದೋ ಒಂದು ವಿಷಯಕ್ಕೆ ಸಮಾನ ಮತಗಳು ಬಿದ್ದಾಗ ಈ ಕೆಳಗಿನ ಯಾರು ನಿರ್ಣಾಯಕ ಮತ ನೀಡತಕ್ಕದ್ದು**

1) ಪಿಡಿಒ/ಕಾರ್ಯದರ್ಶಿ
2) ಇ. ಓ 3) ಉಪಾಧ್ಯಕ್ಷರು
4) ಅಧ್ಯಕ್ಷತೆ ವಹಿಸಿದ್ದವರು

**295) ಗ್ರಾಮ ಪಂಚಾಯತಿಯ ಯಾರೇ ಸದಸ್ಯನು ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಹಿತಾಸಕ್ತಿಯನ್ನು ಹೊಂದಿದ್ದರೆ ಗ್ರಾಮ ಪಂಚಾಯತಿ ಸಭೆಯಲ್ಲಿ ಈ ಕೆಳಗಿನದ್ದನ್ನು ಪಾಲಿಸಬೇಕು**

1) ಆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ
2) ಆ ವಿಷಯಕ್ಕೆ ಸಂಬಂಧಿಸಿದಂತೆ ಮತ ಹಾಕತಕ್ಕದ್ದಲ್ಲ
3) ಆ ವಿಷಯಕ್ಕೆ ಸಂಬಂಧಿಸಿದಂತೆ ಹಿತಾಸಕ್ತಿ ಹೊಂದಿದ್ದರೆ ಅಧ್ಯಕ್ಷತೆ ವಹಿಸತಕ್ಕದ್ದಲ್ಲ.
4) ಮೇಲಿನ ಎಲ್ಲವೂ

**296) ಯಾವುದೇ ಸದಸ್ಯನು ಗ್ರಾಮ ಪಂಚಾಯತಿ ಸಭೆಯಲ್ಲಿ ಚರ್ಚೆಗೆ ಬರುವ ವಿಷಯದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿದ್ದರೆ ಅದನ್ನು ಗ್ರಾಮ ಪಂಚಾಯತಿಗೆ ತಿಳಿಸುವುದು**

1)ಕರ್ತವ್ಯವಾಗಿರತಕ್ಕದ್ದು 2)ಕರ್ತವ್ಯವಾಗಿಲ್ಲ
3)ತಿಳಿಸದಿರಬಹುದು 4)ಕೇಳಿದರೆ ಮಾತ್ರ ತಿಳಿಸಬೇಕು

**297) ಗ್ರಾಮ ಪಂಚಾಯತಿ ಸಭೆಯ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಅಂದಿನ ದಿನ ಚರ್ಚೆಗೆ ಬಂದಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಕ್ರಮ ಅನುಸರಿಸಬೇಕು**

1) ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದಲ್ಲ
2) ಸಭೆಯ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ
3) ಮತ ಹಾಕತಕ್ಕದ್ದಲ್ಲ
4) ಮೇಲಿನ ಎಲ್ಲವೂ

**298) ಗ್ರಾಮ ಪಂಚಾಯತಿಯ ಸಭೆಗೆ ಭಾಗವಹಿಸಲು ಅಥವಾ ಸಮಿತಿಯ ಸಭೆಗೆ ಭಾಗವಹಿಸಲು ಪ್ರತಿಯೊಬ್ಬ ಸದಸ್ಯನಿಗೂ ಈ ಕೆಳಗಿನ ಯಾವ ಸೌಲಭ್ಯವನ್ನು ನೀಡತಕ್ಕದ್ದು**

1) ಪ್ರತಿಯೊಬ್ಬ ಸದಸ್ಯನಿಗೆ ಉಪಾವೇಶನದ ಪ್ರತಿದಿನಕ್ಕೆ ನಿಗದಿ ಪಡಿಸಿದ ಉಪಾವೇಶನ ಶುಲ್ಕವನ್ನು ನೀಡತಕ್ಕದ್ದು.
2) ಉಪವೇಶನ ಶುಲ್ಕ ನೀಡಬೇಕಾದ್ದು ಕಡ್ಡಾಯವಲ್ಲ
3) ಉಪವೇಶನ ಶುಲ್ಕ ನೀಡುವುದು ಪಿಡಿಒ/ ಕಾರ್ಯದರ್ಶಿಯ ವಿವೇಚನೆಗೆ ಬಿಟ್ಟದ್ದು
4) ಉಪವೇಶನಶುಲ್ಕ ನೀಡುವುದು ಕಾನೂನು ಬಾಹಿರ

**299) ಗ್ರಾಮ ಪಂಚಾಯತಿಯ ಕೋರಂಗೆ ಸಂಬಂಧಿಸಿದಂತೆ ಒಟ್ಟು ಸದಸ್ಯರ ಸಂಖ್ಯೆಯ ಅರ್ಧದಷ್ಟನ್ನು ಈ ಕೆಳಗಿನ ಯಾವ ನಿಯಮದಲ್ಲಿ ನಿಗದಿಪಡಿಸಲಾಯಿತು?**

1) ಗ್ರಾಮ ಪಂಚಾಯಿತಿ ಸಭೆಯ ಕಾರ್ಯಕಲಾಪ ಅಧಿನಿಯಮ – 1993
2) ಗ್ರಾಮ ಪಂಚಾಯಿತಿ ಸಭೆಯ ಕಾರ್ಯಕಲಾಪ ಅಧಿನಿಯಮ – 2003
3) ಗ್ರಾಮ ಪಂಚಾಯಿತಿ ಸಭೆಯ ಕಾರ್ಯಕಲಾಪ ಅಧಿನಿಯಮ – 2005
4) ಗ್ರಾಮ ಪಂಚಾಯಿತಿ ಸಭೆಯ ಕಾರ್ಯಕಲಾಪ ಅಧಿನಿಯಮ – 2008

**300) ಗ್ರಾಮ ಪಂಚಾಯತಿ ಸಭೆಯ ಅಧಿಕಾರಿಗಳಿಗೆ ಈ ಕೆಳಗಿನ ಯಾರು ನೋಟೀಸು ಮೂಲಕ ಸಭೆಗೆ ಹಾಜರಾಗುವಂತೆ ತಿಳಿಸುತ್ತಾರೆ?**

1) ಅಧ್ಯಕ್ಷರ ಅನುಮತಿ ಮೇರೆಗೆ ಪಿ.ಡಿ.ಒ
2) ಅಧ್ಯಕ್ಷರ ಅನುಮತಿ ಮೇರೆಗೆ ಇ.ಓ
3) ಉಪಾಧ್ಯಕ್ಷರ ಅನುಮತಿ ಮೇರೆಗೆ ಸದಸ್ಯರು
4) ಕಾರ್ಯನಿರ್ವಹಣಾಧಿಕಾರಿ

**ಉತ್ತರಗಳು:-** 292) 1 293) 2 294) 1 295) 4 296) 1 297) 4 298) 1 299) 2 300) 1



Scanned by CamScanner

## ಪ್ರಕರಣ-54. ನಿರ್ಣಯ ಮಾರ್ಪಾಟು ಮಾಡುವುದು/ ರದ್ದುಪಡಿಸುವುದು

**301) ಪ್ರಕರಣ-54 ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂಚಾಯತಿಯು ಯಾವುದೇ ನಿರ್ಣಯವನ್ನು ಆರು ತಿಂಗಳೊಳಗೆ ಸಾಮಾನ್ಯ ಸಭೆಯ ಅಥವಾ ವಿಶೇಷ ಸಭೆಯ ಅಗತ್ಯತೆ ಪೂರೈಸಲು ನಿರ್ಣಯವನ್ನು ಮಾರ್ಪಾಟು ಮಾಡಬಹುದು/ ರದ್ದುಪಡಿಸುವುದು ಎಂದು ತಿಳಿಸುತ್ತದೆ.
2) ನಡವಳಿಕೆಪುಸ್ತಕ
3) ಅಧ್ಯ ಪ್ರಶ್ನೆಗಳು
4) ವ್ಯವಹರಣೆ ವಿಧಿ ಮಾನ್ಯತೆ

**302) ಗ್ರಾಮ ಪಂಚಾಯತಿಯ ಯಾವುದೇ ನಿರ್ಣಯಗಳನ್ನು ಮಾರ್ಪಾಟು ಮಾಡಲು & ರದ್ದು ಮಾಡಲು ಎಷ್ಟು ಅವಧಿಯೊಳಗಾಗಿ ಮಾಡಬೇಕಾಗಿದೆ.**

1) 1ವರ್ಷ 2) 2ವರ್ಷ
3) 6ತಿಂಗಳು 4) 3 ತಿಂಗಳು

**303) ಗ್ರಾಮ ಪಂಚಾಯತಿಯ ಯಾವುದೇ ನಿರ್ಣಯಗಳನ್ನು ಮಾರ್ಪಾಟು ಮಾಡಲು ಅಥವಾ ರದ್ದು ಮಾಡಲು ಕರೆಯುವ ಸಾಮಾನ್ಯ ಸಭೆ ಅಥವಾ ವಿಶೇಷ ಸಭೆಯು ಈ ಕೆಳಗಿನ ಯಾವ ಪ್ರಕರಣದ ಅಡಿಯಲ್ಲಿ ನಡೆಸಿದ ಸಭೆಯ ಅಗತ್ಯತೆಗಳನ್ನು ಪೂರೈಸಬೇಕು?**

1) 52ನೇ ಪ್ರಕರಣದ 3ನೇ ಉಪಪ್ರಕರಣ
2) 52ನೇ ಪ್ರಕರಣದ 4ನೇ ಉಪಪ್ರಕರಣ
3) 2ನೇ ಪ್ರಕರಣದ 2ನೇ ಉಪಪ್ರಕರಣ
4) 53ನೇ ಪ್ರಕರಣದ 3ನೇ ಉಪಪ್ರಕರಣ

**304) ಗ್ರಾಮ ಪಂಚಾಯತಿ ನಿರ್ಣಯವನ್ನು ಮಾರ್ಪಾಟು ಮಾಡಲು ಅಥವಾ ರದ್ದು ಮಾಡಲು ಸಾಮಾನ್ಯ ಅಥವಾ ವಿಶೇಷ ಸಭೆಯಲ್ಲಿ ಒಟ್ಟು ಸದಸ್ಯರ ಎಷ್ಟು ಸದಸ್ಯರ ಬಹುಮತ ಅಗತ್ಯವಿರಬೇಕು?**

1) 1/6 ಕ್ಕಿಂತ ಕಡಿಮೆ ಇಲ್ಲದಷ್ಟು
2) 1/3 ಕ್ಕಿಂತ ಕಡಿಮೆ ಇಲ್ಲದಷ್ಟು
3) 1/4 ಕ್ಕಿಂತ ಕಡಿಮೆ ಇಲ್ಲದ ಷ್ಟು
4) 1/2 ಕ್ಕಿಂತ ಕಡಿಮೆ ಇಲ್ಲದಷ್ಟು

**305) ಗ್ರಾಮ ಪಂಚಾಯತಿ ಮಾಡಿದ ನಿರ್ಣಯಗಳನ್ನು**

1) ಮಾರ್ಪಡಿಸಬಹುದು
2) ರದ್ದುಪಡಿಸಬಹುದು
3) ಮಾರ್ಪಡಿಸಬಹುದು & ರದ್ದುಪಡಿಸಬಹುದು
4) ಮಾರ್ಪಡಿಸುವಂತಿಲ್ಲ ಮತ್ತು ರದ್ದುಪಡಿಸುವಂತಿಲ್ಲ

## ಪ್ರಕರಣ-55. ನಡವಳಿಕೆ ಪುಸ್ತಕ

**306) ಪ್ರಕರಣ-55 ಏನನ್ನು ತಿಳಿಸುತ್ತದೆ?**

1) ಖಾಲಿಯಾದ ಸ್ಥಾನಕ್ಕೆ ಸದಸ್ಯರ ಭರ್ತಿಯ ಬಗ್ಗೆ ತಿಳಿಸುತ್ತದೆ
2) ಗ್ರಾಮ ಪಂಚಾಯತಿ ಸಭೆಗೆ ಸಂಬಂಧಿಸಿದ ನಡವಳಿಕೆ ಪುಸ್ತಕದ ಬಗ್ಗೆ ತಿಳಿಸುತ್ತದೆ
3) ಸದಸ್ಯರ ಅನರ್ಹತೆ
4) ಗ್ರಾಮ ಪಂಚಾಯತಿಯ ಸಭೆ

**307) ನಡವಳಿಕೆ ಪುಸ್ತಕವು ಈ ಕೆಳಗಿನ ಯಾವ ಅಂಶ ಒಳಗೊಂಡಿರುತ್ತದೆ?**

1) ಸಭೆಯಲ್ಲಿ ಹಾಜರಾದ ಸದಸ್ಯರ ಹೆಸರು
2) ಸಭೆಯಲ್ಲಿ ಹಾಜರಾದ ಅಧಿಕಾರಿಗಳ ಹೆಸರು
3) ಸಭೆಯಲ್ಲಿ ಕೈಗೊಂಡ ವ್ಯವಹಾರಗಳು & ನಿರ್ಣಯದ ಪರ ಅಥವಾ ವಿರುದ್ಧ ಮತ ಕೊಡುವವರ ಸದಸ್ಯರ ಹೆಸರು
4) ಮೇಲಿನ ಎಲ್ಲವೂ

**308) ನಡವಳಿಕೆ ಪುಸ್ತಕಕ್ಕೆ ಈ ಕೆಳಗಿನ ಯಾರು ಓದಿ ಹೇಳಿದ & ಒಪ್ಪಿಕೊಂಡ ತರುವಾಯ ರುಜು ಹಾಕಬೇಕು**

1) ಗ್ರಾಮ ಪಂಚಾಯತಿ ಸಭೆಯ ಅಧ್ಯಕ್ಷತೆ ವಹಿಸಿದವರು.
2) ಗ್ರಾಮ ಪಂಚಾಯತಿಯ ಕಾರ್ಯದರ್ಶಿ
3) ಗ್ರಾಮ ಪಂಚಾಯತಿಯ ಹಿರಿಯ ಸದಸ್ಯರು
4) ಕಾರ್ಯನಿರ್ವಹಣಾಧಿಕಾರಿಗಳು

**309) ನಡವಳಿಕೆ ಪುಸ್ತಕವನ್ನು ಈ ಕೆಳಗಿನ ಯಾರು ನಿರ್ವಹಣೆ ಮಾಡುತ್ತಾರೆ?**

1) ಗ್ರಾಮ ಪಂಚಾಯತಿ ಅಧ್ಯಕ್ಷ
2) ಪಿಡಿಒ/ಕಾರ್ಯದರ್ಶಿ
3) ಗ್ರಾಮ ಪಂಚಾಯತಿ ಉಪಾಧ್ಯಕ್ಷ
4) ಗ್ರಾಮ ಪಂಚಾಯತಿಯ ಹಿರಿಯ ಸದಸ್ಯ

**310) ನಡವಳಿಕೆ ಪುಸ್ತಕವನ್ನು ಈ ಕೆಳಗಿನ ಯಾರು ಪರಿಶೀಲಿಸುವ ಹಕ್ಕನ್ನು ಹೊಂದಿರುತ್ತಾರೆ?**

1) ಭಾರತದ ಯಾವುದೇ ಪ್ರಜೆ
2) ಕರ್ನಾಟಕದ ಯಾವುದೇ ಪ್ರಜೆ
3) ಆ ಜಿಲ್ಲೆಯ ಯಾವುದೇ ಪ್ರಜೆ
4) ಆ ಗ್ರಾಮ ಪಂಚಾಯತಿಯ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳ ಯಾವುದೇ ವ್ಯಕ್ತಿ

**ಉತ್ತರಗಳು:-** 301) 1 302) 3 303) 1 304) 4 305) 3 306) 2 307) 4 308) 1 309) 2 310) 4



Scanned by CamScanner

**311) ಗ್ರಾಮ ಪಂಚಾಯತಿಯು ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಒಂದು ಪ್ರತಿಯನ್ನು ಸಭೆಯ ದಿನಾಂಕದಿಂದ ಈ ಕೆಳಗಿನ ಯಾವ ಅವಧಿಯೊಳಗೆ ಪಿಡಿಒ/ಕಾರ್ಯದರ್ಶಿಗಳು ಕಾರ್ಯ ನಿರ್ವಹಣಾಧಿಕಾರಿಗೆ ಕಳುಹಿಸಬೇಕು?**

1) 8 ದಿನ 2) 10 ದಿನ

3) 15 ದಿನ 4) 20 ದಿನ

**312) ಗ್ರಾಮ ಪಂಚಾಯತಿಯ ವ್ಯವಹರಣೆಗಳನ್ನು ಮತ್ತು ವ್ಯವಹರಣೆಗೆ ಸಂಬಂಧಿಸಿದಂತೆ ನಿರ್ಣಯಗಳ ಪರವಾಗಿ & ವಿರುದ್ಧವಾಗಿ ಮತ ಹಾಕಿದ ಸದಸ್ಯರ ವಿವರವನ್ನು ಒಳಗೊಂಡ ವ್ಯವಹರಣೆಯನ್ನು ಪಂಚಾಯತಿಯ ಸೂಚನ ಫಲಕದಲ್ಲಿ ಈ ಕೆಳಗಿನ ಯಾವ ದಿನದೊಳಗಾಗಿ ಪ್ರದರ್ಶಿಸತಕ್ಕದ್ದು.**

1) 6 2) 8 3) 9 4) 3

**313) ಗ್ರಾಮ ಪಂಚಾಯತಿ ಸಭೆಯ ನಡವಳಿ ಪತ್ರಗಳನ್ನು ಈ ಕೆಳಗಿನ ಯಾರಿಗೆ ಒದಗಿಸತಕ್ಕದ್ದು**

1) ಎಲ್ಲಾ ಮತದಾರರಿಗೂ

2) ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೂ

3) ಗ್ರಾಮ ಪಂಚಾಯತಿ ಎಲ್ಲಾ ಸದಸ್ಯರಿಗೂ

4) ಗ್ರಾಮ ಪಂಚಾಯತಿ ಅಧ್ಯಕ್ಷ & ಉಪಾಧ್ಯಕ್ಷರಿಗೆ ಮಾತ್ರ

**314) ನಡವಳಿಕೆ ಪುಸ್ತಕಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.**

1) ನಡವಳಿಕೆ ಪುಸ್ತಕವು ಕನ್ನಡ ಭಾಷೆಯಲ್ಲಿರಬೇಕು.

2) ನಡವಳಿಕೆ ಪುಸ್ತಕವನ್ನು ಗ್ರಾಮ ಪಂಚಾಯಿತಿ ಸದಸ್ಯರು ಮಾತ್ರ ಪರಿಶೀಲಿಸಲು ಅವಕಾಶವಿದೆ.

3) ನಡವಳಿಕೆ ಪುಸ್ತಕವು ಸಭೆಯ ಎಲ್ಲಾ ನಡವಳಿಗಳನ್ನು ನಮೂದಿಸಿರಬೇಕು

4) ನಡವಳಿ ಪುಸ್ತಕದಲ್ಲಿ ಅಧ್ಯಕ್ಷರು ಸಹಿ ಹಾಕಿರಬೇಕು

**315) ನಡವಳಿ ಪುಸ್ತಕದಲ್ಲಿ ಈ ಕೆಳಗಿನ ಯಾವ ಅಂಶ ನಮೂದಾಗಿರುತ್ತದೆ.**

1) ಸಭೆ ನಡೆದ ದಿನಾಂಕ

2) ಸಭೆಗೆ ಹಾಜರಿದ್ದ ಸದಸ್ಯರ ಹೆಸರು & ಸಭೆಗೆ ಹಾಜರಿದ್ದ ಅಧಿಕಾರಿಗಳ ಹೆಸರು

3) ಸಭೆಯಲ್ಲಿ ಚರ್ಚಿಸಲಾದ ಪ್ರತಿಯೊಂದು ವಿಷಯ &ವಿಷಯಕ್ಕೆ ಸಂಬಂಧಿಸಿದಂತೆ ಪರ ಮತ್ತು ವಿರೋಧ ಮತ ಚಲಾಯಿಸುವವರು.

4) ಮೇಲಿನ ಎಲ್ಲವೂ

**316) ಗ್ರಾಮ ಪಂಚಾಯಿತಿ ಸಭೆಯಲ್ಲಿ ಕಾಯಿದೆಯನ್ನು ಉಲ್ಲಂಘಿಸಿ ತೆಗೆದುಕೊಂಡಿದ್ದರೆ ಪಿಡಿಒ ಈ ಕೆಳಗಿನ ಯಾವ ಕ್ರಮವನ್ನು ಕೈಗೊಳ್ಳಬೇಕು.**

1) ಸದಸ್ಯರ ಗಮನಕ್ಕೆ ತರಬೇಕು

2) ಲಿಖಿತ ರೂಪದಲ್ಲಿ ನಡವಳಿ ಪುಸ್ತಕದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

3) ವಿಷಯವನ್ನು ಲಿಖಿತ ರೂಪದಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿ (ಇಒ)

4) ಮೇಲಿನ ಎಲ್ಲವೂ

## ಪ್ರಕರಣ-56, ಅಧ್ವ ಪ್ರಶ್ನೆಗಳು & ನಿರ್ಣಯಗಳು

**317) ಪ್ರಕರಣ-56 ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂಚಾಯತಿ ಸಭೆಯಲ್ಲಿ ಅಧ್ವ ಪ್ರಶ್ನೆಗಳನ್ನು ಕೇಳುವ ಮತ್ತು ನಿರ್ಣಯಗಳನ್ನು ಮಂಡಿಸಲು & ಸದಸ್ಯರಿಗೆ ಇರುವ ಅಧಿಕಾರವನ್ನು ತಿಳಿಸುತ್ತದೆ.

2) ವ್ಯವಹರಣೆ ವಿಧಿ ಮಾನ್ಯತೆ

3) ಅಧ್ಯಕ್ಷ & ಉಪಾಧ್ಯಕ್ಷರ ಅಧಿಕಾರ

4) ಸ್ಥಾಯಿ ಸಮಿತಿ ಸ್ಥಾಪನೆ

**318) ಸದಸ್ಯರು ಈ ಕೆಳಗಿನ ಯಾವ ಸಂದರ್ಭದಲ್ಲಿ ಅಧ್ವ ಪ್ರಶ್ನೆಗಳನ್ನು ಕೇಳಲು ಅವಕಾಶವಿದೆ?**

1) ಗ್ರಾಮ ಪಂಚಾಯತಿ ಕಾಮಗಾರಿಗೆ ಸಂಬಂಧಿಸಿದ ನಿರ್ಲಕ್ಷತೆ

2) ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಸ್ವತ್ತಿನ ಪೋಲು

3) ಯಾವುದೇ ಸ್ಥಳೀಯ ಪ್ರದೇಶದ ಬೇಡಿಕೆಗಳ ಬಗ್ಗೆ ಮತ್ತು ಅಪೇಕ್ಷೆಯ ವೆಂದು ಕಂಡು ಬರಬಹುದಾದ ಯಾವುದೇ ಸುಧಾರಣೆ ಬಗ್ಗೆ ಸಲಹೆ ನೀಡಬಹುದು.

4) ಮೇಲಿನ ಎಲ್ಲವೂ

**319) ಸದಸ್ಯರು ಈ ಕೆಳಗಿನ ಯಾವ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಣಯಗಳನ್ನು ಮಂಡಿಸಲು ಮತ್ತು ಅಧ್ಯಕ್ಷರಿಗೆ ಅಧ್ವ ಪ್ರಶ್ನೆ ಕೇಳುವ ಈ ಕೆಳಗಿನ ಯಾರು ಅಧಿಕಾರ ಹೊಂದಿರುತ್ತಾರೆ?**

1) ಗ್ರಾಮ ಪಂಚಾಯತಿ ಕೆಲವು ಸದಸ್ಯರುಗಳು

2) ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರುಗಳು

3) ಸ್ಥಾಯಿ ಸಮಿತಿ ಸದಸ್ಯರುಗಳು

4) ಗ್ರಾಮ ಪಂಚಾಯತಿ ಅಧ್ಯಕ್ಷ & ಉಪಾಧ್ಯಕ್ಷರು

**ಉತ್ತರಗಳು:-** 311) 2 312) 3 313) 3 314) 2 315) 4 316) 4 317) 1 318) 4 319) 2



Scanned by CamScanner

**320) ಅರ್ಜಿ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಯಾವ ವರ್ಷ ರೂಪಿಸಲಾಗಿದೆ.**

1) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಸಭೆಗಳಲ್ಲಿನ ಅರ್ಜಿ ಪ್ರಶ್ನೆಗಳು ಮತ್ತು ನಿರ್ಣಯಗಳು) ನಿಯಮಗಳು-1993

2) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಸಭೆಗಳಲ್ಲಿನ ಅರ್ಜಿ ಪ್ರಶ್ನೆಗಳು ಮತ್ತು ನಿರ್ಣಯಗಳು) ನಿಯಮಗಳು-2015

3) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಸಭೆಗಳಲ್ಲಿನ ಅರ್ಜಿ ಪ್ರಶ್ನೆಗಳು ಮತ್ತು ನಿರ್ಣಯಗಳು) ನಿಯಮಗಳು-1994

4) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಸಭೆಗಳಲ್ಲಿನ ಅರ್ಜಿ ಪ್ರಶ್ನೆಗಳು ಮತ್ತು ನಿರ್ಣಯಗಳು) ನಿಯಮಗಳು-2002

**321) ಕರ್ನಾಟಕ ಪಂಚಾಯತ್ ರಾಜ್ ನಿಯಮ-1994ರ ಅನ್ವಯ ಪಂಚಾಯತ್ ಸದಸ್ಯನು ಯಾವ ನಿರ್ಣಯವನ್ನು ಮಂಡಿಸಲು ಆ ಗ್ರಾಮ ಪಂಚಾಯತ್ ಸಭೆಯ ಎಷ್ಟು ದಿನಗಳ ಮುಂಚಿತವಾಗಿ ಅಧ್ಯಕ್ಷನಿಗೆ ನಿರ್ಣಯದ ನೋಟೀಸನ್ನು ಕಳುಹಿಸತಕ್ಕದ್ದು.**

1) 10ದಿನಗಳು 2) 5 ದಿನಗಳು
3) 15ದಿನಗಳು 4) 20ದಿನಗಳು

**322) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಸದಸ್ಯರು ಕಳುಹಿಸಿದ ನಿರ್ಣಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಸಂದರ್ಭದಲ್ಲಿ ಅಂಗೀಕರಿಸತಕ್ಕದ್ದಲ್ಲ.**

1) ನಿರ್ದಿಷ್ಟ ವಿವಾದಾಂಶವನ್ನು ಗಮನಾರ್ಹವಾಗಿ ಎತ್ತಿದ್ದರೆ

2) ಮಾನಹಾನಿಕರ ಹೇಳಿಕೆಗಳನ್ನು ಒಳಗೊಂಡಿದ್ದರೆ

3) ವ್ಯಕ್ತಿಗಳ ವರ್ತನೆ ಅಥವಾ ಶೀಲಕ್ಕೆ ಧಕ್ಕೆ ಉಂಟು ಮಾಡುತ್ತಿದ್ದರೆ

4) ನ್ಯಾಯಾಲಯದ ನಿರ್ಣಯದಲ್ಲಿದ್ದರೆ

5) ಗ್ರಾಮ ಪಂಚಾಯಿತಿಗೆ ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಅಭಿಪ್ರಾಯ ಘೋಷಣೆ ಅಥವಾ ಶಿಫಾರಸ್ಸಿನ ರೂಪದಲ್ಲಿದ್ದರೆ

**ಸಂಕೇತಗಳು:**

1) 1, 2 & 3 ಸರಿ 2) 1, 3 & 4 ಸರಿ
3) 1 & 5 ಸರಿ 4) ಎಲ್ಲವೂ ಸರಿ

**323) ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಅರ್ಜಿ ಪ್ರಶ್ನೆಗಳು ಮತ್ತು ನಿರ್ಣಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾರ ತೀರ್ಮಾನವು ಅಂತಿಮವಾಗಿರುತ್ತದೆ.**

1) ಪಿಡಿಒ 2) ಪಂಚಾಯಿತಿಯ ಉಪಾಧ್ಯಕ್ಷ

3) ಪಂಚಾಯಿತಿಯ ಅಧ್ಯಕ್ಷ

4) ಪಂಚಾಯಿತಿಯ ಸ್ಥಾಯಿಸಮಿತಿ ಅಧ್ಯಕ್ಷರು

**324) ನಿರ್ಣಯ ಮಂಡನೆ ಸಂದರ್ಭದಲ್ಲಿ ಸದಸ್ಯರು ಭಾಷಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ.**

1) ಅಧ್ಯಕ್ಷರು ಭಾಷಣದ ಕಾಲ ಪರಿಮಿತಿಯನ್ನು ನಿಗದಿಪಡಿಸುವರು.

2) ಅಧ್ಯಕ್ಷರು ಅವಶ್ಯಕವೆಂದು ಪರ್ಯಾಲೋಚಿಸಿದರೆ ದೀರ್ಘ ಕಾಲಾವಧಿಗೆ ಅನುಮತಿ ನೀಡಬಹುದು.

3) ಪಿಡಿಒ ಭಾಷಣದ ಕಾಲಮಿತಿಯನ್ನು ನಿಗದಿಪಡಿಸುತ್ತಾರೆ.

4) ಪಿಡಿಒ ಮತ್ತು ಅಧ್ಯಕ್ಷರು ಭಾಷಣದ ಕಾಲಮಿತಿಯನ್ನು ನಿಗದಿಪಡಿಸುತ್ತಾರೆ.

**ಸಂಕೇತಗಳು:**

1) 1 & 2 ಸರಿ 2) 1 & 3 ಸರಿ
3) 1, 2 & 3 ಸರಿ 4) 1, 2, 3, & 4 ಸರಿ

**325) ನಿರ್ಣಯದ ಮೇಲಿನ ಮತ ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಮಾಡಿದ ಮತದಾನವನ್ನು ದಾಖಲು ಮಾಡತಕ್ಕದ್ದು & ಮತ ಪತ್ರಗಳನ್ನು ಫಲಿತಾಂಶ ಘೋಷಣೆ ಮಾಡಿದ ಎಷ್ಟು ದಿನಗಳವರೆಗೆ ನಾಶ ಮಾಡತಕ್ಕದ್ದಲ್ಲ.**

1) 10 ದಿನಗಳು 2) 15 ದಿನಗಳು
3) 20 ದಿನಗಳು 4) 30 ದಿನಗಳು

**326) ನಿರ್ಣಯಗಳನ್ನು ಈ ಕೆಳಗಿನ ಯಾವ ವಿಧಾನದ ಮೂಲಕ ಅಂಗೀಕರಿಸಬಹುದು.**

1) ಸದಸ್ಯರು ಕೈ ಎತ್ತುವುದರ ಮೂಲಕ

2) ಮತದಾನ ಮಾಡುವ ಮೂಲಕ

3) ಮತದಾನದಿಂದ ಮಾತ್ರ

4) 1 & 2 ನೇ ವಿಧಾನ

**327) ಅರ್ಜಿ ಪ್ರಶ್ನೆಗಳನ್ನು ಕೇಳಲು ಸದಸ್ಯರು ಈ ಕೆಳಗಿನ ಯಾರಿಗೆ ನೋಟೀಸನ್ನು ತಲುಪಿಸಬೇಕು?**

1) ಪಿಡಿಒ 2) ಅಧ್ಯಕ್ಷರು
3) ಉಪಾಧ್ಯಕ್ಷರು 4) ಸ್ಥಾಯಿ ಸಮಿತಿ ಅಧ್ಯಕ್ಷರು

**328) ಅರ್ಜಿ ಪ್ರಶ್ನೆಗಳನ್ನು ಕೇಳಲು ಸದಸ್ಯರು ಎಷ್ಟು ದಿನದೊಳಗೆ ನೋಟೀಸನ್ನು ತಲುಪಿಸಬೇಕು?**

1) 5 ದಿನದೊಳಗೆ 2) 8 ದಿನದೊಳಗೆ
3) 10 ದಿನದೊಳಗೆ 4) 12 ದಿನದೊಳಗೆ

**ಉತ್ತರಗಳು:-** 320) 3 321) 2 322) 4 323) 3 324) 1 325) 2 326) 4 327) 2 328) 1



Scanned by CamScanner

## ಪ್ರಕರಣ-57, ವ್ಯವಹರಣೆಗಳ ವಿಧಿ ಮಾನ್ಯತೆ

**329) ಪ್ರಕರಣ 57 ಏನನ್ನು ತಿಳಿಸುತ್ತದೆ?**

1) ವ್ಯವಹರಣೆಗಳ ವಿಧಿ ಮಾನ್ಯತೆ ಬಗ್ಗೆ ತಿಳಿಸುತ್ತದೆ
2) ಅಧ್ಯಕ್ಷರ ಅವಿಶ್ವಾಸ ನಿರ್ಣಯದ ಬಗ್ಗೆ ತಿಳಿಸುತ್ತದೆ
3) ಅಧ್ಯಕ್ಷ & ಉಪಾಧ್ಯಕ್ಷರ ಅಧಿಕಾರವಧಿ ತಿಳಿಸುತ್ತದೆ
4) ಅಧ್ಯಕ್ಷ & ಉಪಾಧ್ಯಕ್ಷರ ಅಧಿಕಾರವನ್ನು ತಿಳಿಸುತ್ತದೆ.

**330) ಗ್ರಾಮ ಪಂಚಾಯಿತಿಯ ವ್ಯವಹರಣೆ ಮತ್ತು ವಿಧಿಮಾನ್ಯತೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ ಮುಂದುವರಿದ ಸದಸ್ಯರು ನಿರ್ವಹಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಯಲ್ಲಿ ಯಾವುದು ಸರಿಯಾಗಿದೆ.**

1) ಇಂತಹ ಸಂದರ್ಭದಲ್ಲಿ ತೆಗೆದುಕೊಂಡ ಯಾವುದೇ ನಿರ್ಣಯಗಳು ಮುಂದುವರೆಯುವುದಿಲ್ಲ.
2) ಇಂತಹ ಸಂದರ್ಭದಲ್ಲಿ ಯಾವುದೇ ಕೈಗೊಂಡ ನಿರ್ಣಯಗಳೂ ಕೂಡ ಅಂಗೀಕಾರ ಆಗುವುದಿಲ್ಲ.
3) ಅಂತಹ ಸಂದರ್ಭದಲ್ಲಿ ಕೈಗೊಂಡ ಯಾವುದೇ ನಿರ್ಣಯಗಳೂ ಕೂಡ ಸಿಂಧುತ್ವ ಹೊಂದುವುದಿಲ್ಲ.
4) ಯಾವುದೇ ಖಾಲಿ ಸ್ಥಾನ ಉಂಟಾಗದಿದ್ದರೆ ಹೇಗೆ ಕಾರ್ಯ ನಿರ್ವಹಿಸುತ್ತಿದ್ದರೋ ಹಾಗೇ ಕಾರ್ಯ ನಿರ್ವಹಿಸಬಹುದು

**331) ವ್ಯವಹರಣೆಗಳ ವಿಧಿ ಮಾನ್ಯತೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಯಾವುದೇ ಸದಸ್ಯರಿಗೆ ನೋಟೀಸನ್ನು ನೀಡದಿದ್ದಲ್ಲಿ, ಆ ಸಂದರ್ಭದಲ್ಲಿ ಕೈಗೊಂಡ ನಿರ್ಣಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?**

1) ಕೈಗೊಂಡ ನಿರ್ಣಯಗಳು ಯಾವುದೇ ಸದಸ್ಯನಿಗೆ ನೋಟೀಸನ್ನು ನೀಡದೇ ಇದ್ದರೂ ಬಹುಸಂಖ್ಯಾತರು ತೆಗೆದುಕೊಂಡ ನಿರ್ಣಯವು ಸಿಂಧುತ್ವವಾಗುವುದಿಲ್ಲ
2) ಕೈಗೊಂಡ ನಿರ್ಣಯಗಳು ಯಾವುದೇ ಸದಸ್ಯನಿಗೆ ನೋಟೀಸನ್ನು ನೀಡದೇ ಇದ್ದರೂ ಬಹುಸಂಖ್ಯಾತರು ಸೇರಿ ತೆಗೆದುಕೊಂಡ ನಿರ್ಣಯವು ಸಿಂಧುತ್ವವನ್ನು ಹೊಂದುತ್ತದೆ.
3) ಯಾವುದೇ ಗ್ರಾಮ ಪಂಚಾಯಿತಿ ಅಥವಾ ಪಂಚಾಯಿತಿಯ ಯಾವುದೇ ಸಮಿತಿಗಳ ಯಾವುದೇ ನಿರ್ಣಯವನ್ನು ಯಾವನೇ ಸದಸ್ಯನಿಗೆ ನೋಟೀಸನ್ನು ಜಾರಿ ಮಾಡುವುದಲ್ಲದೇ ಯಾವುದೇ ಅಕ್ರಮತೆಯ ಕಾರಣದಿಂದಾಗಿ ಅಸಿಂಧುವೆಂದು ಭಾವಿಸತಕ್ಕದ್ದು.
4) ಮೇಲಿನ ಎಲ್ಲವೂ

**332) ಸಂಬಂಧ ಪಟ್ಟ ಗ್ರಾಮಪಂಚಾಯಿತಿಯು ಅಂಗೀಕರಿಸಿದ ಯಾವುದೇ ನಿಯಮವು ಉಲ್ಲಂಘನೆ ಆಗಿದೆಯೆಂದು ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಯು ತೀರ್ಮಾನಿಸಿದರೆ ಅದನ್ನು ಅಧಿನಿಯಮದ ಯಾವ ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವುದಕ್ಕಾಗಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಕಳುಹಿಸಿಕೊಡತಕ್ಕದ್ದು.**

1) 230ಪ್ರಕರಣ
2) 235 ಪ್ರಕರಣ
3) 236 ಪ್ರಕರಣ
4) 237–ಪ್ರಕರಣ

**333) ವ್ಯವಹರಣೆಗಳ ವಿಧಿ ಮಾನ್ಯತೆಯಂತೆ ಈ ಕೆಳಗಿನ ಅಂಶದ ಬಗ್ಗೆ ವಿವರಣೆ ನೀಡುತ್ತದೆ.**

1)ಯಾವುದೇ ಸದಸ್ಯನು/ಅಧ್ಯಕ್ಷ/ಉಪಾಧ್ಯಕ್ಷ ಅನರ್ಹನಾಗಿದ್ದು, ಗ್ರಾಮ ಪಂಚಾಯತಿಯ ಯಾವುದೇ ವ್ಯವಹರಣೆಯಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರದಿದ್ದರೆ ಬಹು ಸಂಖ್ಯಾತರು ಭಾಗವಹಿಸಿ ವ್ಯವಹರಣೆ ಮಾಡಿದ್ದರೆ ಆ ವ್ಯವಹರಣೆಯು ವಿಧಿ ಮಾನ್ಯತೆ ಹೊಂದುತ್ತದೆ ಎಂದು ಹೇಳುತ್ತದೆ.
2)ಗ್ರಾಮ ಪಂಚಾಯತಿಯಲ್ಲಿನ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ ಮುಂದುವರೆದಿರುವ ಸದಸ್ಯರು ಯಾವುದೇ ಖಾಲಿಸ್ಥಾನವು ಉಂಟಾಗಿರದಿದ್ದರೆ ಹೇಗೆ ಕಾರ್ಯನಿರ್ವಹಿಸುತ್ತಿದ್ದರೋ ಹಾಗೆ ಕಾರ್ಯನಿರ್ವಹಿಸಬೇಕೆಂದು ತಿಳಿಸುತ್ತದೆ.
3)ಗ್ರಾಮ ಪಂಚಾಯತಿಯ ಯಾವುದೇ ಸ್ಥಾನ ಖಾಲಿಯಾದರೂ ಉಳಿದ ಅವಧಿಯಲ್ಲಿ ಬಹುಮತವಿರುವ ಸದಸ್ಯರು ಕೈಗೊಂಡ ಕಾರ್ಯಗಳು ಊರ್ಜಿತವಾಗುತ್ತವೆ ಎಂದು ತಿಳಿಸುತ್ತದೆ.
4) ಮೇಲಿನ ಎಲ್ಲವೂ

**ಉತ್ತರಗಳು:-** 329) 1 330) 1 331) 2 332) 4 333) 4



Scanned by CamScanner

chanakyaloka.com



ಅಧ್ಯಾಯ: 4

# ಗ್ರಾಮ ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು (ಪ್ರಕರಣ 58 ರಿಂದ 110)

## ಪ್ರಕರಣ-58: ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳು

**1) ಪ್ರಕರಣ 58 ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂಚಾಯತಿಯ ಪ್ರಕಾರ್ಯಗಳನ್ನು ವ್ಯವಹರಿಸುತ್ತದೆ.
2) ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳನ್ನು ವ್ಯವಹರಿಸುತ್ತದೆ
3) ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳನ್ನು ವ್ಯವಹರಿಸುತ್ತದೆ
4) ಮೂರು ಹಂತದ ಪಂಚಾಯತಿಯ ಪ್ರಕಾರ್ಯಗಳನ್ನು ವ್ಯವಹರಿಸುತ್ತದೆ.

**2) ಗ್ರಾಮ ಪಂಚಾಯತಿಯು ಈ ಕೆಳಕಂಡ ಅನುಸೂಚಿಯಲ್ಲಿರುವ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.**

1) ಅನುಸೂಚಿ-3 2) ಅನುಸೂಚಿ-2
3) ಅನುಸೂಚಿ-1 4) ಅನುಸೂಚಿ-4

**3) ಗ್ರಾಮ ಪಂಚಾಯತಿಯು ಈ ಕೆಳಗಿನ ಕಾರ್ಯಗಳನ್ನು ಕೂಡ ನಿರ್ವಹಿಸತಕ್ಕದ್ದು**

1) ಶೌಚಾಲಯ ಒದಗಿಸುವುದು
2) ಪ್ರತ್ಯೇಕ ಶೌಚಾಲಯ ಒದಗಿಸುವುದು
3) ನೀರಿನ ಪೂರೈಕೆ 4) ಮೇಲಿನ ಎಲ್ಲವೂ

**4) ಗ್ರಾಮ ಪಂಚಾಯತಿಯು ಪ್ರಕರಣ 58(1)ರ ಅಡಿಯಲ್ಲಿ ನಿರ್ವಹಿಸಬೇಕಾದ ಕಾರ್ಯ ಯಾವುದು?**

1) ತೆರಿಗೆ ದರಗಳು, ಶುಲ್ಕಗಳನ್ನು ಪರಿಶೀಲಿಸುವುದು & ವಸೂಲಿ ಮಾಡುವುದು.
2) ಸಾರ್ವತ್ರಿಕ ಪ್ರಾಥಮಿಕ ಶಾಲೆಗೆ ಸಾರ್ವತ್ರಿಕ ದಾಖಲಾತಿ ಯನ್ನು ಖಚಿತಪಡಿಸಿಕೊಳ್ಳುವುದು
3) ಜನನ ಮರಣ ನೊಂದಣಿ ಮಾಡಿಕೊಳ್ಳುವುದು
4) ಮೇಲಿನ ಎಲ್ಲವೂ

**5) ಗ್ರಾಮ ಪಂಚಾಯತಿಯು ಪ್ರಕರಣ 58(1)ರ ಅಡಿಯಲ್ಲಿ ನಿರ್ವಹಿಸಬೇಕಾದ ಪ್ರಕಾರ್ಯವಾಗಿಲ್ಲ?**

1) ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದು
2) ನೈರ್ಮಲ್ಯ ವ್ಯವಸ್ಥೆ & ಸರಿಯಾದ ಚರಂಡಿ ವ್ಯವಸ್ಥೆ ಒದಗಿಸುವುದು
3) ಸಾರ್ವಜನಿಕ ರಸ್ತೆ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ
4) ಸಾರ್ವಜನಿಕ ಆರೋಗ್ಯ ಕೇಂದ್ರ & ಕುಟುಂಬ ಕಲ್ಯಾಣ ಕೇಂದ್ರಗಳನ್ನು ತೆರೆಯುವುದು.

**6) ಈ ಕೆಳಗಿನ ಯಾವುದು ಪ್ರಕರಣ 58 (1)ರ ಅಡಿಯಲ್ಲಿ ಪ್ರಕಾರ್ಯವಾಗಿಲ್ಲ**

1) ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳ ಮೇಲಿನ ಒತ್ತುವರಿ ತೆಗೆದು ಹಾಕುವುದು
2) ರಸ್ತೆ ದೀಪ ಒದಗಿಸುವುದು ಮತ್ತು ವಿದ್ಯುತ್ ಶುಲ್ಕವನ್ನು ನಿಯಮಿತವಾಗಿ ಸಂದಾಯ ಮಾಡುವುದು
3) ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವುದು ಮತ್ತು ನಿರ್ವಹಿಸುವುದು
4) ಅನೈರ್ಮಲೀಕರಣ ಗುಂಡಿಗಳನ್ನು ಮುಚ್ಚಿಸುವುದು

**7) ಈ ಕೆಳಗಿನ ಯಾವುದು ಪ್ರಕರಣ 58 (1)ರ ಅಡಿಯಲ್ಲಿ ಪ್ರಕಾರ್ಯವಾಗಿದೆ.**

1) ಅನಾರೋಗ್ಯಕರ ಪ್ರದೇಶವನ್ನು ಆರೋಗ್ಯಕರವಾಗಿ ಮಾಡುವುದು
2) ಹುಚ್ಚುನಾಯಿಗಳನ್ನು ಮತ್ತು ಮಾಲೀಕರಿಲ್ಲದ ನಾಯಿಗಳನ್ನು ಸಾಯಿಸುವುದು.
3) ಗ್ರಾಮ ಪಂಚಾಯತಿಗೆ ಸೇರಿದ ಎಲ್ಲಾ ಸಮುದಾಯ ಆಸ್ತಿಗಳನ್ನು ನಿರ್ವಹಿಸುವುದು.
4) ಜನಗಣತಿ, ಬೆಳೆಗಣತಿ, ಜಾನುವಾರು ಗಣತಿ, ನಿರುದ್ಯೋಗಿಗಳ ಮತ್ತು ಬಡತನ ರೇಖೆ-ಗಿಂತ ಕೆಳಗಿರುವವರ ಗಣತಿಯ ಸಂಬಂಧಪಟ್ಟ ದಾಖಲೆಯನ್ನು ನಿರ್ವಹಣೆ ಮಾಡುವುದು.
5) ನಿರುಪಯುಕ್ತ ವಸ್ತುಗಳನ್ನು & ಗೊಬ್ಬರವನ್ನು ರಾಶಿ ಹಾಕುವುದಕ್ಕೆ ವಾಸದ ಮನೆಗಳಿಂದ ದೂರವಿರುವ ಜಾಗವನ್ನು ಪ್ರತ್ಯೇಕವಾಗಿ ಗುರ್ತಿಸುವುದು.
6) ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದು

**ಸಂಕೇತಗಳು:**

1) 1, 2, & 3 ಸರಿ 2) 1, 2, 3, & 6 ಸರಿ
3) ಮೇಲಿನ ಎಲ್ಲವೂ 4) 3, 4, 5, & 6 ಸರಿ

**ಉತ್ತರಗಳು:-** 1) 1 2) 3 3) 4 4) 4 5) 4 6) 3 7) 3



Scanned by CamScanner

**8) 58(1)ನೇ ಪ್ರಕರಣದಲ್ಲಿ ಗ್ರಾಮ ಪಂಚಾಯಿತಿಯು ಪ್ರತಿ ವರ್ಷ ಕನಿಷ್ಠ ಶೇಕಡಾ __ರಷ್ಟು ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಗೃಹ ಒದಗಿಸುವುದು**

1)ಶೇ.10 2)ಶೇ.20 3)ಶೇ.30 4)ಶೇ.40

**9) 58(2)ನೇ ಪ್ರಕರಣದ ಪ್ರಕಾರ ಗ್ರಾಮ ಪಂಚಾಯಿತಿ ಪ್ರದೇಶದ ನಿವಾಸಿಗಳಿಗೆ ಈ ಕೆಳಗಿನ ವ್ಯವಸ್ಥೆ ಮಾಡುವುದು ಗ್ರಾಮ ಪಂಚಾಯಿತಿ ಕಾರ್ಯವಾಗಿಲ್ಲ?**

1) ಆರೋಗ್ಯ ಸುರಕ್ಷತೆಯನ್ನು ವೃದ್ಧಿಸುವ ಕಾರ್ಯಕ್ರಮ

2) ಶಿಕ್ಷಣ, ಸುಖಸೌಖ್ಯ ಸೌಕರ್ಯ

3) ಸಾಮಾಜಿಕ ಅಥವಾ ಆರ್ಥಿಕ ಉನ್ನತಿ ವೃದ್ಧಿಸುವ ಕಾರ್ಯಕ್ರಮ

4) ನಾಗರೀಕರಿಗೆ ಜೀವವಿಮೆ ಸೌಲಭ್ಯವನ್ನು ಒದಗಿಸುವುದು

**10) 58(3)ನೇ ಪ್ರಕರಣದ ಅನ್ವಯ ಗ್ರಾಮ ಪಂಚಾಯಿತಿಯು ತನ್ನ ಸಭೆಯಲ್ಲಿ ಒಟ್ಟು ಸದಸ್ಯರ __ರಷ್ಟು ಸದಸ್ಯರು ಸಮರ್ಥಿಸಿಕೊಂಡ ನಿರ್ಣಯದಿಂದ ಕೆಲವು ಕಾರ್ಯಗಳನ್ನು ಕೈಗೊಳ್ಳಬಹುದು**

1) 1/3 2) 1/4 3) 1/6 4) 2/3

**11) 58(3)ನೇ ಪ್ರಕರಣದಡಿಯಲ್ಲಿ ಈ ಕೆಳಗಿನ ಕಾರ್ಯಗಳನ್ನು ಗ್ರಾಮ ಪಂಚಾಯಿತಿ ನಿರ್ವಹಿಸಬಹುದು.**

1)ಪಂಚಾಯಿತಿ ಪ್ರದೇಶದೊಳಗೆ ಅಥವಾ ಹೊರಗಡೆ ಆದರೆ ಜಿಲ್ಲೆಯ ಒಳಗಡೆ ಯಾವುದೇ ವಸ್ತು ಪ್ರದರ್ಶನ ಅಥವಾ ಸಮ್ಮೇಳನ ವಿಚಾರಣಾ ಸಂಕೀರ್ಣಗಳ ವ್ಯವಸ್ಥೆ ಮಾಡಬಹುದು ಮತ್ತು ವಂತಿಕೆ ನೀಡಬಹುದು.

2)ಜಿಲ್ಲೆಯ ಹೊರಗಡೆ ಯಾವುದೇ ವಸ್ತು ಪ್ರದರ್ಶನ ಅಥವಾ ಸಮ್ಮೇಳನಕ್ಕೆ ವ್ಯವಸ್ಥೆ ಮಾಡಬಹುದು & ವಂತಿಕೆ ನೀಡಬಹುದು.

3)ರಾಜ್ಯದ ಹೊರಗಡೆ ಯಾವುದೇ ವಸ್ತು ಪ್ರದರ್ಶನ ಅಥವಾ ಸಮ್ಮೇಳನಕ್ಕೆ ವ್ಯವಸ್ಥೆ ಮಾಡಬಹುದು & ವಂತಿಕೆ ನೀಡಬಹುದು.

4)ದೇಶದ ಹೊರಗಡೆ ಯಾವುದೇ ವಸ್ತು ಪ್ರದರ್ಶನ ಅಥವಾ ಸಮ್ಮೇಳನಕ್ಕೆ ವ್ಯವಸ್ಥೆ ಮಾಡಬಹುದು & ವಂತಿಕೆ ನೀಡಬಹುದು.

**12) 58(3)ನೇ ಪ್ರಕರಣದಲ್ಲಿ ಪಂಚಾಯಿತಿ ಪ್ರದೇಶದೊಳಗಿನ ಈ ಕೆಳಗಿನ ಸಂಸ್ಥೆಗಳಿಗೆ ವಂತಿಕೆ ಕೊಡಬಹುದು.**

1) ವೈದ್ಯಕೀಯ 2) ಶೈಕ್ಷಣಿಕ

3) ಧರ್ಮಾರ್ಥ ಸಂಸ್ಥೆಗಳಿಗೆ 4)ಮೇಲಿನ ಎಲ್ಲವೂ

**13) ಗ್ರಾಮ ಪಂಚಾಯಿತಿಯಿಂದ ವಂತಿಕೆ ಪಡೆಯುವ ಧರ್ಮಾರ್ಥ ಸಂಸ್ಥೆಗಳು ಈ ಕೆಳಗಿನ ಯಾವ ಅಧಿನಿಯಮದಡಿಯಲ್ಲಿ ನೊಂದಾಯಿತರಾಗಿರಬೇಕು**

1) 1961ರ ಕರ್ನಾಟಕ ಸಂಘಗಳ ನೊಂದಣಿ ಅಧಿನಿಯಮ

2) ಕರ್ನಾಟಕ ಸಂಘದ ಅಧಿನಿಯಮ –1959

3) 1 & 2

4) 1 ಅಥವಾ 2

**ಪ್ರಕರಣ 58-ಎ:- ಜೀತಗಾರಿಕೆ ಪದ್ಧತಿ ಮತ್ತು ಸಂಬಂಧದಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯಿತಿಯ ಕರ್ತವ್ಯವಾಗಿರತಕ್ಕದ್ದು.**

**14) 58 ಎ ಪ್ರಕರಣವು ಏನನ್ನು ತಿಳಿಸುತ್ತದೆ?**

1) ಜೀತಗಾರಿಕೆ ಪದ್ಧತಿಯಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯಿತಿಯ ಕರ್ತವ್ಯವಾಗಿರತಕ್ಕದ್ದು

2) ಜೀತಪದ್ಧತಿ ಬಗ್ಗೆ ವರದಿ ಸಲ್ಲಿಸುವುದು ತಾಲ್ಲೂಕು ಪಂಚಾಯತಿಯ ಕಾರ್ಯವಾಗಿರುವುದು.

3) ಜೀತಪದ್ಧತಿ ಬಗ್ಗೆ ವರದಿ ಸಲ್ಲಿಸುವುದು ಜಿಲ್ಲಾ ಪಂಚಾಯತಿ ಕಾರ್ಯವಾಗಿದೆ.

4) ಜೀತಪದ್ಧತಿ ಬಗ್ಗೆ ವರದಿ ಸಲ್ಲಿಸುವುದು ಸ್ಥಾಯಿ ಸಮಿತಿ ಕಾರ್ಯವಾಗಿದೆ.

**15) ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಜೀತಗಾರಿಕೆ ಪದ್ಧತಿ ಬಗ್ಗೆ ಗ್ರಾಮ ಪಂಚಾಯಿತಿಯು ಈ ಕೆಳಗಿನ ಯಾರಿಗೆ ವರದಿ ಸಲ್ಲಿಸತಕ್ಕದ್ದು.**

1) ಕಾರ್ಮಿಕ ಆಯುಕ್ತರು ಅಥವಾ ಸರ್ಕಾರ ನಿಗಧಿಪಡಿಸಿದ ಪ್ರಾಧಿಕಾರ

2) ಅಸಿಸ್ಟೆಂಟ್ ಕಮೀಷನರ್ ಅಥವಾ ಸರ್ಕಾರ ನಿಗಧಿಪಡಿಸಿದ ಪ್ರಾಧಿಕಾರ

3) ಕಮೀಷನರ್ ಅಥವಾ ಸರ್ಕಾರ ನಿಗಧಿಪಡಿಸಿದ ಪ್ರಾಧಿಕಾರ

4) ಡೆಪ್ಯೂಟಿ ಕಮೀಷನರ್ ಅಥವಾ ಸರ್ಕಾರ ನಿಗಧಿಪಡಿಸಿದ ಪ್ರಾಧಿಕಾರಕ್ಕೆ

**16) ಜೀತ ಪದ್ಧತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಅಧಿನಿಯಮದಡಿಯಲ್ಲಿ ವರದಿ ಸಲ್ಲಿಸತಕ್ಕದ್ದು**

1)ಜೀತ ಪದ್ಧತಿ ನಿರ್ಮೂಲನಾ ಅಧಿನಿಯಮ 1986

2)ಜೀತ ಪದ್ಧತಿ ನಿರ್ಮೂಲನಾ ಅಧಿನಿಯಮ 1976

3)ಜೀತ ಪದ್ಧತಿ ನಿರ್ಮೂಲನಾ ಅಧಿನಿಯಮ 1996

4)ಜೀತ ಪದ್ಧತಿ ನಿರ್ಮೂಲನಾ ಅಧಿನಿಯಮ 2006

**ಉತ್ತರಗಳು:-** 8) 1 9) 4 10) 4 11) 1 12) 4 13) 3 14) 1 15) 4 16) 2



Scanned by CamScanner

17) ಗ್ರಾಮ ಪಂಚಾಯತಿಯು ತನ್ನ ಪ್ರದೇಶದಲ್ಲಿನ ಜೀತ ಪದ್ಧತಿಯ ಬಗ್ಗೆ ವರದಿ ಸಲ್ಲಿಸಲು ವಿಫಲವಾದರೆ ಈ ಕೆಳಗಿನ ಪ್ರಕರಣದಡಿಯಲ್ಲಿ ಕರ್ತವ್ಯ ನಿರ್ವಹಿಸುವಲ್ಲಿ ಆದ ತಪ್ಪು ಎಂದು ಭಾವಿಸತಕ್ಕದ್ದು

1) 278ನೇ ಪ್ರಕರಣ 2) 260ನೇ ಪ್ರಕರಣ
3) 268ನೇ ಪ್ರಕರಣ 4) 270ನೇ ಪ್ರಕರಣ

18) ೨೬೮ನೇ ಪ್ರಕರಣದ ಅನ್ವಯ ಕರ್ತವ್ಯ ನಿರ್ವಹಿಸುವಲ್ಲಿ ತಪ್ಪು ಮಾಡಿದರೆ

1) ಗ್ರಾಮ ಪಂಚಾಯತಿ ವಿಸರ್ಜನೆ
2) ಗ್ರಾಮ ಪಂಚಾಯತಿಗೆ ದಂಡ
3) ಗ್ರಾಮ ಪಂಚಾಯತಿಯ ಅನುದಾನ ನಿಲುಗಡೆ
4) ಗ್ರಾಮ ಪಂಚಾಯತಿಯನ್ನು ವಜಾಗೊಳಿಸುವುದು

19) ಜೀತಪದ್ಧತಿಗೆ ಸಂಬಂಧಿಸಿದಂತೆ ಸಂವಿಧಾನದ ಯಾವ ವಿಧಿಯಲ್ಲಿ ನಿಷೇಧ ಹೇರಿದೆ?

1) 24ನೇ ವಿಧಿ 2) 23ನೇ ವಿಧಿ
3) 22ನೇ ವಿಧಿ 4) 25ನೇ ವಿಧಿ

20) ಬಾಲಕಾರ್ಮಿಕ ನಿಷೇಧದ ಬಗ್ಗೆ ಸಂವಿಧಾನದ ಯಾವ ವಿಧಿಯಲ್ಲಿ ಪ್ರಸ್ತಾಪಿಸಲಾಗಿದೆ.

1) 23ನೇ ವಿಧಿ 2) 24ನೇ ವಿಧಿ
3) 25ನೇ ವಿಧಿ 4) 26ನೇ ವಿಧಿ

21) ಬಾಲಕಾರ್ಮಿಕತೆಯನ್ನು ನಿಷೇಧಿಸುವಂತೆ ಈ ಕೆಳಗಿನ ಯಾವ ವರ್ಷ ಕಾಯಿದೆಯನ್ನು ರೂಪಿಸಲಾಗಿದೆ.

1) 1980 2) 1986 3) 1987 4) 1990

22) ಬಾಲ ಕಾರ್ಮಿಕರ ಈ ಕೆಳಗಿನ ಯಾವ ವರ್ಷದ ಕೆಳಗಿನ ಮಕ್ಕಳನ್ನು ಅಪಾಯಕಾರಿ ಕೆಲಸಗಳಿಗೆ ತೊಡಗಿಸಿದರೆ ಬಾಲಕಾರ್ಮಿಕವಾಗುತ್ತದೆ.

1) 10 ವರ್ಷದೊಳಗೆ 2) 12 ವರ್ಷದೊಳಗೆ
3) 14 ವರ್ಷದೊಳಗೆ 4) 24 ವರ್ಷದೊಳಗೆ

24) ಜೀತಪದ್ಧತಿ ಎಂದರೆ ಈ ಕೆಳಗಿನ ಯಾವುದಾಗುತ್ತದೆ.

1) ಕಾನೂನಾತ್ಮಕವಾಗಿ ಮಜೂರಿ ನೀಡಿ ದುಡಿಮೆ ಮಾಡಿಸಿಕೊಳ್ಳುವುದು.
2) ನ್ಯಾಯಬದ್ಧ ಮಜೂರಿ ಪಡೆಯದೇ ಕೇವಲ ನಾಮಮಾತ್ರ ಮಜೂರಿ ನೀಡುವುದು.
3) ಖಾಸಗಿಯಾಗಿ ಕೆಲಸ ಮಾಡುವುದು.
4) ಮೇಲಿನ ಯಾವುದೂ ಅಲ್ಲ.

25) ಜೀತಪದ್ಧತಿಗೆ ಸಂಬಂಧಿಸಿದಂತೆ ಜೀತ ಕಾಯಿದೆ ಅನ್ವಯ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೆ.

1) ಜಿಲ್ಲಾ ಉಸ್ತುವಾರಿ ಸಚಿವರು
2) ಜಿಲ್ಲಾ ನ್ಯಾಯಾಧೀಶರು
3) ಡೆಪ್ಯುಟಿ ಕಮೀಷನರ್
4) ಪೋಲೀಸ್ ವರಿಷ್ಠಾಧಿಕಾರಿ

26) ಜೀತಪದ್ಧತಿಗೆ ಸಂಬಂಧಿಸಿದಂತೆ ಜೀತ ಕಾಯಿದೆ ಅನ್ವಯ ಉಪವಿಭಾಗದ ಮಟ್ಟದ ಸಮಿತಿಯಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೆ.

1) ಉಪವಿಭಾಗಾಧಿಕಾರಿ
2) ಉಪ ನಿರೀಕ್ಷಕರು
3) ಉಪನಿರೀಕ್ಷಕರು ಕಾರ್ಮಿಕ ಇಲಾಖೆ
4) ಪೋಲೀಸ್ ಉಪ ವಿಭಾಗಾಧಿಕಾರಿ

27) ಗ್ರಾಮ ಪಂಚಾಯಿತಿಯು 58-ಎ ಪ್ರಕರಣದಡಿಯಲ್ಲಿ ಜೀತಪ್ರಕರಣ ಇರುವ ಅಥವಾ ಇಲ್ಲದಿರುವ ಬಗ್ಗೆ ಯಾವ ಸಭೆಯಲ್ಲಿ ಠರಾವು ಮಾಡಬೇಕಾಗಿರುತ್ತದೆ.

1) ಮಾಸಿಕ ಸಭೆ 2) ದ್ವೈ ಮಾಸಿಕ ಸಭೆ
3) ತ್ರೈ ಮಾಸಿಕ ಸಭೆ 4) ವಾರ್ಷಿಕ ಸಭೆ

28) ಜೀತ ಪದ್ಧತಿಯು ಕಾನೂನಿನ ಅಡಿಯಲ್ಲಿ ಇದೊಂದು ಅಪರಾಧವಾಗಿದ್ದು, ಇದಕ್ಕೆ

1) ಸೆರೆಮನೆ ವಾಸವಿದೆ.
2) ಜುಲ್ಮಾನೆ ಇದೆ.
3) ಜುಲ್ಮಾನೆ ಅಥವಾ ಸೆರೆಮನೆ ವಾಸ
4) ಜುಲ್ಮಾನೆ ಮತ್ತು ಸೆರೆಮನೆ ವಾಸ

29) ಜೀತಪದ್ಧತಿಗೆ ಸಂಬಂಧಿಸಿದಂತೆ ಜೀತದಾಳುಗಳನ್ನು ಗುರುತಿಸುವಾಗ ಅಥವಾ ಸಮೀಕ್ಷೆ ಮಾಡುವಾಗ ಈ ಕೆಳಗಿನ ಯಾರು ರೂಪಿಸಿರುವ ಮಾರ್ಗದರ್ಶನಗಳನ್ನು ಅನುಸರಿಸಬೇಕು.

1) ಆಂಧ್ರಪ್ರದೇಶದ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಎಸ್.ಆರ್.ಶಂಕರ್
2) ತಮಿಳುನಾಡಿನಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಎಸ್.ಆರ್.ಶಂಕರ್
3) ಕರ್ನಾಟಕದಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಎಸ್.ಆರ್.ಶಂಕರ್
4) ಕೇರಳದಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಎಸ್.ಆರ್.ಶಂಕರ್

30) ಕರ್ನಾಟಕದಲ್ಲಿ ಜೀತದಾಳುಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ವರ್ಷ ರೂಪಿಸಲಾಗಿದೆ.

1) 2006 2) 2007
3) 2008 4) 2009

ಉತ್ತರಗಳು:- 17)3 18)1 19)2 20) 2 21)2 22)3 24)2 25)3 26)1 27)3 284 29)1 30)3



Scanned by CamScanner

31) ಜೀತದಾಳುಗೆ ಸಂಬಂಧಿಸಿದಂತೆ ಜೀತಮುಕ್ತಗೊಳಿಸುವ ಅಧಿಕಾರಿಯು ಜೀತದಾಳನ್ನು ಗುರುತಿಸಿದ ಎಷ್ಟು ದಿನದೊಳಗೆ ಬಿಡುಗಡೆ ಆದೇಶ ಸಂಬಂಧಿಸಿದವರಿಗೆ ಲಭ್ಯವಾಗಬೇಕು

1) 10 ದಿನಗಳು    2) 15 ದಿನಗಳು
3) 20 ದಿನಗಳು    4) 30 ದಿನಗಳು

**ಪ್ರಕರಣ 58ಆ-ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸಲು ಗ್ರಾಮ ಪಂಚಾಯಿತಿಯ ಕರ್ತವ್ಯ.**

32) 58-ಆ ಪ್ರಕರಣವು ಈ ಕೆಳಗಿನ ಯಾವ ವಿಷಯದ ಬಗ್ಗೆ ತಿಳಿಸುತ್ತದೆ.

1) ಗ್ರಾಮ ಪಂಚಾಯಿತಿಯಲ್ಲಿ ಮಾನವ ಘನತೆಗೆ ಕಳಂಕ ತರುವ ಕೃತ್ಯಗಳು ನಡೆದಾಗ ಅದನ್ನು ವರದಿ ಮಾಡುವುದು.
2) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾನವ ಘನತೆಗೆ ಕಳಂಕ ತರದಂತೆ ತಡೆಯುವುದು.
3) ಗ್ರಾಮಗಳಲ್ಲಿ ದಲಿತರು, ಮಹಿಳೆಯರು, ದುರ್ಬಲರ ಸ್ವಾತಂತ್ರ್ಯಕ್ಕೆ ದಕ್ಕೆ ಬರದಂತೆ ರಕ್ಷಿಸುವುದು.
4) ಮೇಲಿನ ಎಲ್ಲವೂ

33) ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರ ಹಾಕುವಿಕೆ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು ಈ ಕೆಳಗಿನ ಯಾರ ಕರ್ತವ್ಯವಾಗಿರುತ್ತದೆ.

1) ತಾಲ್ಲೂಕು ಪಂಚಾಯಿತಿ
2) ಜಿಲ್ಲಾ ಪಂಚಾಯಿತಿ
3) ಗ್ರಾಮ ಪಂಚಾಯಿತಿ
4) ಸ್ಥಾಯಿ ಸಮಿತಿಗಳು

**ಪ್ರಕರಣ 58ಈ. ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು ಗ್ರಾಮ ಪಂಚಾಯತ್‌ನ ಕರ್ತವ್ಯ.**

34) ಮಹಿಳೆಯರ ಮೇಲೆ ದೌರ್ಜನ್ಯ, ಲೈಂಗಿಕ ಕಿರುಕುಳ ಆಗದಂತೆ ತಡೆಯುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಸಂಬಂಧ ಪಟ್ಟ ಪ್ರಾಧಿಕಾರಿಗೆ ವರದಿ ನೀಡುವುದು ಈ ಕೆಳಗಿನ ಯಾರ ಕರ್ತವ್ಯವಾಗಿರುತ್ತದೆ.

1) ಗ್ರಾಮ ಪಂಚಾಯಿತಿ
2) ತಾಲ್ಲೂಕು ಪಂಚಾಯಿತಿ
3) ಜಿಲ್ಲಾ ಪಂಚಾಯಿತಿ
4) ಸ್ಥಾಯಿ ಸಮಿತಿ

**ಪ್ರಕರಣ 58ಉ - ಕಂದಾಯ ಭೂಮಿಯನ್ನು ಹೊರತುಪಡಿಸಿ ಒತ್ತುವರಿ ಮಾಡಿಕೊಂಡಿರುವ ಗ್ರಾಮ ಪಂಚಾಯಿತಿಯ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವ ಕರ್ತವ್ಯ.**

35) ಗ್ರಾಮ ಪಂಚಾಯಿತಿಗೆ ಸೇರಿದ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ಯಾರ ಕರ್ತವ್ಯವಾಗಿರುತ್ತದೆ.

1) ಸ್ಥಾಯಿ ಸಮಿತಿ    2) ತಾಲ್ಲೂಕು ಪಂಚಾಯಿತಿ
3) ಜಿಲ್ಲಾ ಪಂಚಾಯಿತಿ
4) ಗ್ರಾಮ ಪಂಚಾಯಿತಿ

36) ಗ್ರಾಮ ಪಂಚಾಯಿತಿಯು ವ್ಯಕ್ತಿಯಿಂದಾಗಲೀ ಅಥವಾ ಸಂಸ್ಥೆಗಳಿಂದಾಗಲೀ ಒತ್ತುವರಿಯಾಗಿರುವ ಯಾವ ಜಮೀನನ್ನು ಹೊರತು ಪಡಿಸಿ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಅದರ ಕರ್ತವ್ಯವಾಗಿರುತ್ತದೆ?

1) ಪಂಚಾಯಿತಿಗೆ ಸೇರಿದ ಭೂಮಿಯನ್ನು
2) ಕಂದಾಯಕ್ಕೆ ಸೇರಿದ ಭೂಮಿಯನ್ನು
3) ಪಂಚಾಯಿತಿಗೆ ಸಂಬಂಧಿಸಿದ ಸ್ವತ್ತನ್ನು
4) ಗ್ರಾಮ ಪಂಚಾಯಿತಿಯ ಅಧೀನದಲ್ಲಿದ್ದ ಭೂಮಿಯನ್ನು

**ಪ್ರಕರಣ 58ಇ - ಸ್ವಚ್ಛ ಪರಿಸರವನ್ನು ಕಾಪಾಡುವ ಕರ್ತವ್ಯ.**

37) 58-ಇ ಪ್ರಕರಣದಂತೆ ಪಂಚಾಯಿತಿ ಪ್ರದೇಶದ ವ್ಯಾಪ್ತಿಯಲ್ಲಿ ಪರಿಸರವನ್ನು ಸ್ವಚ್ಛವಾಗಿರಿಸುವುದು ಈ ಕೆಳಗಿನ ಯಾರ ಕರ್ತವ್ಯವಾಗಿರುತ್ತದೆ.

1) ಜಿಲ್ಲಾ ಪಂಚಾಯಿತಿ
2) ತಾಲ್ಲೂಕು ಪಂಚಾಯಿತಿ
3) ಗ್ರಾಮ ಪಂಚಾಯಿತಿ
4) ಪರಿಸರ ಇಲಾಖೆ

38) ಈ ಕೆಳಗಿನ ಯಾವ ಕ್ರಮದ ಮೂಲಕ ಗ್ರಾಮ ಪಂಚಾಯಿತಿಯು ಪಂಚಾಯಿತಿ ಪ್ರದೇಶದಲ್ಲಿ ಸ್ವಚ್ಛ ಪ್ರದೇಶವನ್ನು ಕಾಪಾಡುತ್ತದೆ.

1) ಆಹಾರ, ನೀರು & ಗ್ರಾಹಕರು ಬಳಸುವ ಇತರೆ ವಸ್ತುಗಳನ್ನು ಸರಬರಾಜು ಮಾಡುವ ಚಟುವಟಿಕೆಗಳನ್ನು ಪರಿಶೀಲಿಸುವುದು ಮತ್ತು ನಿಯಂತ್ರಿಸುವುದು.
2) ಬಯಲು ಬಹಿರ್ದೆಸೆ ಮುಕ್ತಗೊಳಿಸುವುದು.
3) ತ್ಯಾಜ್ಯ ಮುಕ್ತವಾದ ಸ್ವಚ್ಛ ಪರಿಸರವನ್ನು ಉಂಟು ಮಾಡುವುದು.
4) ಮೇಲಿನ ಎಲ್ಲವೂ

ಉತ್ತರಗಳು:- 31) 2  32) 4  33) 3  34) 1  35) 4  36) 2  37) 3  38) 4



Scanned by CamScanner

chanakyaloka.com



### ಪ್ರಕರಣ 58ಎಫ್ - ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳನ್ನು, ತೆರೆದ ಬಾವಿಗಳನ್ನು ತೋಡುವುದು ಮತ್ತು ಹೊಂಡಗಳನ್ನು ನಿರ್ಮಿಸುವುದು.

**39) 58ಎಫ್ ಪ್ರಕರಣದಂತೆ ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳನ್ನು ತೋಡುವುದರ ನಿಯಂತ್ರಣವು ಈ ಕೆಳಗಿನ ಯಾರ ಕರ್ತವ್ಯವಾಗಿದೆ.**

1) ತಾಲ್ಲೂಕು ಪಂಚಾಯಿತಿ 2) ಜಿಲ್ಲಾ ಪಂಚಾಯಿತಿ
3) ಗ್ರಾಮ ಪಂಚಾಯಿತಿ 4) ಸ್ಥಾಯಿ ಸಮಿತಿ

### ಪ್ರಕರಣ- 59: ಕಾರ್ಯಗಳನ್ನು ವಹಿಸಿಕೊಡುವುದು

**40)59ನೇ ಪ್ರಕರಣವು ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂಚಾಯತಿಯು ಸರ್ಕಾರವು ಅಧಿಸೂಚನೆ ಮೂಲಕ ನಿಗಧಿಪಡಿಸಿದ ಕಾರ್ಯಗಳನ್ನು ಷರತ್ತುಗಳಿಗೆ ಒಳಪಟ್ಟು ನಿರ್ವಹಿ ಸಬೇಕೆಂದು ತಿಳಿಸುತ್ತದೆ.
2) ಸ್ಥಾಯಿ ಸಮಿತಿ ಸ್ಥಾಪನೆ ಬಗ್ಗೆ ತಿಳಿಸುತ್ತದೆ
3) ಸ್ಥಾಯಿ ಸಮಿತಿ ಅವಧಿ ಬಗ್ಗೆ ತಿಳಿಸುತ್ತದೆ
4) ಸ್ಥಾಯಿ ಸಮಿತಿ ಕಾರ್ಯದ ಬಗ್ಗೆ ತಿಳಿಸುತ್ತದೆ

**41) 59ನೇ ಪ್ರಕರಣದಲ್ಲಿ ಸರ್ಕಾರವು ಪಂಚಾಯತಿ ಪ್ರದೇಶದೊಳಗೆ ಬರುವ ಈ ಕೆಳಗಿನ ಕಾರ್ಯಗಳನ್ನು ವಹಿಸಿಕೊಡಬಹುದು**

1) ಅರಣ್ಯದ ವ್ಯವಸ್ಥಾಪನೆ & ನಿರ್ವಹಣೆ
2) ಗೋಮಾಳ & ಖಾಲಿ ಜಾಗಗಳ ವ್ಯವಸ್ಥಾಪನೆ & ನಿರ್ವಹಣೆ
3) ಸರ್ಕಾರದ ಪರವಾಗಿ ಭೂ ಕಂದಾಯದ ಸಂಗ್ರಹಣೆಯನ್ನು & ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನಿರ್ವಹಣೆ ಮಾಡುವುದು 4)ಮೇಲಿನ ಎಲ್ಲವೂ

**42)59ನೇ ಪ್ರಕರಣದಲ್ಲಿ ಸರ್ಕಾರವು ಪಂಚಾಯಿತಿಗೆ ವಹಿಸಿದ ಕಾರ್ಯಗಳನ್ನು ಅಧಿಸೂಚನೆ ಮೂಲಕ ಈ ಕೆಳಗಿನ ಕ್ರಮ ಕೈಗೊಳ್ಳಬಹುದು**

1) ಹಿಂಪಡೆಯಬಹುದು
2) ಮಾರ್ಪಾಡು ಮಾಡಬಹುದು
3) ಹಿಂಪಡೆಯುವಂತಿಲ್ಲ 4) 1 ಮತ್ತು 2

**43) 59 ನೇ ಪ್ರಕರಣದಲ್ಲಿ ಸರ್ಕಾರವು ಗ್ರಾಮ ಪಂಚಾಯಿತಿಗೆ ಈ ಕೆಳಗಿನ ಯಾವ ವಿಧಾನದ ಮೂಲಕ ಪ್ರಕಾರ್ಯಗಳನ್ನು ವಹಿಸಿಕೊಡುತ್ತದೆ.**

1) ಅಧಿಸೂಚನೆ 2) ಮೌಖಿಕವಾಗಿ
3) ಲಿಖಿತವಾಗಿ ಅಥವಾ ಮೌಖಿಕವಾಗಿ
4) ಮೇಲಿನ ಯಾವುದೂ ಅಲ್ಲ

### ಪ್ರಕರಣ-60, ಗ್ರಾಮ ಪಂಚಾಯಿತಿಯ ಸಾಮಾನ್ಯ ಅಧಿಕಾರಗಳು

**44) ಪ್ರಕರಣ -60 ಕೆಳಗಿನ ಯಾವ ವಿಷಯ ತಿಳಿಸುತ್ತದೆ?**

1) ಗ್ರಾಮ ಪಂಚಾಯತಿಗೆ ವಹಿಸಿರುವ ಎಲ್ಲಾ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಪಂಚಾಯತಿಯು ಅಧಿಕಾರವನ್ನು ಹೊಂದಿರುತ್ತದೆ
2) ಗ್ರಾಮ ಪಂಚಾಯತಿಯ ವಿಸರ್ಜನೆ
3) ಗ್ರಾಮ ಪಂಚಾಯತಿಯ ಅಧಿಕಾರವಧಿ
4) ಗ್ರಾಮ ಪಂಚಾಯತಿಯ ಸಮಿತಿಗಳು

**45) ಗ್ರಾಮ ಪಂಚಾಯಿತಿಯು ತನಗೆ ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ನಿರ್ವಹಿಸಲು ಈ ಕೆಳಗಿನ ಯಾವ ತರದ ಅಧಿಕಾರಗಳನ್ನು ಹೊಂದಿರುತ್ತದೆ.**

1) ಅವಶ್ಯಕವಾದ ಅಧಿಕಾರ 2)ಪ್ರಾಸಂಗಿಕ ಅಧಿಕಾರ
3) ಅವಶ್ಯಕವಾದ ಅಥವಾ ಪ್ರಾಸಂಗಿಕ ಅಧಿಕಾರ
4) ಕಾಲಕಾಲಕ್ಕೆ ವಹಿಸಿದ ಅಧಿಕಾರ

### ಪ್ರಕರಣ60ಎ ಗುತ್ತಿಗೆಗಳನ್ನು ಮಾಡಿಕೊಳ್ಳುವ ವಿಧಾನ.

**46) ಕಾಮಗಾರಿಗಳ ನಿರ್ವಹಣೆ ಅಥವಾ ಸರಕು ಸೇವೆ ಒದಗಿಸುವುದಕ್ಕೆ ಗ್ರಾಮ ಪಂಚಾಯಿತಿ ಮಾಡಿಕೊಳ್ಳುವ ಪ್ರತಿಯೊಂದು ಗುತ್ತಿಗೆ ಅಥವಾ ಒಪ್ಪಂದವು ಈ ಕೆಳಗಿನ ಯಾವ ಅಧಿನಿಯಮವನ್ನು ಅನುಸರಿಸಬೇಕು.**

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999
2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1989
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2001
4) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2005

**47) ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಗುತ್ತಿಗೆ ಅಥವಾ ಒಪ್ಪಂದವನ್ನು ಈ ಕೆಳಗಿನ ಯಾರು ಮಾಡಿಕೊಳ್ಳುತ್ತಾರೆ.**

1) ಗ್ರಾಮ ಪಂಚಾಯಿತಿ ಅಧ್ಯಕ್ಷರು
2) ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು
3) ಗ್ರಾಮ ಪಂಚಾಯಿತಿಯ ಪಿಡಿಓ ಅಥವಾ ಸಂದರ್ಭಾನುಸಾರ ಕಾರ್ಯದರ್ಶಿ
4) ಗ್ರಾಮ ಪಂಚಾಯಿತಿಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು

**ಉತ್ತರಗಳು:-** 39) 3 40) 1 41) 4 42) 4 43) 1 44) 1 45) 3 46) 1 47) 3



Scanned by CamScanner

# ಚಾಣಕ್ಯಲೋಕ

ಪ್ರತಿದಿನ ತಪ್ಪದೇ ವಿಜಯವಾಣಿ ಮಿನಿ ಪೇಪರ್, ವಿಜಯ ಕರ್ನಾಟಕ ಮಿನಿ ಪೇಪರ್, ಪ್ರಜಾವಾಣಿ ಮಿನಿ ಪೇಪರ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ಮಾಹಿತಿ ಪಡೆಯಲು ಕೆಳಗೆ ನೀಡಿರುವ ಬಟನ್ ಮೇಲೆ ಕ್ಲಿಕ್ ಮಾಡಿ **ಚಾಣಕ್ಯಲೋಕ** ಟೆಲಿಗ್ರಾಂ, ವಾಟ್ಸಾಪ್ ಗ್ರೂಪ್‌ಗೆ **Join** ಆಗಿರಿ.

chanakyaloka

Click Here to Join

chanakyaloka

Click Here to Join

chanakyaloka

Click Here to Join

chanakyaloka

M chanakyaloka

ನಿರ್ವಾಹಕರು: ಮೋಹನ್ ಶೆಟ್ಟಿ, 9353896440

ಆತ್ಮೀಯ ಸ್ಪರ್ಧಾರ್ಥಿಗಳೇ ನೀವು ಇಟ್ಟಿರುವ ಗುರಿಯನ್ನು ಬಹುಬೇಗ ತಲುಪಿ, ಯಶಸ್ಸು ನಿಮ್ಮದಾಗಲಿ, ಶುಭವಾಗಲಿ ಧನ್ಯವಾದಗಳು.

–ಚಾಣಕ್ಯಲೋಕ.ಕಾಂ ಬಳಗ

## ಪ್ರಕರಣ 60 ಬಿ - ಸಾಮುದಾಯಿಕ ಗುತ್ತಿಗೆಗಳು.

48) ಗ್ರಾಮ ಪಂಚಾಯಿತಿಯು ಗ್ರಾಮ ಸಭೆಯ ಶಿಫಾರಸ್ಸಿನ ಮೇಲೆ ಪ್ರಥಮ ಆಯ್ಕೆಯಾಗಿ ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ ೨೦ಲಕ್ಷದವರೆಗಿನ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಗ್ರಾಮ ಪಂಚಾಯಿತಿಯು ಕಾಮಗಾರಿ ಮೌಲ್ಯದ ........ ಗಿಂತ ಕಡಿಮೆ ಇಲ್ಲದಂತೆ ಕೊಡುಗೆ ನೀಡಿರುವ ಪಂಚಾಯಿತಿ ಪ್ರದೇಶದ ಸಮುದಾಯ ಗುತ್ತಿಗೆ ನೀಡುವುದು.

1) ಶೇ20 2) ಶೇ 10 3) ಶೇ 30 4) ಶೇ 40

## ಪ್ರಕರಣ-61. ಸ್ಥಾಯಿ ಸಮಿತಿಗಳು

49) ಪ್ರಕರಣ-61 ಏನನ್ನು ಹೇಳುತ್ತದೆ?

1) ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳು
2) ತಾಲ್ಲೂಕು ಪಂಚಾಯತಿಯ ಸ್ಥಾಯಿ ಸಮಿತಿಗಳು
3) ಜಿಲ್ಲಾ ಪಂಚಾಯತಿಯ ಸ್ಥಾಯಿ ಸಮಿತಿಗಳು
4) ಇತರೆ ಸಮಿತಿಗಳು

50) ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳನ್ನು ಈ ಕೆಳಗಿನ ಯಾವ ವಿಧಾನದಿಂದ ರಚಿಸತಕ್ಕದ್ದು

1) ಚುನಾವಣೆ ಮೂಲಕ
2) ನಾಮನಿರ್ದೇಶನದ ಮೂಲಕ
3) ಲಾಟರಿ ಮೂಲಕ
4) ಅಧ್ಯಕ್ಷರ ಆಯ್ಕೆಯಂತೆ

51) 61ನೇ ಪ್ರಕರಣದ ಅನ್ವಯ ಎಷ್ಟು ಸ್ಥಾಯಿ ಸಮಿತಿಗಳನ್ನು ರಚಿಸಲಾಗುತ್ತದೆ?

1)4 2)3 3)5 4)2

52) 2015ರ 2ನೇ ತಿದ್ದುಪಡಿಯಂತೆ ಗ್ರಾಮ ಪಂಚಾಯತಿಯಲ್ಲಿ ರಚಿಸಿರುವ ಸ್ಥಾಯಿ ಸಮಿತಿಗಳು

1) ಉತ್ಪಾದನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ, ಸೌಕರ್ಯಸಮಿತಿ
2) ಉತ್ಪಾದನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ, ಹಣಕಾಸು ಲೆಕ್ಕಪತ್ರ ಸಮಿತಿ
3) ಉತ್ಪಾದನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ, ಶಿಕ್ಷಣ & ಆರೋಗ್ಯ ಸಮಿತಿ
4) ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಹಾಗೂ ಸಾಮಾಜಿಕ ನ್ಯಾಯ ಸಮಿತಿ

53) ಸ್ಥಾಯಿ ಸಮಿತಿಗಳ ಸದಸ್ಯರ ಅವಧಿಯು ಚುನಾವಣೆ ದಿನಾಂಕದಿಂದ__ತಿಂಗಳು ಅಥವಾ ಆತನು ಗ್ರಾಮ ಪಂಚಾಯತಿ___ರುವುದು ನಿಂತು ಹೋಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅದು ಅವಧಿಯಾಗಿರುತ್ತದೆ

1) 30 ತಿಂಗಳು, ಅಧ್ಯಕ್ಷ
2) 20 ತಿಂಗಳು, ಸದಸ್ಯ
3) 30 ತಿಂಗಳು, ಸದಸ್ಯ
4) 30 ತಿಂಗಳು, ಉಪಾಧ್ಯಕ್ಷ

54) ಪ್ರತಿಯೊಂದು ಸ್ಥಾಯಿ ಸಮಿತಿಗಳಿಗೆ ಸದಸ್ಯರು ಅಧ್ಯಕ್ಷ ಮತ್ತು ಉಪಾಧ್ಯಕ್ಷನು ಸೇರಿದಂತೆ ___ಗಿಂತ ಕಡಿಮೆ ಇಲ್ಲದ ಮತ್ತು ___ಗಿಂತ ಹೆಚ್ಚಿಲ್ಲದ ಸದಸ್ಯರನ್ನು ಹೊಂದಿರತಕ್ಕದ್ದು.

1)3 ಕ್ಕಿಂತ, 5ಕ್ಕಿಂತ 2)5 ಕ್ಕಿಂತ, 8ಕ್ಕಿಂತ
3)2 ಕ್ಕಿಂತ, 4ಕ್ಕಿಂತ 4)6 ಕ್ಕಿಂತ, 9ಕ್ಕಿಂತ

55) ಸಾಮಾನ್ಯ ಸ್ಥಾಯಿ ಸಮಿತಿಯು ಈ ಕೆಳಗಿನ ಕಾರ್ಯವನ್ನು ನಿರ್ವಹಿಸುತ್ತದೆ

1) ಸಾರ್ವಜನಿಕರ ಮೇಲೆ ಆಗುವ ದೌರ್ಜನ್ಯಗಳನ್ನು ತಡೆಯುವುದು ಮತ್ತು ಮಾನವ ಹಕ್ಕುಗಳನ್ನು ರಕ್ಷಿಸುವುದು.
2) ಎಸ್.ಸಿ & ಎಸ್.ಟಿ ಜನಾಂಗದ & ಇತರೆ ವರ್ಗಗಳ ರಕ್ಷಣೆ ಕೊಡುವುದು
3) ಕೃಷಿ ಉತ್ಪಾದನೆ, ಪಶುಸಂಗೋಪನೆ, ಗ್ರಾಮೀಣ ಕೈಗಾರಿಕೆ, ಬಡತನ ನಿರ್ಮೂಲನೆ, ಲೋಕೋಪಯೋಗಿ ಕಾಮಗಾರಿಗಳು,
4) ಮಹಿಳೆ & ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸುವುದು.

56) ಸಾಮಾನ್ಯ ಸ್ಥಾಯಿ ಸಮಿತಿಯು ಈ ಕೆಳಗಿನ ಯಾವುದರ ಬಗ್ಗೆ ತನ್ನ ವರದಿಯನ್ನು ನೀಡುತ್ತದೆ.

1) ಸಾರ್ವಜನಿಕ ಕಾಮಗಾರಿಗಳ ಕಳಪೆ ಗುಣಮಟ್ಟ
2) ಕಾಮಗಾರಿಗಳ ನಿರ್ವಹಣೆಯಲ್ಲಿ ನಿಧಿಯ ಸಣ್ಣಮಟ್ಟ ಕಳವು ತನಿಖೆ ನಡೆಸುವುದು.
3) ದುರ್ವಿನಿಯೋಗದ ಬಗ್ಗೆ ಗ್ರಾಮಸಭೆಯು ಎತ್ತುವ ದೂರುಗಳ ಬಗ್ಗೆ ತನಿಖೆ ಮಾಡುವುದು
4) ಮೇಲಿನ ಎಲ್ಲವೂ

57) ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಯಾರು ಕಾರ್ಯ ನಿರ್ವಹಿಸುತ್ತಾರೆ?

1) ಅನುಸೂಚಿತ ಜಾತಿ ಮತ್ತು ಪಂಗಡಗಳಲ್ಲಿ ಚುನಾಯಿತರಾದ ಒಬ್ಬರು
2) ಗ್ರಾಮ ಪಂಚಾಯಿತಿಯ ಅಧ್ಯಕ್ಷ
3) ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷ
4) ಮಹಿಳಾ ಸದಸ್ಯೆ

ಉತ್ತರಗಳು:- 48) 2 49) 1 50) 1 51) 2 52) 4 53) 3 54) 1 55) 3 56) 4 57) 3



Scanned by CamScanner

**58) ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಪ್ರಕಾರ್ಯವಾಗಿದೆ.**

1) ಗ್ರಾಮ ಪಂಚಾಯಿತಿಗಳ ಹಣಕಾಸು ಆಯವ್ಯಯ ಹೆಚ್ಚಿಸುವುದು

2) ರಾಜ್ಯಸ್ವ ಹೆಚ್ಚಿಸುವುದಕ್ಕೆ ಪ್ರಸ್ತಾವಗಳ ಪರಿಶೀಲನೆ

3) ಸ್ವೀಕೃತಿ ಮತ್ತು ವೆಚ್ಚಗಳ ತಃಖ್ತೆಗಳ ಪರಿಶೀಲನೆ

4) ಗ್ರಾಮ ಪಂಚಾಯಿತಿಗಳ ಹಣಕಾಸಿಗೆ ಬಾದಕವಾಗುವ ಎಲ್ಲಾ ಪ್ರಸ್ತಾವನೆಗಳನ್ನು ಪರಿಗಣಿಸುವುದು.

5) ಗ್ರಾಮ ಪಂಚಾಯಿತಿಯ ಯೋಜನೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಇತರೆ ಕರ್ತವ್ಯಗಳು

6) ಗ್ರಾಮ ಪಂಚಾಯಿತಿಗಳ ರಾಜಸ್ವ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆ

**ಸಂಕೇತಗಳು:**

1) 1, 2 & 3 ಸರಿ  2) 1, 2, 3 & 4 ಸರಿ

3) 1 & 4 ಸರಿ  4) ಮೇಲಿನ ಎಲ್ಲವೂ ಸರಿ

**59) ಮಾಹಿತಿ ಮತ್ತು ಅಂಕಿ ಅಂಶಗಳಿಗೆ ಸಂಬಂಧಿಸಿದಂತೆ ಪ್ರಕಾರ್ಯಗಳನ್ನು ಈ ಕೆಳಗಿನ ಯಾವ ಸಮಿತಿ ನಿರ್ವಹಿಸುತ್ತದೆ.**

1) ಸಾಮಾನ್ಯ ಸ್ಥಾಯಿ ಸಮಿತಿ

2) ಹಣಕಾಸು ಮತ್ತು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ  3) ಸಾಮಾಜಿಕ ನ್ಯಾಯ ಸಮಿತಿ

4) ಮೇಲಿನ ಯಾವುದೂ ಅಲ್ಲ

**60) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವವರು**

1) ಗ್ರಾಮ ಪಂಚಾಯಿತಿಯ ಅಧ್ಯಕ್ಷರು

2) ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು

3) ಗ್ರಾಮ ಪಂಚಾಯಿತಿಯ ಅನುಸೂಚಿತ ಮತ್ತು ಬುಡಕಟ್ಟು ಜನಾಂಗದ ಸದಸ್ಯರು

4) ಗ್ರಾಮ ಪಂಚಾಯಿತಿಯ ಪಿಡಿಓ

**61) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯು ಸಂಗ್ರಹಿಸುವ ಮಾಹಿತಿಗಳು**

1) ಜನಗಣತಿ  2) ನಡೆಸಲಾದ ಸರ್ವೆಗಳು

3) ಪಿಆರ್‌ಓ & ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ದತ್ತಾಂಶಗಳು

4) ಕೇಂದ್ರ & ರಾಜ್ಯ ಸರ್ಕಾರದ ಸ್ಕೀಂಗಳ ವಿವರಗಳು

5) ಕೃಷಿ ಪದ್ಧತಿಗಳಿಗೆ ಸಂಬಂಧಿಸಿದ ದತ್ತಾಂಶ

6) ಬೌದ್ಧಿಕ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ದತ್ತಾಂಶ

**ಸಂಕೇತಗಳು:-**

1) 1, 2, 3, 4  2) 1, 2, ಮಾತ್ರ ಸರಿ

3) 1 & 3 ಮಾತ್ರ ಸರಿ

4) ಮೇಲಿನ ಎಲ್ಲವೂ ಸರಿಯಾಗಿವೆ.

**62) ಸಾಮಾಜಿಕ ನ್ಯಾಯ ಸಮಿತಿಯು ಈ ಕೆಳಗಿನ ಕಾರ್ಯವನ್ನು ನಿರ್ವಹಿಸುತ್ತದೆ**

1) ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾರ್ಯಗಳು

2) ಎಸ್ಸಿ & ಎಸ್ಟಿ ಜನಾಂಗದ & ಇತರೆ ವರ್ಗಗಳ ರಕ್ಷಣೆ ಕೊಡುವುದು, ಮಹಿಳೆ & ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸುವುದು.

3) ಕೃಷಿ ಉತ್ಪಾದನೆ, ಪಶುಸಂಗೋಪನೆ, ಗ್ರಾಮೀಣ ಕೈಗಾರಿಕೆ, ಬಡತನ ನಿರ್ಮೂಲನೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ.

4) ಹಣಕಾಸು & ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡುವುದು.

**63) ಸಾಮಾಜಿಕ ನ್ಯಾಯ ಸಮಿತಿಯು ಈ ಕೆಳಗಿನ ಯಾವ ಕಾರ್ಯವನ್ನು ನಿರ್ವಹಿಸುವುದಿಲ್ಲ**

1)ದುರ್ಬಲ ವರ್ಗದವರ ಹಿತಾಸಕ್ತಿ ಕಾಪಾಡುವುದು ಮತ್ತು ಶೋಷಣೆ ಆಗದಂತೆ ತಡೆಯುವುದು.

2) ಮಹಿಳಾ ಮತ್ತು ಮಕ್ಕಳ ಕಲ್ಯಾಣ

3) ಸಾಮಾಜಿಕ ಅನ್ಯಾಯವಾಗದಂತೆ ತಡೆಯುವುದು

4) ದೂರದೃಷ್ಟಿತ್ವ ಮತ್ತು ವಾರ್ಷಿಕ ಯೋಜನೆಗಳು ಇವುಗಳನ್ನು ತಾಳೆ ಮಾಡುವುದು ಮತ್ತು ಸಂಗ್ರಹಿಸುವುದು.

**64)ಸಾಮಾಜಿಕ ನ್ಯಾಯ ಸಮಿತಿಗೆ ಈ ಕೆಳಗಿನ ಯಾರು ಸಮಿತಿಯ ಸದಸ್ಯರು, ಪದನಿಮಿತ್ತ ಸದಸ್ಯರು & ಸಭಾಪತಿಗಳಾಗಿರತಕ್ಕದ್ದು.**

1) ಗ್ರಾಮಪಂ. ಅಧ್ಯಕ್ಷರು  2) ಗ್ರಾಪ ಉಪಾಧ್ಯಕ್ಷರು

3) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸದಸ್ಯರುಗಳಲ್ಲಿ ಒಬ್ಬರು

4) ಗ್ರಾಮ ಪಂಚಾಯಿತಿಯ ಮಹಿಳಾ ಸದಸ್ಯರು

**65) ಈ ಕೆಳಗಿನ ಯಾವ ಸಮಿತಿಗೆ ಕನಿಷ್ಠ ಪಕ್ಷ ಒಬ್ಬ ಮಹಿಳಾ ಸದಸ್ಯ ಮತ್ತು ಅನುಸೂಚಿತ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರತಕ್ಕದ್ದು**

1) ಸಾಮಾನ್ಯ ಸಮಿತಿ  2)ಸಾಮಾಜಿಕ ನ್ಯಾಯ ಸಮಿತಿ

3)ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ  4)ಆರೋಗ್ಯ ಸಮಿತಿ

**ಉತ್ತರಗಳು:-** 58) 4  59) 2  60) 1  61) 4  62) 2  63) 4  64) 3  65) 2



Scanned by CamScanner

66) ಈ ಕೆಳಗಿನ ಯಾವ ಸಮಿತಿಗೆ ಅನುಸೂಚಿತ ಜಾತಿಗಳ & ಅನುಸೂಚಿತ ಪಂಗಡಗಳ ಪೈಕಿ ಅನುಸೂಚಿತ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದರೆ ಅನುಸೂಚಿತ ಪಂಗಡಗಳ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದರೆ ಅನುಸೂಚಿತ ಪಂಗಡಗಳ ಪೈಕಿ ಒಬ್ಬರು ಸದಸ್ಯರು ಈ ಸಮಿತಿಯಲ್ಲಿ ಇರತಕ್ಕದ್ದು.

1) ಸಾಮಾಜಿಕ ನ್ಯಾಯ ಸಮಿತಿ
2) ಸಾಮಾನ್ಯ ಸಮಿತಿ
3) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
4) ಆರೋಗ್ಯ ಸಮಿತಿ

67) ಸ್ಥಾಯಿ ಸಮಿತಿಗಳಿಗೆ ಪಂಚಾಯಿತಿ ಪ್ರದೇಶದಿಂದ ಈ ಕೆಳಗಿನ ಯಾವ ಮಂಡಳಿಗಳಿಂದ ಕೋಆಪ್ಟ್ ಸದಸ್ಯರನ್ನು ನೇಮಿಸಬಹುದು.

1) ರೈತರ ಕ್ಲಬ್
2) ಯುವ ಮಂಡಳಿ
3) ಮಹಿಳಾ ಮಂಡಳಿ
4) ಮೇಲಿನ ಎಲ್ಲವೂ

## ಪ್ರಕರಣ-61ಎ. ಇತರೆ ಸಮಿತಿಗಳು

68) ಪ್ರಕರಣ-61ಎ ಏನನ್ನು ತಿಳಿಸುತ್ತದೆ?

1) ಸ್ಥಾಯಿ ಸಮಿತಿಗಳಲ್ಲದೆ ನಿರ್ಧರಿಸಬಹುದಾದ ಸಂಖ್ಯೆಯ ಸದಸ್ಯರನ್ನು ಒಳಗೊಂಡ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಮಿತಿಗಳನ್ನು ನೇಮಕ ಮಾಡಬಹುದು.
2) ಅಧ್ಯಕ್ಷರ & ಉಪಾಧ್ಯಕ್ಷರ ಪ್ರಕಾರ್ಯಗಳು
3) ಗ್ರಾಮ ಪಂಚಾಯಿತಿ ಹೋಟೆಲ್‌ಗೆ ಲೈಸೆನ್ಸ್ ನೀಡುವುದು
4) ಹೊಲಸು ಕಟ್ಟಡಗಳ ನಿಯಂತ್ರಣ

69) ಇತರೆ ಸ್ಥಾಯಿ ಸಮಿತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ.

1) 61ನೇ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಲಾದ ಉದ್ದೇಶಗಳನ್ನು ಹೊರತು ಪಡಿಸಿ ಅದು ನಿರ್ಧರಿಸಬಹುದಾದ ಸದಸ್ಯರುಗಳನ್ನು ಒಳಗೊಂಡಿರು ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಮಿತಿಗಳನ್ನು ನೇಮಕ ಮಾಡಬಹುದು.
2) ಇತರೆ ಸಮಿತಿಗಳಿಗೆ ಪಂಚಾಯಿತಿ ಪ್ರದೇಶದಲ್ಲಿನ ಅಂತಹ ನಿವಾಸಿಗಳನ್ನು ಕೂಡ ಆಯ್ಕೆ ಮಾಡಲು ಸಕ್ಷಮವಾಗಿರುತ್ತದೆ.
3) ಇತರೆ ಸಮಿತಿಗಳ ಕಾರ್ಯ ವಿಧಾನವು ನೇಮಿಸಬಹುದಾದಂತೆ ಇರತಕ್ಕದ್ದು.
4) ಮೇಲಿನ ಎಲ್ಲವೂ ಸರಿಯಾಗಿದೆ.

70) 61-ಎ ಪ್ರಕರಣದಡಿಯಲ್ಲಿ ರಚಿಸಬಹುದಾದ ಉಪಸಮಿತಿಗಳು

1) ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ
2) ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ
3) ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ
4) ಆರೋಗ್ಯ ಖಾತರಿ ಸಮಿತಿ
5) ಜೀವ ವೈವಿಧ್ಯತೆ ನಿರ್ವಹಣಾ ಸಮಿತಿ
6) ಮಹಿಳೆಯರು & ಮಕ್ಕಳ ಸಾಗಾಣಿಕೆ ತಡೆ ಸಮಿತಿ

ಸಂಕೇತಗಳು

1) 1, 2, 3 & 4
2) 1 & 3
3) 1, 3 & 4
4) ಮೇಲಿನ ಎಲ್ಲವೂ

## ಪ್ರಕರಣ-62. ಗ್ರಾಮ ಪಂಚಾಯಿತಿಯ ಅಧ್ಯಕ್ಷರ, ಉಪಾಧ್ಯಕ್ಷರ ಪ್ರಕಾರ್ಯಗಳು & ಅಧಿಕಾರಗಳು

71) 62ನೇ ಪ್ರಕರಣವು ಏನನ್ನು ತಿಳಿಸುತ್ತದೆ?

1) ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಪ್ರಕಾರ್ಯಗಳು
2) ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರ ಪ್ರಕಾರ್ಯಗಳು
3) ಗ್ರಾಮ ಪಂಚಾಯಿತಿ ಅಧ್ಯಕ್ಷ & ಉಪಾಧ್ಯಕ್ಷರ ಅಧಿಕಾರಗಳು & ಪ್ರಕಾರ್ಯಗಳು
4) ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ & ಕಾರ್ಯದರ್ಶಿ ಪ್ರಕಾರ್ಯಗಳು

72) 62ನೇ ಪ್ರಕರಣದ ಅನ್ವಯ ಈ ಕೆಳಗಿನ ಯಾರು ಗ್ರಾಮ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು

1) ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ
2) ಗ್ರಾಮ ಪಂಚಾಯಿತಿಯ ಅಧ್ಯಕ್ಷರು
3) ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು
4) ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿ

73) ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಈ ಕೆಳಗಿನ ಪ್ರಕಾರ್ಯಗಳನ್ನು ಮತ್ತು ಅಧಿಕಾರಗಳನ್ನು ಹೊಂದಿರುತ್ತಾರೆ?

1) ಗ್ರಾಮ ಪಂಚಾಯಿತಿ ಸಭೆ ಕರೆಯುವುದು
2) ಗ್ರಾಮ ಪಂಚಾಯಿತಿ ದಾಖಲೆಗಳನ್ನು & ಕಡತಗಳನ್ನು ತರಿಸುವುದು
3) ಗ್ರಾಮ ಪಂಚಾಯಿತಿ ಜಾರಿಗೊಳಿಸಿದ ನಿರ್ಣಯವನ್ನು ಅನುಸರಿಸಿ ಅವುಗಳ ಮೇಲೆ ಆದೇಶವನ್ನು ಹೊರಡಿಸುವುದು
4) ಮೇಲಿನ ಎಲ್ಲವೂ

ಉತ್ತರಗಳು:- 66) 1 67) 4 68) 1 69) 4 70) 4 71) 3 72) 2 73) 4



Scanned by CamScanner

chanakyaloka.com



**74)ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ 62ನೇ ಪ್ರಕರಣದಲ್ಲಿ ಈ ಕೆಳಗಿನ ಯಾವ ಅಧಿಕಾರ ಹೊಂದಿಲ್ಲ**

1)ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಸೇರಿದಂತೆ ಅಧಿಕಾರಿಗಳ & ನೌಕರರ ಕಾರ್ಯಗಳ ಮೇಲೆ ಮೇಲ್ವಿಚಾರಣೆ & ನಿಯಂತ್ರಣ ಹೊಂದುವುದು.

2)ಪಿಡಿಒ ಅಥವಾ ಗ್ರಾಮ ಪಂಚಾಯತಿಯ ಇತರೆ ಯಾವುದೇ ಅಧಿಕಾರಿಯು ಸ್ವತಂತ್ರವಾಗಿ ಶಾಸನಬದ್ಧ ಅಧಿಕಾರವನ್ನು ನೇರವಾಗಿ ಚಲಾಯಿಸುವುದಕ್ಕೆ ಸಂಬಂಧ ಪಟ್ಟ ಕಡತಗಳು ಮತ್ತು ದಾಖಲೆಗಳನ್ನು ಅಧ್ಯಕ್ಷರು ತರಿಸಿಕೊಳ್ಳುವುದು.

3)ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಯಾವುದೇ ಅಧಿಕಾರಿ ಅಥವಾ ನೌಕರನ ಮೇಲೆ ಕ್ರಿಮಿನಲ್ ಅಪರಾಧ ಅಥವಾ ಶಿಸ್ತು ವ್ಯವಹರಣೆಯನ್ನು ಹೂಡಲು ಉದ್ದೇಶಿಸಲಾಗಿದ್ದರೆ ಅಂತಹವರನ್ನು ಅಮಾನತಿನಲ್ಲಿಡುವ ಅಧಿಕಾರ ಹೊಂದಿರತಕ್ಕದ್ದು.

4)ಸಮಿತಿಯ ಅಥವಾ ಗ್ರಾಮ ಪಂಚಾಯತಿಯು ಮುಂಜೂರಾತಿ ಅಗತ್ಯವಿರುವ ಯಾವುದೇ ಕಾಮಗಾರಿಯನ್ನು ತಕ್ಷಣ ನಿರ್ವಹಿಸುವುದು, ಸಾರ್ವಜನಿಕ ದೃಷ್ಟಿಯಿಂದ ಅಗತ್ಯವೆಂದು ಅಭಿಪ್ರಾಯಪಟ್ಟರೆ ತುರ್ತು ಸಭೆ ಕರೆಯಬಹುದು.

**75) ಗ್ರಾಮ ಪಂಚಾಯತಿ ಅಧ್ಯಕ್ಷನು ಸಾರ್ವಜನಿಕ ದೃಷ್ಟಿಯಿಂದ ಅಗತ್ಯವೆಂದು ಕಂಡು ಬರುವ ಯಾವುದೇ ಕಾಮಗಾರಿಯನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ಆ ಉದ್ದೇಶಕ್ಕಾಗಿ ತುರ್ತು ಸಭೆಯನ್ನು ಎಷ್ಟು ಅವಧಿಯ ನೋಟೀಸ್ ಕೊಟ್ಟು ಕರೆಯಬಹುದು.**

1)24ಗಂಟೆ 2)48ಗಂಟೆ 3)30ಗಂಟೆ 4)12ಗಂಟೆ

**76)ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅವರ ಕಾರ್ಯಗಳನ್ನು ಈ ಕೆಳಗಿನ ಯಾರು ನಿರ್ವಹಿಸುತ್ತಾರೆ?**

1) ಉಪಾಧ್ಯಕ್ಷರು 2)ಪಿಡಿಒ
3) ಕಾರ್ಯನಿರ್ವಹಣಾಧಿಕಾರಿ 4) ಹಿರಿಯ ಸದಸ್ಯರು

**77) ಈ ಕೆಳಗಿನ ಯಾವ ಸಂದರ್ಭದಲ್ಲಿ ಅಧ್ಯಕ್ಷರ ಕಾರ್ಯವನ್ನು ಉಪಾಧ್ಯಕ್ಷರು ನಿರ್ವಹಿಸುತ್ತಾರೆ?**

1) ಅಧ್ಯಕ್ಷರು ಗೈರು ಹಾಜರಾದಾಗ
2) ಕೆಲಸವನ್ನು ಮಾಡಲು ಅಸಮರ್ಥರಾದಾಗ
3) ರಜೆ ಮೇಲೆ ಹೋದ ಕಾರಣ
4) ಮೇಲಿನ ಎಲ್ಲಾ ಸಂದರ್ಭದಲ್ಲಿ

**78) ಗ್ರಾಮ ಪಂಚಾಯಿತಿಯ ಈ ಕೆಳಗಿನ ಯಾವ ದಾಖಲೆಗಳನ್ನು ಪರಿಶೀಲಿಸುತ್ತಾರೆ.**

1) ಕಚೇರಿಗೆ ಬರುವ ಪತ್ರಗಳು 2) ಸಾಮಾನ್ಯ ಸಭೆಯ ಠರಾವು ಪುಸ್ತಕ 3) ಆಸ್ತಿ ವಹಿ 4) ಬೇಡಿಕೆ ವಹಿ
5) ಕಾಮಗಾರಿ ಅಳತೆ ಪುಸ್ತಕ 6) ದಾಸ್ತಾನು ವಹಿ

**ಸಂಕೇತಗಳು:-**

1) 1, 2, 3, 4, & 5 2) 1, 3, 5 & 6
3) 1, 3, 4 & 5 4) ಮೇಲಿನ ಎಲ್ಲವೂ

## ಪ್ರಕರಣ-63, ರಸ್ತೆಗಳು, ಸೇತುವೆಗಳು, ಮುಂತಾದವುಗಳ ಬಗ್ಗೆ ಗ್ರಾಮ ಪಂಚಾಯತಿ ಅಧಿಕಾರ

**79)63ನೇ ಪ್ರಕರಣ ಏನನ್ನು ತಿಳಿಸುತ್ತದೆ?**

3)ವಿಮಾ ಕಂಪನಿ 4)ಕಾಮಗಾರಿ ಕೈಗೊಂಡ ವ್ಯಕ್ತಿ

## ಪ್ರಕರಣ-103. ಯಾವ ಭೂಮಿಯ ಮೂಲಕ ಚರಂಡಿಯನ್ನು ಹಾಕಲಾಗಿದೆಯೋ ಅಂಥ ಭೂಮಿ ಯ ಮೇಲೆ ಆ ತರುವಾಯ ಕಟ್ಟಡವನ್ನು ಕಟ್ಟುವ ಬಗ್ಗೆ ಮಾಲೀಕನ ಹಕ್ಕು

**243) ಪ್ರಕರಣ 103 ಏನನ್ನು ತಿಳಿಸುತ್ತದೆ?**

1)ಶೌಚಗೃಹ ಮುಂತಾದವುಗಳನ್ನು ಒದಗಿಸುವುದು

2)ಶೌಚಗೃಹ ಮೊದಲಾದವುಗಳನ್ನು ದುರಸ್ತಿ ಮಾಡುವ ಸಂಬಂಧ ವೆಚ್ಚ

3) ಯಾವ ಭೂಮಿಯ ಮೂಲಕ ಚರಂಡಿಯನ್ನು ಹಾಕಲಾಗಿದೆಯೋ ಅಂಥ ಭೂಮಿಯ ಮೇಲೆ ಆ ತರುವಾಯ ಕಟ್ಟಡವನ್ನು ಕಟ್ಟುವ ಬಗ್ಗೆ ಮಾಲೀಕನ ಹಕ್ಕು 4)ಅಪಾಯಕಾರಿ ಕಲ್ಲುಗಣಿ ಕೆಲಸ

**ಉತ್ತರಗಳು:-** 237) 2 238) 4 239) 4 240) 4 241) 4 242) 4 243) 3



Scanned by CamScanner

**244) ಬೇರೆಯವರ ಜಮೀನಿನ ಮೂಲಕ ಚರಂಡಿ ಹಾದು ಹೋಗಿದ್ದರೆ ಅಂತಹ ಭೂಮಿಯ ಮಾಲೀಕನು ತನ್ನ ಭೂಮಿಯ ಮೇಲೆ ಹಾದು ಹೋಗಿರುವ ಚರಂಡಿಯನ್ನು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯೋಗ್ಯಗೊಳಿಸಲು ಕೆಳಗಿನ ಯಾರಿಗೆ ಅರ್ಜಿ ಸಲ್ಲಿಸಬೇಕು?**

1)ಚರಂಡಿಯನ್ನು ನಿರ್ಮಿಸಿರುವ ವ್ಯಕ್ತಿಗೆ ಅರ್ಜಿ ಸಲ್ಲಿಸಬೇಕು 2)ಕರ್ನಾಟಕ ಲೋಕೋಪಯೋಗಿ ಇಲಾಖೆಗೆ ಅರ್ಜಿ ಸಲ್ಲಿಸಬೇಕು 3)ಅನುಮತಿ ನೀಡಿರುವ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಬೇಕು 4)ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಬೇಕು.

**245) 102ನೇ ಪ್ರಕರಣದ ಅನ್ವಯ ಯಾವುದೇ ಭೂಮಿಯಲ್ಲಿ ಅಥವಾ ಅದರ ಮೂಲಕ ಹಾದು ಹೋಗಲಾದ ಚರಂಡಿಯನ್ನು ನಿರ್ಮಿಸಲಾಗಿದೆಯೋ ಆ ಭೂ ಮಾಲೀಕನು, ಯಾವ ಕ್ರಮಕ್ಕಾಗಿ ಆದೇಶಿಸಬೇಕೆಂದು ಗ್ರಾಮ ಪಂಚಾಯತಿಗೆ ಕೋರಬಹುದು?**

1) ಅಂತಹ ಚರಂಡಿಯನ್ನು ಮುಚ್ಚಲು

2) ಅಂತಹ ಚರಂಡಿಯನ್ನು ತೆಗೆದು ಹಾಕಲು

3) ಅದನ್ನು ಮೊದಲ ಸ್ಥಿತಿಗೆ ತರಲು ಅಥವಾ ಕಟ್ಟಡ ನಿರ್ಮಾಣಕ್ಕೆ ಯೋಗ್ಯವಾಗಿ ಮಾಡಲು

4)ಮೇಲಿನ ಯಾವುದಾದರೂ ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯತಿಗೆ ಕೋರಬಹುದು

## ಪ್ರಕರಣ – 104. ಶೌಚ ಗೃಹ ಮುಂತಾದವುಗಳನ್ನು ಒದಗಿಸುವುದು

**246) ಪ್ರಕರಣ 104 ಏನನ್ನು ತಿಳಿಸುತ್ತದೆ?**

1)ಶೌಚಗೃಹ ಮುಂತಾದವುಗಳನ್ನು ಒದಗಿಸುವುದು

2)ಶೌಚ ಗೃಹಗಳ ಸುಸ್ಥಿಯಲ್ಲಿಡುವ ವೆಚ್ಚ

3)ಚರಂಡಿ ಮುಂತಾದವುಗಳ ಪರಿವೀಕ್ಷಣೆ

4)ಅಪಾಯಕಾರಿ ಕಲ್ಲುಗಣಿ ಕೆಲಸ

**247) ಯಾವುದೇ ಕಟ್ಟಡದ ಮಾಲೀಕನಿಗೆ ಶೌಚ ಗೃಹ, ರೊಚ್ಚು ಗುಂಡಿಗಳನ್ನು ಒದಗಿಸಬೇಕೆಂದು ಅಥವಾ ಸ್ಥಳಾಂತರಿಸಬೇಕೆಂದು, ತೆಗೆದು ಹಾಕಬೇಕೆಂದು ಲಿಖಿತ ನೋಟಿಸ್‌ನ ಮೂಲಕ ನಿರ್ದೇಶಿಸುವ ಅಧಿಕಾರವನ್ನು ಈ ಕೆಳಗಿನ ಯಾರು ಹೊಂದಿರುತ್ತಾರೆ?**

1) ಕೊಳಚೆ & ಒಳಚರಂಡಿ ಮಂಡಳಿ

2) ಗ್ರಾಮ ಪಂಚಾಯತಿ 3)ತಾಲ್ಲೂಕು ಪಂಚಾಯತಿ

4) ಜಿಲ್ಲಾ ಪಂಚಾಯತಿ

**248) ಈ ಕೆಳಗಿನ ಎಷ್ಟು ಸಂಖ್ಯೆಯ ಕೆಲಸಗಾರರು ಅಥವಾ ಕಾರ್ಮಿಕರು ನೇಮಿಸಿಕೊಳ್ಳಲು ಅವಕಾಶವಿರುವ ಮತ್ತು ಅಂತಹ ಸಂಸ್ಥೆಗಳನ್ನು ನಿರ್ವಹಿಸುತ್ತಿರುವ ಯಾವುದೇ ವ್ಯಕ್ತಿಗೆ ಗ್ರಾಮ ಪಂಚಾಯತಿ ಲಿಖಿತ ನೋಟೀಸ್ ನೀಡಿ ಶೌಚಗೃಹವನ್ನು ಮತ್ತು ಮೂತ್ರ ವಿಸರ್ಜನೆ ಜಾಗವನ್ನು ವ್ಯವಸ್ಥೆ ಮಾಡಲು ಮತ್ತು ಅವುಗಳನ್ನು ಸುಸ್ಥಿತಿಯಲ್ಲಿಡಲು ಆದೇಶಿಸಬಹುದು.**

1) 5 2) 10 3) 20 4) 15

**249)ಗ್ರಾಮ ಪಂಚಾಯತಿಯು ಯಾವುದೇ ಭೂಮಿಯಲ್ಲಿ ಶೌಚಗೃಹ ಅಥವಾ ಮೂತ್ರ ವಿಸರ್ಜನೆ ಜಾಗವನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಮಾಲೀಕ ಅಥವಾ ಅನುಭವದಾರನಿಗೆ ಲಿಖಿತ ನೋಟೀಸಿನ ಮೂಲಕ ಈ ಕೆಳಗಿನ ಯಾವ ಕ್ರಮ ಕೈಗೊಳ್ಳಲು ನಿರ್ದೇಶಿಸಬಹುದು.**

1)ಶೌಚಗೃಹ ಅಥವಾ ಮೂತ್ರ ವಿಸರ್ಜನೆ ಜಾಗವಿರುವುದು ಅದರ ಸಮೀಪದಲ್ಲಿ ಹಾದು ಹೋಗುವ ಜನ ಅಥವಾ ನೆರೆಹೊರೆಯಲ್ಲಿ ವಾಸಿಸುವ ವ್ಯಕ್ತಿಗಳ ದೃಷ್ಟಿಗೆ ಬೀಳುವಂತೆ ಮೇಲ್ಛಾವಣಿ ಹಾಕುವಂತೆ ನಿರ್ದೇಶಿಸಬಹುದು

2)ಶೌಚಗೃಹದ ಸುತ್ತಲೂ ಗೋಡೆ ಅಥವಾ ಬೇಲಿ ಹಾಕಿ ಮರೆ ಮಾಡಬೇಕೆಂದು ನಿರ್ದೇಶಿಸಬಹುದು

3)ಶೌಚಗೃಹದ ಬಾಗಿಲು ಅಥವಾ ಮೂತ್ರ ವಿಸರ್ಜನೆಯ ಸಣ್ಣ ಬಾಗಿಲು ಬೀದಿಗೆ ಎದುರಾಗಿದ್ದು, ಅದು ಅಸಹ್ಯಕರವಾಗಿದೆ ಎಂದು ಭಾವಿಸಿದ್ದರೆ ಮಾರ್ಪಾಟು ಮಾಡಬೇಕೆಂದು ನಿರ್ದೇಶಿಸಬಹುದು.

4)ಮೇಲಿನ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಬಹುದು

## ಪ್ರಕರಣ-105. ಶೌಚಗೃಹ ಮುಂತಾದವುಗಳನ್ನು ಮಾರ್ಪಡಿಸುವ, ದುರಸ್ತಿ ಮಾಡುವ ಮತ್ತು ಸುಸ್ಥಿತಿಯಲ್ಲಿಡುವ ಸಂಬಂಧದ ವೆಚ್ಚ

**250) ಪ್ರಕರಣ 105 ಏನನ್ನು ತಿಳಿಸುತ್ತದೆ?**

1) ಅಪಾಯಕಾರಿ ಕಲ್ಲುಗಣಿ ಕೆಲಸಕ್ಕೆ ಸಂಬಂಧಿಸಿದಂತೆ

2) ಶೌಚಗೃಹ ಮುಂತಾದವುಗಳನ್ನು ಮಾರ್ಪಡಿಸುವ, ದುರಸ್ತಿ ಮಾಡುವ ಮತ್ತು ಸುಸ್ಥಿತಿಯಲ್ಲಿಡುವ ಸಂಬಂಧದ ವೆಚ್ಚ 3) ಚರಂಡಿ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ತಿಳಿಸುತ್ತದೆ

4) ಪಂಚಾಯತಿ ನೌಕರರ ನೇಮಕಾತಿ & ನಿಯಂತ್ರಣದ ಬಗ್ಗೆ ತಿಳಿಸುತ್ತದೆ.

**ಉತ್ತರಗಳು:-** 244) 3 245) 4 246) 1 247) 2 248) 3 249) 4 250) 2



Scanned by CamScanner

251) ಪಂಚಾಯತಿ ಪ್ರದೇಶದಲ್ಲಿನ ಚರಂಡಿ, ಶೌಚಗೃಹಗಳನ್ನು ಪಂಚಾಯತಿ ವೆಚ್ಚದಲ್ಲಿ ನಿರ್ಮಿಸಿದ್ದರೆ ಈ ಕೆಳಗಿನ ಯಾರು ದುರಸ್ತಿ ಮಾಡುವ, ಮಾರ್ಪಡಿಸುವ, ಸುಸ್ಥಿತಿಯಲ್ಲಿಡುವ ಸಂಬಂಧದ ವೆಚ್ಚವನ್ನು ಭರಿಸಬೇಕು

1)ಗ್ರಾಮ ಪಂಚಾಯತಿ 2)ತಾಲ್ಲೂಕು ಪಂಚಾಯತಿ
3)ಜಿಲ್ಲಾ ಪಂಚಾಯತಿ 4)ರಾಜ್ಯ ಸರ್ಕಾರ

252)ಪಂಚಾಯತಿ ಪ್ರದೇಶದಲ್ಲಿನ ಚರಂಡಿ, ಶೌಚ ಗೃಹ ಯಾವುದಾದರೂ ವ್ಯಕ್ತಿಗೆ ಸೇರಿದ್ದರೆ ಅವುಗಳ ಮಾರ್ಪಾಡು, ದುರಸ್ತಿ ಮಾಡುವ ಸುಸ್ಥಿತಿಯಲ್ಲಿಡುವ ಸಂಬಂಧದ ವೆಚ್ಚವನ್ನು ಯಾರು ಭರಿಸಬೇಕು?

1) ಗ್ರಾಮ ಪಂಚಾಯತಿ 2) ರಾಜ್ಯ ಸರ್ಕಾರ
3) ಕಟ್ಟಡ ಅಥವಾ ಭೂಮಿಯನ್ನು ಹೊಂದಿರುವ ಮಾಲೀಕರು
4) ಗ್ರಾಮ ಪಂಚಾಯತಿ ಮತ್ತು ಕಟ್ಟಡ ಮಾಲೀಕರ ಸಮಪಾಲಿನ ಖರ್ಚಿನಲ್ಲಿ

253) ಮಾಲೀಕರಿಗೆ ಸೇರಿದ ಚರಂಡಿಯನ್ನು ಶೌಚಗೃಹಗಳು ಅಸಹ್ಯಕರವಾಗಿದ್ದರೆ ಅದನ್ನು ಸುಸ್ಥಿಯಲ್ಲಿಡುವಂತೆ ಮಾಲೀಕನಿಗೆ ಈ ಕೆಳಗಿನ ಯಾರು ನೋಟಿಸಿನ ಮೂಲಕ ನಿರ್ದೇಶಿಸುತ್ತಾರೆ?

1)ತಹಸಿಲ್ದಾರರು 2) ಜಿಲ್ಲಾ ಪಂಚಾಯತಿ
3)ತಾಲ್ಲೂಕು ಪಂಚಾಯತಿ 4) ಗ್ರಾಮ ಪಂಚಾಯತಿ

**ಪ್ರಕರಣ-106. ಚರಂಡಿ ಮೊದಲಾದವುಗಳ ಪರಿವೀಕ್ಷಣೆ**

254) ಪ್ರಕರಣ 106 ಏನನ್ನು ತಿಳಿಸುತ್ತದೆ?

1) ಚರಂಡಿ ಮೊದಲಾದವುಗಳ ಪರಿವೀಕ್ಷಣೆ
2) ಅಪಾಯಕಾರಿ ಕಲ್ಲುಗಣಿ ಕೆಲಸ
3) ಉಪದ್ರವಕಾರಿ ಕೆಲಸಗಳ ನಿಷೇಧ
4) ಹೊಗೆ ಹೊರಸೂಸುವಿಕೆ

255) ಗ್ರಾಮ ಪಂಚಾಯತಿ ಪ್ರದೇಶದಲ್ಲಿರುವ ಯಾವುದೇ ಮೋರಿ, ಚರಂಡಿ, ನೀರು ಹರಿಸಿ ಸ್ವಚ್ಛಗೊಳಿಸುವ ಶೌಚ ಗೃಹಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾರು ಪರಿವೀಕ್ಷಿಸಬಹುದು

1)ಗ್ರಾಮ ಪಂಚಾಯತಿ ಅಥವಾ ಪರಿವೀಕ್ಷಣೆ ಉದ್ದೇಶದಿಂದ ನೇಮಕಗೊಂಡ ಯಾವುದೇ ಅಧಿಕಾರಿ
2)ತಾಲ್ಲೂಕು ಪಂಚಾಯತಿ ಅಥವಾ ಪರಿವೀಕ್ಷಣೆ ಉದ್ದೇಶದಿಂದ ನೇಮಕಗೊಂಡ ಯಾವುದೇ ಅಧಿಕಾರಿ
3)ಜಿಲ್ಲಾ ಪಂಚಾಯತಿ ಅಥವಾ ಪರಿವೀಕ್ಷಣೆ ಉದ್ದೇಶದಿಂದ ನೇಮಕಗೊಂಡ ಯಾವುದೇ ಅಧಿಕಾರಿ
4)ಸರ್ಕಾರದ ಯಾವುದೇ ಅಧಿಕಾರಿ

256) ಚರಂಡಿಗಳ ಪರಿವೀಕ್ಷಣೆ ಮಾಡುವ ಅಧಿಕಾರಿಯು ಯಾವ ಅವಧಿಯಲ್ಲಿ ಪರಿವೀಕ್ಷಣೆ ಮಾಡಬೇಕು?

1) ಸೂರ್ಯೋದಯ, ಸೂರ್ಯಾಸ್ತಗಳ ನಡುವಿನ ಕಾಲ
2) ಸೂರ್ಯಾಸ್ತಮ & ಸೂರ್ಯೋದಯಗಳ ಕಾಲ
3) ದಿನದ ಯಾವುದೇ ವೇಳೆಯಲ್ಲಾದರೂ
4) ಸೂರ್ಯೋದಯದ ನಂತರದ 4 ಗಂಟೆ ಅವಧಿ

257) ಚರಂಡಿಗಳ ಪರಿವೀಕ್ಷಣೆಗೆ ಸಂಬಂಧಿಸಿದಂತೆ ಸರಿಯಾದ ಸುಸ್ಥಿತಿಯಲ್ಲಿಲ್ಲವೆಂದು ಕಂಡು ಬಂದರೆ ಅಂತಹ ಚರಂಡಿ ಅಥವಾ ಮೋರಿಯನ್ನು ಗ್ರಾಮ ಪಂಚಾಯತಿ ನಿರ್ಮಿಸಿದ್ದರೆ ಸುಸ್ಥಿಯಲ್ಲಿಡುವುದಕ್ಕೆ ಸಂಬಂಧಿಸಿದ ಖರ್ಚನ್ನು ಕೆಳಗಿನ ಯಾರು ಭರಿಸಬೇಕು

1) ಜಿಲ್ಲಾ ಪಂಚಾಯತಿ 2) ತಾಲ್ಲೂಕು ಪಂಚಾಯತಿ
3) ಗ್ರಾಮ ಪಂಚಾಯತಿ 4) ಭೂಮಿಯ ಮಾಲೀಕರು

258) ನಿರ್ಮಿಸಿರುವ ಚರಂಡಿಗೆ ಸಂಬಂಧಿಸಿದಂತೆ ಪರಿವೀಕ್ಷಣೆಯ ಸಂದರ್ಭದಲ್ಲಿ ಚರಂಡಿ ಅಥವಾ ಮೋರಿಯು ಸುಸಿತ್ಥಿಯಲ್ಲಿಲ್ಲವೆಂದು ಕಂಡು ಬಂದರೆ ಅದು ಯಾವುದಾದರೂ ಮಾಲೀಕನಿಗೆ ಸೇರಲ್ಪಟ್ಟಿದ್ದರೆ ಅದನ್ನು ಸುಸ್ಥಿತಿಯಲ್ಲಿಡುವ ಖರ್ಚನ್ನು ಈ ಕೆಳಗಿನ ಯಾರು ಭರಿಸಬೇಕು.

1 )ಗ್ರಾಮ ಪಂಚಾಯತಿ 2)ತಾಲ್ಲೂಕು ಪಂಚಾಯತಿ
3)ಜಿಲ್ಲಾ ಪಂಚಾಯತಿ 4) ಭೂ ಮಾಲೀಕರು

259)ಭೂ ಮಾಲೀಕನಿಗೆ ಸೇರಿದ ಚರಂಡಿಯನ್ನು ಮಾಲೀಕನು ಸುಸ್ಥಿತಿಯಲ್ಲಿಡಲು ವಿಫಲನಾದರೆ ಅಂತಹ ಚರಂಡಿಯನ್ನು ಗ್ರಾಮ ಪಂಚಾಯತಿ ಸುಸ್ಥಿತಿಯಲ್ಲಿಟ್ಟರೆ ಅದಕ್ಕೆ ಸಂಬಂಧಿಸಿದಂತಹ ಖರ್ಚನ್ನು ಯಾವ ರೀತಿಯಲ್ಲಿ ವಸೂಲು ಮಾಡತಕ್ಕದ್ದು

1) ದಂಡದ ರೂಪದಲ್ಲಿ ವಸೂಲು ಮಾಡತಕ್ಕದ್ದು
2) ಗ್ರಾಮ ಪಂಚಾಯತಿಗೆ ಬಾಕಿ ಇದ್ದ ತೆರಿಗೆ ಫೀಜುಗಳನ್ನು ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು
3)ಭೂ ಕಂದಾಯವನ್ನು ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು
4)ಆದಾಯ ತೆರಿಗೆಯನ್ನು ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

**ಉತ್ತರಗಳು:** 251) 1 252) 2 253) 4 254) 1 255) 1 256) 1 257) 3 258) 4 259) 2



Scanned by CamScanner

## ಪ್ರಕರಣ - 107. ಅಪಾಯಕಾರಿ ಕಲ್ಲುಗಣಿ ಕೆಲಸ

260) ಪ್ರಕರಣ 107 ಏನನ್ನು ತಿಳಿಸುತ್ತದೆ?

1) ಅಸಹ್ಯಕರ ಪದಾರ್ಥ ಇತ್ಯಾದಿಗಳನ್ನು ಉಪಯೋಗಿಸುವುದು 2) ಉಪದ್ರವಕಾರಿ ಕೆಲಸಗಳ ನಿಷೇಧ 3)ಅಪಾಯಕಾರಿ ಕಲ್ಲು ಗಣಿ ಕೆಲಸ 4)ಹೊಗೆ ಹೊರಸೂಸುವಿಕೆ

261) ಪಂಚಾಯಿತಿ ಪ್ರದೇಶದಲ್ಲಿನ ಅಪಾಯಕಾರಿ ಕಲ್ಲು ಗಣಿ ಕೆಲಸಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾರು ನಿಯಂತ್ರಣ ಹೊಂದಿದ್ದಾರೆ?

1) ಗ್ರಾಮ ಪಂಚಾಯಿತಿ 2) ತಾಲ್ಲೂಕು ಪಂಚಾಯಿತಿ

3) ಜಿಲ್ಲಾ ಪಂಚಾಯಿತಿ 4) ಸ್ಥಾಯಿ ಸಮಿತಿ

262) ಅಪಾಯಕಾರಿ ಕಲ್ಲುಗಣಿ ಕೆಲಸಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಈ ಕೆಳಗಿನ ಯಾವ ಸಂದರ್ಭದಲ್ಲಿ ಲಿಖಿತ ನೋಟೀಸ್ ನೀಡಬೇಕು?

1) ಯಾವುದೇ ಕಲ್ಲುಗಣಿ ಕೆಲಸವು ಅಥವಾ ಯಾವುದೇ ಸ್ಥಳದಲ್ಲಿ ಭೂಮಿಯಿಂದ ಕಲ್ಲು ಮಣ್ಣು ಸಾಗಿಸುವುದು ನೆರೆಹೊರೆಯವರಿಗೆ ತೊಂದರೆ ಉಂಟಾಗುವುದೆಂದು ಭಾವಿಸಿದರೆ

2) ಗಣಿಯಿಂದ ಅಪಾಯ ಉಂಟಾಗುವುದೆಂದು ಭಾವಿಸಿದರೆ

3) ಕಲ್ಲುಗಣಿಯನ್ನು ಕೈಗೊಳ್ಳುವುದರಿಂದ ಸುತ್ತಮುತ್ತಲಿನ ಜನರಿಗೆ ತೊಂದರೆಯಾಗುತ್ತದೆಂದು ಭಾವಿಸಿದರೆ

4) ಮೇಲಿನ ಎಲ್ಲಾ ಸಂದರ್ಭದಲ್ಲೂ

263) ಗ್ರಾಮ ಪಂಚಾಯಿತಿಯು ಅಪಾಯಕಾರಿ ಕಲ್ಲುಗಣಿಗಾರಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ರೀತಿಯಲ್ಲಿ ನಿರ್ದೇಶಿಸಬಹುದು

1) ಲಿಖಿತ ನೋಟಿಸ್ 2) ಮೌಖಿಕವಾಗಿ

3) ಲಿಖಿತ / ಮೌಖಿಕ 4) ಪತ್ರಿಕೆಗಳ ಮೂಲಕ ಪ್ರಕಟಣೆ

264) ಗ್ರಾಮ ಪಂಚಾಯಿತಿಯು ಲಿಖಿತ ನೋಟಿಸ್ ಮೂಲಕ ಅಪಾಯಕಾರಿ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವಕ್ರಮ ಕೈಗೊಳ್ಳಲು ನಿರ್ದೇಶಿಸಬಹುದು

1)ಮಾಲೀಕನಿಗೆ ಗಣಿಗಾರಿಕೆಗೆ ಅನುಮತಿ ಕೊಡಬಾರದೆಂದು ನಿರ್ದೇಶಿಸಬಹುದು.

2)ಕೆಲಸದ ಆದೇಶಗಳನ್ನು ತಡೆಹಿಡಿಯುವಂತೆ ನಿರ್ದೇಶಿಸಬಹುದು.

3)ಹೊಣೆಗಾರಿಕೆ ಹೊಂದಿದ ವ್ಯಕ್ತಿಗಳಿಗೆ ಅದನ್ನು ಮುಂದುವರೆಸಕೂಡದೆಂದು ನಿರ್ದೇಶಿಸಬಹುದು.

4)ಮೇಲಿನ ಎಲ್ಲಾ ಕ್ರಮಗಳನ್ನು ನಿರ್ದೇಶಿಸಬಹುದು.

265) ಅಪಾಯಕಾರಿ ಕಲ್ಲುಗಣಿಯ ಸ್ಥಳವು ಸರ್ಕಾರಕ್ಕೆ ಸೇರಿದ್ದರೆ ಮತ್ತು ಸರ್ಕಾರದಿಂದ ಪರವಾನಿಗೆ ಪಡೆದಿದ್ದರೆ ಅಥವಾ ಸರ್ಕಾರದ ಯಾವುದೇ ಅಧಿಕಾರಿಯ ಅನುಮತಿ ಪಡೆದು ನಡೆಸಲಾಗುತ್ತಿದ್ದರೆ ಅಂತಹ ಅಪಾಯಕಾರಿ ಕಲ್ಲುಗಣಿಗಾರಿಕೆಯ ಮೇಲೆ ನೋಟೀಸ್ ನೀಡಲು ಈ ಕೆಳಗಿನವರ ಅನುಮತಿ ಪಡೆಯದ ಹೊರತು ಕ್ರಮ ಕೈಗೊಳ್ಳತಕ್ಕದ್ದಲ್ಲ

1) ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರು ಅಥವಾ ಈ ಬಗ್ಗೆ ಅಧಿಕಾರ ಹೊಂದಿರುವ ಅಧಿಕಾರಿ

2) ರಾಜ್ಯದ ರಾಜ್ಯಪಾಲರು 3) ಜಿಲ್ಲಾಪಂಚಾಯಿತಿ

4) ಡೆಪ್ಯೂಟಿ ಕಮೀಷನರ್

266) ಅಪಾಯವನ್ನು ಉಂಟುಮಾಡುವಂತಹ ಗಣಿಗಾರಿಕೆಗೆ ಸಂಬಂಧಿಸಿದಂತೆ ತಕ್ಷಣ ಸಂಭವಿಸುವ ಅಪಾಯ ತಡೆಗಟ್ಟಲು ಅವಶ್ಯಕವೆಂದು ಗ್ರಾಮ ಪಂಚಾಯಿತಿ ಭಾವಿಸಿದರೆ ಗಣಿಗಾರಿಕೆಗೆ ಈ ಕೆಳಗಿನ ಕ್ರಮ ಕೈಗೊಳ್ಳಲು ನಿರ್ದೇಶಿಸಬಹುದು

1)ಗಣಿಯ ಸಮೀಪದಲ್ಲಿ ಹಾದು ಹೋಗುವವರ ರಕ್ಷಣೆಗಾಗಿ ಸೂಕ್ತ ಬೇಲಿಯನ್ನು ಹಾಕಲು ನಿರ್ದೇಶಿಸಬಹುದು

2)ತಂತಿಯ ಬೇಲಿಯ ಸುತ್ತಲೂ ಅವಶ್ಯಕವೆಂದು ಕಂಡು ಬಂದರೆ ತಂತಿ ಬೇಲಿಯ ಸುತ್ತಲೂ ನಿರ್ದೇಶಿಸಬಹುದು

3)ಗಣಿಗೆ ಸಂಬಂಧಿಸಿದಂತೆ ಕೈಗೊಳ್ಳುವ ಕ್ರಮಕ್ಕೆ ಸಂಬಂಧಿಸಿದದಲ್ಲಿ ಗ್ರಾಮ ಪಂಚಾಯಿತಿ ವಹಿಸಿದ ವೆಚ್ಚವನ್ನು ಮಾಲೀಕನು ಸಂದಾಯ ಮಾಡುವಂತೆ ನಿರ್ದೇಶಿಸಬಹುದು.

4)ಮೇಲಿನ ಎಲ್ಲಾ ಕ್ರಮ ಕೈಗೊಳ್ಳಬಹುದು.

## ಪ್ರಕರಣ-108. ಅಸಹ್ಯಕರ ಪದಾರ್ಥ ಇತ್ಯಾದಿಗಳನ್ನು ಉಪಯೋಗಿಸುವುದು

267) ಪ್ರಕರಣ 108 ಏನನ್ನು ತಿಳಿಸುತ್ತದೆ?

1)ಉಪದ್ರವಕಾರಿ ಕೆಲಸಗಳ ನಿಷೇಧ

2)ಹೊಗೆ ಹೊರಸೂಸುವಿಕೆ

3)ಅಸಹ್ಯಕರ ಪದಾರ್ಥ ಇತ್ಯಾದಿಗಳನ್ನು ಉಪಯೋಗಿಸುವುದು

4)ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಬಗ್ಗೆ ತಿಳಿಸುತ್ತದೆ.

ಉತ್ತರಗಳು:- 260) 3 261) 1 262) 4 263) 1 264) 4 265) 1 266) 4 267) 3



Scanned by CamScanner

268) ಈ ಕೆಳಗಿನ ಯಾವುದನ್ನು ಅಸಹ್ಯಕರ ಪದಾರ್ಥಗಳೆಂದು ಪರಿಗಣಿಸಿಲ್ಲ

1) ಜಾನುವಾರಿನ ಗೊಬ್ಬರ   2) ಮಲಮೂತ್ರ

3) ಅಸಹ್ಯಕರ ವಾಸನೆ ಬರುವ ಮಲಮೂತ್ರ

4) ಆರೋಗ್ಯ ಕೆಡಿಸುವ ವಸ್ತುಗಳು

269) ಗ್ರಾಮ ಪಂಚಾಯತಿಯ ಉಚಿತ ಅನುಮತಿ ಇಲ್ಲದೆ ಯಾವುದೇ ಅಸಹ್ಯಕರ ಪದಾರ್ಥಗಳನ್ನು ಸಂಗ್ರಹಿಸುವ ಅಥವಾ ಉಪಯೋಗಿಸುವ ವ್ಯಕ್ತಿಯು ಈ ಕೆಳಕಂಡ ಶಿಕ್ಷೆಯಿಂದ ದಂಡಿತನಾಗತಕ್ಕದ್ದು

1)100ರೂ ದಂಡ   2)200ರೂ ದಂಡ

3)300ರೂ ದಂಡ   4)500ರೂ ದಂಡ

## ಪ್ರಕರಣ 109. ಹೊಗೆ ಹೊರಸೂಸುವಿಕೆ

270) 109ನೇ ಪ್ರಕರಣ ಏನನ್ನು ತಿಳಿಸುತ್ತದೆ?

1) ಗ್ರಾಮ ಪಂಚಾಯತಿ ಸಿಬ್ಬಂಧಿ

2) ಹೊಗೆ ಹೊರಸೂಸುವಿಕೆ

3) ಗ್ರಾಮ ಪಂಚಾಯತಿ ಸಿಬ್ಬಂಧಿಗಳ ನೇಮಕ

4) ಗ್ರಾಮ ಪಂಚಾಯತಿ ಸಿಬ್ಬಂಧಿಗಳ ನಿಯಂತ್ರಣ

271) ಗ್ರಾಮ ಪಂಚಾಯತಿಯ ವ್ಯಾಪ್ತಿ ಒಳಗಿನ ಕಾರ್ಖಾನೆ ಅಥವಾ ತಯಾರಿಕೆ ಉದ್ದೇಶದಿಂದ ಅಳವಡಿಸಿರುವ ಕುಲುಮೆ ಅಥವಾ ಉಗಿ ಯಂತ್ರವು ಹೊಗೆಯನ್ನು ಹೊರ ಸೂಸುತ್ತಿದ್ದರೆ ಅದಕ್ಕೆ ಸಂಬಂಧಿಸಿದಂತೆ ನೋಟೀಸ್ ನೀಡುವ ಅಧಿಕಾರವನ್ನು ಯಾರು ಹೊಂದಿರುತ್ತಾರೆ.

1) ಗ್ರಾಮ ಪಂಚಾಯತಿ   2) ತಾಲ್ಲೂಕು ಪಂಚಾಯತಿ

3) ಜಿಲ್ಲಾ ಪಂಚಾಯತಿ   4) ರಾಜ್ಯ ಸರ್ಕಾರ

272) ಗ್ರಾಮ ಪಂಚಾಯತಿಯು ನಿರ್ದೇಶಿಸಿದ ತರುವಾಯ ಯಾವುದೇ ವ್ಯಕ್ತಿಯು ನಿರ್ಮಿಸಿದ ಕಾಮಗಾರಿ ಅಥವಾ ಯಂತ್ರದಿಂದ ಹೊಗೆಯನ್ನು ಕಡಿಮೆ ಮಾಡಿಕೊಳ್ಳದಿದ್ದರೆ ಆ ಕಟ್ಟಡದ ಅಥವಾ ಯಂತ್ರದ ಕಾಮಗಾರಿ ಹೊಂದಿರುವ ಜವಾಬ್ದಾರಿ ಹೊಂದಿದ ವ್ಯಕ್ತಿಗೆ ಉಲ್ಲಂಘನೆಗಾಗಿ ಈ ಕೆಳಗಿನ ಜುಲ್ಮಾನೆ ವಿಧಿಸತಕ್ಕದ್ದು.

1)100ರೂ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಯಾವುದೇ ತರುವಾಯದ ಅಪರಾಧಕ್ಕೆ 500ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

2)500ರೂ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಯಾವುದೇ ತರುವಾಯದ ಅಪರಾಧಕ್ಕೆ 500ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆ

3)100ರೂ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಯಾವುದೇ ತರುವಾಯದ ಅಪರಾಧಕ್ಕೆ 100ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

4)200ರೂ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಯಾವುದೇ ತರುವಾಯದ ಅಪರಾಧಕ್ಕೆ 600ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

273) ಹೊಗೆ ಹೊರಸೂಸುವಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಯಂತ್ರಗಳಿಗೆ ಸಂಬಂಧಿಸುವುದಿಲ್ಲ

1) ಯಾವುದಾದರೂ ಕರಕುಶಲ, ಗುಡಿ ಕೈಗಾರಿಕೆಗಳ ಸಂಬಂಧಿಸಿದ ಯಂತ್ರಗಳು ಅನ್ವಯಿಸುವುದಿಲ್ಲ.

2)ದೊಡ್ಡ ದೊಡ್ಡ ಕಾರ್ಖಾನೆಗಳ ಯಂತ್ರಗಳಿಗೆ ಅನ್ವಯಿಸತಕ್ಕದ್ದಲ್ಲ

3) ಯಾವುದೇ ರೈಲು ಮಾರ್ಗದ ಮೇಲೆ ಸಂಚಾರದ ಉದ್ದೇಶಕ್ಕಾಗಿ ಅಥವಾ ರಸ್ತೆಗಳ ರಿಪೇರಿಗಾಗಿ ಉಪಯೋಗಿಸುವ ಸಂಚಾರಿ ಯಂತ್ರಗಳಿಗೆ ಅನ್ವಯಿಸತಕ್ಕದ್ದಲ್ಲ

4)ಮುದ್ರಣ ಯಂತ್ರಗಳು ಅಥವಾ ಯಾವುದಾದರೂ ತಯಾರಿಕಾ ಯಂತ್ರಗಳಿಗೆ ಅನ್ವಯಿಸುವುದಿಲ್ಲ.

## ಪ್ರಕರಣ 110. ಉಪದ್ರವಕಾರಿ ಕೆಲಸಗಳ ನಿಷೇಧ

274) ಪ್ರಕರಣ 110 ಏನನ್ನು ತಿಳಿಸುತ್ತದೆ

1) ಗ್ರಾಮ ಪಂಚಾಯತಿ ಸಿಬ್ಬಂಧಿ ಬಗ್ಗೆ ತಿಳಿಸುತ್ತದೆ

2) ಗ್ರಾಮ ಪಂಚಾಯತಿ ಸಿಬ್ಬಂದಿಗಳ ನೇಮಕ

3) ಉಪದ್ರವಕಾರಿ ಕೆಲಸಗಳ ನಿಷೇಧ

4) ಗ್ರಾಮ ಪಂಚಾಯತಿ ವಿಧಿಸುವ ತೆರಿಗೆಗಳ ಬಗ್ಗೆ

275) ಕೆಳಗಿನ ಯಾವ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ?

1)ಸಾರ್ವಜನಿಕ ಬೀದಿ / ಸ್ಥಳದಲ್ಲಿ ಮೂತ್ರ ವಿಸರ್ಜಿಸಿದರೆ

2)ಸಾರ್ವಜನಿಕ ಬೀದಿ ಅಥವಾ ಸ್ಥಳದಲ್ಲಿ ಭಿಕ್ಷಾಟನೆ ಮಾಡಿದರೆ ಅಥವಾ ಒತ್ತಾಯಪೂರ್ವಕವಾಗಿ ಬೇಡಿದರೆ

3)ಅನುಕಂಪ ಪಡೆಯುವ ಉದ್ದೇಶದಿಂದ ಯಾವುದೇ ಕುರುಪತ್ವವನ್ನು/ಕಾಯಿಲೆಯನ್ನು /ಯಾವುದೇ ಅಸಹ್ಯಕರ ಹುಣ್ಣು /ಗಾಯವನ್ನು ಪ್ರದರ್ಶಿಸಿದರೆ /ತೋರಿಸಿದರೆ

4)ಮೇಲಿನ ಎಲ್ಲಾ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ.

ಉತ್ತರಗಳು:- 268) 1   269) 1   270) 2   271) 1   272) 1   273) 3   274) 3   275) 4



Scanned by CamScanner

**276) ಕೆಳಗಿನ ಯಾವ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ?**

1) ಸಾರ್ವಜನಿಕ ದೃಷ್ಟಿ ಬೀಳುವ ಹಾಗೆ ಮಾಂಸವನ್ನು ಒಯ್ಯುವುದು

2) ಸೂಕ್ತ ಪ್ರಾಧಿಕಾರಿ ಅನುಮತಿ ಇಲ್ಲದೆ ಗೂಟ ಹೊಡೆದು ದನಕರುಗಳನ್ನು ಅವುಗಳಿಗೆ ಕಟ್ಟಿದರೆ, ಅಥವಾ ಗಾಡಿಯನ್ನು ಒಂದು ಕಡೆ ನಿಲ್ಲಿಸಿದರೆ

3) ಸಾರ್ವಜನಿಕ ಸ್ಥಳದಲ್ಲಿ ಸೂಕ್ತ ಪ್ರಾಧಿಕಾರಿಯ ಅನುಮತಿ ಇಲ್ಲದೆ ಸ್ಮಾರಕ, ಕಟ್ಟಡಗಳಿಗೆ ಬಿಲ್ಲು ಅಥವಾ ನೋಟಿಸ್ ಅಥವಾ ದಾಸ್ತಾವೇಜನ್ನು ಅಂಟಿಸಿದರೆ

4) ಮೇಲಿನ ಎಲ್ಲಾ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ.

**277) ಕೆಳಗಿನ ಯಾವ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ?**

1)ಸೂಕ್ತ ಪ್ರಾಧಿಕಾರಿ ಅನುಮತಿ ಇಲ್ಲದೆ ಯಾವುದೇ ಕಟ್ಟಡ ಅಥವಾ ಸ್ಮಾರಕ ಅಂಚೆ ಕಛೇರಿಕಟ್ಟಡವನ್ನು ವಿರೂಪಗೊಳಿಸಿದರೆ ಅಥವಾ ಅದರ ಮೇಲೆ ಬರೆದರೆ ಅಥವಾ ಗುರುತು ಮಾಡಿದರೆ

2)ಸೂಕ್ತ ಪ್ರಾಧಿಕಾರಿಯ ಅನುಮತಿ ಇಲ್ಲದೆ ಸಾರ್ವಜನಿಕವಾಗಿ ಅಂಟಿಸಿರುವ ನೋಟೀಸನ್ನು ತೆಗೆದು ಹಾಕಿದರೆ, ನಾಶ ಪಡಿಸಿದರೆ ವಿರೂಪಗೊಳಿಸಿದರೆ ಅಥವಾ ಅಳಿಸಿ ಹಾಕಿದರೆ

3)ಸಾರ್ವಜನಿಕ ಸ್ಥಳದಲ್ಲಿ ಆರೋಗ್ಯ ಕೆಡಿಸುವಂತಹ ಕೃತ್ಯಗಳನ್ನು ಎಸಗಿದರೆ

4)ಮೇಲಿನ ಎಲ್ಲಾ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ.

**278) ಕೆಳಗಿನ ಯಾವ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ?**

1) ಸಾರ್ವಜನಿಕ ಅಥವಾ ವಿಶೇಷ ನೋಟೀಸ್ ಮೂಲಕ ಗ್ರಾಮ ಪಂಚಾಯತಿಯು ನಿಷೇಧಿಸಿರುವ ಸಮಯ ಅಥವಾ ಸ್ಥಳದಲ್ಲಿ ಡೋಲು ಅಥವಾ ಡಂಗೂರ ಬಡಿದರೆ ಅಥವಾ ಯಾವುದೇ ಕಂಚಿನ ವಸ್ತು, ಇತರೆ ವಸ್ತುವಿನಿಂದ ಸಂಗೀತ ನುಡಿಸುವುದು

2)ಸೂಕ್ತ ಪ್ರಾಧಿಕಾರಿಯ ಅನುಮತಿ ಇಲ್ಲದೆ ಹಾಡುವ, ಕಿರುಚುವ ಅಥವಾ ಕೂಗುವ ಮೂಲಕ ಅಥವಾ ಮೆಗಾಫೋನ್ ಬಳಸಿ ಶಬ್ದವನ್ನು ಉಂಟು ಮಾಡಿ ಸಾರ್ವಜನಿಕರ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕದಡಿದರೆ

3)ಯಾವುದೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವಂತೆ ಪ್ರಾಣಿಯನ್ನು ಛೂ ಬಿಟ್ಟರೆ ಅಥವಾ ಶೌಚ ಮಾಡುವ ಉದ್ದೇಶಕ್ಕೆ ಇರದ ಯಾವುದೇ ಸ್ಥಳವನ್ನು ಶೌಚ ಗೃಹವಾಗಿ ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅನುಮತಿ ನೀಡಿದರೆ

4)ಮೇಲಿನ ಎಲ್ಲಾ ಕೆಲಸಗಳನ್ನು ಉಪದ್ರವಕಾರಿ ಕೆಲಸ ಎಂದು ಪರಿಗಣಿಸಲಾಗುತ್ತದೆ.

**279) ಉಪದ್ರವಕಾರಿ ಕೃತ್ಯಗಳನ್ನು ಎಸಗಿದವರಿಗೆ ಈ ಕೆಳಗಿನವರಿಗೆ ಯಾವ ಶಿಕ್ಷೆ ವಿಧಿಸಲಾಗುತ್ತದೆ?**

1)100ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆ

2)200ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆ

3)400ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆ

4)500ರೂವರೆಗೆ ವಿಸ್ತರಿಸಬಹುದಾದ ಜುಲ್ಮಾನೆ

ಉತ್ತರಗಳು:- 276) 4 277) 4 278) 4 279) 1



Scanned by CamScanner

ಅಧ್ಯಾಯ: 4ಎ

# ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

**280) 110-ಎ ಪ್ರಕರಣ ಯಾವುದಕ್ಕೆ ಸಂಬಂಧಿಸಿದೆ?**

1) ಪಂಚಾಯತ್ ಸದಸ್ಯರ ಹಕ್ಕುಗಳು ಮತ್ತು ಅವರ ಸವಲತ್ತುಗಳ ಬಗ್ಗೆ ತಿಳಿಸುತ್ತದೆ.

2) ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

3) ಪಂಚಾಯಿತಿ ಸದಸ್ಯರ ಸೇವಾ ಷರತ್ತುಗಳ ಬಗ್ಗೆ ಹೇಳುತ್ತದೆ.

4) ಪಂಚಾಯತ್ ಅಧಿಕಾರಿಗಳ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿಸುತ್ತದೆ.

**281) 110-ಎ ಪ್ರಕರಣವನ್ನು ಈ ಕೆಳಗಿನ ಯಾವ ತಿದ್ದುಪಡಿಯಲ್ಲಿ ಅಧಿನಿಯಮಕ್ಕೆ ಸೇರ್ಪಡೆ ಮಾಡಲಾಗಿದೆ.**

1) 2013ರ ತಿದ್ದುಪಡಿ 2) 2015ರ 2ನೇ ತಿದ್ದುಪಡಿ
3) 2015ರ 1ನೇ ತಿದ್ದುಪಡಿ 4) 2010ರ ತಿದ್ದುಪಡಿ

**282) 110-ಎ ಪ್ರಕರಣದಲ್ಲಿ ಕೊಟ್ಟಿರುವ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಈ ಕೆಳಗಿನ ಯಾರು ಪಾಲಿಸಬೇಕು.**

1) ಗ್ರಾಮಪಂಚಾಯಿತಿಯ ಅಧ್ಯಕ್ಷರು
2) ಗ್ರಾಮ.ಪಂ. ಉಪಾಧ್ಯಕ್ಷರು
3) ಗ್ರಾ.ಪಂ. ಎಲ್ಲಾ ಸದಸ್ಯರು
4) ಗ್ರಾ.ಪಂ. ಅಧಿಕಾರಿಗಳು

**283) 110-ಎ ಪ್ರಕರಣದಲ್ಲಿ ಒಟ್ಟು ಎಷ್ಟು ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನೀಡಲಾಗಿದೆ.**

1) 8 2) 10 3) 14 4) 11

**284) ಪಂಚಾಯಿತಿ ಸದಸ್ಯರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅಧಿನಿಯಮದ ಎಷ್ಟನೇ ಅಧ್ಯಾಯದಲ್ಲಿ ಸೇರ್ಪಡೆ ಮಾಡಲಾಗಿದೆ.**

1) ಅಧ್ಯಾಯ-4 2) ಅಧ್ಯಾಯ-4ಎ
3) ಅಧ್ಯಾಯ-5ಎ 4) ಅಧ್ಯಾಯ-3ಎ

**285) ಪಂಚಾಯಿತಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳು ಅವರಲ್ಲಿ ಈ ಕೆಳಗಿನ ಯಾವ ಗುಣವನ್ನು ಬೆಳೆಸಲು ಸಹಕಾರಿಯಾಗುತ್ತವೆ.**

1) ನೈತಿಕತೆ ಮಟ್ಟವನ್ನು ಹೆಚ್ಚಿಸುತ್ತವೆ.
2) ಸಮಾಜದಲ್ಲಿ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತವೆ.
3) ಮಾದರಿ ಪ್ರತಿನಿಧಿಯನ್ನಾಗಿ ರೂಪಿಸುತ್ತವೆ.
4) ಮೇಲಿನ ಎಲ್ಲವೂ

**286) ಈ ಕೆಳಗಿನ ಯಾವುದು ಪಂಚಾಯತ್ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುವುದಿಲ್ಲ.**

1) ಸ್ಥಳೀಯ ಮತದಾನ ಕ್ಷೇತ್ರಗಳ ಹಿತಾಸಕ್ತಿಯನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವುದು

2) ನ್ಯಾಯವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿನಿಧಿಸುವುದು.

3) ಸಮುದಾಯದಲ್ಲಿ ಮುಂದಾಳತ್ವವನ್ನು ಕಲ್ಪಿಸುವುದು.

4) ಅಂತರಾಷ್ಟ್ರೀಯ ಮನೋಭಾವವನ್ನು ಹೊಂದುವುದು.

**287) ಈ ಕೆಳಗಿನ ಯಾವುದು ಪಂಚಾಯತ್ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುವುದಿಲ್ಲ.**

1) ಮತದಾನ ಕ್ಷೇತ್ರಗಳ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವುದು

2) ವೈಜ್ಞಾನಿಕ ಮನೋಭಾವವನ್ನು ಹೊಂದುವುದು ಮತ್ತು ಹೊಂದುವಂತೆ ಮಾಡುವುದು

3) ನಡತೆ ಮತ್ತು ನೈತಿಕತೆಯ ಗರಿಷ್ಠ ಮಟ್ಟವನ್ನು ನಿರ್ವಹಿಸುವುದು.

4) ಆದ್ಯತೆಗಳು ಮತ್ತು ಗುರಿಗಳನ್ನು ಸಾಧಿಸುವಲ್ಲಿ ಪಂಚಾಯತ್ ನ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸುವುದು.

**288) ಈ ಕೆಳಗಿನ ಯಾವುದು ಪಂಚಾಯತ್ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುವುದಿಲ್ಲ.**

1) ಜನರಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಉಂಟು ಮಾಡುವುದು.

2) ಪಂಚಾಯಿತಿಯ ನಿವಾಸಿಯು ಮಾಡಿದ ವಿಚಾರಣೆಗಳಿಗೆ ಮತ್ತು ಮನವಿಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿಕ್ರಿಯಿಸುವುದು.

3) ಪ್ರದೇಶದ ಉತ್ತಮ ಆಡಳಿತದಲ್ಲಿ ಭಾಗವಹಿಸುವುದು ಮತ್ತು ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಪಂಚಾಯಿತಿ ನಿವಾಸಿಗಳ ಪಾಲ್ಗೊಳ್ಳುವಿಕೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವುದು.

4) ಯಾವುದೇ ವ್ಯಕ್ತಿಯ ವಿರುದ್ಧ ಬೇಧಭಾವ ತೋರದೇ ಸಮಾನತೆಯನ್ನು ಪ್ರೋತ್ಸಾಹಿಸುವುದು ಮತ್ತು ಅವರ ಮತ, ವಯಸ್ಸು, ಧರ್ಮ, ಲಿಂಗ ಅಥವಾ ಅಸಮರ್ಥತೆಯನ್ನು ಪರಿಗಣಿಸದೆ (regardless) ಅವರನ್ನು ಗೌರವದಿಂದ ಕಾಣುವುದು

**ಉತ್ತರಗಳು:-** 280) 2 281) 2 282) 3 283) 4 284) 2 285) 4 286) 4 287) 2 288) 1



Scanned by CamScanner

chanakyaloka.com



## ಅಧ್ಯಾಯ: 5

# ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ

### ಪ್ರಕರಣ-111. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ & ಇತರ ಅಧಿಕಾರಿ (ಕಾರ್ಯದರ್ಶಿ)

**1) ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ ಎಂಬ ಪದವನ್ನು ಈ ಕೆಳಗಿನ ಯಾವ ತಿದ್ದುಪಡಿಯಲ್ಲಿ ಸೇರ್ಪಡೆ ಮಾಡಲಾಗಿದೆ.**

1) 1ನೇ ತಿದ್ದುಪಡಿ 2015 2) 2ನೇ ತಿದ್ದುಪಡಿ 2015

3) 2010ರ ತಿದ್ದುಪಡಿ 4) 2012ರ ತಿದ್ದುಪಡಿ

**2) ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆಯು ಒಳಗೊಂಡಿರುವ ವಿಧಿಗಳು**

1) 111–113ಎ 2) 110–114

3) 111–114 4) 114–118

**3) 111ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1) ಗ್ರಾಮ ಪಂಚಾಯತಿಯ ಸಿಬ್ಬಂಧಿ

2)ಪಂಚಾಯತಿ ಅಭಿವೃದ್ಧಿ ಅಧಿಕಾರಿ & ಇತರೆ ಅಧಿಕಾರಿ (ಕಾರ್ಯದರ್ಶಿ)

3)ಗ್ರಾಮ ಪಂಚಾಯತಿಯ ಅನುದಾನ

4)ಗ್ರಾಮ ಪಂಚಾಯತಿಯ ವಿವೇಚನಾತ್ಮಕ ಅನುದಾನ

**4) ಪ್ರತಿಯೊಂದು ಗ್ರಾಮ ಪಂಚಾಯಿತಿಯು ಈ ಕೆಳಗಿನ ಯಾವ ಸಿಬ್ಬಂಧಿ ಹೊಂದಿರತಕ್ಕದ್ದು**

1)ಸರ್ಕಾರಿ ಅಧಿಕಾರಿಗಳಾಗಿರುವ ಪೂರ್ಣಕಾಲಿಕ ಒಬ್ಬ ಪಂಚಾಯತಿ ಅಭಿವೃದ್ಧಿ ಅಧಿಕಾರಿ

2)ಸರ್ಕಾರಿ ಅಧಿಕಾರಿಯಾಗಿರುವ ಒಬ್ಬ ಕಾರ್ಯದರ್ಶಿ

3)ಸರ್ಕಾರ ನೇಮಕ ಮಾಡಿದ ಅಂತಹ ಇತರ ನೌಕರರು

4)ಮೇಲಿನ ಎಲ್ಲರನ್ನೂ ಹೊಂದಿರತಕ್ಕದ್ದು.

**5) ಈ ಕೆಳಗಿನ ಯಾವ ಅಧಿನಿಯಮದಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆ**

1)ಅಕ್ಟೋಬರ್.4, 2010ರಿಂದ ಜಾರಿಗೆ ಬಂದಿರುವ 2011ರ ಅಧಿನಿಯಮ

2)1993 ಏಪ್ರಿಲ್.24ರಿಂದ ಜಾರಿಗೆ ಬಂದಿರುವ 1993ರ ಅಧಿನಿಯಮ

3)1996ರ ಏಪ್ರಿಲ್.24ರಿಂದ ಬಂದಿರುವ 1996ರ ಅಧಿನಿಯಮ

4)2006 ಏಪ್ರಿಲ್.24ರಲ್ಲಿ ಜಾರಿಗೆ ಬಂದಿರುವ 2006ರ ಅಧಿನಿಯಮ

**6) ಗ್ರಾಮ ಪಂಚಾಯಿತಿಯಲ್ಲಿ ಈ ಕೆಳಗಿನ ಅಧಿಕಾರಿಯು ಅತ್ಯುನ್ನತ ಅಧಿಕಾರಿಯಾಗಿದ್ದಾರೆ**

1) ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ(ಪಿ.ಡಿ.ಒ)

2) ಗ್ರಾಮ ಪಂಚಾಯತಿಯ ಕಾರ್ಯದರ್ಶಿ

3) ಗ್ರಾಮ ಪಂಚಾಯತಿಯ ಲೆಕ್ಕಾಧಿಕಾರಿ

4) ಗ್ರಾಮ ಪಂಚಾಯತಿಯ ಸಹಾಯಕ

**7) ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗೆ ಈ ಕೆಳಗಿನ ಯಾರು ತಮ್ಮ ಕರ್ತವ್ಯ ನಿರ್ವಹಿಸಲು ಸಹಕಾರ ನೀಡುತ್ತಾರೆ?**

1) ಮುಖ್ಯಕಾರ್ಯನಿರ್ವಹಣಾಧಿಕಾರಿ

2) ಕಾರ್ಯನಿರ್ವಹಣಾಧಿಕಾರಿ

3) ಕಾರ್ಯದರ್ಶಿ & ಗ್ರಾಮ ಪಂಚಾಯತಿಯ ಇತರ ನೌಕರರು

4) ಗ್ರಾಮ ಲೆಕ್ಕಿಗರು

**8) ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯ ಅನುಪಸ್ಥಿತಿಯಲ್ಲಿ ಅಥವಾ ಗೈರು ಹಾಜರಿಯಲ್ಲಿ ಅವರ ಕಾರ್ಯವನ್ನು ಈ ಕೆಳಗಿನ ಯಾರು ನಿರ್ವಹಿಸುತ್ತಾರೆ?**

1) ಗ್ರಾಮ ಪಂಚಾಯತಿ ಕಾರ್ಯದರ್ಶಿ

2) ಗ್ರಾಮ ಪಂಚಾಯತಿ ಸಹಾಯಕ

3) ಗ್ರಾಮ ಪಂಚಾಯತಿಯ ಅಧ್ಯಕ್ಷರು

4) ಗ್ರಾಮ ಪಂಚಾಯತಿಯ ಉಪಾಧ್ಯಕ್ಷರು

**ಉತ್ತರಗಳು:** 1) 1 2) 1 3) 2 4) 4 5) 1 6) 1 7) 3 8) 1



Scanned by CamScanner

**9) ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು**

1)ಗ್ರಾಮ ಪಂಚಾಯತಿಯ ಮಾಸಿಕ ಲೆಕ್ಕಪತ್ರಗಳನ್ನು ಗ್ರಾಮ ಪಂಚಾಯತಿಗೆ ಸಲ್ಲಿಸುವುದು

2)ಸರ್ಕಾರವು ಅಥವಾ ಲೆಕ್ಕ ಪರಿಶೋಧಕರು ಕೋರುವ ವಿವರಣಾ ಪಟ್ಟಿಕೆಗಳ ಬಗ್ಗೆ ಮಾಹಿತಿ ಸಲ್ಲಿಸುವುದು

3)ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಸಂಸ್ಥೆಗಳ ಲೆಕ್ಕ ಪತ್ರಗಳನ್ನು ಪರಿಶೀಲಿಸುವುದು

4)ಮೇಲಿನ ಎಲ್ಲಾ ಕಾರ್ಯಗಳನ್ನು ನೆರವೇರಿಸುವುದು

**10) ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು**

1)ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳ ಮತ್ತು ಇತರ ಸಮಿತಿಗಳ, ಗ್ರಾಮ ಸಭೆಯ ಹಾಗೂ ವಾರ್ಡ್ ಸಭೆಯ ದಾಖಲೆ ಇಡುವುದು

2)ಅನುಮೋದಿತ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿಗೆ ಸಕಾಲದಲ್ಲಿ ಸಲ್ಲಿಸಲು ಅನುವಾಗುವಂತೆ ವಾರ್ಷಿಕ ಯೋಜನೆ ಹಾಗೂ ಪಂಚವಾರ್ಷಿಕ ಯೋಜನೆ ತಯಾರಿಕೆಯಲ್ಲಿ ಸಮನ್ವಯ ಸಾಧಿಸುವುದು.

3)ಗ್ರಾಮ ಪಂಚಾಯತಿ & ಯೋಜನಾ ನಿಧಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಹಂಚಿಕೆ ಮಾಡುವುದು ಮತ್ತು ನಿರ್ದಿಷ್ಟ ವಿಧಾನದಲ್ಲಿ ಬಳಕೆ ಪ್ರಮಾಣ ಪತ್ರ ಒದಗಿಸುವುದು.

4)ಮೇಲಿನ ಎಲ್ಲಾ ಕಾರ್ಯಗಳನ್ನು ನೆರವೇರಿಸುವುದು

**11) ಗ್ರಾಮ ಪಂಚಾಯಿತಿ ಪಿಡಿಒ ತನ್ನ ಮಾಸಿಕ ಲೆಕ್ಕ ಪತ್ರಗಳನ್ನು ಯಾವ ದಿನಾಂಕದೊಳಗೆ ಗ್ರಾಮ ಪಂಚಾಯಿತಿಗೆ ಸಲ್ಲಿಸತಕ್ಕದ್ದು.**

1) ಮುಂಬರುವ ತಿಂಗಳ 15ನೇ ದಿನಾಂಕದೊಳಗೆ

2) ಮುಂಬರುವ ತಿಂಗಳ 10ನೇ ದಿನಾಂಕದೊಳಗೆ

3) ಮುಂಬರುವ ತಿಂಗಳ 20ನೇ ದಿನಾಂಕದೊಳಗೆ

4) ಮುಂಬರುವ ತಿಂಗಳ 25ನೇ ದಿನಾಂಕದೊಳಗೆ

**12) ಈ ಕೆಳಗಿನ ಯಾರು ಗ್ರಾಮ ಪಂಚಾಯಿತಿಯ ಯೋಜನಾ ನಿಧಿಗಳನ್ನು ಸಂಬಂಧಿಸಿದ ಹಂಚಿಕೆ ಮಾಡಬಹುದು, ನಿರ್ದಿಷ್ಟ ಪಡಿಸಿದ ವಿಧಾನದಲ್ಲಿ ಬಳಕೆ ಪ್ರಮಾಣ ಪತ್ರವನ್ನು ಒದಗಿಸುತ್ತಾನೆ.**

1) ಗ್ರಾಮ ಪಂಚಾಯಿತಿ ಅಧ್ಯಕ್ಷ

2) ಗ್ರಾಮ ಪಂಚಾಯಿತಿ ಉಪಾಧ್ಯಕ್ಷ

3) ಪಿಡಿಒ 4) ಕಾರ್ಯನಿರ್ವಹಣಾಧಿಕಾರಿ

## ಪ್ರಕರಣ-112. ಸಿಬ್ಬಂದಿ ಸ್ವರೂಪ ಮತ್ತು ಉದ್ಯೋಗಗಳ ಪಟ್ಟಿ

**13) ಪ್ರಕರಣ 112 ಏನನ್ನು ತಿಳಿಸುತ್ತದೆ?**

1)ಗ್ರಾಮ ಪಂಚಾಯತಿಯ ಸಿಬ್ಬಂದಿ ಸ್ವರೂಪ ಮತ್ತು ಉದ್ಯೋಗಗಳ ಪಟ್ಟಿ ತಿಳಿಸುತ್ತದೆ

2)ಗ್ರಾಮ ಪಂ. ನೌಕರರ ನೇಮಕ & ನಿಯಂತ್ರಣ

3)ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂಧಿ ವ್ಯವಸ್ಥೆ

4)ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರ ಅವಧಿ & ಅಧಿಕಾರಗಳು

**14) ಗ್ರಾಮ ಪಂಚಾಯತಿಯ ಸಿಬ್ಬಂದಿಯ ನೇಮಕಾತಿ ವಿಧಾನ, ಶ್ರೇಣಿ, ಸ್ವರೂಪವನ್ನು ಈ ಕೆಳಗಿನ ಯಾರು ನಿರ್ದಿಷ್ಟಪಡಿಸುತ್ತಾರೆ?**

1)ರಾಜ್ಯ ಸರ್ಕಾರ 2)ಕೇಂದ್ರ ಸರ್ಕಾರ

3)ಜಿಲ್ಲಾ ಪಂಚಾಯತಿ 4)ತಾಲ್ಲೂಕು ಪಂಚಾಯತಿ

**15) ರಾಜ್ಯ ಸರ್ಕಾರವು ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲೂ ಈ ಕೆಳಗಿನ ಅಧಿಕಾರಿಗಳ ಪಟ್ಟಿಯನ್ನು ನಿರ್ದಿಷ್ಟ ಪಡಿಸಿದೆ**

1)ಪಂಚಾಯತಿ ಅಭಿವೃದ್ಧಿ ಅಧಿಕಾರಿ

2)ಕಾರ್ಯದರ್ಶಿ & ಲೆಕ್ಕಸಹಾಯಕ

3) ಗ್ರಾಮ ಪಂಚಾಯತಿ ವಿಧಿಸಿರುವ ಕರ್ತವ್ಯ ನೆರವೇರಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಿಂದ ಅನುಮೋದನೆ ಪಡೆದ ನೌಕರರು

4)ಮೇಲಿನ ಎಲ್ಲವೂ

**16) ಗ್ರಾಮ ಪಂಚಾಯತಿಯು ತಮ್ಮ ಉದ್ಯೋಗಿಗಳ ಪದನಾಮ, ದರ್ಜೆಗಳು & ಅವರಿಗೆ ಸಂದಾಯವಾಗಬೇಕಾದ ವೇತನಗಳು ಮತ್ತು ಭತ್ಯೆಗಳನ್ನು ನಮೂದಿಸಿ ಉದ್ಯೋಗಿಗಳ ಒಂದು ಪಟ್ಟಿಯನ್ನು ನಿರ್ಧರಿಸತಕ್ಕದ್ದು & ಈ ಕೆಳಗಿನ ಯಾರ ಅನುಮೋದನೆಗಾಗಿ ಅದನ್ನು ಸಲ್ಲಿಸತಕ್ಕದ್ದು**

1)ಕಾರ್ಯನಿರ್ವಹಣಾಧಿಕಾರಿ

2)ಮುಖ್ಯಕಾರ್ಯನಿರ್ವಹಣಾಧಿಕಾರಿ

3)ಕಾರ್ಯದರ್ಶಿ 4)ಡೆಪ್ಯೂಟಿ ಕಮೀಷನರ್.

**ಉತ್ತರಗಳು:-** 9) 4 10) 4 11) 2 12) 3 13) 1 14) 1 15) 3 16) 2



Scanned by CamScanner

## ಪ್ರಕರಣ 113. ನೌಕರರ ನೇಮಕಾತಿ & ನಿಯಂತ್ರಣ

17) 113ನೇ ಪ್ರಕರಣ ಏನನ್ನು ತಿಳಿಸುತ್ತದೆ

1) ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿ ವ್ಯವಸ್ಥೆ

2) ನೌಕರರ ನೇಮಕಾತಿ ಮತ್ತು ನಿಯಂತ್ರಣ

3) ಗ್ರಾಮ ಪಂಚಾಯತಿ ಅನುದಾನ

4) ಗ್ರಾಮ ಪಂಚಾಯತಿ ಸಿಬ್ಬಂದಿ ಸ್ವರೂಪ & ಉದ್ಯೋಗಿಗಳ ಪಟ್ಟಿ

18) ಗ್ರಾಮ ಪಂಚಾಯತಿಯ ಕೆಲವು ಕಾರ್ಯ ನಿರ್ವಹಿಸಲು ನೌಕರರ ಈ ಕೆಳಗಿನ ಯಾರ ಅನುಮತಿ ಪಡೆದು ಗ್ರಾಮ ಪಂಚಾಯತಿ ನೇಮಿಸಿಕೊಳ್ಳಬಹುದು.

1) ಮುಖ್ಯ ಕಾರ್ಯನಿರ್ವಹಣಾಧಿಕಾರಿ

2) ಡೆಪ್ಯೂಟಿ ಕಮೀಷನರ್

3) ಕಾರ್ಯನಿರ್ವಹಣಾಧಿಕಾರಿ

4) ಅಸಿಸ್ಟೆಂಟ್ ಕಮೀಷನರ್

19) ಗ್ರಾಮ ಪಂಚಾಯತಿಯು ವಿಧಿಸಿರುವ ಕರ್ತವ್ಯ ನಿರ್ವಹಿಸಲು ಅಗತ್ಯವಾದ ನೌಕರನಿಗೆ ಯಾವ ಮೂಲದಿಂದ ಸಂಬಳವನ್ನು ಮತ್ತು ಭತ್ಯೆಯನ್ನು ಸಂದಾಯ ಮಾಡಬಹುದು

1) ಗ್ರಾಮ ಪಂಚಾಯತಿ ನಿಧಿ

2) ತಾಲ್ಲೂಕು ಪಂಚಾಯತಿ ನಿಧಿ

3) ಜಿಲ್ಲಾ ಪಂಚಾಯತಿ ನಿಧಿ

4) ಗ್ರಾಮ ಪಂಚಾಯತಿ ಅನುದಾನ

20) ಗ್ರಾಮ ಪಂಚಾಯತಿಗಳ ನೌಕರರ ನೇಮಕಾತಿ ಮಾಡುವಾಗ ನೇಮಕಾತಿ ಪ್ರಾಧಿಕಾರವು ಈ ಕೆಳಗಿನ ಯಾವ ನಿಯಮಗಳನ್ನು ಪಾಲಿಸಬೇಕು?

1) ಮಿಲಿಟರಿ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿಗೆ ಅನ್ವಯವಾಗುವ ರೀತಿಯಲ್ಲೇ ಮತ್ತು ಅದೇ ಪ್ರಮಾಣದಲ್ಲೇ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮತ್ತು ಇತರೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು

2)ಕೇಂದ್ರ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿಗೆ ಅನ್ವಯವಾಗುವ ರೀತಿಯಲ್ಲೇ ಮತ್ತು ಅದೇ ಪ್ರಮಾಣದಲ್ಲೇ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮತ್ತು ಇತರೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು

3) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿಗೆ ಅನ್ವಯವಾಗುವ ರೀತಿಯಲ್ಲೇ ಮತ್ತು ಅದೇ ಪ್ರಮಾಣದಲ್ಲೇ ಪರಿಶಿಷ್ಟ ಜಾತಿಮತ್ತು ಪಂಗಡದವರಿಗೆ ಮತ್ತು ಇತರೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು

4)ಖಾಸಗಿ ವಲಯಗಳಲ್ಲಿ ಹುದ್ದೆಗಳಿಗೆ ನೇಮಕಾತಿಗೆ ಅನ್ವಯವಾಗುವ ರೀತಿಯಲ್ಲೇ ಮತ್ತು ಅದೇ ಪ್ರಮಾಣದಲ್ಲೇ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮತ್ತು ಇತರೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು

21) ಗ್ರಾಮ ಪಂಚಾಯತಿ ನೌಕರನಿಗೆ ಈ ಕೆಳಗಿನ ಯಾರು ವಾರ್ಷಿಕ ಬಡ್ತಿಯನ್ನು ಹಿಂಪಡೆಯಬಹುದು ಮತ್ತು ದಂಡವನ್ನು ವಿಧಿಸಬಹುದು

1) ಕಾರ್ಯದರ್ಶಿ

2) ಪಂಚಾಯತಿ ಅಭಿವೃದ್ಧಿ ಅಧಿಕಾರಿ

3 ಕಾರ್ಯನಿರ್ವಹಣಾಧಿಕಾರಿ

4) ಮುಖ್ಯಕಾರ್ಯನಿರ್ವಹಣಾಧಿಕಾರಿ

22) ಗ್ರಾಮ ಪಂಚಾಯತಿಗೆ ನೇಮಕವಾದ ಯಾವುದೇ ನೌಕರನ ದರ್ಜೆಯಲ್ಲಿ ಇಳಿಸುವುದು, ಕೆಲಸದಿಂದ ತೆಗೆದು ಹಾಕುವುದು ಅಥವಾ ವಜಾ ಮಾಡುವ ಅಧಿಕಾರವನ್ನು ಈ ಕೆಳಗಿನ ಯಾರು ಹೊಂದಿರುತ್ತಾರೆ?

1) ಗ್ರಾಮ ಪಂಚಾಯತಿ ಕಾರ್ಯದರ್ಶಿ

2) ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ

3) ಗ್ರಾಮ ಪಂಚಾಯತಿ ಲೆಕ್ಕಾಧಿಕಾರಿ

4)ಗ್ರಾಮ ಪಂಚಾಯತಿ

23) ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನೌಕರನ ಮೇಲೆ ಕ್ರಮ ಕೈಗೊಂಡಾಗ ಈ ಕೆಳಗಿನ ಯಾರಿಗೆ ನೌಕರರು ಅಪೀಲನ್ನು ಸಲ್ಲಿಸಬೇಕು?

1) ಮುಖ್ಯಕಾರ್ಯನಿರ್ವಹಣಾಧಿಕಾರಿಗೆ

2) ಅಸಿಸ್ಟೆಂಟ್ ಕಮೀಷನರ್

3) ಡೆಪ್ಯೂಟಿ ಕಮೀಷನರ್

4) ಕಾರ್ಯನಿರ್ವಹಣಾಧಿಕಾರಿಗೆ

ಉತ್ತರಗಳು:- 17) 2 18) 1 19) 1 20) 3 21) 2 22) 2 23) 4



Scanned by CamScanner

24) ಗ್ರಾಮ ಪಂಚಾಯತಿಯು ನೌಕರನನ್ನು ತೆಗೆದು ಹಾಕಿದಾಗ ಆ ನೌಕರನು ತಮ್ಮ ಅಪೀಲನ್ನು ಈ ಕೆಳಗಿನವರಿಗೆ ಸಲ್ಲಿಸಬೇಕು?

1) ಮುಖ್ಯಕಾರ್ಯನಿರ್ವಹಣಾಧಿಕಾರಿಗೆ

2) ಕಾರ್ಯನಿರ್ವಹಣಾಧಿಕಾರಿಗೆ

3)ಡೆಪ್ಯೂಟಿ ಕಮೀಷನರ್ 4)ಅಸಿಸ್ಟೆಂಟ್ ಕಮೀಷನರ್

**ಪ್ರಕರಣ 113ಎ. ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂಧಿ ವ್ಯವಸ್ಥೆ**

25) 113ಎ ಪ್ರಕರಣ ಏನನ್ನು ತಿಳಿಸುತ್ತದೆ?

1) ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂಧಿ ವ್ಯವಸ್ಥೆ

2) ಗ್ರಾಮ ಪಂಚಾಯತಿ ಅನುದಾನ

3) ಗ್ರಾಮ ಪಂಚಾಯತಿ ವಿಧಿಸುವ ತೆರಿಗೆಗಳು

4) ಗ್ರಾಮ ಪಂಚಾಯತಿ ತೆರಿಗೆ ವಸೂಲಿ

26) ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯನ್ನು ಈ ಕೆಳಗಿನ ಯಾರು ನೇಮಿಸುತ್ತಾರೆ

1)ರಾಜ್ಯ ಸರ್ಕಾರ 2) ಜಿಲ್ಲಾ ಪಂಚಾಯತಿ

3)ತಾಲ್ಲೂಕು ಪಂಚಾಯತಿ 4)ಕೇಂದ್ರ ಸರ್ಕಾರ

27) ಇಂಜಿನಿಯರಿಂಗ್ ಅಥವಾ ತಾಂತ್ರಿಕ ಸಿಬ್ಬಂದಿ ಒಳಗೊಂಡಂತೆ ರಾಜ್ಯ ಸಿವಿಲ್ ಸೇವಾ ಅಧಿಕಾರಿಗಳನ್ನು ಸರ್ಕಾರವು ಈ ಕೆಳಕಂಡಂತೆ ನಿಯೋಜಿಸಬಹುದು

1) ಒಂದು ಪಂಚಾಯತಿಗೆ ನಿಯೋಜಿಸಬಹುದು

2)ಒಂದು ಅಥವಾ ಹೆಚ್ಚು ಪಂಚಾಯತಿಗೆ ನಿಯೋಜಿಸಬಹುದು

3) ರಾಜ್ಯಕ್ಕೆ ನಿಯೋಜಿಸಬಹುದು 4) 1 ಅಥವಾ 2

28) ನಿಯೋಜಿಸಿದ ಅಧಿಕಾರಿ ಅಥವಾ ನೌಕರ ಕೊರತೆ ಇದ್ದಲ್ಲಿ ಗ್ರಾಮ ಪಂಚಾಯತಿಯು ಸೇವೆಯ ತುರ್ತು ಸಂದರ್ಭದಲ್ಲಿ ನಿರ್ದಿಷ್ಟ ಕಾಮಗಾರಿಗಾಗಿ ಈ ಕೆಳಗಿನ ಯಾರ ಸೇವೆಯನ್ನು ಸರ್ಕಾರದ ನಿರ್ದಿಷ್ಟ ಪಡಿಸಿದ ಷರತ್ತು ಅಥವಾ ನಿಬಂಧನೆ ಮೇಲೆ ಬಳಸಿಕೊಳ್ಳಬಹುದು

1) ರಾಜ್ಯ ಸಿವಿಲ್ ಸೇವೆಗೆ ಸೇರಿಲ್ಲದ ಇಂಜಿನಿಯರ್‌ಗಳನ್ನು ಒಳಗೊಂಡಂತೆ ತಾಂತ್ರಿ ಸಿಬ್ಬಂದಿ ಸೇವೆ

2) ಕೇಂದ್ರ ಸಿವಿಲ್ ಸೇವೆಗೆ ಸೇರಿಲ್ಲದ ಇಂಜಿನಿಯರ್‌ಗಳನ್ನು

3) ತಾಂತ್ರಿಕ ಸಿವಿಲ್ ಸೇವೆಗೆ ಸೇರಿಲ್ಲದ ಇಂಜಿನಿಯರ್‌ಗಳನ್ನು

4) ಗ್ರಾಮ ಪಂಚಾಯತಿ ವಿವೇಚನೆಗೆ ಬಿಟ್ಟದ್ದು

29) ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ತಾಂತ್ರಿಕ ಅಧಿಕಾರಿಗಳು ಅಥವಾ ನೌಕರರು ತಮ್ಮ ಕರ್ತವ್ಯಗಳನ್ನು ಈ ಕೆಳಕಂಡಂತೆ ನಿರ್ವಹಿಸಬೇಕು

1) ಗ್ರಾಮ ಪಂಚಾಯತಿ ಅಧಿಕಾರಿಗಳು ಅಥವಾ ನೌಕರರಾಗಿದ್ದರೆ ಹೇಗೆ ಪ್ರಕಾರ್ಯ ನಿರ್ವಹಿಸುತ್ತಿದ್ದರೋ ಹಾಗೆ ನಿರ್ವಹಿಸಬೇಕು

2) ಸರ್ಕಾರವು ಹೊರಡಿಸಿದ ಮಾರ್ಗಸೂಚಿ ಇದ್ದರೆ ಅವುಗಳನ್ನು ಅನುಸರಿಸಬೇಕು

3) ಗ್ರಾಮ ಪಂಚಾಯತಿ ವಹಿಸಿದ ಯಾವುದೇ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುವುದು

4) ಮೇಲಿನ ಎಲ್ಲವೂ

30) ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂಧಿಯಾಗಿ ನೇಮಕವಾದ ಅಧಿಕಾರಿಗಳು ಮತ್ತು ನೌಕರರು ವೇತನ ಮತ್ತು ಭತ್ಯೆಗಳನ್ನು ಮತ್ತು ಇತರ ಬಾಕಿಗಳನ್ನು ಈ ಕೆಳಗಿನ ಯಾವ ನಿಧಿಯಿಂದ ಪಡೆಯುತ್ತಾರೆ?

1) ಗ್ರಾಮ ಪಂಚಾಯತಿ ನಿಧಿಯಿಂದ

2) ಜಿಲ್ಲಾ ಪಂಚಾಯತಿ ನಿಧಿಯಿಂದ

3) ತಾಲ್ಲೂಕು ಪಂಚಾಯತಿ ನಿಧಿಯಿಂದ

4) ಸರ್ಕಾರದಿಂದ ನೇರವಾಗಿ

ಉತ್ತರಗಳು:- 24) 1 25) 1 26) 1 27) 2 28) 1 29) 4 30) 4



Scanned by CamScanner

ಅಧ್ಯಾಯ: 6

# ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶ ಪರಿವರ್ತನೆ & ಸಂಯೋಜನೆ

## ಪ್ರಕರಣ 114. ಅರ್ಥ ವಿವರಣೆ

**31) 114 ಪ್ರಕರಣವು ಏನನ್ನು ತಿಳಿಸುತ್ತದೆ?**

1)ಚಿಕ್ಕ ನಗರ ಅಥವಾ ಪರಿವರ್ತಿತವಾಗಲಿರುವ ಪ್ರದೇಶದ ಪರಿವರ್ತನೆ & ಸಂಯೋಜನೆಗೆ ಸಂಬಂಧಿಸಿದ ಪದಗಳ ಅರ್ಥ ವಿವರಣೆ ತಿಳಿಸುತ್ತದೆ

2)ತಾಲ್ಲೂಕು ಪಂಚಾಯತಿ ರಚನೆ ಬಗ್ಗೆ ತಿಳಿಸುತ್ತದೆ

3)ಮಧ್ಯಕಾಲೀನ ಪಂ. ಸದಸ್ಯನ ಹುದ್ದೆಯ ಅವಧಿ

4)ಮಧ್ಯಕಾಲೀನ ಪಂಚಾಯತಿ ಸದಸ್ಯನ ಅಧಿಕಾರಗಳು

**32) ಅರ್ಥವಿವರಣೆಯಲ್ಲಿ ಮುನ್ಸಿಪಲ್ ಕೌನ್ಸಿಲ್ ಎಂದರೆ**

1)ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ ಚಲಾಯಿಸಲು & ಪ್ರಕಾರ್ಯ ನೆರವೇರಿಸಲು ನೇಮಕಗೊಂಡ ವ್ಯಕ್ತಿ

2) ಮುನ್ಸಿಪಾಲಿಟಿಯ ಅಸಿಸ್ಟೆಂಟ್ ಕಮೀಷನರ್

3) ಗ್ರಾಮ ಪಂಚಾಯತಿಯ ಕಾರ್ಯದರ್ಶಿ

4)ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ

## ಪ್ರಕರಣ-115.ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತ ವಾಗಿರುವ ಪ್ರದೇಶ ವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸುವುದರ ಪರಿಣಾಮ

**33)115ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1)ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರ ಹುದ್ದೆ

2)ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತವಾಗಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸುವುದರ ಪರಿಣಾಮ

3) ಪಂಚಾಯತಿ ಪ್ರದೇಶದ ವಿಭಜನೆ ಪರಿಣಾಮ

4)ಪಂಚಾಯತಿ ಪ್ರದೇಶಗಳ ಸಂಯೋಜನೆ ಪರಿಣಾಮ

**34) ಯಾವುದೇ ಒಂದು ಚಿಕ್ಕ ಪ್ರದೇಶವನ್ನು ಅಥವಾ ಪರಿವರ್ತಿತ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಮಾಡುವ ಅಧಿಕಾರವನ್ನು ಯಾರು ಹೊಂದಿರುತ್ತಾರೆ?**

1)ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪರಿವರ್ತಿಸುವ ಅಧಿಕಾರ ಹೊಂದಿದೆ.

2)ಡೆಪ್ಯೂಟಿ ಕಮೀಷನರ್‌ರವರು ಅಧಿಸೂಚನೆಯ ಮೂಲಕ ಪರಿವರ್ತಿಸುವ ಅಧಿಕಾರ ಹೊಂದಿದೆ.

3)ಅಸಿಸ್ಟೆಂಟ್ ಕಮೀಷನರ್ ಅಧಿಸೂಚನೆಯ ಮೂಲಕ ಪರಿವರ್ತಿಸುವ ಅಧಿಕಾರ ಹೊಂದಿದೆ.

4)ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಪರಿವರ್ತಿಸುವ ಅಧಿಕಾರ ಹೊಂದಿದೆ.

**35) ಒಂದು ಚಿಕ್ಕ ಪ್ರದೇಶ ಅಥವಾ ಪರಿವರ್ತಿತ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸಿದ್ದರಿಂದ ಈ ಕೆಳಗಿನ ಪರಿಣಾಮಗಳು ಉಂಟಾಗುತ್ತವೆ?**

1)ಸ್ಥಳೀಯ ಪ್ರದೇಶದ ಮುನ್ಸಿಪಲ್ ಕೌನ್ಸಿಲ್ ಅಸ್ತಿತ್ವದಲ್ಲಿರುವುದು ಅಥವಾ ಕೆಲಸ ನಿರ್ವಹಿಸುವುದು ನಿಂತು ಹೋಗುವುದು.

2)ಪುರಸಭೆಯ ಕೌನ್ಸಿಲರುಗಳಾಗಿ ಹುದ್ದೆಯನ್ನು ತೆರವು ಮಾಡಿದ ವ್ಯಕ್ತಿಗಳನ್ನು ಒಳಗೊಂಡ ಒಂದು ಮಧ್ಯಕಾಲಿನ ಗ್ರಾಮ ಪಂ.ಯನ್ನು ಆ ಪಂ.ಯಾಗಿ ರಚಿಸತಕ್ಕದ್ದು.

3)ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅನುಕ್ರಮವಾಗಿ ಮಧ್ಯಕಾಲೀನ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಭಾವಿಸತಕ್ಕದ್ದು

4)ಮೇಲಿನ ಎಲ್ಲಾ ಪರಿಣಾಮಗಳು ಉಂಟಾಗುತ್ತದೆ.

**36) ಒಂದು ಚಿಕ್ಕ ಪ್ರದೇಶ ಅಥವಾ ಪರಿವರ್ತಿತ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸಿದ್ದರಿಂದ ಈ ಕೆಳಗಿನ ಪರಿಣಾಮಗಳು ಉಂಟಾಗುತ್ತದೆ?**

1)ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ಮುನ್ಸಿಪಲ್ ನಿಧಿಯಲ್ಲಿ ಖರ್ಚು ಮಾಡದೆ ಉಳಿದಿರುವ ಶುಲ್ಕು ಮತ್ತು ಅದರ ಸ್ವತ್ತನ್ನು ಹೊಸ ಗ್ರಾಮ ಪಂಚಾಯತಿ ರಚನೆಯಾಗುವವರೆಗೆ ಗ್ರಾಮ ಪಂಚಾಯತಿ ನಿಧಿಯಾಗಿ ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು.

2)ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟ ಪಡಿಸಿದ ದಿನಾಂಕದ ಮುಂಚೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಎಲ್ಲಾ ಆದೇಶಗಳು

ಉತ್ತರಗಳು:- 31) 1 32) 1 33) 2 34) 1 35) 4 36) 4



Scanned by CamScanner

chanakyaloka.com



ಕೂಡ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ರದ್ದಾಗುವವರೆಗೆ ಅಥವಾ ಮಾರ್ಪಾಡು ಆಗುವವರೆಗೆ ಪಂಚಾಯತಿ ಪ್ರದೇಶಕ್ಕೆ ಸಂಬಂಧಿಸಿದಂತೆ ಮಾಡಲಾಗಿದೆ. ಹೊರಡಿಸಲಾಗಿದೆ. ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

3)ಅಂತ ಸ್ಥಳೀಯ ಪ್ರದೇಶದ ಸಂಬಂಧದಲ್ಲಿ ನಿರ್ದಿಷ್ಟ ಪಡಿಸಿದ ದಿನಾಂಕದ ಪೂರ್ವದಲ್ಲಿ ಮುನ್ಸಿಪಲ್ ಕಾನೂನಿನ ಮೇರೆಗೆ ಮಾಡಲಾದ ಬಜೆಟ್, ತೆರಿಗೆ ನಿರ್ಧರಣೆಗಳು. ಈ ಅಧಿನಿಯಮದಡಿಯಲ್ಲಿ ಮಾಡಲಾಗಿದೆ ಎಂದು ಅಧಿಪ್ರಮಾಣಿಸತಕ್ಕದ್ದು.

4)ಮೇಲಿನ ಎಲ್ಲಾ ಪರಿಣಾಗಳು ಉಂಟಾಗುತ್ತದೆ.

**37) ಒಂದು ಚಿಕ್ಕ ಪ್ರದೇಶ ಅಥವಾ ಪರಿವರ್ತಿತ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸಿದ್ದರಿಂದ ಈ ಕೆಳಗಿನ ಪರಿಣಾಮಗಳು ಉಂಟಾಗುತ್ತದೆ?**

1)ನಿರ್ದಿಷ್ಟ ಪಡಿಸಿದ ದಿನಾಂಕಕ್ಕೆ ಪೂರ್ವದಲ್ಲಿ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಯೋಜನೆಯಲ್ಲಿದ್ದ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದಡಿಯಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ನೌಕರರಾಗಿರತಕ್ಕದ್ದು ಮತ್ತು ನಿಕಟ ಪೂರ್ವದಲ್ಲಿ ಪಡೆಯುತ್ತಿದ್ದ ಸಂಬಳ, ಭತ್ಯೆಗಳನ್ನು ಪಡೆಯತಕ್ಕದ್ದು.

2)ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿರ್ದಿಷ್ಟ ಪಡಿಸಿದ ದಿನಾಂಕಕ್ಕೆ ಪೂರ್ವದಲ್ಲಿ ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹರಣೆಗಳನ್ನು ಗ್ರಾಮ ಪಂಚಾಯತಿಗೆ ವರ್ಗಾಯಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿ ಮುಂದುವರೆಸಿಕೊಂಡು ಹೋಗತಕ್ಕದ್ದು.

3)ನಿರ್ದಿಷ್ಟ ಪಡಿಸಿದ ನಿಕಟ ಪೂರ್ವದಲ್ಲಿ ಇತ್ಯರ್ಥದಲ್ಲಿರುವ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಮಾಡಲಾದ ಎಲ್ಲಾ ಪ್ರಾಸಿಕ್ಯೂಶನ್‌ಗಳು ಅಂತಹ ಸ್ಥಳೀಯ ಪ್ರದೇಶವು ಪಂಚಾಯತಿ ಪ್ರದೇಶದಲ್ಲಿ ಸೇರಿಸಲಾಗಿದ್ದರೆ. ಹೇಗೋ ಹಾಗೆ ಗ್ರಾಮ ಪಂಚಾಯತಿಯ ಅಥವಾ ಅದರ ವಿರುದ್ಧವಾಗಿ ಮುಂದುವರೆಸತಕ್ಕದ್ದು

4)ಮೇಲಿನ ಎಲ್ಲವೂ

## ಪ್ರಕರಣ – 116. ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರ ಹುದ್ದೆ ಅವಧಿ ಮತ್ತು ಅವರ ಅಧಿಕಾರಗಳು

**38) 116ನೇ ಪ್ರಕರಣವು ಏನನ್ನು ಹೇಳುತ್ತದೆ?**

1)ಗ್ರಾಮ ಪಂಚಾಯತಿ ಸದಸ್ಯರ ಹುದ್ದೆ ಅವಧಿ ಮತ್ತು ಅವರ ಅಧಿಕಾರಗಳು

2) ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರ ಹುದ್ದೆ ಅವಧಿ ಮತ್ತು ಅವರ ಅಧಿಕಾರಗಳು

3)ಮಧ್ಯಕಾಲೀನ ತಾಲ್ಲೂಕು ಪಂಚಾಯತಿ ಸದಸ್ಯರ ಹುದ್ದೆ ಅವಧಿ ಮತ್ತು ಅವರ ಅಧಿಕಾರಗಳು

4)ಮಧ್ಯಕಾಲೀನ ಜಿಲ್ಲಾ ಪಂಚಾಯತಿ ಸದಸ್ಯರ ಹುದ್ದೆ ಅವಧಿ ಮತ್ತು ಅವರ ಅಧಿಕಾರಗಳು

**39) ಮಧ್ಯಕಾಲೀನ ಗ್ರಾಮ ಪಂಚಾಯತಿಯು ರಚನೆಯಾದ ಎಷ್ಟು ದಿನದೊಳಗೆ ಹೊಸ ಗ್ರಾಮ ಪಂಚಾಯತಿಯನ್ನು ಸ್ಥಾಪಿಸಬೇಕು**

1)5ವರ್ಷದೊಳಗೆ 2)10ವರ್ಷದೊಳಗೆ

3)1 ವರ್ಷದೊಳಗೆ 4)6ತಿಂಗಳೊಳಗೆ

**40) ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರ ಅಧಿಕಾರವಧಿ?**

1)ಮಧ್ಯಕಾಲೀನ ಗ್ರಾಮ ಪಂಚಾಯತಿ ಸದಸ್ಯರು ಹೊಸ ಗ್ರಾಮ ಪಂಚಾಯತಿಯ ಮೊದಲ ಸಭೆಯ ನಿಕಟ ಪೂರ್ವದ ದಿನಾಂಕದವರೆಗೆ ಅಧಿಕಾರದಲ್ಲಿರತಕ್ಕದ್ದು.

2)5ವರ್ಷಗಳ ಅವಧಿ 3)2 ವರ್ಷಗಳ ಅವಧಿ

4)1 ವರ್ಷಗಳ ಅವಧಿ

**41) ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಈ ಕೆಳಗಿನ ಯಾರು ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.**

1) ಅಸಿಸ್ಟೆಂಟ್ ಕಮೀಷನರ್ 2) ಡೆಪ್ಯೂಟಿ ಕಮೀಷನರ್

3) ಕಮೀಷನರ್ 4) ರಾಜ್ಯ ಸರ್ಕಾರ

**42) ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವ ಎಲ್ಲಾ ದರಗಳು, ತೆರಿಗೆಗಳು ಮತ್ತು ಫೀಜುಗಳ ಬಾಕಿಗಳನ್ನು ಈ ಕೆಳಗಿನ ಯಾವ ಪ್ರಕರಣದಡಿಯಲ್ಲಿ ವಿಧಿಸಿದ ತೆರಿಗೆಯಂತೆ ವಸೂಲು ಮಾಡತಕ್ಕದ್ದು**

1)196 2) 197 3)198 4)199

**43) ದರಗಳು, ತೆರಿಗೆಗಳು, ಫೀಜುಗಳು, ಬಾಕಿಗಳನ್ನು ವಸೂಲಿ ಮಾಡುವ ಕ್ರಮವನ್ನು ಅವು ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ನಿಹಿತವಾದಂತಹ ದಿನಾಂಕದಿಂದ __ಅವಧಿಯೊಳಗೆ ತೆಗೆದುಕೊಳ್ಳತಕ್ಕದ್ದು**

1) 3ವರ್ಷ 2)4ವರ್ಷ 3)5ವರ್ಷ 4)6ವರ್ಷ

**ಉತ್ತರಗಳು:-** 37) 4 38) 2 39) 1 40) 1 41) 2 42) 4 43) 1



Scanned by CamScanner

## 117ನೇ ಪ್ರಕರಣ. ಪಂಚಾಯತಿ ಪ್ರದೇಶಗಳ ಸಂಯೋಜನೆ ಪರಿಣಾಮ

**44) 117ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1)ಗ್ರಾಮ ಪಂಚಾಯತಿಗಳ ಸದಸ್ಯರ ಹುದ್ದೆ ಅವಧಿಯಲ್ಲಿ 2 / ಅದಕ್ಕಿಂತ ಹೆಚ್ಚಿನ ಪ್ರದೇಶಗಳನ್ನು ಸಂಯೋಜಿಸಿ ಪಂಚಾಯತಿ ಪ್ರದೇಶ ಎಂದು ಘೋಷಿಸಬಹುದೆಂದು ತಿಳಿಸುತ್ತದೆ.

2)ಪಂಚಾಯತಿ ಪ್ರದೇಶಗಳ ವಿಭಜನೆ ಪರಿಣಾಮ

3) ತಾಲ್ಲೂಕು ಪಂಚಾಯತಿಯ ರಚನೆ

4) ತಾಲ್ಲೂಕು ಪಂಚಾಯತಿಯ ಸಂರಚನೆ

**45) ಪಂಚಾಯತಿ ಪ್ರದೇಶಗಳನ್ನು ಈ ಕೆಳಗಿನ ಯಾರು ಅಧಿಸೂಚನೆ ಮೂಲಕ ಸಂಯೋಜನೆ ಮಾಡಬಹುದು.**

1)ರಾಜ್ಯ ಸರ್ಕಾರ 2) ಕೇಂದ್ರ ಸರ್ಕಾರ

3)ಡೆಪ್ಯೂಟಿ ಕಮೀಷನರ್ 4)ಅಸಿಸ್ಟೆಂಟ್ ಕಮೀಷನರ್

**46) ಪಂಚಾಯತಿ ಪ್ರದೇಶದ ಸಂಯೋಜನೆಯಿಂದಾಗುವ ಪರಿಣಾಮವೇನು?**

1)ಅಂತ ಸ್ಥಳೀಯ ಪ್ರದೇಶದ ಗ್ರಾಮ ಪಂಚಾಯತಿಗಳ ಅಸ್ತಿತ್ವವು ನಿಂತು ಹೋಗುತ್ತದೆ ಮತ್ತು ಅಂತಹ ಗ್ರಾಮ ಪಂಚಾಯತಿಗಳ ಹುದ್ದೆಯನ್ನು ತೆರವು ಮಾಡತಕ್ಕದ್ದು

2)ಸಂಯೋಜಿತ ಪಂಚಾಯತಿ ಪ್ರದೇಶಕ್ಕಾಗಿ ಡೆಪ್ಯೂಟಿ ಕಮೀಷನರ್‌ನಿಂದ ನಾಮನಿರ್ದೇಶಿತ ಸದಸ್ಯ ಒಳಗೊಂಡ ಗ್ರಾಮ ಪಂಚಾಯತಿಯು ರಚಿತವಾಗತಕ್ಕದ್ದು

3)ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಮತ್ತು ಸ್ಥಾಯಿ ಸಮಿತಿಯ ಸದಸ್ಯರನ್ನು ನಿರ್ದಿಷ್ಟಪಡಿಸಿದ ದಿನಾಂಕದಿಂದ 1 ತಿಂಗಳೊಳಗಾಗಿ ಚುನಾಯಿಸತಕ್ಕದ್ದು

4) ಮೇಲಿನ ಎಲ್ಲಾ ಪರಿಣಾಮಗಳನ್ನು ಒಳಗೊಂಡಿದೆ.

**47) ಸಂಯೋಜಿತ ಗ್ರಾಮ ಪಂಚಾಯತಿ ರಚಿಸುವಾಗ ಸ್ಥಾಪಿತವಾದ ಗ್ರಾಮ ಪಂಚಾಯತಿಯಲ್ಲಿ ಈ ಕೆಳಗಿನವರ ಆದೇಶದ ಮೂಲಕ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳ ನಿಧಿಯಲ್ಲಿ ಎಷ್ಟು ಮೊಬಲಗು ನಿಹಿತವಾಗಿದೆಯೋ ಅದನ್ನು ಮತ್ತು ಇತರ ಸ್ವತ್ತನ್ನು ನಿಹಿತಗೊಳಿಸತಕ್ಕದ್ದು. ಮತ್ತು ಸಾಲಗಳು ಹೊಣೆಗಾರಿಕೆಯಲ್ಲಿ ಎಷ್ಟು ಭಾಗವನ್ನು ವರ್ಗಾಯಿಸಬಹುದೋ ಅಂತಹ ಭಾಗವನ್ನು ವರ್ಗಾಯಿಸತಕ್ಕದ್ದು**

1) ಎ.ಸಿ 2)ಸರ್ಕಾರ 3)ತಹಸೀಲ್ದಾರರು 4)ಡಿ.ಸಿ

**48) ಸಂಯೋಜಿತ ಪಂಚಾಯತಿ ಪ್ರದೇಶದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಉದ್ಭವಿಸುವ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ವ್ಯವಹರಣೆಗಳು, ಕರಾರುಗಳು, ಒಪ್ಪಂದಗಳು, ವಿಷಯಗಳು ಸಂಬಂಧಪಟ್ಟಂತಹ ಈ ಕೆಳಗಿನ ಯಾವ ಸಂಸ್ಥೆಯಲ್ಲಿ ನಿಹಿತವಾಗಿರತಕ್ಕದ್ದು**

1)ಹೊಸದಾಗಿ ಅಸ್ತಿತ್ವಕ್ಕೆ ಬಂದ ಗ್ರಾಮ ಪಂಚಾಯತಿಯಲ್ಲಿ

2)ಹಳೆಯ ಗ್ರಾಮ ಪಂಚಾಯತಿಯಲ್ಲಿ

3) ತಾಲ್ಲೂಕು ಪಂಚಾಯತಿಯಲ್ಲಿ

4) ಜಿಲ್ಲಾ ಪಂಚಾಯತಿಯಲ್ಲಿ

## ಪ್ರಕರಣ 118-ಪಂಚಾಯತಿ ಪ್ರದೇಶದ ವಿಭಜನೆ ಪರಿಣಾಮ

**49) ಪ್ರಕರಣ 118 ಏನನ್ನು ತಿಳಿಸುತ್ತದೆ?**

1)ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಸ್ಥಳೀಯ ಪ್ರದೇಶವನ್ನು ಎರಡು /ಎರಡಕ್ಕಿಂತ ಹೆಚ್ಚಿನದ್ದಾಗಿ ಹೊಸ ಗ್ರಾಮ ಪಂಚಾಯತಿ ಪ್ರದೇಶವನ್ನಾಗಿ ವಿಭಜಿಸುವುದನ್ನು ತಿಳಿಸುತ್ತದೆ.

2)ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚಿನದ್ದಾಗಿ ಹೊಸ ವಾರ್ಡ್ ಸಭೆ ಪ್ರದೇಶವನ್ನಾಗಿ ವಿಭಜಿಸುವುದನ್ನು ತಿಳಿಸುತ್ತದೆ.

3)ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚಿನದ್ದಾಗಿ ಹೊಸ ತಾಲ್ಲೂಕು ಪಂಚಾಯತಿ ಪ್ರದೇಶವನ್ನಾಗಿ ವಿಭಜಿಸುವುದನ್ನು ತಿಳಿಸುತ್ತದೆ.

4)ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚಿನದ್ದಾಗಿ ಹೊಸ ಜಿಲ್ಲಾ ಪಂಚಾಯತಿ ಪ್ರದೇಶವನ್ನಾಗಿ ವಿಭಜಿಸುವುದನ್ನು ತಿಳಿಸುತ್ತದೆ.

**50) ವಿಭಜನೆಯಾಗಿ ಸ್ಥಾಪಿತವಾದ ಮಧ್ಯಕಾಲೀನ ಪಂಚಾಯತಿಗೆ ಸದಸ್ಯರುಗಳ ಹುದ್ದೆ ಅವಧಿ**

1) 3 ವರ್ಷದ ಅವಧಿ 2)5 ವರ್ಷದ ಅವಧಿ

3)4 ವರ್ಷದ ಅವಧಿ 4) ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯತಿಯಲ್ಲಿನ ತಮ್ಮ ಹುದ್ದೆಯ ಉಳಿದ ಅವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು

ಉತ್ತರಗಳು:- 44) 1 45) 1 46) 4 47) 4 48) 1 49) 1 50) 4



Scanned by CamScanner

**51) ಹೊಸದಾಗಿ ಸ್ಥಾಪಿತವಾದ ಗ್ರಾಮ ಪಂಚಾಯತಿಗೆ ಆಡಳಿತ ಅಧಿಕಾರಿಗಳನ್ನು ಈ ಕೆಳಗಿನ ಯಾರು ನೇಮಕ ಮಾಡುತ್ತಾರೆ?**

1) ಡೆಪ್ಯೂಟಿ ಕಮೀಷನರ್ 2) ಅಸಿಸ್ಟೆಂಟ್ ಕಮೀಷನರ್
3) ತಹಸಿಲ್ದಾರರು 4) ಸಿ.ಇ.ಓ

**52) ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯತಿಯು ಮುಂದೆ ಇತ್ಯರ್ಥವಾಗಲಿರುವ ಎಲ್ಲಾ ಅಪೀಲುಗಳು ಕಾರ್ಯ ಸಾಧ್ಯವಾಗುವಷ್ಟು ಮಟ್ಟಿಗೆ ಈ ಕೆಳಗಿನ ಯಾರ ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಮಧ್ಯಕಾಲಿನ ಗ್ರಾಮ ಪಂಚಾಯತಿಯು ಅಥವಾ ಆಡಳಿತಗಾರನು ಅಥವಾ ಸಂದರ್ಭಾನುಸಾರ ಹೊಸ ಗ್ರಾಮ ಪಂಚಾಯತಿಯು ವಿಲೇವಾರಿ ಗೊಳಿಸತಕ್ಕದ್ದು**

1) ಅಸಿಸ್ಟೆಂಟ್ ಕಮೀಷನರ್ 2) ಡೆಪ್ಯೂಟಿ ಕಮೀಷನರ್
3) ರಾಜ್ಯ ಸರ್ಕಾರ 4) ತಹಸಿಲ್ದಾರರು

**53) ಮಧ್ಯಕಾಲಿನ ಪಂಚಾಯತ್ ಗೆ ಸಂಬಂಧಿಸಿದಂತೆ ಉಂಟಾದ ಸಮಸ್ಯೆಯನ್ನು ಈ ಕೆಳಕಂಡಂತೆ ಬಗೆಹರಿಸಲಾಗುತ್ತದೆ.**

1) ರಾಜ್ಯಪತ್ರದಲ್ಲಿ ಆದೇಶಗಳನ್ನು ಪ್ರಕಟಿಸುವ ಮೂಲಕ
2) ಜಿಲ್ಲಾಧಿಕಾರಿಗಳು ಆದೇಶ ಹೊರಡಿಸುವ ಮೂಲಕ
3) ಕಮಿಷನರ್ ಅವರು ಆದೇಶ ಹೊರಡಿಸುವ ಮೂಲಕ
4) ಸೆಷನ್ ನ್ಯಾಯಾಧೀಶರು ನ್ಯಾಯ ಹೊರಡಿಸುವ ಮೂಲಕ

**ಉತ್ತರಗಳು:-** 51) 1 52) 2 53) 1



Scanned by CamScanner

chanakyaloka.com



ಅಧ್ಯಾಯ: 7

# ತಾಲ್ಲೂಕು ಪಂಚಾಯಿತಿ ರಚನೆ

**1) ತಾಲ್ಲೂಕು ಪಂಚಾಯತಿ ರಚನೆ ಬಗ್ಗೆ ಈ ಕೆಳಗಿನ ಯಾವ ಪ್ರಕರಣಗಳಲ್ಲಿ ವ್ಯವಹರಿಸಲಾಗಿದೆ?**

1)119 ರಿಂದ 157 2)117 ರಿಂದ 157

3)120 ರಿಂದ 157 4)119 ರಿಂದ 160

## ಪ್ರಕರಣ-119. ತಾಲ್ಲೂಕು ಪಂಚಾಯತಿ ಸ್ಥಾಪನೆ & ಅದರ ನಿಗಮನ

**1ಎ)ಪ್ರಕರಣ -119 ಏನನ್ನು ತಿಳಿಸುತ್ತದೆ?**

1)ತಾಲ್ಲೂಕು ಪಂಚಾಯತಿಯ ಸ್ಥಾಪನೆ ಮತ್ತು ನಿಗಮನ

2)ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಬಗ್ಗೆ

3)ತಾಲ್ಲೂಕು ಪಂಚಾಯತಿ ರಚನೆ ಬಗ್ಗೆ

4)ತಾಲ್ಲೂಕು ಪಂಚಾಯತಿ ಸ್ಥಾನಗಳ ಮೀಸಲಾತಿ

**2) ತಾಲ್ಲೂಕು ಪಂಚಾಯತಿಯನ್ನು ಈ ಕೆಳಗಿನ ಯಾವ ಸ್ಥಳದಲ್ಲಿ ಸ್ಥಾಪಿಸಬೇಕು?**

1)ಇಡೀ ತಾಲ್ಲೂಕಿನ ವ್ಯಾಪ್ತಿ ಹೊಂದಿರುವಂತಹ ಒಂದು ತಾಲ್ಲೂಕು ಪಂಚಾಯತಿ ಇರತಕ್ಕದ್ದು.

2)ಪ್ರತಿಯೊಂದು ತಾಲ್ಲೂಕಿಗೂ, ಪೌರನಿಗಮ ಅಥವಾ ಪಟ್ಟಣ ಪಂಚಾಯತಿ ಇಂತಹ ಭಾಗಗಳನ್ನು ಹೊರತು ಪಡಿಸಿ ಇಡೀ ತಾಲ್ಲೂಕಿನ ಮೇಲೆ ಅಧಿಕಾರ ಹೊಂದಿರುವ ಒಂದು ತಾಲ್ಲೂಕು ಪಂಚಾಯತಿ ಸ್ಥಾಪಿಸತಕ್ಕದ್ದು.

3)ಒಂದು ತಾಲ್ಲೂಕಿಗೆ ಎರಡು ತಾಲ್ಲೂಕು ಪಂಚಾಯತಿಗಳನ್ನು ಸ್ಥಾಪಿಸತಕ್ಕದ್ದು

4)ಮುನ್ಸಿಪಾಲಿಟಿ, ಪಟ್ಟಣಪಂಚಾಯತಿಗಳನ್ನು ಒಳಗೊಂಡಂತೆ ಒಂದು ತಾಲ್ಲೂಕಿನ ಮೇಲೆ ಅಧಿಕಾರ ಹೊಂದಿರುವಂತಹ ಒಂದು ತಾಲ್ಲೂಕು ಪಂಚಾಯತಿ ಇರತಕ್ಕದ್ದು

**3) ತಾಲ್ಲೂಕು ಪಂಚಾಯತಿ ಕಛೇರಿಯು ಈ ಕೆಳಗಿನ ಯಾವ ಸ್ಥಳದಲ್ಲಿ ಇರಬೇಕು?**

1) ತಾಲ್ಲೂಕು ಪಂಚಾಯತಿಯು ತಾಲ್ಲೂಕು ಕೇಂದ್ರದಲ್ಲಿ ಸ್ಥಾಪಿತವಾಗಿರತಕ್ಕದ್ದು.

2) ತಾಲ್ಲೂಕಿನ ಯಾವುದಾದರೂ ಒಂದು ಗ್ರಾಮದಲ್ಲಿ ಸ್ಥಾಪಿತವಾಗಿರಬೇಕು.

3)ತಾಲ್ಲೂಕಿನ ಯಾವುದಾದರೂ ಒಂದು ಹೋಬಳಿ ಕೇಂದ್ರದಲ್ಲಿ ಸ್ಥಾಪಿತವಾಗಿರಬೇಕು

4)ತಾಲ್ಲೂಕು ಕಛೇರಿಯು ಆ ಜಿಲ್ಲೆಯ ಕೇಂದ್ರ ಕಛೇರಿಯಲ್ಲಿ ಸ್ಥಾಪಿತವಾಗಿರಬೇಕು.

**4) ತಾಲ್ಲೂಕು ಪಂಚಾಯತಿಯು ಈ ಕೆಳಗಿನ ಯಾವ ಪ್ರಕಾರ್ಯಗಳನ್ನು ಚಲಾಯಿಸಬಹುದು ಮತ್ತು ನಿರ್ವಹಿಸಬಹುದು**

1)ತಾಲ್ಲೂಕು ಪಂಚಾಯತಿ ತನ್ನ ನಿಯಂತ್ರಣ ಮತ್ತು ವ್ಯವಸ್ಥಾಪನೆಯಲ್ಲಿರುವ ಪ್ರದೇಶದಲ್ಲಿನ ಶಾಲೆಗಳು ಮತ್ತು ಇತರೆ ಸಂಸ್ಥೆಗಳ ಮೇಲೆ ತನ್ನ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಚಲಾಯಿಸಬಹುದು

2)ತಾಲ್ಲೂಕು ಪಂಚಾಯತಿಯು ಪೊಲೀಸ್ ಠಾಣೆ ಮತ್ತು ಕಂದಾಯ ಕಛೇರಿಗಳ ಮೇಲೆ ತನ್ನ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಚಲಾಯಿಸಬಹುದು

3)ತಾಲ್ಲೂಕು ಪಂಚಾಯತಿಯು ಖಾಸಗಿ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳ ಮೇಲೆ ತನ್ನ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಚಲಾಯಿಸಬಹುದು.

4)ತಾಲ್ಲೂಕು ಪಂಚಾಯತಿಯು ಸರ್ಕಾರೇತರ ಸಂಸ್ಥೆಗಳ ಮೇಲೆ ತನ್ನ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಚಲಾಯಿಸಬಹುದು.

**5) ತಾಲ್ಲೂಕು ಪಂಚಾಯತಿಯು ಈ ಕೆಳಗಿನ ಯಾವ ಹೆಸರಿನಲ್ಲಿ ನಿಗಮಿತವಾಗಿರತಕ್ಕದ್ದು ಮತ್ತು ಮೊಹರನ್ನು ಹೊಂದಿರತಕ್ಕದ್ದು**

1)ಆ ತಾಲ್ಲೂಕಿನ ಹೆಸರಿನಲ್ಲಿ ನಿಗಮಿತ ನಿಕಾಯವಾಗಿರತಕ್ಕದ್ದು & ಶಾಶ್ವತ ಅಧಿಕಾರ & ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು.

2)ಆ ತಾಲ್ಲೂಕಿನ ಅಧ್ಯಕ್ಷರ ಹೆಸರಿನಲ್ಲಿ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಅಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು.

3)ಆ ತಾಲ್ಲೂಕಿನ ಕಾರ್ಯನಿರ್ವಹಣಾಧಿಕಾರಿ ಹೆಸರಿನಲ್ಲಿ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಅಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು.

4)ಆ ತಾಲ್ಲೂಕಿನ ಉಪಾಧ್ಯಕ್ಷರ ಹೆಸರಿನಲ್ಲಿ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಅಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು.

ಉತ್ತರಗಳು:- 1) 1 1ಎ) 1 2) 2 3) 1 4) 1 5) 1



Scanned by CamScanner

# ಚಾಣಕ್ಯಲೋಕ

**ಪ್ರತಿದಿನ ತಪ್ಪದೇ ವಿಜಯವಾಣಿ ಮಿನಿ ಪೇಪರ್, ವಿಜಯ ಕರ್ನಾಟಕ ಮಿನಿ ಪೇಪರ್, ಪ್ರಜಾವಾಣಿ ಮಿನಿ ಪೇಪರ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ಮಾಹಿತಿ ಪಡೆಯಲು ಕೆಳಗೆ ನೀಡಿರುವ ಬಟನ್ ಮೇಲೆ ಕ್ಲಿಕ್ ಮಾಡಿ ಚಾಣಕ್ಯಲೋಕ ಟೆಲಿಗ್ರಾಂ, ವಾಟ್ಸಾಪ್ ಗ್ರೂಪ್‌ಗೆ Join ಆಗಿರಿ.**

chanakyaloka

Click Here to Join

chanakyaloka

Click Here to Join

chanakyaloka

Click Here to Join

chanakyaloka

M chanakyaloka

**ನಿರ್ವಾಹಕರು: ಮೋಹನ್ ಶೆಟ್ಟಿ, 9353896440**

ಆತ್ಮೀಯ ಸ್ಪರ್ಧಾರ್ಥಿಗಳೇ ನೀವು ಇಟ್ಟಿರುವ ಗುರಿಯನ್ನು ಬಹುಬೇಗ ತಲುಪಿ,
ಯಶಸ್ಸು ನಿಮ್ಮದಾಗಲಿ, ಶುಭವಾಗಲಿ ಧನ್ಯವಾದಗಳು.

–ಚಾಣಕ್ಯಲೋಕ.ಕಾಂ ಬಳಗ

**6) ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ದಾವೆಗಳನ್ನು ಈ ಕೆಳಗಿನ ಯಾರ ಹೆಸರಿನಲ್ಲಿ ಹೂಡಬಹುದು.**

1)ಅಧ್ಯಕ್ಷರ ಹೆಸರಿನಲ್ಲಿ 2)ಉಪಾಧ್ಯಕ್ಷರ ಹೆಸರಿನಲ್ಲಿ

3)ತಾಲ್ಲೂಕು ಪಂಚಾಯತಿ ಹೆಸರಿನಲ್ಲಿ

4)ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಹೆಸರಿನಲ್ಲಿ

**7) ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ಚರ ಅಥವಾ ಸ್ಥಿರ ಸ್ವತ್ತುಗಳನ್ನು ಅರ್ಜಿಸುವ ಮತ್ತು ಧಾರಣೆ ಮಾಡುವ, ಕರಾರು ಮಾಡಿಕೊಳ್ಳುವ ಸಾಮರ್ಥ್ಯವು ಈ ಕೆಳಗಿನ ಯಾರಲ್ಲಿ ನಿಹಿತವಾಗಿರತಕ್ಕದ್ದು**

1)ಅಧ್ಯಕ್ಷರ ಹೆಸರಿನಲ್ಲಿ 2)ಉಪಾಧ್ಯಕ್ಷರ ಹೆಸರಿನಲ್ಲಿ

3)ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಹೆಸರಿನಲ್ಲಿ

4)ತಾಲ್ಲೂಕು ಪಂಚಾಯತಿ ಹೆಸರಿನಲ್ಲಿ

## ಪ್ರಕರಣ - 120. ತಾಲ್ಲೂಕು ಪಂಚಾಯತಿ ರಚನೆ

**8) 120ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1) ತಾಲ್ಲೂಕು ಪಂಚಾಯತಿ ರಚನೆ

2) ಸ್ಥಾನಗಳ ಮೀಸಲಾತಿ

3) ಅಭ್ಯರ್ಥಿಗಳ ಅರ್ಹತೆ 4) ಮತದಾರರ ಪಟ್ಟಿ

**9) ತಾಲ್ಲೂಕು ಪಂಚಾಯತಿಯು ಈ ಕೆಳಗಿನ ಸದಸ್ಯರನ್ನು ಒಳಗೊಂಡಿರುತ್ತದೆ?**

1)ಚುನಾಯಿತ ಸದಸ್ಯರನ್ನು ಒಳಗೊಂಡಿರುತ್ತದೆ

2)ಯಾವ ಲೋಕಸಭೆ ಮತ್ತು ರಾಜ್ಯ ವಿಧಾನ ಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳು ತಾಲ್ಲೂಕಿನೊಳಗೆ ಇದ್ದ ತಾಲ್ಲೂಕನ್ನು ಪೂರ್ತಿಯಾಗಿ ಅಥವಾ ಭಾಗಶಃವಾಗಿ ಪ್ರತಿನಿಧಿಸುತ್ತಾರೋ ಆ ಸದಸ್ಯರನ್ನು ಒಳಗೊಂಡಿರುತ್ತದೆ

3)ತಾಲ್ಲೂಕಿನ ಮತದಾರರಾಗಿ ನೊಂದಾಯಿತರಾಗಿರುವ ರಾಜ್ಯಸಭೆಯ & ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡಿರುತ್ತದೆ.

4)ಮೇಲಿನ ಎಲ್ಲಾ ಸದಸ್ಯರನ್ನು ಒಳಗೊಂಡಿರುತ್ತದೆ.

**10) ತಾಲ್ಲೂಕು ಪಂಚಾಯತಿಯಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಈ ಕೆಳಗಿನ ಯಾವ ಪ್ರಮಾಣದಲ್ಲಿರುತ್ತಾರೆ?**

1)ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ 1/5ರಷ್ಟು ಅಧ್ಯಕ್ಷರನ್ನು ಒಳಗೊಂಡಿರುತ್ತದೆ.

2)ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ 1/3ರಷ್ಟು ಅಧ್ಯಕ್ಷರನ್ನು ಒಳಗೊಂಡಿರುತ್ತದೆ.

3)ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ 1/4ರಷ್ಟು ಅಧ್ಯಕ್ಷರನ್ನು ಒಳಗೊಂಡಿರುತ್ತದೆ.

4)ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ 1/2ರಷ್ಟು ಅಧ್ಯಕ್ಷರನ್ನು ಒಳಗೊಂಡಿರುತ್ತದೆ.

**10ಎ) ಗ್ರಾ. ಪಂಚಾಯತ್ ಅಧ್ಯಕ್ಷರ ಪೈಕಿ ತಾಲ್ಲೂಕು ಪಂಚಾಯಿತಿಗೆ ಸದಸ್ಯರಾಗಿ ಆಯ್ಕೆಯಾಗುವರಲ್ಲಿ ಈ ಕೆಳಗಿನವರನ್ನು ಒಳಗೊಂಡಿರಬೇಕು.**

1) ಒಬ್ಬ ಹಿಂದುಳಿದ ವರ್ಗ, ಒಬ್ಬ ಮಹಿಳೆ

2) ಒಬ್ಬ ಮಹಿಳೆ & ಎಸ್.ಸಿ., ಎಸ್.ಟಿ ಪಂಗಡದಿಂದ ಒಬ್ಬೊಬ್ಬರು ಅಧ್ಯಕ್ಷರು

3) ಒಬ್ಬ ಎಸ್.ಸಿ., ಒಬ್ಬ ಮಹಿಳೆ & ಹಿಂದುಳಿದ ವರ್ಗ

4) ಮೇಲಿನ ಎಲ್ಲವೂ

**11) ತಾಲ್ಲೂಕು ಪಂಚಾಯತಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರುಗಳನ್ನು ಸದಸ್ಯರುಗಳಾಗಿ ಈ ಕೆಳಗಿನ ಯಾವ ವಿಧಾನದಿಂದ ಆಯ್ಕೆ ಮಾಡಲಾಗುತ್ತದೆ?**

1)ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಆಯ್ಕೆ ಮಾಡಿದವರು

2)ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಚೀಟಿ ಎತ್ತುವ ಮೂಲಕ

3)ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿ ಆಯ್ಕೆ ಮಾಡುತ್ತಾರೆ.

4)ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ.

**12) ಗ್ರಾ.ಪ ಅಧ್ಯಕ್ಷರು ತಾಲ್ಲೂಕು ಪಂಚಾಯತಿಗೆ ಸದಸ್ಯನಾಗಿ ಆಯ್ಕೆಯಾಗುವ ಅಧಿಕಾರವಧಿ**

1) 2ವರ್ಷ 2)3ವರ್ಷ 3)4ವರ್ಷ 4)1ವರ್ಷ

**13) ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳನ್ನು ತಾಲ್ಲೂಕು ಪಂಚಾಯತಿ ಸದಸ್ಯರನ್ನಾಗಿ ಆಯ್ಕೆ ಮಾಡುವುದು ಈ ಕೆಳಗಿನ ವಿಧಾನದ ಮೂಲಕ**

1)ಸರದಿ ಮೂಲಕ 2)ನಿರಂತರವಾಗಿ

3)ಅಧ್ಯಕ್ಷರ ಅಭಿಪ್ರಾಯದಂತೆ

4)ದೊಡ್ಡ ಪಂಚಾಯತಿಗೆ ಮೊದಲು ಆದ್ಯತೆ

**14) ತಾಲ್ಲೂಕು ಪಂಚಾಯತಿಯ ಸದಸ್ಯರಾಗಿ ಆಯ್ಕೆಯಾದ ಗ್ರಾಮ ಪಂಚಾಯತಿ ಅಧ್ಯಕ್ಷರು ತನ್ನ ಅಧಿಕಾರವಧಿಯ ಉಳಿದ ಅವಧಿಯಲ್ಲಿ____ ಅವಧಿಗೆ ಸದಸ್ಯನಾಗಲು ಅರ್ಹನಲ್ಲ**

1)3ನೇ ಅವಧಿಗೆ 2)2ನೇ ಅವಧಿಗೆ

**ಉತ್ತರಗಳು:-** 6)3 7)4 8)1 9)4 10 1 10ಎ)2 11)2 12)4 13)1 14)2



Scanned by CamScanner

3)4ನೇ ಅವಧಿಗೆ    4)5ನೇ ಅವಧಿಗೆ

**೫) ತಾಲ್ಲೂಕು ಪಂಚಾಯತಿಗೆ ಸದಸ್ಯರಾಗಿರುವ ಲೋಕಸಭೆಯ, ರಾಜ್ಯ ಸಭೆಯ ಮತ್ತು ರಾಜ್ಯ ವಿಧಾನ ಸಭೆಯ, ರಾಜ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?**

1)ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ

2)ಸಾಮಾನ್ಯ ಸಭೆಗಳಲ್ಲಿ ಮತ ನೀಡುವ ಹಕ್ಕನ್ನು ಹೊಂದಿರುತ್ತಾರೆ

3)ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಮತ್ತು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಪರಿಶೀಲಿಸುವ ಉದ್ದೇಶಕ್ಕಾಗಿ ಕರೆದ ವಿಶೇಷ ಸಭೆಗಳಲ್ಲಿ ಮತ ಹಾಕುವಂತಹ ಹಕ್ಕನ್ನು ಹೊಂದಿರುತ್ತಾರೆ.

4)ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಮತ್ತು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಪರಿಶೀಲಿಸುವ ಉದ್ದೇಶಕ್ಕಾಗಿ ಕರೆದ ವಿಶೇಷ ಸಭೆಗಳಲ್ಲಿ ಮತ ಹಾಕುವಂತಹ ಹಕ್ಕನ್ನು ಹೊಂದಿರುವುದಿಲ್ಲ.

**೬) ತಾಲ್ಲೂಕು ಪಂಚಾಯತಿಯ ____ ಸಂಖ್ಯೆಯ ಸದಸ್ಯರು ಚುನಾಯಿತರಾಗಿದ್ದಲ್ಲಿ ಆ ತಾಲ್ಲೂಕು ಪಂಚಾಯತಿಯು ಕ್ರಮಬದ್ಧವಾಗಿದೆ ಎಂದು ಭಾವಿಸತಕ್ಕದ್ದು**

1) 1/2    2)1/3    3)2/3    4)1/4

## ಪ್ರಕರಣ - 121. ಚುನಾಯಿತ ಸದಸ್ಯರು

**7) 121ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1)ಚುನಾಯಿತ ಸದಸ್ಯರು    2)ಸ್ಥಾನಗಳ ಮೀಸಲಾತಿ

3)ಮತದಾರರ ಪಟ್ಟಿ    4)ಸದಸ್ಯರ ಅರ್ಹತೆ

**) ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಈ ಕೆಳಗಿನ ಯಾರು ನಿರ್ಧರಿಸುತ್ತಾರೆ?**

1)ರಾಜ್ಯ ಚುನಾವಣಾ ಆಯೋಗ

2)ಕೇಂದ್ರ ಚುನಾವಣಾ ಆಯೋಗ

3)ಡೆಪ್ಯೂಟಿ ಕಮೀಷನರ್

4)ಅಸಿಸ್ಟೆಂಟ್ ಕಮೀಷನರ್

**ಕೆಳಗಿನ ಯಾವ ಜನಸಂಖ್ಯೆಗೆ ತಾಲ್ಲೂಕು ಪಂಚಾಯತಿಯ ಒಬ್ಬ ಚುನಾಯಿತ ಸದಸ್ಯನನ್ನು ಒಳಗೊಂಡಿರತಕ್ಕದ್ದು.**

) 8,000 ರಿಂದ 10 ಸಾವಿರ

2) 12,500 ರಿಂದ 15,000

3) 10,000 ರಿಂದ 12,000

4) 7,000 ರಿಂದ 15,000

**೨೦) 1 ಲಕ್ಷಕ್ಕಿಂತ ಹೆಚ್ಚಿಲ್ಲದ ಜನಸಂಖ್ಯೆ ಇರುವ ತಾಲ್ಲೂಕು ಪಂಚಾಯತಿಯಲ್ಲಿ ಈ ಕೆಳಗಿನ ಸಂಖ್ಯೆಯ ತಾಲ್ಲೂಕು ಪಂಚಾಯತಿ ಸದಸ್ಯರನ್ನು ಹೊಂದಿರತಕ್ಕದ್ದು**

1) 8    2) 10    3) 11    4) 12

## ಪ್ರಕರಣ 122. ಪ್ರತಿಯೊಂದು ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಬಗ್ಗೆ ನಿರ್ಧರಣೆ

**೨೧) ಪ್ರಕರಣ ೧೨೨ ಏನನ್ನು ತಿಳಿಸುತ್ತದೆ?**

1)ಸ್ಥಾನಗಳ ಮೀಸಲಾತಿ

2)ಪ್ರತಿಯೊಂದು ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಬಗ್ಗೆ ನಿರ್ಧರಣೆ

3)ಸದಸ್ಯರ ಅಧಿಕಾರವಧಿ    4)ಸದಸ್ಯರ ಅನರ್ಹತೆ

**೨೨) ಪ್ರತಿಯೊಂದು ಜನಗಣತಿ ತರುವಾಯ ಚುನಾಯಿತ ಸದಸ್ಯರುಗಳ ಸಂಖ್ಯೆಯನ್ನು ಈ ಕೆಳಗಿನ ಯಾರು ನಿರ್ಧರಿಸತಕ್ಕದ್ದು**

1) ಕೇಂದ್ರ ಚುನಾವಣಾ ಆಯೋಗ

2) ರಾಜ್ಯ ಚುನಾವಣಾ ಆಯೋಗ

3) ಡೆಪ್ಯೂಟಿ ಕಮೀಷನರ್

4) ಅಸಿಸ್ಟೆಂಟ್ ಕಮೀಷನರ್

**೨೩) ಪ್ರತಿಯೊಂದು ಜನಗಣತಿ ತರುವಾಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಈ ಕೆಳಗಿನ ಯಾವ ಸಂದರ್ಭದಲ್ಲಿ ನಿರ್ಧರಿಸತಕ್ಕದ್ದಲ್ಲ**

1)ಚುನಾಯಿತ ಸದಸ್ಯರುಗಳ ಅಧಿಕಾರವಧಿಯು ಮುಕ್ತಾಯಗೊಳ್ಳುವ ಮುಂಚಿತವಾಗಿ

2)ಚುನಾಯಿತ ಸದಸ್ಯರುಗಳ ಅಧಿಕಾರವಧಿ ಮುಗಿದ 1 ವರ್ಷದವರೆಗೆ

3)ಚುನಾಯಿತ ಸದಸ್ಯರ ಅಧಿಕಾರವಧಿ ಮುಕ್ತಾಯವಾದ ನಂತರ

4)ಚುನಾಯಿತ ಸದಸ್ಯರ ಅಧಿಕಾರವಧಿಯು ಮುಗಿದ 2 ವರ್ಷದ ನಂತರ

## ಪ್ರಕರಣ - 123. ಸ್ಥಾನಗಳ ಮೀಸಲಾತಿ

**೨೪) ಪ್ರಕರಣ ೧೨೩ ಏನನ್ನು ತಿಳಿಸುತ್ತದೆ?**

1) ಸದಸ್ಯರ ಅಧಿಕಾರವಧಿ    2)ಸದಸ್ಯರ ಅರ್ಹತೆ

3)ಸ್ಥಾನಗಳ ಮೀಸಲಾತಿ    4)ಸದಸ್ಯರ ಅನರ್ಹತೆ

ಉತ್ತರಗಳು:- 15)3  16) 3  17) 1  18) 1  19) 2  20) 3  21) 2  22) 2  23) 1  24) 3



Scanned by CamScanner

25)ತಾಲ್ಲೂಕು ಪಂಚಾಯತಿಯಲ್ಲಿ ಸ್ಥಾನಗಳ ಮೀಸಲಾತಿಯನ್ನು ಈ ಕೆಳಗಿನ ಯಾರು ನಿರ್ಧರಿಸುತ್ತಾರೆ?

1)ಕೇಂದ್ರ ಚುನಾವಣಾ ಆಯೋಗ

2)ರಾಜ್ಯ ಚುನಾವಣಾ ಆಯೋಗ

3)ಡೆಪ್ಯೂಟಿ ಕಮೀಷನರ್

4)ಅಸಿಸ್ಟೆಂಟ್ ಕಮೀಷನರ್

26) ತಾಲ್ಲೂಕು ಪಂಚಾಯತಿಯಲ್ಲಿ ಈ ಕೆಳಗಿನ ಯಾವ ವರ್ಗಗಳಿಗೆ ಮೀಸಲಾತಿಯನ್ನು ನಿರ್ಧರಿಸಲಾಗಿದೆ?

1)ಅನುಸೂಚಿತ ಜಾತಿ 2)ಅನುಸೂಚಿತ ಪಂಗಡ

3)ಹಿಂದುಳಿದ ವರ್ಗ 4)ಮೇಲಿನ ಎಲ್ಲವೂ

27)ತಾಲ್ಲೂಕು ಪಂಚಾಯತಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪ್ರಮಾಣವು ಈ ಕೆಳಗಿನ ಒಟ್ಟು ಸ್ಥಾನಗಳ ಎಷ್ಟು ಶೇಕಡಾ ವಾರುಗಳನ್ನು ಮೀರತಕ್ಕದ್ದಲ್ಲ

1)ಶೇ.40 2)ಶೇ.30 3)ಶೇ.20 4)ಶೇ.50

28) ಒಂದು ತಾಲ್ಲೂಕು ಪಂಚಾಯತಿಯಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಈ ಕೆಳಕಂಡ ಸಂಖ್ಯೆ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು

1) 2ಸ್ಥಾನ 2) 4ಸ್ಥಾನ

3) ಪ್ರತಿಯೊಂದಕ್ಕೂ ಕನಿಷ್ಠ 1ಸ್ಥಾನ

4) ಪ್ರತಿಯೊಂದಕ್ಕೂ ಕನಿಷ್ಠ 3 ಸ್ಥಾನ

29) ಒಂದು ತಾಲ್ಲೂಕು ಪಂಚಾಯತಿಯಲ್ಲಿ ಅನುಸೂಚಿತ ಜಾತಿ & ಪಂಗಡಗಳಿಗೆ ಸ್ಥಾನಗಳನ್ನು ಈ ಕೆಳಕಂಡ ಅನುಪಾತದಲ್ಲಿ ನಿರ್ಧರಿಸತಕ್ಕದ್ದು

1)ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿ & ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿರುತ್ತದೋ ಅದು ಆದಷ್ಟು ಮಟ್ಟಿಗೆ ತಾಲ್ಲೂಕು ಪಂಚಾಯತಿಯಲ್ಲಿ ನೇರ ಚುನಾವಣೆ ಮೂಲಕ ತುಂಬಬಹುದಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅದೇ ಸ್ಥಾನದಲ್ಲಿರಬೇಕು.

2) ಒಟ್ಟು ಸಂಖ್ಯೆಯ 1/3ರಷ್ಟು

3)ಒಟ್ಟು ಸಂಖ್ಯೆಯ 1/4ರಷ್ಟು

4)ಒಟ್ಟು ಸಂಖ್ಯೆಯ 1/2ರಷ್ಟು

30) ಹಿಂದುಳಿದ ವರ್ಗದವರಿಗೆ ತಾಲ್ಲೂಕು ಪಂಚಾಯತಿಯಲ್ಲಿ ಒಟ್ಟು ಸಂಖ್ಯೆಗಳ ಸ್ಥಾನಗಳ ___ ರಷ್ಟನ್ನು ಮೀಸಲಿರಿಸತಕ್ಕದ್ದು

1)1/3 2)1/4 3)1/2 4)2/4

31) ತಾಲ್ಲೂಕು ಪಂಚಾಯತಿಯಲ್ಲಿ ಮೀಸಲಿರಿಸಿದ ಹಿಂದುಳಿದ ವರ್ಗಗಳ ಸ್ಥಾನಗಳಲ್ಲಿ ಪ್ರವರ್ಗ-ಎ ಮತ್ತು ಪ್ರವರ್ಗ-ಬಿ ಗೆ ಈ ಕೆಳಕಂಡ ಅನುಪಾತದಲ್ಲಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು

1)ಶೇ.75 & ಶೇ.25 2)ಶೇ.50 & ಶೇ.50

3)ಶೇ.80 & ಶೇ.20 4)ಶೇ.40 & 60

32) ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ ಸ್ಥಾನಗಳನ್ನು ತಾಲ್ಲೂಕು ಪಂಚಾಯತಿಯಲ್ಲಿ ಈ ಕೆಳಗಿನ ಯಾರು ನಿರ್ಧರಿಸುತ್ತಾರೆ?

1) ರಾಜ್ಯ ಚುನಾವಣಾ ಆಯೋಗ

2) ಕೇಂದ್ರ ಚುನಾವಣಾ ಆಯೋಗ

3) ಡೆಪ್ಯೂಟಿ ಕಮೀಷನರ್

4) ಅಸಿಸ್ಟೆಂಟ್ ಕಮೀಷನರ್

33) ತಾಲ್ಲೂಕು ಪಂಚಾಯತಿಯಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಯೊಂದು ವರ್ಗಕ್ಕೆ ಮೀಸಲಿರಿಸಲಾದ ಮತ್ತು ಮೀಸಲಿರಿಸಿದ ಸ್ಥಾನಗಳ ___ರಷ್ಟು ಕಡಿಮೆ ಇಲ್ಲದ ಸ್ಥಾನಗಳನ್ನು ಮಹಿಳೆಯರಿಗೆ ರಾಜ್ಯ ಚುನಾವಣಾ ಆಯೋಗವು ಮೀಸಲಿರಿಸತಕ್ಕದ್ದು

1)ಶೇ.30 2)ಶೇ.40 3)ಶೇ.50 4)ಶೇ.45

34)ಮೀಸಲಿರಿಸಿದ ಸ್ಥಾನಗಳನ್ನು ತಾಲ್ಲೂಕಿನ ವಿವಿಧ ಚುನಾವಣಾ ಕ್ಷೇತ್ರಗಳಿಗೆ ___ಪ್ರಕಾರ ಹಂಚಿಕೆ ಮಾಡತಕ್ಕದ್ದು

1) ಸರದಿ ಪ್ರಕಾರ

2) ವರ್ಣಮಾಲೆ ಅಕ್ಷರ ಪ್ರಕಾರ

3) ಜಿಲ್ಲಾಧಿಕಾರಿಗಳು ನಿರ್ಧರಿಸಿದಂತೆ

4) ಹಿಂದುಳಿದ ಪ್ರದೇಶವನ್ನು ಆಧರಿಸಿ

35)ತಾಲ್ಲೂಕು ಪಂಚಾಯತಿಯಲ್ಲಿ ಯಾರಿಗಾಗಿ ಸ್ಥಾನಗಳನ್ನು ಮೀಸಲಿರಿಸಲಾಗಿದೆಯೋ ಆ ಅನುಸೂಚಿತ ಜಾತಿ ಅಥವಾ ಪಂಗಡ ಅಥವಾ ಹಿಂದುಳಿದ ವರ್ಗಗಳು ಅಥವಾ ಮಹಿಳೆಯರನ್ನು ಅಂತಹ ತಾಲ್ಲೂಕು ಪಂಚಾಯತಿಯಲ್ಲಿ ಮೀಸಲಿರಿಸದೆ ಇರುವ ಸ್ಥಾನಗಳಿಗೆ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ ಸರಿಯಾದುದ್ದು?

1)ಮೀಸಲಿರಿಸದ ಸ್ಥಾನಗಳಿಗೆ ಚುನಾವಣೆಗೆ ನಿಲ್ಲುವುದನ್ನು ತಡೆಗಟ್ಟಲಾಗುತ್ತದೆ.

ಉತ್ತರಗಳು:- 25) 2 26) 4 27) 4 28)3 29) 1 30) 1 31) 3 32) 1 33) 3 34) 1 35) 2



Scanned by CamScanner

chanakyaloka.com



2)ಮೀಸಲಿರಿಸದ ಸ್ಥಾನಗಳಿಗೂ ಚುನಾವಣೆಗೆ ನಿಲ್ಲಲು ಅರ್ಹರಾಗಿರುತ್ತಾರೆ

3)ಮೀಸಲಿರಿಸಿದ ಸ್ಥಾನಕ್ಕೆ ಮಾತ್ರ ಸ್ಪರ್ಧಿಸಲು ಅರ್ಹರಾಗಿರುತ್ತಾರೆ

4)ಮೀಸಲಿರಿಸದ ಸ್ಥಾನಗಳಿಗೆ ಸ್ಪರ್ಧಿಸಲು ಅರ್ಹರಾಗುವುದಿಲ್ಲ.

## ಪ್ರಕರಣ -124. ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ

**36) 124ನೇ ಪ್ರಕರಣ ಏನನ್ನು ತಿಳಿಸುತ್ತದೆ?**

1)ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ

2)ಮತದಾನದ ಹಕ್ಕು 3)ಮತದಾರರ ಪಟ್ಟಿ

4)ಸದಸ್ಯನಾಗಲು ಅನರ್ಹತೆ

**37) ಪ್ರಾದೇಶಿಕ ಚುನಾವಣೆಗಳ ಸೀಮಾ ನಿರ್ಣಯವನ್ನು ಈ ಕೆಳಗಿನ ಯಾರು ಅಧಿಸೂಚನೆ ಮೂಲಕ ನಿರ್ಧರಿಸುತ್ತಾರೆ?**

1) ಡೆಪ್ಯೂಟಿ ಕಮೀಷನರ್

2) ಅಸಿಸ್ಟೆಂಟ್ ಕಮೀಷನರ್

3) ರಾಜ್ಯಚುನಾವಣಾ ಆಯೋಗ

4) ಕೇಂದ್ರ ಚುನಾವಣಾ ಆಯೋಗ

**38) ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ-ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಕ್ರಮ ಕೈಗೊಳ್ಳಲಾಗುತ್ತದೆ.**

1) ತಾಲ್ಲೂಕು ಪಂಚಾಯತಿಯ ಚುನಾವಣೆ ನಡೆಸಲು ಚುನಾಯಿತರಾಗಬೇಕಾಗಿರುವ ಸದಸ್ಯರಿಗೆ ಅನುಗುಣವಾಗಿ ಏಕಸದಸ್ಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಂಗಡಿಸತಕ್ಕದ್ದು

2) ಪ್ರತಿಯೊಂದು ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು.

3) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳು, ಮಹಿಳೆಯರಿಗೆ ಸ್ಥಾನಗಳನ್ನು ನಿರ್ಧರಿಸುವಂತಹ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಅಥವಾ ಚುನಾವಣಾ ಕ್ಷೇತ್ರವನ್ನು ನಿರ್ಧರಿಸತಕ್ಕದ್ದು.

4) ಮೇಲಿನ ಎಲ್ಲವನ್ನೂ ನಿರ್ಧರಿಸತಕ್ಕದ್ದು.

## ಪ್ರಕರಣ - 125. ಮತದಾನದ ಹಕ್ಕು

**39) 125ನೇ ಪ್ರಕರಣವು ಏನನ್ನು ತಿಳಿಸುತ್ತದೆ?**

1)ಮತದಾನದ ಹಕ್ಕು 2)ಮತದಾರರ ಪಟ್ಟಿ

3)ಸದಸ್ಯರ ಅರ್ಹತೆಗಳು 4)ಸದಸ್ಯರ ಅನರ್ಹತೆ

**40) ಈ ಕೆಳಗಿನ ಯಾರು ಮತದಾನದ ಹಕ್ಕನ್ನು ಹೊಂದಿರುತ್ತಾರೆ?**

1)ಒಂದು ಚುನಾವಣಾ ಕ್ಷೇತ್ರಕ್ಕೆ ಸಂಬಂಧಪಟ್ಟ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು ಮತದಾನದ ಹಕ್ಕನ್ನು ಹೊಂದಿರುತ್ತಾರೆ

2)18 ವರ್ಷ ತುಂಬಿದ ವಯಸ್ಕ ವ್ಯಕ್ತಿಗಳೆಲ್ಲಾ ಮತದಾನದ ಹಕ್ಕನ್ನು ಹೊಂದಿರುತ್ತಾರೆ.

3)ಒಂದು ಚುನಾವಣಾ ಕ್ಷೇತ್ರದಲ್ಲಿ ವಾಸಿಸುವ ಎಲ್ಲಾ ವಯಸ್ಕರು ಮತದಾನದ ಹಕ್ಕನ್ನು ಹೊಂದಿರುತ್ತಾರೆ.

4)ಬಿಪಿಎಲ್ ಕಾರ್ಡ್ ಮತ್ತು ಎಪಿಎಲ್ ಕಾರ್ಡ್‌ನ್ನು ಹೊಂದಿದ ಎಲ್ಲಾ ವ್ಯಕ್ತಿಗಳು ಮತದಾನದ ಹಕ್ಕನ್ನು ಹೊಂದಿರುತ್ತಾರೆ.

**41) ಈ ಕೆಳಗಿನ ಯಾವ ಸಂದರ್ಭದಲ್ಲಿ ಮತಗಳನ್ನು ಅಸಿಂಧು ಗೊಳಿಸಲಾಗುತ್ತದೆ**

1)ಯಾವುದೇ ವ್ಯಕ್ತಿ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ಮತ ನೀಡಿದಾಗ

2)ಒಂದೇ ಚುನಾವಣಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮತ ನೀಡಿದಾಗ

3)ಒಂದೇ ಚುನಾವಣೆಯಲ್ಲಿ ಅನೇಕ ಬಾರಿ ಅಭ್ಯರ್ಥಿಗಳಿಗೆ ಮತ ನೀಡಿದಾಗ

4)ಮೇಲಿನ ಎಲ್ಲಾ ಸಂದರ್ಭದಲ್ಲೂ ಅಸಿಂಧುವಾಗುತ್ತದೆ.

## ಪ್ರಕರಣ-126. ಮತದಾರರ ಪಟ್ಟಿ

**42)ಪ್ರಕರಣ-126 ಏನನ್ನು ತಿಳಿಸುತ್ತದೆ?**

1)ಮತದಾನದ ಹಕ್ಕು 2)ಮತದಾರರ ಪಟ್ಟಿ

3)ಸದಸ್ಯರ ಅರ್ಹತೆ 4)ಸದಸ್ಯರ ಅನರ್ಹತೆ

**43)ಈ ಕೆಳಗಿನ ಯಾವ ಮತದಾರರ ಪಟ್ಟಿಯನ್ನು ತಾಲ್ಲೂಕು ಪಂಚಾಯತಿಯ ಮತದಾರರ ಪಟ್ಟಿ ಎಂದು ಭಾವಿಸತಕ್ಕದ್ದು.**

1)ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿ

2)ಲೋಕಸಭಾ ಕ್ಷೇತ್ರದ ಮತದಾರರ ಪಟ್ಟಿ

3)ತಾಲ್ಲೂಕು ಪಂಚಾಯತಿ ಮತದಾರರ ಪಟ್ಟಿ

4)ವಿಧಾನ ಸಭಾ ಕ್ಷೇತ್ರದ ಮತದಾರರ ಪಟ್ಟಿ

**44)ತಾಲ್ಲೂಕು ಪಂಚಾಯತಿ ಮತದಾರರ ಪಟ್ಟಿಯನ್ನು ಈ ಕೆಳಗಿನ ಯಾರು ಸಿದ್ಧಪಡಿಸುತ್ತಾರೆ?**

1)ತಹಸೀಲ್ದಾರರು 2)ಅಸಿಸ್ಟೆಂಟ್ ಕಮೀಷನರ್

**ಉತ್ತರಗಳು:-** 36) 1 37) 3 38) 4 39) 1 40) 1 41) 4 42) 2 43) 1 44) 1



Scanned by CamScanner

3)ಡೆಪ್ಯೂಟಿ ಕಮೀಷನರ್

4)ಗ್ರಾಮ ಪಂಚಾಯತಿ ಕಾರ್ಯದರ್ಶಿ

**45) ತಾಲ್ಲೂಕು ಪಂಚಾಯತಿ ಮತದಾರರ ಪಟ್ಟಿಯು ಈ ಕೆಳಗಿನ ಯಾರ ಬಳಿ ಇರುತ್ತದೆ?**

1) ತಹಶಿಲ್ದಾರರು 2) ಕಾರ್ಯನಿರ್ವಹಣಾಧಿಕಾರಿ

3)ಅಸಿಸ್ಟೆಂಟ್ ಕಮೀಷನರ್ 4)ಡೆಪ್ಯೂಟಿ ಕಮೀಷನರ್

**46)ಈ ಕೆಳಗಿನ ಯಾವ ಅವಧಿಯ ನಂತರ ಸೇರ್ಪಡೆಯಾದರೆ ಮತದಾರರ ಪಟ್ಟಿಯೊಳಗೆ ಸೇರ್ಪಡೆಯಾಗುವುದಿಲ್ಲ?**

1)ತಾಲ್ಲೂಕು ಪಂಚಾಯತಿಯ ಚುನಾವಣೆಗೆ ನಾಮ ಪತ್ರ ಸಲ್ಲಿಸಲು ಇರುವ ಕೊನೆಯ ದಿನಾಂಕದ ತರುವಾಯ ಸೇರ್ಪಡೆಯಾದುದ್ದು

2)ಗ್ರಾಮ ಪಂಚಾಯತಿಯ ಚುನಾವಣೆಗೆ ನಾಮ ಪತ್ರ ಸಲ್ಲಿಸುವ ಎರಡು ತಿಂಗಳು ಮೊದಲು

3)ಗ್ರಾಮ ಪಂಚಾಯತಿಯ ಚುನಾವಣೆಗೆ ನಾಮ ಪತ್ರ ಸಲ್ಲಿಸುವ ಮೂರು ತಿಂಗಳು ಮೊದಲು

4)ಗ್ರಾಮ ಪಂಚಾಯತಿಯ ಚುನಾವಣೆಗೆ ನಾಮ ಪತ್ರ ಸಲ್ಲಿಸುವ ಎಂಟು ತಿಂಗಳು ಮೊದಲು

## ಪ್ರಕರಣ -127. ಅಭ್ಯರ್ಥಿಯ ಅರ್ಹತೆಗಳು

**47)ಪ್ರಕರಣ 127 ಈ ಕೆಳಗಿನ ಯಾವ ವಿಷಯವನ್ನು ಪ್ರಸ್ತಾಪಿಸುತ್ತದೆ?**

1)ಸದಸ್ಯರ ಅನರ್ಹತೆ

2)ಅಭ್ಯರ್ಥಿಯ ಅರ್ಹತೆಗಳು

3)ಏಕಕಾಲದ ಸದಸ್ಯತ್ವ

4)ಚುನಾವಣಾ ತಕರಾರು

**48)ತಾಲ್ಲೂಕು ಪಂಚಾಯತಿ ಚುನಾವಣೆಗೆ ಸದಸ್ಯನಾಗಲು ಈ ಕೆಳಗಿನ ಯಾವುದು ಅರ್ಹತೆಯಾಗಿರುತ್ತದೆ?**

1)ಯಾವುದೇ ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರಿರಬೇಕು.

2)ಅನುಸೂಚಿತ ಜಾತಿ ಹಾಗೂ ಪಂಗಡದ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಲು ಆ ಪಂಗಡಗಳಿಗೆ ಸೇರಿರಬೇಕು.

3) ಮಹಿಳಾ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಲು ಮಹಿಳೆಯರು ಅರ್ಹತೆ ಹೊಂದಿರುತ್ತಾರೆ.

4)ಮೇಲಿನ ಎಲ್ಲವೂ

## ಪ್ರಕರಣ-128. ಸದಸ್ಯರ ಅನರ್ಹತೆ

**49)ಪ್ರಕರಣ 128 ಏನನ್ನು ತಿಳಿಸುತ್ತದೆ ?**

1)ಸದಸ್ಯರ ಅರ್ಹತೆ 2)ಸದಸ್ಯರ ಅನರ್ಹತೆ

3)ಸದಸ್ಯರ ಅಧಿಕಾರವಧಿ

4)ಸದಸ್ಯರ ಸ್ಥಾನ ಖಾಲಿಯಾಗುವುದು

**50)ತಾಲ್ಲೂಕು ಪಂಚಾಯತಿ ಸದಸ್ಯನಾಗಿ ಚುನಾಯಿತನಾಗಲು ಕನಿಷ್ಠ ಈ ಕೆಳಗಿನ ವಯಸ್ಸು ಹೊಂದಿರಬೇಕು?**

1)21 ವರ್ಷ 2)18ವರ್ಷ

3)25ವರ್ಷ 4)30ವರ್ಷ

**51) ಸದಸ್ಯನಾಗುವವನ ವಯಸ್ಸು 21 ವರ್ಷಗಳಾಗಿದ್ದು, _ ವರ್ಷಗಳಾಗಿಲ್ಲವೆಂದು ಅನರ್ಹಗೊಳಿಸಬಾರದೆಂದು ಪ್ರಕರಣ128 ತಿಳಿಸುತ್ತದೆ?**

1)35 ವರ್ಷ 2)30ವರ್ಷ

3)25ವರ್ಷ 4)40ವರ್ಷ

**52)ಪ್ರಕರಣ-128ರಲ್ಲಿ ಈ ಕೆಳಗಿನ ಯಾವ ಸಂದರ್ಭದಲ್ಲಿ ವ್ಯಕ್ತಿಯು ಸದಸ್ಯರಾಗಲು ಅನರ್ಹನಾಗುತ್ತಾನೆ?**

1)ರಾಜ್ಯ ವಿಧಾನ ಮಂಡಲಗಳ ಚುನಾವಣೆ ನಡೆಯುವ ಕಾನೂನು ಅಡಿಯಲ್ಲಿ ಅನರ್ಹಗೊಂಡಿದ್ದರೆ

2)1965ರ ಕರ್ನಾಟಕ ಅಬಕಾರಿ ನಿಯಮದ ಅಡಿಯಲ್ಲಿ ಕ್ರಿಮಿನಲ್ ನ್ಯಾಯಾಲಯವು 3ತಿಂಗಳಿಗಿಂತ ಹೆಚ್ಚಿನ ಶಿಕ್ಷೆ ವಿಧಿಸಿದ್ದರೆ

3)1973ರ ಸಿ.ಆರ್.ಪಿ.ಸಿ ಆದೇಶದ ಅನ್ವಯ 117ನೇ ಪ್ರಕರಣದ ಅಡಿಯಲ್ಲಿ ಆತನ ವಿರುದ್ಧ ಆದೇಶ ಮಾಡಿದ್ದರೆ

4)ಯಾವುದೇ ಸ್ಥಳೀಯ ಪ್ರಾಧಿಕಾರದ ಸೇವೆಯಿಂದ ವಜಾ ಗೊಂಡಿದ್ದರೆ

5)1987ರ ಕರ್ನಾಟಕ ಸ್ಥಳೀಯ ಪ್ರಾಧಿಕಾರ(ಪಕ್ಷಾಂತರ ನಿಷೇಧ) ಅಧಿನಿಯಮದಡಿಯಲ್ಲಿ ಅನರ್ಹನಾಗಿದ್ದರೆ

**ಸಂಕೇತಗಳು:-**

1) ಎ, ಬಿ, ಸಿ & ಡಿ 2) ಮೇಲಿನ ಎಲ್ಲವೂ

3) ಬಿ & ಸಿ 4) ಎ ಮಾತ್ರ

**53)ಪ್ರಕರಣ-128ರಂತೆ ಈ ಕೆಳಗಿನ ಯಾವ ಸಂದರ್ಭದಲ್ಲಿ ಸದಸ್ಯರಾಗಲು ಅನರ್ಹತೆಯನ್ನು ಹೊಂದುತ್ತಾರೆ?**

1)ಲೀಗಲ್ ಅಥವಾ ಮೆಡಿಕಲ್ ಪ್ರಾಕ್ಟಿಷನರ್ ಅಥವಾ ಚಾರ್ಟೆಡ್ ಅಕೌಂಟೆಂಟ್ ಆಗಿದ್ದು, ಸಕ್ಷಮ ಪ್ರಾಧಿಕಾರಿಯ ಆದೇಶದ ಮೂಲಕ ಅವನನ್ನು ಆ ಪಟ್ಟಿಯಿಂದ ತೆಗೆದು ಹಾಕಿದ್ದರೆ ಅನರ್ಹರಾಗುತಾರೆ.

2)ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯತ್ವದಿಂದ

**ಉತ್ತರಗಳು:-** 45) 2 46) 1 47) 2 48) 4 49) 2 50) 1 51) 3 52) 2 53) 4



Scanned by CamScanner

ಅವನನ್ನು ತೆಗೆದು ಹಾಕಿದ್ದರೆ ಅನರ್ಹರಾಗುತ್ತಾರೆ.

3)ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವ ಯಾವುದೇ ಪ್ರಾಧಿಕಾರದಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ ಸದಸ್ಯತ್ವದಿಂದ ಅನರ್ಹನಾಗುತ್ತಾರೆ.

4)ಮೇಲಿನ ಎಲ್ಲವೂ

**54)ಪ್ರಕರಣ 128ರಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯನು ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಅನರ್ಹನಾಗುತ್ತಾರೆ?**

1)ತಾಲ್ಲೂಕು ಪಂಚಾಯತಿಯ ಪರವಾಗಿ ಕಾನೂನು ಸಲಹೆಗಾರನಾಗಿ ನಿಯೋಜಿತನಾಗಿದ್ದರೆ ಅಥವಾ ತಾಲ್ಲೂಕು ಪಂಚಾಯತಿ ವಿರುದ್ಧ ಲೀಗಲ್ ಪ್ರಾಕ್ಟೀಷನರ್ ಆಗಿ ಉದ್ಯೋಗ ಅಂಗೀಕರಿಸಿದ್ದರೆ ಅನರ್ಹನಾಗುತ್ತಾರೆ.

2)ತನ್ನ ಕುಟುಂಬದ ಸದಸ್ಯರುಗಳಿಗೆ ಶೌಚ ಗೃಹವನ್ನು ಒದಗಿಸದಿದ್ದರೆ

3)ತಾಲ್ಲೂಕು ಪಂಚಾಯತಿಯ ಆದೇಶದ ಮೂಲಕ ಕಾಮಗಾರಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪಾಲುದಾರಿಕೆ ಹೊಂದಿದ್ದರೆ ಅನರ್ಹರಾಗುತ್ತಾರೆ.

4)ತಾಲ್ಲೂಕು ಪಂಚಾಯತಿಗೆ ಅವನಿಂದ ಯಾವುದೇ ಬಗೆಯ ಬಾಕಿಗಳು ಬರಬೇಕಿದ್ದರೆ

4)ಮೇಲಿನ ಎಲ್ಲವೂ

**55)ಈ ಕೆಳಗಿನ ಯಾವ ಸಂದರ್ಭದಲ್ಲಿ ಪ್ರಕರಣ-128ರ ಅನ್ವಯ ಒಬ್ಬ ವ್ಯಕ್ತಿಯು ತನ್ನ ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ಒಬ್ಬ ಸದಸ್ಯನಾಗಿ ತನ್ನ ಹುದ್ದೆಯ ಪ್ರಾರಂಭದ ದಿನಾಂಕದಿಂದ____ ಅವಧಿಯೊಳಗೆ ತನ್ನ ಕುಟುಂಬದ ಸದಸ್ಯರ ಉಪಯೋಗಕ್ಕಾಗಿ ಶೌಚ ಗೃಹವನ್ನು ನಿರ್ಮಿಸುವುದಕ್ಕಾಗಿ ಒಂದು ಮುಚ್ಚಳಿಕೆ ಬರೆದು ಕೊಟ್ಟು ಹಾಗೂ ಸದಸ್ಯನಾದ ತರುವಾಯ ಅಂತಹ ಮುಚ್ಚಳಿಕೆಯ ಲ್ಲಿರುವುದನ್ನು ಪಾಲಿಸಿದರೆ ಅನರ್ಹನಾಗುವುದಿಲ್ಲ.**

1)ಆರು ತಿಂಗಳು 2)1ವರ್ಷ 2)2ವರ್ಷ 4)3ವರ್ಷ

**56)ಸ್ಥಳೀಯ ಪ್ರಾಧಿಕಾರಗಳಿಂದ ವಜಾಗೊಂಡ ಅಥವಾ ಪಟ್ಟಿಯಿಂದ ತೆಗೆದು ಹಾಕಿದ ದಿನಾಂಕದಿಂದ ಎಷ್ಟು ವರ್ಷದ ನಂತರ ಅನರ್ಹತೆ ಮುಕ್ತಾಯಗೊಳ್ಳುತ್ತದೆ.**

1)ಒಂದು ವರ್ಷ 2)2ವರ್ಷ 3)3ವರ್ಷ 4)5ವರ್ಷ

**57) ಈ ಕೆಳಗಿನ ಯಾವ ಸಂದರ್ಭದಲ್ಲಿ ಲಾಭದಾಯಕ ಹುದ್ದೆಯೆಂದು ಪರಿಗಣಿಸುವುದಿಲ್ಲ**

1)ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗಿರುವುದು

2)ತಾಲ್ಲೂಕು ಪಂಚಾಯತಿ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗಿರುವುದು

3) ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗಿರುವುದು

4)ಮೇಲಿನ ಎಲ್ಲಾ ಸಂದರ್ಭದಲ್ಲೂ

**58) ಈ ಕೆಳಗಿನ ಯಾವ ಪ್ರಕರಣದಡಿಯಲ್ಲಿ ಅನರ್ಹನಾಗಿದ್ದರೆ ತಾಲ್ಲೂಕು ಪಂಚಾಯತಿ ಸದಸ್ಯನಾಗಲು ಅನರ್ಹನಾಗಿರುತ್ತಾರೆ?**

1)199 2)200 3)201 4)308ಸಿ

**59) ತಾಲ್ಲೂಕು ಪಂಚಾಯತಿ ಸದಸ್ಯನಾಗಿ ಆಯ್ಕೆಯಾಗಿರುವ ವ್ಯಕ್ತಿಯು ಲೋಕಸಭೆಯ, ರಾಜ್ಯ ಸಭೆಯ, ರಾಜ್ಯ ವಿಧಾನ ಸಭೆಯ, ರಾಜ್ಯ ವಿಧಾನ ಪರಿಷತ್ತಿನ ಸದಸ್ಯನಾಗಿದ್ದರೆ ಅಥವಾ ಸದಸ್ಯನಾದರೆ ಅಥವಾ ಮುನ್ಸಿಪಲ್ ಕೌನ್ಸಿಲರ್, ಅಥವಾ ಮುನ್ಸಿಪಲ್ ಕಾರ್ಪೋರೇಷನ್‌ನ ಅಥವಾ ಪಟ್ಟಣ ಪಂಚಾಯತಿಯ ಕೌನ್ಸಿಲರ್ ಆಗಿದ್ದರೆ ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರೆ ಅಥವಾ 133ನೇ ಪ್ರಕರಣದಡಿಯಲ್ಲಿ ಸದಸ್ಯರ ಹೆಸರನ್ನು ಅಧಿಸೂಚಿಸಿದ __ದಿನಗಳ ಮುಕ್ತಾಯ ಒಳಗೊಂಡ ಅಥವಾ ಮೇಲ್ಕಂಡ ಹುದ್ದೆಗಳ ಪ್ರಾರಂಭವಾದ__ದಿನಗಳೊಳಗಾಗಿ ಅವನು ಸಂದರ್ಭಾನುಸಾರ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೆ ತಾಲ್ಲೂಕು ಪಂಚಾಯತಿಯಲ್ಲಿ ಅವನ ಸ್ಥಾನವು ಖಾಲಿಯಾಗುತ್ತದೆ**

1)15, 25 2)15, 15 3)15, 20 4)15, 30

## ಪ್ರಕರಣ-129, ಸದಸ್ಯರ ಸ್ಥಾನ ಖಾಲಿಯಾಗುವುದು

**60) ಪ್ರಕರಣ-129 ಈ ಕೆಳಗಿನ ಯಾವ ವಿಷಯವನ್ನು ಪ್ರಸ್ತಾಪಿಸುತ್ತದೆ?**

1) ಹುದ್ದೆಯ ಅವಧಿ

2) ಸದಸ್ಯರ ಸ್ಥಾನ ಖಾಲಿಯಾಗುವುದು

3) ಚುನಾವಣಾ ತಕರಾರು ಅರ್ಜಿ ವಿಚಾರಣೆ

4) ಭ್ರಷ್ಟಾಚಾರಗಳು

